UNIVERSAL LIBRARY
OU_198602
UNIVERSAL LIBRARY

# ನೆನಪು ಕಹಿಯಲ್ಲ

ಕೃಷ್ಣ ಹಠೀಸಿಂಗ್

ಅನುವಾದಕ :

ದೇ. ಜವರೇಗೌಡ

ಚೇತನ ಪ್ರಕಟನಾಲಯ

ಮೈಸೂರು

೧೯೪೯

ಪ್ರಥಮ ಮುದ್ರಣ—೧೯೪೯

[ ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ ]

ಬೆಲೆ : ಎರಡೂವರೆರೂಪಾಯಿ

ಪ್ರಕಾಶಕರು :
ಕೆ. ಎಸ್. ನಾರಾಯಣಸ್ವಾಮಿ

ಮುದ್ರಣಕಾರರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

# ಮುನ್ನುಡಿ

ನಾನು ಸಾಮಾನ್ಯವಾಗಿ ಮುನ್ನುಡಿ ಬರೆಯಲು ಒಪ್ಪಿಕೊಳ್ಳುವುದಿಲ್ಲ; ಆದರೆ ಕೃಷ್ಣಹತೀಸಿಂಗಳನ್ನು ಆಕೆಯ ಬಾಲ್ಯದಾರಭ್ಯ ನೋಡಿರುವೆನಾದುದರಿಂದ, ಅವಳ ನೆನಪುಗಳ ಮಾಲೆಗೆ ನನ್ನ ಹರಕೆಯನ್ನು ಸೇರಿಸಬೇಕೆಂಬ ಆಕೆಯ ಬಯಕೆಯನ್ನು ನೆರವೇರಿಸುತ್ತಿದ್ದೇನೆ.

ಕಳೆದ ಆಗಸ್ಟ್ ತಿಂಗಳ ಅಮಂಗಳದ ಭಾನುವಾರ ಆಕೆಯ ಇಡೀ ಕುಟುಂಬವೇ ಆದಿಯಾಗಿ ಹಲವಾರು ದೇಶಸೇವಕರು ಸೆರೆಮನೆಗೆ ನಡೆದರು. ಅಲ್ಲಿಂದೀಚೆಗಿನ ಸುದೀರ್ಘಾವಧಿಯ ಬೇಸರವನ್ನು ನೀಗಿಕೊಳ್ಳುವ ಸಲುವಾಗಿ ಕೈಗೊಂಡ ಪ್ರಯತ್ನದ ಫಲವೇ ಈ ಪುಸ್ತಕವೆಂದು ಅವಳು ನಮಗೆ ತಿಳಿಸುತ್ತಾಳೆ.

ಅವಳಿನ್ನೂ ತುಂಬಾ ಚಿಕ್ಕವಳಾದ್ದರಿಂದ ತನ್ನ ಬಾಲ್ಯದ ಕಥೆಯನ್ನುಹೆಚ್ಚು ನೇರವಾಗಿಯೂ, ಬಹಳ ಸರಳವಾಗಿಯೂ ಚಿತ್ರಿಸಿದ್ದಾಳೆ. ಸಂಪತ್‌ಸೌಂದರ್ಯಗಳು ತುಂಬಿ ತುಳುಕಾಡುತ್ತಿದ್ದ ಮನೆಯಲ್ಲಿ ಅಮೇಯ ಸುಖವನ್ನನುಭವಿಸಿದ ಹಠಮಾರಿತನದ ಬಾಲ್ಯದೆಶೆ ಶಾಂತಪ್ರಕೃತಿಯ ಆದರೆ ಭೀಷ್ಮಶಕ್ತಿಯ ಮಹಾತ್ಮರ ಪ್ರಭಾವದಿಂದ ಅಪೂರ್ವವೂ, ಅತ್ಯಾಶ್ಚರ್ಯಕರವೂ ಆದ ಪರಿವರ್ತನೆಗಳಿಗೆ ಪಕ್ಕಾದ ಸನ್ನಿವೇಶಗಳಲ್ಲಿ ಬೆಳೆದ ಮೊಂಡತನದ ಕೌಮಾರ್ಯ, ಸಿರಿಯೊಸಗೆಗಳ ಭೋಗ ಸಾಮ್ರಾಜ್ಯದಿಂದ ನಿಷ್ಠುರವಾದ ಹೋರಾಟ ಮತ್ತು ಅಪಾರವಾದ ತ್ಯಾಗಗಳ ಸಂಗ್ರಾಮ ಕ್ಷೇತ್ರಕ್ಕೆ ಧುಮುಕಿದ ತನ್ನ ಕುಟುಂಬದ ಕಥೆ—ಇವುಗಳನ್ನು ವಿವರ ವಿವರವಾಗಿ ವರ್ಣಿಸುತ್ತಾಳೆ. ರೋಗದಿಂದ ನರಳುತ್ತಿದ್ದ ತನ್ನ ಅತ್ತಿಗೆಯೊಡನೆ ಸ್ವಿಟ್ಜರ್ಲೆಂಡಿನಲ್ಲಿ ಕಳೆದ ದಿನಗಳ ನೆನಪುಗಳನ್ನೂ, ತನ್ನ ಅಣ್ಣ ಮತ್ತು ತಂದೆಯವರೊಡನೆ ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತು ರಷ್ಯಾ ದೇಶಗಳಲ್ಲಿ ಕೈಗೊಂಡಿದ್ದ

ಪ್ರವಾಸದ ಕಥೆಯನ್ನೂ ಸಂಕ್ಷಿಪ್ತವಾಗಿ ತಿಳಿಸುತ್ತಾಳೆ; ಅಲ್ಲಿ ತಾನು ಸಂಧಿಸಿದ ಕೆಲವು ಪ್ರಖ್ಯಾತ ಪುರುಷರನ್ನು ನೆನಸುತ್ತಾಳೆ. ಹೆಂಗಸರ ಸೆರೆಮನೆಯಲ್ಲಿ ಸತ್ಯಾಗ್ರಹಿ ಖೈದಿಯಾಗಿದ್ದು ತಾನು ಕಂಡು ಅನುಭವಿಸಿದ ಅನುಭವಗಳನ್ನೆಲ್ಲ ವಿವರಿಸುತ್ತಾಳೆ. ಅಸಾಂಪ್ರದಾಯಕ ರೀತಿಯ ಪ್ರಣಯಯಾತ್ರೆ ಮತ್ತು ವಿವಾಹಗಳ ವಿವರಗಳನ್ನೂ, ಹೊಸ ಪಟ್ಟಣಗಳಲ್ಲಿ ಮತ್ತು ಅಪರಿಚಿತವಾತಾವರಣಗಳಲ್ಲಿ ಹೊಸ ಬಾಳಿಗೆ ತಾನು ಹೊಂದಿಕೊಳ್ಳಲಾರದೆ ತೋರಿಸಿದ ಪ್ರತಿಕ್ರಿಯೆಯನ್ನೂ ಮುಚ್ಚುಮರೆಯಿಲ್ಲದೆ ಬಿಚ್ಚಿ ಹೇಳುತ್ತಾಳೆ; ಯಾರಿಗೋಸ್ಕರ ಪ್ರಚಲಿತ ರಾಜಕೀಯ ಚಳುವಳಿಯಲ್ಲಿ ಪ್ರಮುಖಪಾತ್ರವಹಿಸಲು ಹಿಂಜರಿದಿದ್ದಾಳೆಯೋ ಆ ಇಬ್ಬರು ಮಕ್ಕಳು ಹರ್ಷ ಮತ್ತು ಅಜಿತರನ್ನೂ ಆಕೆ ನಮ್ಮ ಮುಂದೆ ನಿಲ್ಲಿಸಿದ್ದಾಳೆ. ತಂದೆ, ತಾಯಿ ಮತ್ತು ಇತರ ಒಲುಮೆಯ ನೆಂಟರಿಷ್ಟರ ಶಾಶ್ವತವಿಯೋಗದ ಪರಿಣಾಮವಾಗಿ ಉಕ್ಕಿದ ಕಣ್ಣೀರಿನಿಂದ ಅಲ್ಲಲ್ಲಿ ಹಾಳೆಗಳು ಒದ್ದೆಯಾಗಿವೆ.

ಆದರೆ ಈ ಆತ್ಮಕಥೆಯಲ್ಲಿ ನೆಹ್ರೂ ಕುಟುಂಬದ ಇತಿಹಾಸ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಆದುದರಿಂದ ಇದು ಭಾರತೀಯರಿಗೆ ಅತ್ಯಮೂಲ್ಯವಾಗಿರುವುದಲ್ಲದೆ ಆಕರ್ಷಣೀಯವಾಗಿಯೂ ಇದೆ. ನೆಹ್ರೂ ಕುಟುಂಬದ ಕಾಲುಶತಮಾನದ ಚರಿತ್ರೆ, ಭರತಖಂಡದ ಸ್ವಾತಂತ್ರ್ಯ ಸಂಗ್ರಾಮೇತಿಹಾಸದಲ್ಲಿ ಪ್ರಮುಖಭಾಗವನ್ನು ಆಕ್ರಮಿಸಿರುವುದೇ ಅಲ್ಲದೆ, ಅದರ ಜೀವನಾಡಿಯಂತೆಯೂ ಇರುವುದಲ್ಲವೆ?

ಸರಳವೂ ಗ್ರಾಹ್ಯವೂ ಆದ ಈ ಇತಿಹಾಸದಲ್ಲಿ ನಾವು ಭವ್ಯವ್ಯಕ್ತಿ ಮೋತಿಲಾಲ್ ನೆಹ್ರೂರವರನ್ನೂ ಎದುರುಗೊಳ್ಳುತ್ತೇವೆ. ಆ ಪುರುಷಸಿಂಹನಿಗೆ ಎಣೆಯಾಗುವ ಬೇರೊಬ್ಬ ವ್ಯಕ್ತಿಯನ್ನು ಕಾಣುವುದೆಲ್ಲಿ! ಅವರ ಹಲವಾರು ಅತ್ಯುಜ್ಜ್ವಲಗುಣಗಳಲ್ಲಿ ಮಹಾತ್ಮಾಜೀಯವರನ್ನು ಆಕರ್ಷಿಸಿದ ಅಮೂಲ್ಯ ಗುಣವೆಂದರೆ ಅವರು ತಮ್ಮ ಕುಟುಂಬದಲ್ಲಿಟ್ಟಿದ್ದ ಶ್ರದ್ಧಾವಾತ್ಸಲ್ಯ. ಇಡೀ ಕುಟುಂಬಕ್ಕೆ ಆರಾಧ್ಯ ದೇವತೆಯಾಗಿ, ದಯಾಮಯನೂ ಚಿತ್ತರಂಜನಕಾರಿಯೂ ಆದ ತಂದೆಯಾಗಿ, ಸರ್ವಾಧಿಕಾರಿಯಾಗಿ, ಸರ್ವತ್ರ ಸುಖಸಂತೋಷಶಾಂತಿಗಳನ್ನು ಚೆಲ್ಲಿದ ಅಂತಹ ವ್ಯಕ್ತಿ ದುರ್ಲಭ.

ಲೋಕಕಲ್ಯಾಣ ಸಾಧನಾಕಾಂಕ್ಷಿಯೂ, ಅಪ್ರತಿಮ ಧೈರ್ಯ ಸಂಪನ್ನಧರ್ಮವೀರನೂ ಆದ ಜವಹರಲಾಲನಿಲ್ಲಿ ಸಮರ ಶಸ್ತ್ರಾಸ್ತ್ರಗಳನ್ನು ಬಿಸಾಡಿ, ಉಗ್ರಕಾಠಿನ್ಯವನ್ನು ತೊರೆದು ವಿವಿಧ ಬಾಂಧವ್ಯಗಳ ಅನುಪಮ ಆದರ್ಶಮೂರ್ತಿಯಾಗಿ ಕುಟುಂಬವನ್ನು ಬೆಳಗಿದ್ದಾನೆ. ತಂದೆಗೆ ತಕ್ಕ ಮಗನಾಗಿ, ತಂಗಿಯವರಿಗೆ ಬೇಕಾದ ಅಣ್ಣನಾಗಿ, ಪತ್ನಿಯ ಆರಾಧ್ಯ ದೇವತೆಯಾಗಿ, ಮಗಳ ಪ್ರೇಮಮೂರ್ತಿಯಾಗಿ, ಗೆಳೆಯರ ಹಿತಮಿತ್ರನಾಗಿ, ಹಸುಳೆಗಳಲ್ಲಿ ಹಸುಳೆಯಾಗಿ ವಿವಿಧಾವಸ್ಥೆಗಳಲ್ಲಿ ಸರ್ವಾದರನೀಯನಾಗಿ ಬಾಳುವ ಅಂತಹ ವ್ಯಕ್ತಿ ಪ್ರಪಂಚದಲ್ಲಿ ಅಪರೂಪ.

ಜವಹರನ ಪ್ರೇಮಪುತ್ಥಳಿಯೂ ವೀರಪತ್ನಿಯೂ ಆದ ಕಮಲಳ ಚಿತ್ರ ಇಲ್ಲಿ ಮೃದುಮಧುರವಾಗಿ ವರ್ಣಿತವಾಗಿದೆ. ಆಕೆಯ ಕರುಣಾಜನಕ ಸಂಕ್ಷಿಪ್ತ ಜೀವನವೂ, ಹೃದಯ ವಿದ್ರಾವಕವಾದ ದುರಂತ ಮರಣವೂ ಈಗಾಗಲೇ ಭಾವಗೀತೆಯಾಗಿ, ಪುರಾಣಕಥೆಯಾಗಿ ಪರಿಣಮಿಸಿದೆ.

ಇಂದು ವಿಜಯಲಕ್ಷ್ಮಿಯೆಂದು ಪ್ರಸಿದ್ಧಳಾಗಿರುವ ಸ್ವರೂಪಳು ರಜತರೇಖೆಯಂತೆ ಕಥೆಯಲ್ಲೆಲ್ಲ ಮಿರುಗುತ್ತಾಳೆ. ಕೇಸರೀವರ್ಣ ರಂಜಿತವಾದ ಮದುಮಗಳ ಉಡುಪುಗಳಿಂದ ಸುಶೋಭಿತಳಾದ ಇಂದಿರಾ ನಮ್ಮ ಕಣ್ಣುಮುಂದೆ ಸುಳಿಯುತ್ತಾಳೆ.

ಸೂಕ್ಷ್ಮದೇಹಿಯೂ, ಪರಮಪವಿತ್ರಳೂ, ವೃದ್ಧಳೂ, ದುರ್ಬಲಳೂ, ಮೋತಿಲಾಲರ ಧರ್ಮಪತ್ನಿಯೂ ಜವಹರನ ಮಾತೆಯೂ ಆದ ಆ ಸ್ತ್ರೀ ರತ್ನದ ನೆನಪು ನನಗಂತೂ ಅತ್ಯಮೂಲ್ಯವಾದುದು. ಪ್ರೇಮ ವಿಶ್ವಾಸಗಳು ಆಕೆಯಲ್ಲಿ ಧೈರ್ಯಸಹನೆಗಳ ಅದ್ಭುತ ಪವಾಡವನ್ನೇ ಉಂಟು ಮಾಡಿವೆ. ದಂತದ ಸಂಪುಟದೊಳಗಿನ ರತ್ನದಂತೆ ಕ್ಷಣಿಕವಾದ ಯೌವನ ಮತ್ತು ಮಧ್ಯಮ ವಯಸ್ಸುಗಳಲ್ಲಿ ಸಾದರ ಸಾಭಿಮಾನಗಳಿಂದ ಪರಿರಕ್ಷಿತಳಾದ ಆಕೆ ಶಕ್ತಿಗುಂದಿದ ವೃದ್ಧಾಪ್ಯದಲ್ಲಿ ದುರಾರೋಹವೂ ಅಪಾಯಕರವೂ ಆದ ಸ್ವಾತಂತ್ರ್ಯ ಪಥದಲ್ಲಿ ಅಡಿಯಿಟ್ಟು ಹಿಮ್ಮೆಟ್ಟದ ಧುರೀಣತೆಗೆ ದಾರಿತೋರಿಸುವ ಸ್ಫೂರ್ತಿಜ್ವಾಲೆಯಾದರು.

ಬಾಲ್ಯದಲ್ಲಿಯೇ ವಿಧವೆಯಾಗಿ, ನೆಹ್ರೂ ಕುಟುಂಬದ ನಿರಂತರ ಶುಶ್ರೂಷೆಗಾಗಿ ತನ್ನ ಬಾಳನ್ನೇ ನಿವೇದಿಸಿದ ಮತ್ತು ತನ್ನ ತಂಗಿಗೆ ಅಂತ್ಯಸೇವೆಯನ್ನು ಸಲ್ಲಿಸಿ ಆಕೆ ಸತ್ತ ೨೪ ಗಂಟೆ ಒಳಗಾಗಿ ತನ್ನ ಐಹಿಕಯಾತ್ರೆಯನ್ನು ಮುಗಿಸಿ, ಬದುಕಿದ್ದಾಗ ಇದ್ದಂತೆಯೇ ಸತ್ತ ಮೇಲೆಯೂ ಬೇರ್ಪಡದ ಆ ಹಿರಿಯ ಸೋದರಿಯ ಚಿತ್ರವಂತೂ ಅತ್ಯ ಮೂಲ್ಯವಾದುದು.

ಮಾನವನ ಅದೃಷ್ಟದಿಂದ ಬೇರ್ಪಡಿಸಲಾಗದ ಬೆಳಕು ನಸು ಬೆಳಕುಗಳು, ಮಬ್ಬುಗತ್ತಲು ಕಗ್ಗತ್ತಲುಗಳು ಹೃದಯಂಗಮವಾದ ಈ ಕುಟುಂಬದ ಇತಿಹಾಸ ಕ್ಷೇತ್ರವನ್ನು ಆವರಿಸಿವೆ.

ಅಜ್ಞಾದ ನುಡಿ ಇಲ್ಲಿಗೆ ನಿಲ್ಲುತ್ತದೆ. ಆದರೆ ನೆಹ್ರೂ ಕುಟುಂಬದ ಜೀವಂತಕಥೆ ಇನ್ನೂ ಮುಂದುವರಿಯುತ್ತದೆ. ಲೋಕವಿಖ್ಯಾತರಾದ ತಂದೆ ಮಕ್ಕಳು ಹಾಕಿಕೊಟ್ಟ ದೇಶಾಭಿಮಾನದ ಉನ್ನತ ಸಂಪ್ರದಾಯ ಗಳನ್ನು ಅವರ ಅನುಯಾಯಿಗಳಾದ ಕಿರಿಯ ಪೀಳಿಗೆಯವರು ಭಕ್ತಿ ಯಿಂದ ಗೌರವಿಸುವರು.

**ಸರೋಜಿನಿ ನಾಯಿಡು**

# ಉಪೋದ್ಘಾತ

ಅತ್ಯುತ್ತಮವಾದ ಚಿತ್ರಗಳಿಗೆ ಸಾಮಾನ್ಯವಾದ ಚೌಕಟ್ಟೇ ಸಾಕು. ನೋಟಕರ ಕಣ್ಣನ್ನು ಸೆಳೆಯುವುದು ಚಿತ್ರಗತವಾಗಿರುವ ಅರಣ್ಯದ ಸೌಂದರ್ಯವೇ ಹೊರತು ಭಿತ್ತಿಯಲ್ಲ. ಕೃಷ್ಣಹತೀಸಿಂಗಳು ತನ್ನ ಉಪಾಖ್ಯಾನದ ಘನತೆಯನ್ನು ಸ್ಪಷ್ಟಗೊಳಿಸುವುದಕ್ಕಾಗಿ ಮಧ್ಯೆ ಮಧ್ಯೆ ವಾಖ್ಯಾನಗಳನ್ನು ಸೇರಿಸುತ್ತಾಳೆ. ಕಥೆಯ ಬೆಳೆವಣಿಗೆ ಸ್ವಾಭಾವಿಕವಾಗಿದೆ. ಅದೊಂದು ಹಿರಿಯ ಕುಟುಂಬದ ನಾಟಕವಾಗಿದೆ. ಆ ಕುಟುಂಬದ ಪಾತ್ರಗಳಾದರೋ ಐತಿಹಾಸಿಕ ವ್ಯಕ್ತಿಗಳು. ಭರತಖಂಡವಿಂದು ರೂಪಿಸುತ್ತಿರುವ ಇತಿಹಾಸವೇ ಅದು. ಕೋಟ್ಯನುಕೋಟಿ ಹೃದಯಗಳ ಸಂಕೇತದಂತಿರುವ ಆನಂದ ಭವನ ದೇಶದಾದ್ಯಂತ ವ್ಯಾಪಿಸಿದ ಚಳುವಳಿಗಳಿಗೆ ಉತ್ಪಾದಕ ಕೇಂದ್ರವಾಗಿದೆ. ಆ ಆನಂದ ಭವನದಿಂದ ಹೊರಸೂಸಿದ ಉತ್ಪಾದಕಶಕ್ತಿ ಎಚ್ಚರಗೊಂಡ ಜನರ ಪರಿತಾಪವನ್ನು ಮರೆಸುತ್ತದೆ. ಪ್ರಮುದವನ ಪ್ರಭಾತ ಸಮಯಗಳ ದೃಶ್ಯವನ್ನಿಲ್ಲಿ ನಾವು ನೋಡುತ್ತೇವೆ; ನಗುವಿನ ಪ್ರತಿಧ್ವನಿಯನ್ನು ಕೇಳುತ್ತೇವೆ; ಭಾರತೀಯರ ಸಂಯುಕ್ತ ಸಂಕಲ್ಪದ ಮಹಾಜ್ಯೋತಿ ಜನಾಕೀರ್ಣವಾದ ಆ ಗೃಹಪರಿಸರವನ್ನು ಬೆಳಗುತ್ತದೆ; ಜನತೆಯ ಜೀವನದಲ್ಲಿ ಅತಿ ಪ್ರಾಮುಖ್ಯವಾದ ದುರಂತ ಘಟನಾವಳಿಗಳು ಜರುಗುತ್ತವೆ; ಕೂಡಲೇ ಆ ಮನೆ ಸಂಕ್ಷೋಭೆಯ ದವಡೆಗೀಡಾಗುತ್ತದೆ. ಇಡೀ ರಾಷ್ಟ್ರವನ್ನೇ ಶೋಕಸಾಗರದಲ್ಲಿ ಮುಳುಗಿಸಿದ ಪ್ರಿಯತಮ ಬಂಧುಗಳ ವಿಯೋಗವನ್ನು ಮರವೆಯ ತೆರೆ ಮುಸುಕಿದಾಗ ಶಾಂತಿ ನೀರವತೆಗಳು ತಾಂಡವವಾಡುತ್ತವೆ. ತನ್ನ ಭಕ್ತಿಯ ಕಾಣಿಕೆಯನ್ನು ಸಮರ್ಪಿಸುವ ಭರದಲ್ಲಿ ಮನೆಯ ಮಗಳು ನಮ್ಮನ್ನು ಗೃಹಾಂತರ ಪ್ರದೇಶಕ್ಕೆ ಒಯ್ಯುತ್ತಾಳೆ; ಧೈರ್ಯ ಮತ್ತು ಸತ್ಯಾನ್ವೇಷಣ ಮನೋಭಾವನೆಗಳೇ ತಳಹದಿಯಾಗುಳ್ಳ ಮಹತ್ಕಾರ್ಯಗಳು ರೂಪುಗೊಳ್ಳು

ತ್ತಿರುವ ಕೊಟಡಿಗಳನ್ನು ಕ್ಷಣಕಾಲ ನೋಡುತ್ತೇವೆ. ಧೀಶಕ್ತಿಪ್ರದರ್ಶನದ ಜತೆಗೆ ಗೃಹಸಂಬಂಧವಾದ ಚಿತ್ರಗಳು ಕಲಾಪೂರ್ಣವಾಗಿ ವರ್ಣಿತವಾಗಿವೆ. ನಾವು ಹೆಬ್ಬಾಗಿಲುಗಳನ್ನು ದಾಟುವಾಗಲೂ ಸಹ ಈ ಹೊತ್ತಗೆ ನಮಗೆ ಪರಿಚಯಮಾಡಿಕೊಟ್ಟಿರುವ ಅಚ್ಚುಮೆಚ್ಚಿನ ಸ್ಥಳವನ್ನು ಮರೆಯಲಾರೆವು.

ತಂದೆಯ ಮತ್ತು ಮಗನ ಆಕೃತಿಗಳು ಇಲ್ಲಿ ಸಂಪೂರ್ಣವಾಗಿ ಚಿತ್ರಿತವಾಗಿವೆ. ಅವರು ಲೋಕ ವಿಖ್ಯಾತರಾದವರು. ನಮಗೆ ಅಷ್ಟು ವಾಸ್ತವವಾಗಿಯೂ, ಅಷ್ಟು ಮಾನವೀಯರಾಗಿಯೂ ಕಾಣುವಂತೆ ಅವರನ್ನು ಸೃಷ್ಟಿಸುವುದು ಈ ಗ್ರಂಥಕರ್ತರಿಗೆ ಮಾತ್ರ ಸಾಧ್ಯ; ಏಕೆಂದರೆ ಈಕೆಗೂ ಅವರಿಗೂ ಇರುವ ಗಾಢಸಂಬಂಧ ಬೇರೆಯವರಿಗಿರಲಿಲ್ಲ. ನಿಕಟವಾದ ರಕ್ತಸಂಬಂಧ ಮತ್ತು ವಸ್ತುನಿರ್ವಹಣಶಕ್ತಿ, ವಿವೇಕಗಳಿಲ್ಲದೆ ಹೋಗಿ ಯಾವ ಉತ್ತಮ ಕಲೆಯೂ ಆಕೆಯ ಸಹಾಯಕ್ಕೆ ಒದಗುತ್ತಿರಲಿಲ್ಲ. ವಿಸ್ಮಯವನ್ನುಂಟುಮಾಡುವ ಕಾಗದಪತ್ರಗಳ, ನೆನಪಿನಲ್ಲುಳಿದ ಮಾತುಕತೆಗಳ ಮತ್ತು ಹಲವಾರು ಘಟನಾವಳಿಗಳ ವರ್ಣನೆಗಳ ಮೂಲಕ ಅವಳು ತನ್ನ ತಂದೆಯ ಮತ್ತು ಅಣ್ಣನ ವಿಷಯವನ್ನು ಚಿತ್ರಿಸಿ, ತನ್ನ ಕಥೆಯನ್ನು ಇಂದಿನ ತನಕ ಬೆಳೆಸಿ ನಿಲ್ಲಿಸುತ್ತಾಳೆ. ಅವರ ಇಂದಿನ ಕಥೆಯನ್ನು ಯಾರೂ ಹೇಳಬೇಕಾಗಿಲ್ಲ. ಬಹುಶಃ ಅಸಹನೀಯವಾದ ಈ ಅವ್ಯಕ್ತಾಭಿಜ್ಞತೆಯೇ ಜವಹರಲಾಲ್ ನೆಹ್ರೂ ಅವರಿಗೆ ಸಂಬಂಧಿಸಿದ ಪ್ರತಿಯೊಂದು ಪದಕ್ಕೂ ಉಜ್ವಲತೆಯನ್ನು ಕೊಡುತ್ತದೆ; ಅವರ ಇತ್ತೀಚಿನ ಕಾಗದಗಳಿಂದ ಎತ್ತಿದ ಉಕ್ತಿಗಳನ್ನು ನಾವು ತೀವ್ರಾಸಕ್ತಿಯಿಂದ ಓದುತ್ತೇವೆ. ಕ್ಷಮಾಶೀಲತೆಯಲ್ಲಿ ವೈಭವಗಳಲ್ಲಿ, ಕಲಾಕೌಶಲ್ಯದಲ್ಲಿ ಅವುಗಳಿಗೆ ಎಣಿಕೆಯಾದ ಪತ್ರಗಳು ಬೇರೆ ಇಲ್ಲ.

ಆದರೆ ಈ ಪುಸ್ತಕದಲ್ಲಿ ಮರೆಯಲಾಗದ ಹಲವಾರು ವ್ಯಕ್ತಿ ಚಿತ್ರಗಳಿವೆ; ಅವುಗಳಲ್ಲಿ ಅತ್ಯಂತ ಕೋಮಲವೂ ಪ್ರಖ್ಯಾತವೂ ಅದ ಚಿತ್ರಗಳೆಂದರೆ ತಾಯಿ ಮತ್ತು ದೊಡ್ಡಮ್ಮನವರವು. ಅವರು ಈ ಗ್ರಂಥಕರ್ತೆಯ ಆರಾಧ್ಯಮೂರ್ತಿಗಳಾಗಿದ್ದಾರೆ. ನಮ್ಮ ಕಲ್ಪನಾಮಂದಿರ

ದಲ್ಲಿ ಸುಪ್ರತಿಷ್ಠಿತರಾದ ಅವರು ಆ ಭವ್ಯಗೃಹದಲ್ಲಿ ಅನವರತ ವಾಸಿಸುತ್ತಿರುತ್ತಾರೆ. ಗ್ರಂಥಕರ್ತೆಯ ಮಹತ್ವಪೂರ್ಣವಾದ ಅನುಭವಗಳ ಮಾಲೆಯಲ್ಲಿ ಕುಟುಂಬದ ವ್ಯಕ್ತಿಗಳೇ ಅಲ್ಲದೆ, ಇನ್ನೂ ಹಲವಾರು ವ್ಯಕ್ತಿಚಿತ್ರಗಳು ರಾರಾಜಿಸುತ್ತಿವೆ.

ಇದೊಂದು ವಿಚಿತ್ರವಾದ ಗ್ರಂಥ. ಇದು ರಾಜಕೀಯ ವಿಷಯಗಳನ್ನೊಳಗೊಂಡ ಗ್ರಂಥವಲ್ಲವಾದರೂ, ಬೇರೊಂದು ದೃಷ್ಟಿಯಿಂದ ರಾಜಕೀಯ ಗ್ರಂಥವೆಂದು ಊಹಿಸಬಹುದಾಗಿದೆ. ಏಕೆಂದರೆ ನಮ್ಮ ಉತ್ಪಾದಕ ಚೈತನ್ಯದೊಡನೆ ಸಂಮಿಲನಗೊಂಡ ರಾಜನೀತಿ ಬರಿಯ ರಾಜಕೀಯವಾಗಿಯೇ ಉಳಿಯುವುದಿಲ್ಲ. ಅದನ್ನು ಪ್ರತ್ಯೇಕವಾಗಿ ಸಮೀಕ್ಷಿಸಲಾಗದು, ಅಥವಾ ಅದಕ್ಕೆ ತಾತ್ತ್ವಿಕವಾದ ಇಲ್ಲವೇ ವಿಶೇಷವಾದ ಅರ್ಥವನ್ನು ಕಲ್ಪಿಸಲಾಗದು. ಸನ್ನಿವೇಶ ಘಟನೆಗಳಂತೂ ಈ ಪುಸ್ತಕದಲ್ಲಿ ಮಾಲಿಮಾಲೆಯಾಗಿ ಬರುತ್ತವೆ. ನಮ್ಮ ರಾಷ್ಟ್ರೀಯ ನಾಗರಿಕತೆಯ ವೇದಿಕೆಯಮೇಲೆ ಭರತಖಂಡದ ಭವಿಷ್ಯವನ್ನು ಅವು ದೃಶ್ಯ ರೂಪದಲ್ಲಿ ಬಿಚ್ಚಿ ತೋರಿವೆ. ಆದರೆ ಅವುಗಳನ್ನು ಅನಾವಶ್ಯಕವಾಗಿ ಬೆಳಸಿಲ್ಲ. ಇಡೀ ರಾಷ್ಟ್ರವನ್ನೇ ತತ್ತರಗೊಳಿಸಿರುವ ಪ್ರಸಂಗಗಳು ಈ ಇತಿಹಾಸದ ಚೌಕಟ್ಟಿನಲ್ಲಿ ತಪ್ಪದೆ ಗೋಚರಿಸುತ್ತವೆ. ಕೋಟ್ಯನುಕೋಟಿ ಜನರು ಸಾಹಸಪ್ರಿಯರಾಗಿರುವಾಗ ಮತ್ತು ಸಾಹಸಕೃತ್ಯಗಳು ನಿತ್ಯಘಟನೆಗಳಾಗಿರುವಾಗ ರಾಜಕೀಯಕ್ಷೋಭೆಯಾಗಲೀ, ಭಯಂಕರವಾದ ಬೆದರಿಕೆಗಳಾಗಲೀ ಪರಿಣಾಮಕಾರಿಯಾಗಲಾರವು. ಯಾವ ಕುಟುಂಬದ ವ್ಯಕ್ತಿಗಳು ರಾಷ್ಟ್ರದ ಕಲ್ಯಾಣಕ್ಕಾಗಿ ತಮ್ಮ ಬಾಳನ್ನೇ ಮುಡಿಪಾಗಿರಿಸಿದ್ದಾರೆಯೋ, ಯಾರು ವ್ಯಕ್ತಿ ಸಂಬಂಧವಾದ ವಿಪತ್ತುಗಳನ್ನು ಅನುಭವಿಸುವುದು ಮತ್ತು ಹೊಣೆಗಾರಿಕೆಯನ್ನು ಹೊರುವುದು ವಿಶೇಷವಾದ ಹಕ್ಕೆಂದು ಒಪ್ಪಿಕೊಂಡಿರುವರೋ, ಅಂತಹ ಕುಟುಂಬದ ವಿಷಯದಲ್ಲಂತೂ ಈ ಮಾತು ನಿತ್ಯಸತ್ಯ. ತೊಡಕಾದ ವಿಷಯಗಳಮೇಲೆ ಮಾತಾಡುವಾಗಲೂ ಕೃಷ್ಣಹತೀಸಿಂಗಳ ಮುಗ್ಧ ಮನೋಭಾವ ಮರೆಯಾಗುವುದಿಲ್ಲ. ರಾಷ್ಟ್ರೀಯ ಮಹೋದ್ದೇಶ ಸಾಧನೆಯಲ್ಲಿ ವ್ಯಕ್ತಿತ್ವ ಸಂಪೂರ್ಣವಾಗಿ ಲೀನವಾದಾಗ ಮಾತ್ರ ಈ

ನಿರ್ಲಿಪ್ತತೆ ಸಾಧ್ಯ; ಆದುದರಿಂದಲೇ ಆಕೆಯ ಮಾತಿನಲ್ಲಿ ಸಹಜತೆ ಇದೆ. ವ್ಯಕ್ತಿಗಳಿಗೆ ಮತ್ತು ಇಡೀ ಜನಾಂಗಕ್ಕೆ ಆಗಿರುವ ಅನ್ಯಾಯ ಗಳನ್ನು ಪ್ರತಿಭಟಿಸುವಾಗ• ಅವಳ ಕೋಪಾನಲ ಪ್ರಜ್ವಲಿಸುತ್ತದೆ; ಮಾನವ ಧರ್ಮದಲ್ಲಿರುವ ಗಾಢವಿಶ್ವಾಸದ ಪ್ರಭಾವದಿಂದ ಅವಳ ಮಾತುಗಳು ಮಾಲೆಮಾಲೆಯಾಗಿ ಮುನ್ನುಗ್ಗುತ್ತವೆ. ಘಟನಾವಳಿ ಗಳ ಹಿಂಗಡೆಯಲ್ಲಿ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುವ ಮಾನವೀ ಯತೆಯಲ್ಲಿ ಆಕೆಯ ವ್ಯಕ್ತಿತ್ವ ಸಂಪೂರ್ಣವಾಗಿ ಲೀನವಾಗಿದೆ. ಆದುದ ರಿಂದಲೇ ಓದುಗರ ಮನಸ್ಸು ಕೂಡಲೇ ಮಾರುಹೋಗುತ್ತದೆ; ಮತ್ತು ಅಲ್ಲಲ್ಲಿ ಬರುವ ಬಿಡಿಬಿಡಿ ಪ್ರಸಂಗಗಳು ಆತ್ಮಕಥೆಗೆ ಪ್ರಸ್ತುತವಾದು ವೆಂದೂ, ಅತ್ಯಾವಶ್ಯಕವಾದುವೆಂದೂ ಅವರು ಭಾವಿಸದಿರಲಾರರು.

ಬಾಹ್ಯೋಪಾಖ್ಯಾನಗಳಲ್ಲಿ ಆಳವಾದ ತನ್ನ ವೈಯುಕ್ತಿಕಾನು ಭವವನ್ನು ಸಂಯೋಗಗೊಳಿಸುವುದರಲ್ಲಿ ಗ್ರಂಥಕರ್ತೆ ತುಂಬ ನಿಪುಣೆ. ಲಕ್ನೋ ನಗರದ ಕೇಂದ್ರ ಕಾರಾಗೃಹದ ವರ್ಣನೆಯೇ ಇದಕ್ಕೆ ನಿದ ರ್ಶನ. ಅಲ್ಲಿ ಅವಳು ಭಾಗ್ಯಹೀನೆಯರಾದ ಭಗಿನಿಯರ ಸಹವಾಸದಲ್ಲಿ ಹಲವಾರು ತಿಂಗಳುಗಳನ್ನು ಕಳೆದಿದ್ದಳು. ಅವರ ಬಂಧನಕ್ಕೆ ಸ್ವದೇಶಾ ಭಿಮಾನವ ಕಾರಣವಾಗಿರಲಿಲ್ಲ; ನಿರ್ವ್ಯಾಜ ಪ್ರೇಮದಿಂದ ನಿಷ್ಕಳಂಕ ಭಕ್ತಿಯಿಂದ ಸೋದರ ಮಾನವರನ್ನು ಸೇವಿಸಿದುದಕ್ಕಾಗಿ ಅವರು ಶಿಕ್ಷೆಯನ್ನನುಭವಿಸುತ್ತಿರಲಿಲ್ಲ. ವಾಸ್ತವಿಕವಾದ ಹಿಂಸಾಕೃತ್ಯಗಳಿಗಾಗಿ ಅವರಿಗೆ ಆ ದುರ್ಗತಿ ಪ್ರಾಪ್ತವಾಗಿತ್ತು. ಈ ಕಥೆ ವಿಶುದ್ಧಭಾವ ಪ್ರಕಾಶನದ ಭವ್ಯತೆಯನ್ನು ತಾಳಿದೆ. ತಾನು ಕಣ್ಣಾರೆ ನೋಡಿ ಅನು ಭವಿಸಿದುದನ್ನು ಅವಳು ಇಲ್ಲಿ ನಿರೂಪಿಸಿದ್ದಾಳೆ. ಸದ್ಯಸ್ಥಿತಿಯಲ್ಲಿ ನಾಗರಿಕವೂ ಅಸಮಗ್ರವೂ ಆದ ಮಾನವ ಕುಟುಂಬವನ್ನು ಪ್ರತಿಭಟಿ ಸುತ್ತಿರುವ ಜಟಿಲಸಮಸ್ಯೆಗಳನ್ನು ತನ್ನ ಮೇಧಾಶಕ್ತಿಯಿಂದ ಎಳೆಎಳೆ ಯಾಗಿ ಬಿಡಿಸಿ ತೋರಿಸುತ್ತಾಳೆ. ಆದರೆ ಅವಳ ನಿರೂಪಣಾಕ್ರಮ ಅನನುಕರಣೀಯವಾದುದು. ಆದುದರಿಂದ ಪುಸ್ತಕವನ್ನು ಓದಿಯೇ ಇದರ ಸವಿಯನ್ನು ಅನುಭವಿಸಬೇಕು. ರಾಜನೀತಿಯೆಂದೋ, ಸಮಾಜ ನೀತಿಯೆಂದೋ, ಯಾವ ಹೆಸರಿಂದಾದರೂ ಕರೆಯಿರಿ, ಅದೆಲ್ಲವೂ

ಅಲ್ಲಿದೆ. ಸಮಸ್ತ ಮಾನವ ಕುಲದ ಪ್ರತಿಕ್ರಿಯೆಯಿಂದ ಪಾರಾಗಲು ಕೃತ್ರಿಮ ವಿಭಜನೆಗಳ ಮೂಲಕ ನಾವು ತತ್ಪ್ರೋದ್ದೇಶಗಳನ್ನು ವರ್ಗೀಕರಣಮಾಡುತ್ತೇವೆ. ಆದರೆ ಬಚೂಲಿಯ ಕಥೆ ಅಂತಹ ವಿಭಜನೆಗಳನ್ನು ಮೀರಿದುದು. ನಿಷ್ಕರುಣವೂ ವಿವೇಕರಹಿತವೂ ಆದ ಸಾಮಾಜಿಕ ಸಂಪ್ರದಾಯದಿಂದ ಬಹಿಷ್ಕೃತವೂ ಜರ್ಜರಿತವೂ ಆದ ಮತ್ತು ತಿಮಿರಾವೃತವಾದ ಆತ್ಮ ನಮ್ಮ ಗಮನವನ್ನು ಸೆಳೆಯುತ್ತದೆ. ಅಂತಹವರಿಗೆ ಪ್ರತೀಕಾರವನ್ನು ಬಗೆಯದೆ ಶಿಷ್ಟಾಚಾರದಿಂದ ಅವರ ಹೃದಯವನ್ನು ಪರಿವರ್ತನಗೊಳಿಸುವುದೇ ಸಾಧುವೆಂದು ನಮಗೆ ಹೊಳೆಯದಿರಲಾರದು. ಅಸಮಗ್ರ ಸಭ್ಯತೆಯ ಸಮಾಜದಿಂದಲೂ ನಾವು ನಿರೀಕ್ಷಿಸಬಹುದಾದ ಶಿಕ್ಷೆ ಇಂತಹುದೆಂದೇ ಕಾಣುತ್ತದೆ. ಹೊರಗಡೆ ಚಾಚಿಕೊಂಡಿರುವ ಎತ್ತರವಾದ ಗೋಡೆಗಳು ಆ ದೃಶ್ಯವನ್ನು ಮರೆಮಾಡುತ್ತವೆ. ಕಬ್ಬಿಣದ ಬಾಗಿಲುಗಳ ಕಡೆಗೆ ಗ್ರಂಥಕರ್ತೆ ಕೊನೆಯ ನೋಟವನ್ನು ಬೀರುತ್ತಾಳೆ; ನಿರಂತರ ದುಃಖಪೀಡಿತರಾದ ಆ ಭಾಗ್ಯಹೀನೆಯರು ಹಲವಾರು ವರ್ಷಗಳ ತನಕ ತಮ್ಮ ಬಾಳುವೆಯನ್ನು ಆ ಬಾಗಿಲುಗಳ ಹಿಂದೆಯೇ ಸಾಗಿಸಬೇಕಾಗಿತ್ತು. ಮನಸ್ಸಿಲ್ಲದ ಮನಸ್ಸಿನಿಂದ ಅವಳ ಹೆಜ್ಜೆಗಳು ಮುಂದುವರಿಯುತ್ತವೆ. ಆದರೆ ಅವಳು ನಡೆಯುತ್ತಿರುವ ದಾರಿ ಕ್ಷಣಕಾಲ ಸುಳ್ಳೆಂದು ಕಾಣುತ್ತದೆ. ಆ ಸಮಗ್ರ ಚಿತ್ರದಲ್ಲಿ ಘನೀಭೂತ ವಿಶ್ವಾನುಭವದ ಸಿದ್ಧಿ ಪ್ರತಿಬಿಂಬಿತವಾಗಿದೆ. ಖೈದಿಗಳ ಹಿತರಕ್ಷಣೆಗಾಗಿ ಮತ್ತು ಶಾಸನಸುಧಾರಣೆಗಾಗಿ ಗ್ರಂಥಕರ್ತೆಯು ಕೈಗೊಂಡಿರುವ ಪ್ರಯತ್ನಗಳು ಸಂಪೂರ್ಣವಾಗಿ ಸಫಲವಾಗದಿದ್ದರೂ ನಮ್ಮ ಕರ್ತವ್ಯಸೀಮೆಯನ್ನು ಬೆಳಗಿ ತೋರಿಸಿಕೊಡುತ್ತವೆ.

ಪಾಂಡಿತ್ಯ ಪ್ರದರ್ಶನಕ್ಕಿಂತ ಭಾವದ್ಯೋತಕತೆಗೆ ವಿಶೇಷವಾಗಿ ಗಮನಗೊಡುವ ಕಲಾವಂತನ ಭಾವಾವೇಶದ ಕಾವಿನಿಂದ ಈ ಪುಸ್ತಕದ ಪ್ರತಿಯೊಂದು ಪಂಕ್ತಿಯೂ ಸಜೀವವಾಗಿದೆ. ಅದಕ್ಕಾಗಿ ಓದುಗರು ಲೇಖಕಳಿಗೆ ಕೃತಜ್ಞರಾಗಿರಬೇಕಾಗಿದೆ. ಈ ಬರವಣಿಗೆಯಲ್ಲಿ ಅಯತ್ನತೆಯೂ, ಸಚೇತನ ವಸ್ತುಗಳಿಂದ ಸಂಪೂರ್ಣವಾಗಿ ಬೇರ್ಪಡಿಸಲಾಗದ

ಪ್ರಮಾಣರಾಹಿತ್ಯಲಕ್ಷಣವೂ ಕಂಡುಬರುತ್ತವೆ. ವಾದ ವಿವಾದಗಳು ಧ್ವನಿತವಾಗುತ್ತವೆಯೇ ಹೊರತು ಅವುಗಳನ್ನು ಅತಿ ಸೂಕ್ಷ್ಮವಾಗಿ ಕೊರೆದಿಲ್ಲ. ದೊರಕುವ ವಿಷಯವನ್ನೆಲ್ಲ ಇಲ್ಲಿ ಒಟ್ಟುಗೂಡಿಸಿಲ್ಲ, ಅಥವಾ ಪಟ್ಟಿಮಾಡಿಲ್ಲ. ಕಥೆಯ ಅಂತರಾಳದಲ್ಲಿ ಲಯಮಾಧುರ್ಯವಿದೆ; ದೃಶ್ಯಗಳು ಪುಟದಿಂದ ಪುಟಕ್ಕೆ ಹರಿಯುತ್ತವೆ. ಹಳೆಯ ನೆನಪುಗಳನ್ನು ಪ್ರತಿಬಿಂಬಿಸುವ ವಿಧಾನವಂತೂ ಅತ್ಯಂತ ರಮಣೀಯವಾಗಿದೆ. ಯೂರೋಪುಖಂಡದ ಪ್ರವಾಸವನ್ನೂ, ಅಲ್ಲಿ ಅವಳು ಕೈಗೊಂಡ ವ್ಯವಹಾರೋದ್ಯೋಗ ಮತ್ತು ಕಲಾಪೂರ್ಣವಾದ ಉದ್ಯಮಗಳನ್ನೂ ಚಿತ್ರಿಸುವ ಬಗೆ ಎಷ್ಟು ಮನೋಜ್ಞವಾಗಿದೆ! ತನ್ನ ಮನೆಯ ಮತ್ತು ಮಕ್ಕಳ ವರ್ಣನೆ ಎಷ್ಟು ಬಂಧುರವಾಗಿದೆ! ಮತ್ತು ಗಂಡಹೆಂಡಿರಿಬ್ಬರೂ ಜತೆಯಾಗಿ ಅನುಭವಿಸಿದ ಜೀವನರಹಸ್ಯವನ್ನು ತಿಳಿಸುವ, ತನ್ನ ಪತಿಯ ಸ್ವಾರ್ಥತ್ಯಾಗಪೂರ್ಣವಾದ ಸೇವಾತತ್ಪರತೆಯನ್ನು ವರ್ಣಿಸುವ ವಿಧಾನ ಎಷ್ಟು ಮನೋಹರವಾಗಿದೆ! ಇವಕ್ಕಾಗಿ ಮತ್ತು ಇನ್ನೂ ಹಲವಾರು ವಿಷಯಗಳಿಗಾಗಿ ಆತ್ಮಕಥೆಯ ಓದುಗರು ಲೇಖಕಳಿಗೆ ಕೃತಜ್ಞರಾಗಿರಬೇಕಾಗಿದೆ.

ಸಾಮಾನ್ಯವಾದ ಚೌಕಟ್ಟಿನಲ್ಲಿ ಸುಂದರವಾದ ಚಿತ್ರ—ಈ ಗ್ರಂಥವನ್ನು ಓದಿದ ನಂತರ ನಮ್ಮ ಮನಸ್ಸಿನಲ್ಲಿ ಮೂಡುವ ಅಭಿಪ್ರಾಯವಿದು. ಭಿನ್ನರೀತಿಯ ಹಲವಾರು ನೂತನ ಚಿತ್ರಗಳು ಆ ಸಿದ್ಧಹಸ್ತದಿಂದ ಹೊರಹೊಮ್ಮುವುದಾದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ; ನಿಜವಾಗಿಯೂ ಈ ಕಥೆಯಿಂದ ಅಂತಹ ಆಶೆ ಮೂಡುತ್ತದೆ. ಕಲಾದೃಷ್ಟಿಯಿಂದ ಈ ಪುಸ್ತಕ ಪರಿಪೂರ್ಣವಾಗಿದೆ. ಈ ಕಥೆಯ ಜೀವನಾಡಿಗಳಂತಿರುವ ಹಲವಾರು ವ್ಯಕ್ತಿಗಳು ತಮ್ಮ ಜೀವನಮಹಾಕಾವ್ಯದಲ್ಲಿ ಇನ್ನೂ ಉಜ್ವಲವಾದ ಪ್ರಕರಣಗಳನ್ನು ಸೃಷ್ಟಿಸುವವರಾಗಿದ್ದಾರೆ. ಈ ಪ್ರಕರಣಗಳು ಇಡೀ ಭರತಖಂಡಕ್ಕೆಮಾತ್ರವೇ ಅಲ್ಲ, ನೂತನಮಾನವ ಜನಾಂಗಕ್ಕೆ ಸೇರಿದುವಾಗಿರುತ್ತವೆ. ಉತ್ತರಾರ್ಧವು ರಚಿತವಾದಾಗ—ಆ ಬಯಕೆ ಕೈಗೂಡುವುದೆಂಬ ನಂಬಿಕೆ ಇದೆ–ಪವಿತ್ರತಮ ಧವಳ ಕೀರ್ತಿಯನ್ನು ನುಸುಳಿಸಲು ಉದ್ದೇಶಪೂರ್ವಕವಾಗಿ

ನಿರ್ಮಿತವಾಗಿರುವ ಘೋರಾಂಧಕಾರದ ಜವನಿಕೆ ಕಣ್ಮರೆಯಾಗುತ್ತದೆ. ನಿರ್ಮಲಾಕಾಶ ಗುಡುಗುಮಿಂಚುಗಳ ಆರ್ಭಟಾಟೋಪಗಳು ಅಣಗಿಸ ಲಾಗದ ಸತ್ಯಸೂರ್ಯನ ಸೂಕ್ಷ್ಮತಮ ಕಿರಣಗಳನ್ನು ತೋರಿಸುತ್ತವೆ. ಮಾನವಕುಲದ ಉನ್ನತಾದರ್ಶಸಾಧನೆಗಾಗಿ ತೊಟ್ಟ ಸಂಕಲ್ಪದಿಂದ ಮತ್ತು ಪ್ರತಿಕೂಲಶಕ್ತಿಗಳನ್ನು ಪ್ರತಿಭಟಿಸಲು ಕೈಗೊಂಡ ಅಕ್ಷಯ ಆತ್ಮಯಜ್ಞದಿಂದ ಭವಿಷ್ಯತ್ ನಾಗರಿಕತೆಯ ಪಥವನ್ನು ಬೆಳಗಿ ನಮ್ಮ ಹೃದಯಪೀಠದಲ್ಲಿ ಆಗಲೇ ಸುಪ್ರತಿಷ್ಠಿತರಾಗಿರುವ ಹಲವಾರು ವ್ಯಕ್ತಿಗಳನ್ನು ಮತ್ತೆ ನಮ್ಮ ಮನೆಗಳಿಗೆ ಆದರದಿಂದ ಬರಮಾಡಿ ಕೊಳ್ಳುತ್ತೇವೆ. ಆದರೆ ಇಂದು ಸಂಕಟದ ಸಮಯದಲ್ಲಿ, ಅಧ್ಯಾತ್ಮಿಕ ಜಾಗೃತಿಯ ಕಾಲದಲ್ಲಿ ಈ ಪುಸ್ತಕವನ್ನು ಓದಿ ಸಂಜೀವನ ಶಕ್ತಿಯನ್ನು ಪಡೆಯುತ್ತೇವೆ—ನಮಗಾಗಿ ಅನೇಕಾನೇಕ ಕಷ್ಟ ಸಂಕಷ್ಟ ಗಳನ್ನು ಅನುಭವಿಸಿದ ನವಯುಗದ ಶ್ರೇಷ್ಠಶಿಲ್ಪಿಯ ನಿದರ್ಶನವೂ ಮತ್ತು ಆತನ ಅಮಿತ ನೈತಿಕೋದ್ದೇಶದಿಂದ ಸ್ಫೂರ್ತಿಗೊಂಡ ಮಹಾ ಪುರುಷರ ಜೀವನ ಕಥೆಯೂ ಉನ್ನತಮಾನವಕೋಟಿಗೆ ಸಂಜೀವನ ಶಕ್ತಿಯನ್ನು ಧಾರೆಯೆರೆದಿವೆ. ಕರ್ಮದಿಂದ ಬೇರ್ಪಡದ ಮತ್ತು ರವೀಂದ್ರರು "ಪ್ರೇಮಮಯ ಸಾಹಸ"ವೆಂದು ಕರೆದಿರುವ, ಸತ್ಯಕ್ಕೆ-ಈ ಆತ್ಮ ಕಥೆಯೇ ನಿದರ್ಶನವಾಗಿದೆ.

**ಅಮಿಯ ಚಕ್ರವರ್ತಿ**

# ಗ್ರಂಥರಚನೆಯ ವಿಷಯ

ಈ ಪುಸ್ತಕವನ್ನು ಬರೆಯಬೇಕೆಂಬ ಆಲೋಚನೆ ಬಹಳ ದಿನಗಳ ಹಿಂದೆಯೇ ಮೂಡಿತು. ಇದನ್ನು ಬರೆಯುವಂತೆ ನನ್ನ ಪತಿ ಮೂರು ವರ್ಷಗಳ ಹಿಂದೆಯೇ ನನಗೆ ತಿಳಿಸಿದರು. ೧೯೪೮ನೆಯ ಮಾರ್ಚಿ ತಿಂಗಳಲ್ಲಿ ರಾಜಾರವರು ಕೈಸೆರೆಯಾಗಿ ನಾನು ಒಬ್ಬಂಟಿಗಳಾದಾಗ ಈ ಪ್ರಯತ್ನವನ್ನು ಕೈಗೊಳ್ಳಲು ನಿರ್ಧರಿಸಿದೆನು. ಒಂದೆರಡು ಪ್ರಕರಣಗಳನ್ನು ಬರೆಯುವುದರೊಳಗಾಗಿ ನನ್ನ ಹಿರಿಯಮಗ ಟೈಫಾಯಿಡ್ ಜ್ವರಪೀಡಿತನಾದನು. ನಾನು ಬರೆವಣಿಗೆಯನ್ನು ಮುಂದುವರಿಸಲಾಗಲಿಲ್ಲ. ರಾಜಾರವರು ಬಿಡುಗಡೆಹೊಂದಿದರೂ ಅನೇಕ ತಿಂಗಳುಗಳ ತನಕ ಮಗುವಿನ ಖಾಯಿಲೆಯ ವಿಷಯದಲ್ಲಿ ಕಾತರರಾಗಿದ್ದೆವು. ಮಗುವು ಗುಣಹೊಂದಿದ ನಂತರ ಮತ್ತೆ ಬರವಣಿಗೆಯ ಕೆಲಸಕ್ಕೆ ಕುಳಿತುಕೊಳ್ಳಲಾಗಲಿಲ್ಲ.

ಒಂದು ವರ್ಷದ ಮೇಲಾಯಿತು. ರಾಜಾರವರು ಮತ್ತೆ ಅನಿರ್ದಿಷ್ಟ ಕಾಲಾವಧಿಯತನಕ ಸೆರೆಮನೆಯನ್ನು ಸೇರಿದರು. ಮತ್ತೊಮ್ಮೆ ನಾನು ಒಬ್ಬಂಟಿಗಳಾದೆನು. ಮೊದಲ ಕೆಲವು ತಿಂಗಳುಗಳು ಕಷ್ಟವಾಗಿದ್ದುವು; ಶಾಂತಿಯಿರಲಿಲ್ಲ. ಆ ಸ್ಥಿತಿಯಲ್ಲಿ ಯಾವ ಬಗೆಯ ಕೆಲಸಕ್ಕಾದರೂ ಮನಸ್ಸನ್ನು ಅಳವಡಿಸಿಕೊಳ್ಳುವುದು ಯಾರಿಗೂ ಸುಲಭವಾಗಿರಲಿಲ್ಲ. ಆದರೆ ಕ್ರಮೇಣ ಪ್ರತಿಯೊಬ್ಬರೂ ನೂತನ ಸನ್ನಿವೇಶಗಳಿಗೆ ಒಗ್ಗಿಕೊಂಡರು. ವೃಥಾ ಕಾಲ ಕಳೆಯುವುದು ಕಷ್ಟವಾದುದರಿಂದ ಈ ಪುಸ್ತಕವನ್ನು ಮತ್ತೆ ಮೊದಲಿನಿಂದ ಆರಂಭಿಸಿದೆನು. ಕರೆಮೀರಿ ಉಕ್ಕಿಬರುತ್ತಿದ್ದ ಆಲೋಚನೆಗಳನ್ನು ಮತ್ತು ನೆನಪುಗಳನ್ನು ಬರೆದಿಡುತ್ತಿದ್ದುದರಿಂದ ಸುದೀರ್ಘ ಮಾಸಗಳ ಒಂಟಿತನದ ಬೇಸರಿಕೆ ತುಸು ಕಡಿಮೆಯಾಗಿ ಮನಸ್ಸಿಗೆ ಅಲ್ಪಸ್ವಲ್ಪ ಸಮಾಧಾನವಾಗುತ್ತಿತ್ತು. ಪತಿಯ ಮಾರ್ಗದರ್ಶಿತ್ವದ ಮತ್ತು ಅಣ್ಣನ ಕಠೋರ

ಪರೀಕ್ಷೆಯ ಅಭಾವದಿಂದ ನನಗೆ ವ್ಯಥೆಯುಂಟಾಗಿದೆ. ಅವೆರಡನ್ನೂ ನಾನು ಆದರದಿಂದ ಬರಮಾಡಿಕೊಳ್ಳಲು ಕುತೂಹಲಿಯಾಗಿದ್ದೆನು. ಆದರೆ ಅದು ಸಾಧ್ಯವಾಗಲಿಲ್ಲ. ಕರಡು ಪ್ರತಿಯನ್ನು ಎರಡನೆಯ ಸಾರಿ ತಿರುವಿಹಾಕಲು ಮತ್ತು ಉಪಯುಕ್ತವಾದ ಸಲಹೆಗಳನ್ನು ಕೊಡಲು ಸದಾ ನನ್ನ ಸಹಾಯಕ್ಕೆ ಒದಗುತ್ತಿದ್ದ ಗೆಳೆಯರೊಬ್ಬರು ಇಲ್ಲದಿದ್ದಲ್ಲಿ, ಈ ಕಾರ್ಯವನ್ನು ಅಷ್ಟು ತೀವ್ರತೆಯಿಂದ ಮುಗಿಸಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಅವರ ಸಹಾಯ, ಸಲಹೆ ಮತ್ತು ಎಂದೂ ಕುಂದದ ಪ್ರೋತ್ಸಾಹಗಳಿಂದ ನನಗೆ ಬಹಳ ಉಪಕಾರವಾಗಿದೆ. ಅದರಲ್ಲಿಯೂ, ನನ್ನನ್ನು ವರ್ಣನಾತೀತವಾದ ವಿಷಣ್ಣತೆ ಆವರಿಸಿ, ಸತ್ವ ಕುಸಿದು, ಕೆಲಸಮಾಡಲು ಹಿಂಜರಿದಾಗ, ಅವರು ಕೊಟ್ಟ ಉತ್ತೇಜನ ಅಷ್ಟಿಷ್ಟಲ್ಲ.

ನಾನು 'ಅಮಿಯ ದಾ' ಎಂದು ಕರೆಯುವ ಡಾಕ್ಟರ್ ಅಮಿಯ ಚಕ್ರವರ್ತಿಯವರಿಗೆ ಅತ್ಯಂತ ಕೃತಜ್ಞಳಾಗಿದ್ದೇನೆ. ನಾನು ಅವರನ್ನು ನನ್ನ ಗುರುವೆಂದು ಭಾವಿಸಿಕೊಂಡಿದ್ದೇನೆ. ನನ್ನ ನವಿನೆನಪುಗಳ ಪುಸ್ತಕವೊಂದನ್ನು ಬರೆಯುವಂತೆ ಅವರು ಸಹ ಅನೇಕ ವರ್ಷಗಳಿಂದ ನನ್ನನ್ನು ಒತ್ತಾಯಪಡಿಸುತ್ತಿದ್ದರು. ಆದರೆ ಅದು ನನ್ನಿಂದ ಸಾಧ್ಯವಿಲ್ಲವೆಂದು ಭಾವಿಸಿದ್ದೆನು. ನನ್ನ ಸಾಮರ್ಥ್ಯದ ವಿಷಯದಲ್ಲಿ ಅವರಿಗೆ ಅಚಲವಾದ ವಿಶ್ವಾಸವಿದ್ದುದರಿಂದ ನನಗೆ ಸ್ವಲ್ಪ ಧೈರ್ಯ ಕುದರಿತು. ನಾನು ಅವರ ಸಲಹೆಯನ್ನು ಕೇಳದಿದ್ದರೂ, ತಾವು ಕಾಗದ ಬರೆದಾಗೆಲ್ಲ ಅಮಿಯ ದಾರವರು ನನ್ನನ್ನು ಒತ್ತಾಯಪಡಿಸುತ್ತಿದ್ದರು. ಯುರವಾಡ ಸೆರೆಮನೆಯ ಕತ್ತಲುಕೋಣೆಯಿಂದ ರಾಜಾರವರು ಸಹ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ಆದುದರಿಂದ ಅಲ್ಪ ಸ್ವಲ್ಪ ಸಂದೇಹದಿಂದಲೇ ಈ ಉದ್ಯಮವನ್ನು ಕೈಗೊಂಡೆನು.

ಅಮಿಯ ದಾರವರು ಈ ಗ್ರಂಥಕ್ಕೆ ಉಪೋದ್ಘಾತವನ್ನು ಬರೆದು ಕೊಟ್ಟು ನನಗೆ ತುಂಬಾ ಉಪಕಾರಮಾಡಿದ್ದಾರೆ. ಇದಕ್ಕಾಗಿ ಮತ್ತು ಅವರ ಪ್ರೋತ್ಸಾಹ ಮಾರ್ಗದರ್ಶನಗಳಿಗಾಗಿ ನಾನು ಅವರಿಗೆ ಚಿರಋಣಿಯಾಗಿದ್ದೇನೆ.

ದೇಹಸ್ಥಿತಿ ಸರಿಯಾಗಿಲ್ಲದಿದ್ದರೂ ಮುನ್ನುಡಿಯನ್ನು ಬರೆದು

ಕೊಟ್ಟಿದ್ದಕ್ಕಾಗಿ ಶ್ರೀಮತಿ ಸರೋಜಿನಿ ನಾಯಿಡುರವರಿಗೂ ಸಹ ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ. ನಾನು ಅವರನ್ನು ಅನೇಕ ವರ್ಷಗಳಿಂದ ಬಲ್ಲೆನು. ನಮ್ಮ ಕುಟುಂಬದ ಮೇಲೆ ಅವರಿಗಿರುವ ಅಗಾಧವಾದ ಸ್ನೇಹವಾತ್ಸಲ್ಯಗಳು ಸುಪ್ರಸಿದ್ಧ ವಾಗಿವೆ.

ಕೆಲವು ದಿನಗಳ ಹಿಂದೆ 'ಬಚೂಲಿಯ' ಕಥೆ 'ಸ್ಟೇಟ್‌ಮನ್' ಪತ್ರಿಕೆಯಲ್ಲಿಯೂ, 'ನೆನಪು'ಗಳು 'ವಿಶ್ವಭಾರತಿ'ಯಲ್ಲಿಯೂ ಮತ್ತು 'ಅಕ್ಕತಂಗಿಯರು' ಹಿಂದೂ ಪತ್ರಿಕೆಯಲ್ಲಿಯೂ ಪ್ರಕಟವಾಗಿದ್ದುವು. ಅವುಗಳನ್ನು ಮತ್ತೆ ಇಲ್ಲಿ ಸೇರಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಆ ಸಂಪಾದಕರಿಗೆ ನನ್ನ ವಂದನೆಗಳು.

# ಪ್ರಸ್ತಾವನೆ

“ ಇಲ್ಲ ; ಇರುಳಿನ್ನು ಮಿಳಿದಿಲ್ಲ
ಕಾದು ನಿಂತಿಹರಲ್ಲಿ ಒಬ್ಬಿಬ್ಬರಿನ್ನು;
ಆದರೇನ್ ಮುತ್ತುತಿದೆ ಕತ್ತಲೆಯ ಮೊತ್ತ
ಬೆಳಗಪ್ಪ ಮುನ್ನವೆಯೆ ಓಹೊ
ಕಾವಲಿರುವಾಳ್ಗಳುಂ ಕೊಲೆಯಪ್ಪರೇನೊ ”

ಪಿಯರಿ ವಾನ್ ಪಾಸೆನ್

೧೯೪೨ನೆಯ ಇಸವಿ ಆಗಸ್ಟ್ ೯ನೆಯ ತಾರೀಖು ಬೆಳಗ್ಗೆ ಐದು ಗಂಟೆಗೆ ಸರಿಯಾಗಿ ಬೊಂಬಾಯಿಯ ಪೋಲೀಸಿನವರು ನಮ್ಮ ಮನೆಗೆ ಆಕಸ್ಮಿಕವಾಗಿ ಭೇಟಿಯಿತ್ತರು. ಅವರ ಹತ್ತಿರ ಜವಹರ ಮತ್ತು ರಾಜಾರವರಿಗೆ ಸಂಬಂಧಪಟ್ಟ ಬಂಧನದ ಆಜ್ಞಾಪತ್ರಗಳಿದ್ದುವು. ಹಲವು ದಿನಗಳಿಂದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಬಹಳ ಬಳಲಿದ್ದೆವು. ಇತ್ತೀಚೆಗೆ ನಡೆದ ಘಟನೆಗಳ ವಿಷಯವಾಗಿ ಮಾತಾಡುತ್ತಾ ರಾತ್ರಿ ಬಹಳ ಹೊತ್ತಿನ ತನಕ ಎಚ್ಚರವಾಗಿದ್ದೆವು. ಅತಿಥಿಗಳು ನಮ್ಮಿಂದ ಅಗಲಿದಾಗ ನಟ್ಟಿರುಳಿನ ಸಮಯ. ಜವಹರ, ರಾಜಾ ಮತ್ತು ನಾನು ಮೂವರೂ ಮತ್ತೊಂದು ಗಂಟೆಯತನಕ ಮಾತಾಡುತ್ತಾ ಕುಳಿತೆವು. ಅನಂತರ ನಿದ್ರಿಸಲು ತೆರಳಿದೆವು.

ರಾತ್ರಿ ಬಹಳ ಹೊತ್ತಾದಮೇಲೆ ಮಲಗಿದ್ದ ನಮ್ಮನ್ನು ಅಷ್ಟು ಮುಂಚಿತವಾಗಿ ಎಚ್ಚರಗೊಳಿಸಿದುದೇ ಅಪರಾಧ; ಬಾಗಿಲಿನಲ್ಲಿ ಪೋಲೀಸಿನವರನ್ನು ಕಾಣುವುದಂತೂ ಮಹಾಪರಾಧ. ನಾನು ಗಾಢ ನಿದ್ರೆಯಲ್ಲಿದ್ದರೂ, ಬಾಗಿಲ ಗಂಟೆಯ ನಾದ ಕೇಳಿಸಿದ ಕೂಡಲೇ ಎಚ್ಚತ್ತೆನು. ಬಂದವರು ಪೋಲೀಸಿನವರೆಂದು ನಾನು ಯಾರಿಂದಲೂ ತಿಳಿದುಕೊಳ್ಳಬೇಕಾಗಿರಲಿಲ್ಲ. ಅಂತಹ ಪೈಶಾಚಿಕ ಸಮಯದಲ್ಲಿ

ಪೋಲೀಸಿನವರಲ್ಲದೆ ಮತ್ತಾರೂ ಬರುವಂತಿರಲಿಲ್ಲ. ಜವಹರನೊಬ್ಬ ನಿಗೆ ಮಾತ್ರ ಆಜ್ಞಾಪತ್ರವಿರಬೇಕೆಂದೂಹಿಸಿ ಆತನ ಕೋಣೆಗೆ ಓಡಿ ದೆನು. ಮಿತಿಮೀರಿ ಬಳಲಿದ್ದುದರಿಂದ ಅವನು ತನ್ನ ಕಣ್ಣುಗಳನ್ನು ಅರಳಿಸಲಾಗಲಿಲ್ಲ. ಆಯಾಸಗೊಂಡಿದ್ದ ಇಂದ್ರಿಯಗಳನ್ನೂ ಸರಿಯಾದ ಹದಕ್ಕೆ ತರಲು ಸಾಧ್ಯವಾಗಲಿಲ್ಲ. ಕೆಲವು ನಿಮಿಷಗಳಲ್ಲಿ ಇಡೀ ಮನೆಯೇ ಎಚ್ಚರಗೊಂಡಿತು. ಅನಿವಾರ್ಯವಾದ ಘಟನೆ ಸಂಪ್ರಾಪ್ತವಾಯಿತೆಂದು ನಮಗೆ ಸಂಪೂರ್ಣವಾಗಿ ಅರಿವಾದ ಕೂಡಲೇ, ಜವಹರನ ಗಂಟು ಮೂಟೆಗಳನ್ನು ಸಿದ್ಧಗೊಳಿಸಲನುವಾದೆವು. ರಾಜಾರವರು ಕೆಲವು ಪುಸ್ತಕಗಳನ್ನು ಆರಿಸಿ ಗಂಟುಕಟ್ಟುತ್ತಿದ್ದಾಗ ನನ್ನ ಸೋದರಸೊಸೆ ಇಂದಿರೆ ಅವರನ್ನು ಕೂಗಿ "ರಾಜಾಭಾಯೀ, ನೀವು ಸಿದ್ಧರಾಗುವುದಿಲ್ಲ ವೇನು?" ಎಂದಳು. ಆಕ್ಷಣವೇ ನಾನು ಅವಳ ಕಡೆ ತಿರುಗಿ 'ಏಕೆ' ಎಂದೆನು. "ಅವರಿಗೂ ಆಹ್ವಾನ ಪತ್ರಿಕೆ ಬಂದಿದೆ" ಎಂದಳು ಇಂದಿರೆ. ಮೊದಲನೆಯ ಮಜಲಿನಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನುಳಿದು ಬೇರಾರನ್ನೂ ಬಂಧಿಸುವುದಿಲ್ಲವೆಂದು ನಾವು ಅರಿತುಕೊಂಡಿದ್ದೆವು. ಆದರೆ ನಮ್ಮ ಊಹೆ ಸರಿಯಾಗಿರಲಿಲ್ಲ.

ರಾಜಾರವರೂ ತಮ್ಮ ಸಾಮಾನುಗಳನ್ನು ಜೋಡಿಸಿಕೊಂಡರು. ಕೇವಲ ಕೆಲವು ನಿಮಿಷಗಳಲ್ಲಿಯೇ ಇಬ್ಬರೂ ಅಣಿಯಾದರು. ನಾವು ಅವರಿಗೆ ಹಿತವನ್ನು ಕೋರಿ ವಂದಿಸಿದೆವು. ಪೋಲೀಸು ಅಧಿಕಾರಿಗಳು ಅವರನ್ನು ತಮ್ಮ ಕಾರುಗಳಲ್ಲಿ ಕುಳ್ಳಿರಿಸಿಕೊಂಡು ಜವಹರನನ್ನು ಅಜ್ಞಾತಕಾರಾಗೃಹಕ್ಕೂ, ರಾಜಾರವರನ್ನು ಪೂನಾದ ಯರವಾಡಾ ಕೇಂದ್ರಕಾರಾಗೃಹಕ್ಕೂ ಕರೆದೊಯ್ದರು. ಈ ಬಾರಿ ನಮಗೆಲ್ಲರಿಗೂ ಮುಂದೇನು ಕಾದಿದೆಯೋ ಎಂದು ಕುತೂಹಲಿತರಾಗಿ ನಮ್ಮ ಮನೆಗೆ ಹಿಂದಿರುಗಿದೆವು.

ಅದೇ ವೇಳೆಯಲ್ಲಿ ನಮ್ಮೊಡನೆ ಅನೇಕ ಅತಿಥಿಗಳಿದ್ದರು. ನಮ್ಮ ಮನೆಯಲ್ಲಿ ಸ್ವಲ್ಪವೂ ಎಡೆಯಿರಲಿಲ್ಲ. ಕೇವಲ ಇಬ್ಬರು ಮಾತ್ರ ನಮ್ಮಿಂದ ಅಗಲಿದ್ದರೂ ಸುತ್ತಮುತ್ತಣ ವಾತಾವರಣವೆಲ್ಲ ಸಂಪೂರ್ಣ ವಾಗಿ ಬದಲಾವಣೆ ಹೊಂದಿದ್ದಂತೆ ಕಾಣುತ್ತಿತ್ತು. ಚೈತನ್ಯೋತ್ಸಾಹ

ಶಕ್ತಿಗಳು ತಾಂಡವವಾಡುತ್ತಿದ್ದ ಸ್ಥಾನವನ್ನು ನಿರುತ್ಸಾಹ ಶೂನ್ಯತೆಗಳು ಆಕ್ರಮಿಸಿದವು. ಸ್ಫೂರ್ತಿದಾಯಕವೂ ಸಚೇತನಕಾರಿಯೂ ಆದ ಶಕ್ತಿ ಕಣ್ಮರೆಯಾಗಿತ್ತು. ಕೆಲವು ದಿನಗಳಿಂದ ಜನರು ಹೋಗಿ ಬರುತ್ತಾ ಇದ್ದುದರಿಂದ ನಮ್ಮ ಮನೆ ಸದಾ ತುಂಬಿರುತ್ತಿತ್ತು. ಈಗಂತೂ ಜನರ ಪ್ರವಾಹ ಮತ್ತಷ್ಟು ಹೆಚ್ಚಿತು. ನಾನಾ ರೀತಿನೀತಿಗಳ ಬಂಧು ಮಿತ್ರರು ಮತ್ತು ಸಾಂಕ್ರಾಮಿಕ ಬಾತ್ಮೀದಾರರು ಬಂಧನದ ವಿವರ ಗಳನ್ನು ತಿಳಿದುಕೊಳ್ಳಲು ಮನೆಯನ್ನು ಮುತ್ತಿದರು. ಆದರೂ ಅವ ರಿಬ್ಬರ ವಿಯೋಗದಿಂದ ಸಂಪ್ರಾಪ್ತವಾದ ಸಂತಾಪ ನಮ್ಮಲ್ಲಿ ಪ್ರಬಲ ವಾಗಿತ್ತು. ನಮ್ಮ ಯೋಚನಾತರಂಗಗಳು ಅವರನ್ನೇ ಹಿಂಬಾಲಿಸಿದುವು.

ಅಂತಹ ಘಟನೆಗಳು ಅನೇಕಸಾರಿ ಜರುಗಿದ್ದರೂ, ಅವುಗಳಿಗೆ ಒಗ್ಗಿಕೊಳ್ಳುವುದು ಕಷ್ಟವಾಗಿದೆ. ಎಂತಹವರಾದರೂ ಸರಿಯೇ, ಪ್ರತಿ ಸಾರಿಯೂ ಕಳವಳಕ್ಕೆ ಗುರಿಯಾಗಿ, ಒಂಟಿತನಕ್ಕೆ ಪಕ್ಕಾಗಬೇಕಾಗು ತ್ತದೆ.

ನನ್ನ ಹತ್ತಿರದ ಮತ್ತು ಒಲುಮೆಯ ಬಂಧುಬಳಗದವರು ಸೆರೆ ಮನೆಯ ಕರಾಳಸ್ವರೂಪದ ಗೋಡೆಗಳ ಮರೆಯಲ್ಲಿ ಕಬ್ಬಿಣದ ಸರಳು ಗಳ ಬೇಲಿಯ ಹಿಂದೆ ನೆಲಸಿ ವರ್ಷವಾಯಿತು. ಅವರನ್ನು ನೋಡುವು ದಕ್ಕೂ ಅವಕಾಶವಿಲ್ಲ. ಅವರ ಅಗಲಿಕೆಯಿಂದ ನನ್ನ ಬಾಳಿನಲ್ಲಿ ಶೂನ್ಯತೆ ವ್ಯಾಪಿಸಿದೆ. ಆದರೂ ನಾನು ನಿರಾಶಳೂ ಆಗಿಲ್ಲ, ಅಂಜು ಪುರುಕಿಯೂ ಆಗಿಲ್ಲ. ಯಾವ ಕಾರಣಕ್ಕಾಗಿ ಅವರು ಶಿಕ್ಷೆ ಅನುಭವಿಸು ತ್ತಿದ್ದಾರೆಯೋ ಅದು ನ್ಯಾಯಶೀಲವಾದುದೆಂದೂ, ಧರ್ಮಸಮ್ಮತ ವಾದುದೆಂದೂ ನಂಬಿಕೊಂಡಿದ್ದಾರೆ. ಆದುದರಿಂದ ಸಂಕ್ಲೇಶ ಸಂಕಷ್ಟ ಗಳು ಅನಿವಾರ್ಯ.

ವ್ಯಕ್ತಿಯ ಜೀವಮಾನದಲ್ಲಿ, ಅದರಲ್ಲಿಯೂ ರಾಷ್ಟ್ರದ ಜೀವಮಾನ ದಲ್ಲಿ ಒಂದು ವರ್ಷವೆಂಬುದು ಬಹಳ ದೀರ್ಘವಾದುದಲ್ಲ. ಆದರೆ ಒಂದೊಂದು ಸಾರಿ ಆ ಒಂದು ವರ್ಷವೇ ಸುದೀರ್ಘವಾಗುತ್ತದೆ ಮತ್ತು ಪ್ರತಿಯೊಂದು ತಿಂಗಳೂ ಒಂದೊಂದು ಯುಗದಂತೆ ಕಾಣುತ್ತದೆ. ಈಗಾಗಲೇ ನಾನು ಅನೇಕ ಮಹತ್ತರವಾದ ಚಳುವಳಿಗಳನ್ನು ಕಂಡಿ

ದ್ದೇನೆ; ಮುಂದೆ ಇನ್ನೆಷ್ಟು ಕ್ರಾಂತಿಗಳನ್ನು ಎದುರಿಸಬೇಕಾಗಿದೆಯೋ ಕಾಣೆ. ಈ ಹಲವು ವರ್ಷಗಳಲ್ಲಿ ನಾನು ಮಾತ್ರವೇ ಅಲ್ಲ, ಅಸಂಖ್ಯಾತ ದೇಶಬಾಂಧವರು ವಿವಿಧ ಮನೋವಿಕಾರಗಳಿಗೆ ಪಕ್ಕಾಗಿದ್ದಾರೆ. ನಾವು ಕಡುನಲ್ಮೆಯ ಕ್ಷಣಗಳನ್ನು ಕಂಡಿರುವಂತೆಯೇ ಕಷ್ಟಕರನಿಮಿಷಗಳನ್ನೂ ಅನುಭವಿಸಿದ್ದೇವೆ. ಒಂದೊಂದು ಸಾರಿ ನಮ್ಮನ್ನು ಮುತ್ತಿರುವ ಛಾಯಾತಿಮಿರಗಳಲ್ಲಿ ದಾರಿಯೇ ಕಾಣಿಸುವಂತಿಲ್ಲ. ಕೆಲವು ವೇಳೆ ಬೆಳಕಿನ ಕಿರಣಗಳು ಕತ್ತಲೆಯ ಹೊದಿಕೆಯನ್ನು ತೂರಿ, ನಮ್ಮ ಹೋರಾಟಕ್ಕೆ ಸಹಕಾರಿಗಳಾದ ನೂತನ ಧೈರ್ಯೋತ್ಸಾಹಗಳನ್ನು ಪ್ರಚೋದಿಸಿವೆ.

ಗೊಂದಲ ಕಳವಳ ಮತ್ತು ಒಂಟಿತನಗಳು ನನ್ನನ್ನು ಸುತ್ತುಗಟ್ಟಿದಾಗ ಅನೇಕ ನೆನಪುಗಳು ತಂಡೋಪತಂಡವಾಗಿ ನುಗ್ಗಿ ಬಂದು ನನ್ನ ಮನೋಮಂದಿರದಲ್ಲಿ ಗುಂಪುಕೂಡಿವೆ. ಮೆದುಳಿಗೆ ಕೆಲಸ ಕೊಡುವ ನೆಪದಿಂದ ಆ ಸ್ಮೃತಿಗಳನ್ನು ಕಾಗದದ ಮೇಲೆ ಗೀಚಲಾರಂಭಿಸಿದೆನು. ಆ ನೆನಪುಗಳೇ ಕ್ರಮೇಣ ಹೊತ್ತಗೆಯ ರೂಪವನ್ನು ತಾಳಿವೆ. ಪುಸ್ತಕವನ್ನು ಬರೆಯುತ್ತಾ ಬರೆಯುತ್ತಾ ನಾನು ನನ್ನ ಬಾಲ್ಯ ಯೌವನಗಳ ಜೀವನವನ್ನು ಮತ್ತೆ ಮತ್ತೆ ಸವಿದಿದ್ದೇನೆ. ನೆನಪುಗಳಲ್ಲಿ ಸಿಹಿಕಹಿಗಳೆರಡೂ ಬೆರಕೆಯಾಗಿವೆ. ಹಳೆಯ ಘಟನೆಗಳನ್ನು ನೆನೆದು ನಕ್ಕೂ ಇದ್ದೇನೆ, ಅತ್ತೂ ಇದ್ದೇನೆ. ಅವು ಸ್ವಲ್ಪ ಸಂತೋಷವನ್ನೂ, ವಿಪುಲ ಶಾಂತಿಯನ್ನೂ, ಅನೇಕವೇಳೆ ಹೃದಯವೇದನೆಯನ್ನೂ ಉಂಟುಮಾಡಿವೆ.

ನನ್ನ ಬಾಲ್ಯಜೀವನ ನಿರಾಕುಲವಾಗಿಯೂ ಶಾಂತಿಯುತವಾಗಿಯೂ ಇತ್ತು. ನಮ್ಮದು ಸಣ್ಣದಾದರೂ ಅಚ್ಚುಕಟ್ಟಾದ ಕುಟುಂಬ ನಮ್ಮ ಚಿಕ್ಕ ಪ್ರಪಂಚ ಕಷ್ಟ ದುಃಖಗಳ ಸುಳಿವೇ ಇಲ್ಲದೆ ಸದಾ ಸುಖಮಯವಾಗಿತ್ತು. ಕಾಲ ಕ್ರಮೇಣ ನಮ್ಮ ಜೀವನದಲ್ಲಿ ಅನೇಕ ಮಾರ್ಪಾಟುಗಳಾದುವು; ಆದರೆ ನಾವೆಲ್ಲರೂ ಒಟ್ಟಿಗೆ ಇದ್ದುದರಿಂದ ಯಾವುದನ್ನೂ ಲೆಕ್ಕಿಸಲಿಲ್ಲ. ಕಾಲಕಳೆದಂತೆಲ್ಲಾ ಸನ್ನಿವೇಶಗಳ ಒತ್ತಡ ಅಧಿಕವಾಗಿ ನಮ್ಮನ್ನು ಚೆದರಿಸಿತು. ಆದರೂ ಹೊಸ ಹೊಸ ರೀತಿ

ನೀತಿಗಳಿಗೆ ನಮ್ಮ ಬಾಳುವೆಯನ್ನು ಒಗ್ಗಿಸಿಕೊಂಡು, ದಾರಿಯಲ್ಲಿ ಏನೇ ಅಡ್ಡಿ ಬರಲಿ, ಅದನ್ನೆದುರಿಸಲು ಬೇಕಾದ ಮಾನಸಿಕ ಮತ್ತು ದೈಹಿಕ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಪಡಿಸಿಕೊಂಡು ಬಾಳನ್ನು ಸಾಗಿಸಿದೆವು.

ಕೆಲವು ತಿಂಗಳುಗಳ ಹಿಂದೆ ಭರತಖಂಡದ ಯಾವುದೋ ಮೂಲೆಯಲ್ಲಿದ್ದ ಜವಹರನಿಗೆ ಕಾಗದ ಬರೆದು, ಕಳೆದ ಹದಿನೈದು ವರ್ಷಗಳಿಂದ ನಮ್ಮ ಕುಟುಂಬದಲ್ಲಿ ಸಂಭವಿಸಿದ್ದ ಬದಲಾವಣೆಗಳನ್ನೆಲ್ಲ ವಿವರಿಸಿದೆನು. ಹಿಂದೆ ಇದ್ದ, ಈಗ ನಡೆಯುತ್ತಿರುವ ಮತ್ತು ಮುಂದೆ ಬರಬಹುದಾದ ಜೀವನದ ಸ್ಪಷ್ಟಚಿತ್ರವನ್ನು ಆತನ ಉತ್ತರ ನಿರೂಪಿಸುವುದಲ್ಲದೆ, ಬಾಳು ನಮ್ಮ ಮೇಲೆ ಎಂತಹ ಪರಿಣಾಮವನ್ನುಂಟುಮಾಡುತ್ತದೆಂಬುದನ್ನು ತಿಳಿಸುತ್ತದೆ. ಎಷ್ಟೇ ಎಡರುಗಳನ್ನು ಎದುರಿಸಬೇಕಾದ ಸಂದರ್ಭಗಳೊದಗಿದರೂ ನಾವು ಸ್ವಲ್ಪವೂ ವ್ಯಸನಪಡುವುದಿಲ್ಲ. ಆತನ ಬರಹವಿದು :

" ನೀನು ೧೯೨೮ನೆಯ ಇಸವಿಯ ವಿಷಯವನ್ನೂ, ಆಗಿನ ನಮ್ಮ ಸಣ್ಣ ಕುಟುಂಬದ ಆಗುಹೋಗುಗಳನ್ನೂ ಬರೆದಿರುವೆ. ಈಗ ಪ್ರೀತಿಯ ನೆಂಟರಿಷ್ಟರನೇಕರು ತೀರಿಹೋಗಿದ್ದಾರೆ, ಕೆಲವರು ಚೆದರಿಹೋಗಿದ್ದಾರೆ, ಮತ್ತೆ ಕೆಲವರು ಪ್ರತ್ಯೇಕಗೊಂಡು ಒಬ್ಬರ ಮುಖವನ್ನು ಮತ್ತೊಬ್ಬರು ನೋಡಲು ಸಾಧ್ಯವಾಗದೆ ಇವೆ. ಪ್ರತಿಯೊಂದು ತಲೆಮಾರಿನಲ್ಲಿಯೂ ಅದೇ ಇತಿಹಾಸ ಪುನರಾವೃತ್ತಿಯಾಗುತ್ತಿರುತ್ತದೆ. ಪ್ರತಿಯೊಂದು ತಲೆಮಾರಿನವರೂ ಸ್ವಾನುಭವದ ಮೂಲಕ ಅದನ್ನು ಕಲಿತುಕೊಳ್ಳಬೇಕಾಗುತ್ತದೆ. ಸಂಪೂರ್ಣತೆ ಅಸಂಪೂರ್ಣತೆಯನ್ನು ಹಿಂಬಾಲಿಸುತ್ತದೆ; ಆದರೆ ಪ್ರತಿಯೊಂದು ಪೂರ್ಣತೆಯೂ ಬಹುಶಃ ಹಿಂದಿನದಕ್ಕಿಂತ ಉತ್ತಮವಾಗಿರುತ್ತದೆ; ಏಕೆಂದರೆ ಹಿಂದಿನ ಜಯಾಪಜಯಗಳ ನೆನಪನ್ನು ಅದು ಪ್ರಜ್ಞಾಂತರಾಳದಲ್ಲಿ ಹುದುಗಿಸಿಕೊಂಡಿರುತ್ತದೆ. ಭೂತಕಾಲದ ಹೊರೆ ನಮ್ಮ ಬೆನ್ನು ಹತ್ತಿ ಅಟ್ಟಿಕೊಂಡು ಬರುತ್ತಿರುತ್ತದೆ; ಆದರೂ ಅದು ಹೊರೆಯೂ ಅಹುದು, ಪ್ರೇರಕಶಕ್ತಿಯೂ ಅಹುದು ; ಏಕೆಂದರೆ ಅದು ನಮ್ಮನ್ನು ಪ್ರಪಾತಕ್ಕೆ ನೂಕುವಂತೆಯೇ ಪ್ರಗತಿಯ ಶಿಖರಕ್ಕೂ ಏರಿಸುತ್ತದೆ. ಕೆಲವುವೇಳೆ ನಮ್ಮಲ್ಲಿ ಸ್ಫೂರ್ತಿ

ಚೈತನ್ಯವೂ ತಾರುಣ್ಯಗಳೂ ಸಂಚರಿಸುತ್ತವೆ; ಇತರ ವೇಳೆಗಳಲ್ಲಿ ಸಾವಿರಾರು ವರ್ಷಗಳ ಅಪಾರಭಾರದಿಂದ ಕುಸಿದು, ಸುದೀರ್ಘನಿರಂತರ ಯಾತ್ರೆಯಲ್ಲಿ ಬಳಲಿ ಮುಪ್ಪಾದವರಂತೆ ಕಾಣುತ್ತೇವೆ. ಅವೆರಡೂ ನಮ್ಮಲ್ಲಿವೆ; ನಮ್ಮ ಸದ್ಯದ ಪರಿಸ್ಥಿತಿಗೆ ಅವೇ ಮೂಲಕಾರಣಗಳು; ಅವುಗಳ ಅವಿಚ್ಛಿನ್ನವಾದ ಸಂಮಿಲನ ಸಂಘರ್ಷಣೆಗಳಿಂದ ಸದಾ ನೂತನತೆ ಆವಿರ್ಭವಿಸುತ್ತಿರುತ್ತದೆ. ಚೈತನ್ಯ ಜಡತೆಗಳಿಂದ, ಸಂಕಷ್ಟ ಸಂತೃಪ್ತಿಗಳಿಂದ ಕೂಡಿದ ಆವೇಶಪೂರಿತವಾದ ನೂರಾರು ತಲೆಮಾರುಗಳ ಪುರಾತನ ನಾಗರೀಕತೆಗಳ ಶಿಶುಗಳಾದ ನಾವು ಇದನ್ನೂ ಹಿಂದಿನವರಿಗಿಂತ ಹೆಚ್ಚಾಗಿ ಅನುಭವಿಸುತ್ತೇವೆ. ಏಕೆಂದರೆ ಹಿಂದಿನವರನ್ನು ಬೆನ್ನಟ್ಟಿದ ಭೂತಕಾಲ ತೊಡಕುಗೊಂದಲಗಳಿಂದ ಕೂಡಿಲ್ಲ. ಚಿತ್ತ ಮತ್ತು ಆತ್ಮಗಳಿಗೆ ಸಮತೆಯನ್ನೂ, ಪರಿವರ್ತನಗೊಳ್ಳುತ್ತಿರುವ ಘಟನಾವಳಿಗಳ ನಡುವೆ ವಿಕ್ಷುಬ್ಧವಾಗದ ಮತ್ತು ಉನ್ಮಾದಗೊಳ್ಳದ ಶಾಂತಿಯುತವಾದ ಜೀವನಾವೇಕ್ಷಣವನ್ನೂ ಪ್ರಚೋದಿಸುವ ಶಕ್ತಿ ವಿಪುಲವಾಗಿದೆ. ಅದೇ ಪ್ರಾಮುಖ್ಯವಾಗಿ ಪುರಾತನ ಸಂಸ್ಕೃತಿಯ ತಿರುಳು ಮತ್ತು ಹಿರಿಮೆ; ಚೀನಾದೇಶ ಅಂತಹ ಸಂಸ್ಕೃತಿಯ ತವನಿಧಿಯಾಗಿದೆ; ಭರತಖಂಡ ಕೂಡ ಈ ಸಂಸ್ಕೃತಿಯನ್ನು ಹೊಂದಿದೆ ಎಂಬುದು ನನ್ನ ನಂಬಿಕೆ; ಇದರಿಂದಲೇ ಭರತಖಂಡಕ್ಕೆ ಮುಂದೆ ಶುಭವುಂಟಾಗಬೇಕಾಗಿದೆ."

ನಾನು ಮಗುವಾಗಿದ್ದಾಗ ನಮ್ಮ ಕುಟುಂಬದಲ್ಲಿ ಇಪ್ಪತ್ತು ಮಂದಿಗಿಂತ ಹೆಚ್ಚಾಗಿ ಜನರಿದ್ದರು. ಅವಿಭಕ್ತಕುಟುಂಬಗಳಲ್ಲಿರುವಂತೆಯೇ ಎಲ್ಲರೂ ಒಟ್ಟಿಗೆ ವಾಸಿಸುತ್ತಿದ್ದರು. ಆ ದೊಡ್ಡ ಕುಟುಂಬ ಒಡೆದು, ಪ್ರತಿಯೊಂದು ಒಡಕೂ ಮತ್ತೊಂದು ಸಮಗ್ರ ಕುಟುಂಬದ ಮೂಲವಾದದ್ದನ್ನು ನಾನೆ ನೋಡಿದ್ದೇನೆ. ಆದಾಗ್ಗೂ ವಾತ್ಸಲ್ಯದ ರೇಷ್ಮೆಸೂತ್ರಗಳು ಮತ್ತು ಸಮಾನ ಮನೋಧರ್ಮ ಆಶೆಆಕಾಂಕ್ಷೆಗಳು ವಿವಿಧಭಾಗಗಳನ್ನು ಒಟ್ಟುಗೂಡಿಸಿವೆ. ಆ ವಿವಿಧವಿಭಾಗಗಳಲ್ಲಿ ಸಮಗ್ರತೆಯ ಸಂಪೂರ್ಣತೆ ಪ್ರತಿಫಲವಾಗುತ್ತಿತ್ತು. ಆ ಕ್ರಮವೇ ಮುಂದುವರಿಯುತ್ತಿದೆ. ಸಾಮಾನ್ಯವಾಗಿ ಅದು ನಿನಗರಿವಾಗುವುದಿಲ್ಲ; ಆದರೆ ಘಟನಾವಳಿಗಳು

ಆ ಕ್ರಮವನ್ನು ತ್ವರಿತಗೊಳಿಸಿದಾಗ ವಿಸ್ಮಯವುಂಟಾಗುತ್ತದೆ. ಕಳೆದ ಐದುವರ್ಷಗಳಲ್ಲಿ ಚೀನಾದೇಶದಲ್ಲಿ ನಡೆದ ಘಟನೆಗಳನ್ನೂ ಮತ್ತು ನೂರಾರು, ಸಾವಿರಾರು ಕುಟುಂಬಗಳನ್ನು ಆಕ್ರಮಿಸಿದ ಸಾಮಾಜಿಕ ಮತ್ತು ರಾಜಕೀಯ ವಿಪ್ಲವಗಳ ಸಂಗತಿಗಳನ್ನು ಕುರಿತು ಆಲೋಚಿಸು. ಆದರೂ ರಾಷ್ಟ್ರ ಎಂದಿಗಿಂತಲು ಹೆಚ್ಚು ಚೈತನ್ಯಶಾಲಿಯಾಗಿ ಬದುಕುತ್ತಿದೆ. ಸಂಗ್ರಾಮದ ಪ್ರಳಯಗಳು ಸಂಭವಿಸಿದರೂ ವ್ಯಕ್ತಿಗಳು ಹುಟ್ಟಿ, ಬೆಳೆದು, ಜನಾಂಗದ ಮತ್ತು ಮಾನವ ಜಾತಿಯ ಇತಿಹಾಸವನ್ನು ಮುಂದುವರಿಸುತ್ತಾರೆ. ಅಂತಹ ಇತಿಹಾಸನಿರ್ಮಾಣಕ್ಕೆ ಭಾರತೀಯರೇ ತಕ್ಕವರೆಂದು ನಾನು ಒಂದೊಂದು ವೇಳೆ ಭಾವಿಸುತ್ತೇನೆ. ಹೇಗಾದರೂ ಇರಲಿ, ನಮ್ಮ ಅನುಭವಪ್ರಪಂಚ ವಿಶಾಲವಾಗುತ್ತಿದೆ ; ನಿದಾನವಾದರೂ ವಾಸ್ತವವಾಗಿ ನೂತನ ರಾಷ್ಟ್ರವನ್ನು ನಿರ್ಮಿಸುತ್ತಿದ್ದೇವೆ.”

*

*

## ನೆನಪು ಕಹಿಯಲ್ಲ

"ಸುಮವನದಿ ತೊಂಡಲೆವ ತಣ್ಣೆಲರಿನೋಲ್ ಕವಿತೆ
ಆಸೆಯುಳಿ ತಣಿದಿತ್ತು ಪಿತಾಂಬುಜವನಪ್ಪಿ
ಎರಡುಮೆನ್ನ ಪೆದಿಟಂ! ಆಶಾವಿಮಾನದಲಿ
ಪ್ರಕೃತಿ ಪರ್ಯಂತದಲಿ ಕಾವ್ಯವಧುವೊಡಗೂಡಿ
ನಲಿದಿತ್ತು ಕಿರುಹರೆಯದಲಿ ಬಾಳ್ ಸೊಗದಿ."

ಕೋಲ್ ರಿಜ್.

ಈಗ ಅಲಹಾಬಾದೆಂದು ಪ್ರಖ್ಯಾತವಾಗಿರುವ ಪವಿತ್ರಕ್ಷೇತ್ರವಾದ ಪ್ರಯಾಗದಲ್ಲಿ ೧೯೦೭ನೆಯ ಇಸವಿ ನವೆಂಬರ್ ತಿಂಗಳ ಕೊರೆವ ಚಳಿಯ ಸುಪ್ರಭಾತದಲ್ಲಿ ನಾನು ಜನಿಸಿದೆನು. ಮನೆಯ ದೀಪವೆಲ್ಲ ಉರಿಯುತ್ತಿದ್ದವು. ನಟ್ಟಿರುಳು ಮೀರಿದ್ದರೂ ಮನೆತುಂಬ ಓಡಾಟ ಚಟುವಟಿಕೆ ಕಾಣುತಿತ್ತು. ಕೊರೆತ ಬಹಳವಾಗಿತ್ತು. ನಮ್ಮ ತಾಯಿಗೆ ಆಗ ಬಹಳ ಕಷ್ಟಕಾಲವಾಗಿದ್ದುದರಿಂದ ಪ್ರತಿಯೊಬ್ಬರೂ ಮಗುವೊಂದರ ಜನನವನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಆರೋಗ್ಯ ದೃಢಕಾಯಳಾದ ನಾನು ತಾಯಿಗೆ ಅಪಾರವಾದ ಬೇನೆಯನ್ನು ಕೊಟ್ಟು ಹುಟ್ಟಿದೆನು. ಅನಂತರ ಕೆಲವು ವಾರಗಳ ತನಕ ತಾಯಿ ಉಳಿವು ಅಳಿವುಗಳ ನಡುವೆ ತೂಗುಯ್ಯಾಲೆಯಾಗಿದ್ದರು. ಅದರಿಂದ ನಾನು ದಾದಿಯರ ಮತ್ತು ಇತರರ ಕೃಪಾಶ್ರಯಕ್ಕೊಳಗಾಗಿ ಸಾಧಾರಣರೀತಿಯಲ್ಲಿ ಬೆಳೆದೆನು.

ತಾಯಿ ನಿಧಾನವಾಗಿ ಗುಣಹೊಂದಿದರು; ಆದರೆ ಬಹಳ ಕಾಲ ದುರ್ಬಲರಾಗಿಯೇ ಉಳಿದರು. ನನ್ನನ್ನು ನೋಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ದಾದಿಯರ ಮತ್ತು ನಮ್ಮ ಚಿಕ್ಕಮ್ಮನವರ ಆರೈಕೆಯಲ್ಲಿಯೇ ಬೆಳೆದೆನು. ನಾನು ಸುಮಾರು ಮೂರು ವರ್ಷದವಳಾದಾಗ, ನನ್ನ ಅಕ್ಕ ಸ್ವರೂಪಳನ್ನು ನೋಡಿಕೊಳ್ಳುತ್ತಿದ್ದ ಆಂಗ್ಲೇಯ ಉಪಾಧ್ಯಾಯಿನಿಯ ಶಿಕ್ಷಣಕ್ಕೊಳಗಾದೆನು.

ನನ್ನ ಅಣ್ಣ ಜವಹರನು ನನಗಿಂತ ೧೮ ವರ್ಷಗಳು ಹಿರಿಯವನು; ನನ್ನ ಅಕ್ಕ ಏಳು ವರ್ಷ ಹಿರಿಯವಳು. ನಾನು ಸಂಗಡಿಗರಿಲ್ಲದೆ ಒಬ್ಬಂಟಿಗಳಾಗಿ, ನನ್ನ ಅಣ್ಣ ಅಥವ ಅಕ್ಕನೊಡನೆ ಯಾವ ಸಂಬಂಧವೂ ಇಲ್ಲದಂತೆಯೇ ಬೆಳೆದೆನು. ನಾನು ಹುಟ್ಟಿದಾಗ ನನ್ನ ಅಣ್ಣ ದೂರದ ಇಂಗ್ಲೆಂಡಿನಲ್ಲಿದ್ದುದರಿಂದ, ಆತನನ್ನು ನೋಡಿಯೂ ಕೂಡ ಇರಲಿಲ್ಲ. ನಾನು ಐದುವರ್ಷದವಳಾದಾಗ ಮೊಟ್ಟಮೊದಲನೆಯ ಸಾರಿ ಆತನ ಪರಿಚಯವನ್ನು ಮಾಡಿಕೊಂಡೆನು.

ನಾನು ಹುಟ್ಟುವ ಹೊತ್ತಿಗೆ ನನ್ನ ತಂದೆ ಪ್ರತಿಭಾವಂತರಾದ ವಕೀಲರೆಂಬುದಾಗಿ ಹೆಸರನ್ನು ಗಳಿಸಿದ್ದರಲ್ಲದೆ ಶ್ರೀಮಂತರಾಗಿಯೂ ಇದ್ದರು. ಜವಹರನು ಹತ್ತುವರ್ಷದವನಾಗಿದ್ದಾಗ ಅವರು ಆನಂದಭವನವನ್ನು ಕೊಂಡುಕೊಂಡರು. ಶ್ರೀರಾಮನು ಹದಿನಾಲ್ಕು ವರ್ಷಗಳ ದೀರ್ಘವನವಾಸದಿಂದ ಹಿಂದಿರುಗಿ ಬಂದು ಭರತನನ್ನು ಸಂಧಿಸಿದ ಸ್ಥಳದಲ್ಲಿ ನಮ್ಮ ಮನೆ ಇರುವುದರಿಂದ ಅದು ಪವಿತ್ರಕ್ಷೇತ್ರವೆಂದು ಪರಿಗಣಿತವಾಗಿದೆ. ಪುರಾತನಕಾಲದಲ್ಲಿ ವಿಶ್ವವಿದ್ಯಾನಿಲಯವೊಂದಿದ್ದು ಈಗಲೂ ಯಾತ್ರಾಸ್ಥಳವೆಂದು ಪ್ರಸಿದ್ಧವಾಗಿರುವ ಭಾರದ್ವಾಜ ಆಶ್ರಮವು ಹತ್ತಿರದಲ್ಲಿಯೇ ಇದೆ. ನಮ್ಮ ಮನೆ ಸದಾ, ಅದರಲ್ಲಿಯೂ ಪ್ರಯಾಗದಲ್ಲಿ ದ್ವಾದಶಾಬ್ದಕ್ಕೊಮ್ಮೆ ನಡೆಯುವ ಅರಿಕೆಯ ಕುಂಭಮೇಳದ ಕಾಲದಲ್ಲಂತೂ, ಜನಸಂದಣಿಯಿಂದ ಕಿಕ್ಕಿರಿದಿರುತ್ತಿತ್ತು. ಸಂಗಮದ ಸ್ನಾನಕ್ಕೋಸ್ಕರ ಆ ಪುಣ್ಯಕ್ಷೇತ್ರದಲ್ಲಿ ಲಕ್ಷಗಟ್ಟಲೆ ಜನರು ನೆರೆದಿರುತ್ತಿದ್ದರು. ಈ ಕಾಲದಲ್ಲಿ ನಮ್ಮ ಮನೆಗೆ ಬರುತ್ತಿದ್ದ ಜನರಗುಂಪು ಹಿಡಿತಕ್ಕೆ ಸಿಗದಷ್ಟು ಅಸಂಖ್ಯಾತವಾಗಿರುತ್ತಿತ್ತು. ಅವರೆಲ್ಲರೂ ವಿಶ್ರಾಂತಿಗಾಗಿ ಮನೆಯ ಹೊರ ಅಂಗಳದಲ್ಲಿ ಗುಂಪುಕೂಡುತ್ತಿದ್ದರು. ಪ್ರತಿವರ್ಷ ಮಾಘಮೇಳದ ಕಾಲದಲ್ಲಿಯೂ ಸಹ ಸಣ್ಣಸಣ್ಣ ತಂಡಗಳು ಯಾತ್ರಾರ್ಥಿಗಳಾಗಿ ಬರುತ್ತಿದ್ದುವು. ನಮ್ಮ ಮನೆಗೆ ಭೇಟಿಯಿಯಾಯದೆ ಹಿಂದಿರುಗುತ್ತಿದ್ದವರು ಕೇವಲ ಅತ್ಯಲ್ಪಮಂದಿ. ತೀರ್ಥಯಾತ್ರಾಸಕ್ತಿಯ ಜತೆಗೆ, ತಂದೆ ಮತ್ತು ಜವಹರರ ಹೆಸರು ಜನಜನಿತವಾಗಿ ಹಬ್ಬಿದ್ದುದರಿಂದ ಅವರನ್ನು ನೋಡುವ ಕುತೂಹಲವೂ ಸೇರಿ, ಅವರನ್ನು ಅಲ್ಲಿಗೆ ಸೆಳೆಯುತ್ತಿದ್ದುವು.

ಸುತ್ತಲೂ ವಿಸ್ತಾರವಾದ ಅಂಗಳಗಳನ್ನೂ, ವಿಶಾಲವಾದ ಉಪವನವನ್ನೂ ಒಳಗೊಂಡ ಆನಂದಭವನವು ವಿಹಾರಯೋಗ್ಯವಾದೊಂದು ದೊಡ್ಡ ಸೌಧ. ಮನೆಯ ಒಂದು ಪಕ್ಕದಲ್ಲಿ ಹಸುರುಹುಲ್ಲಿನ ದಿಬ್ಬವೂ, ಹಿಂಭಾಗದಲ್ಲಿ ಹಣ್ತೋಟವೂ, ಮುಂಭಾಗದಲ್ಲಿ ಬೇಸಿಗೆಯಕಾಲಕ್ಕೆ ಯೋಗ್ಯವಾದ ಮನೆಯನ್ನೂ ಮತ್ತು ಟೆನ್ನಿಸ್ ಮೈದಾನವನ್ನೂ ಒಳಗೊಂಡಿರುವ ಅತ್ಯಂತ ವಿಶಾಲವಾದ ಹಸುರುಹುಲ್ಲಿನ ದಿಬ್ಬವೊಂದೂ, ಇದ್ದುವು. ಬೇಸಿಗೆಯ ಸೌಧದ ಒಳಗಡೆ ಕಲ್ದಿಮ್ಮಿಗಳಿಂದ ನಿರ್ಮಿತವಾದ ಸಣ್ಣದೊಂದು ಕೈಲಾಸ ಪರ್ವತಮಾದರಿಯ ಮೇಲೆ ಶಿವನ ವಿಗ್ರಹವನ್ನು ಸ್ಥಾಪಿಸಿತ್ತು. ಶಿವನ ಶಿರಸ್ಸಿನಿಂದ ಸಣ್ಣದೊಂದು ಗಂಗಾಪ್ರವಾಹ ಹೊರಹೊಮ್ಮಿ ಕೆಳಗಣ ಹೊಂಡಕ್ಕೆ ತುಂತುರುಹನಿಯಾಗಿ ಉದುರುತ್ತಿತ್ತು. ಅದರ ಸುತ್ತಮುತ್ತ ಸುಂದರಸುಮಗಳ ಸುಮಂದಹಾಸ ಸೂಸುತ್ತಿತ್ತು. ಗ್ರೀಷ್ಮಋತುವಿನಲ್ಲಿ ಈ ಸ್ಥಳ ಇಂಪಾದ ತಂಪಿಗೆ ನೆಲೆಯಾಗಿದ್ದುದರಿಂದ ನಾನದನ್ನು ಬಹಳವಾಗಿ ಪ್ರೀತಿಸುತ್ತಿದ್ದೆನು. ಕಾಲಾನಂತರದಲ್ಲಿ ನೂತನ ಸೌಧನಿರ್ಮಾಣಕ್ಕೆ ಅಡಚಣೆಯಾಗಿದ್ದ ಬೇಸಿಗೆಯ ಸೌಧವನ್ನು ಉರುಳಿಸಬೇಕಾಯಿತು. ತಂದೆಯವರು ಅನೇಕ ನಾಯಿ, ಕುದುರೆಗಳನ್ನೂ ಮೋಟಾರ್ ಮೊದಲಾದ ವಾಹನಗಳನ್ನೂ ಇಟ್ಟಿದ್ದರು. ಬೇಟೆ ಮತ್ತು ಕುದುರೆಸವಾರಿಯೆಂದರೆ ಅವರಿಗೆ ಅತ್ಯಾಸಕ್ತಿ. ಕುದುರೆಗಳನ್ನು ನೋಡುತ್ತ ಲಾಯಗಳಲ್ಲಿ ಸುತ್ತಾಡುವುದೆಂದರೆ ನನಗೆ ಚೆನ್ನು. ನನಗಾಗಿಯೇ ಸುಂದರವಾದ ಮುಂಜುಬಿಳುಪಿನ ತಟ್ಟೊಂದಿತ್ತು. ಹಣದ ಗುಡ್ಡೆಯನ್ನು ಸುರಿದು ಅದನ್ನು ಕೊಳ್ಳಲು ಅನೇಕರು ಸಿದ್ಧರಾಗಿದ್ದರು. ಅದು ನನ್ನ ಜತೆಯಲ್ಲಿ ಬಹಳ ದಿನಗಳಿರಲಿಲ್ಲ; ದುರದೃಷ್ಟವಶಾತ್ ಅದು ಕಾಳಸರ್ಪದ ನಂಜಿಗೆ ತುತ್ತಾಯಿತು! ನನ್ನ ಪ್ರೀತಿಯ ಪ್ರಾಣಿಯ ಅಳಿವಿನಿಂದುಂಟಾದ ದುಃಖವಂತೂ ಹೇಳತೀರದು. ಅನೇಕ ವಾರಗಳತನಕ ಆ ದುರಂತ ದೃಶ್ಯವನ್ನು ಮರೆಯಲಾಗಲಿಲ್ಲ.

ನಾನು ಮಗುವಾಗಿದ್ದಾಗ ನೆಂಟರಿಷ್ಟರನೇಕರು ಯಾವಾಗಲೂ ನಮ್ಮೊಡನೆಯೇ ಇರುತ್ತಿದ್ದರು. ಕೆಲವು ವೇಳೆ ಹಲವಾರು ಮಕ್ಕಳೂ ಇರುತ್ತಿದ್ದರು. ಅವರೊಡನೆ ನಲಿದಾಡುವುದೆಂದರೆ ನನಗೆ ಅತ್ಯಾನಂದ.

ರುಗ್ಣಶಯ್ಯೆಯಲ್ಲೊರಗಿದ್ದರೂ ಎಲ್ಲರನ್ನೂ ಆದರಿಸುತ್ತಿದ್ದ ತಾಯಿಯವರನ್ನೂ, ತಮ್ಮ ಕಾರ್ಯಗೌರವದ ನಡುವೆ ಪ್ರತಿಯೊಬ್ಬರೊಡನೆಯೂ ಕೆಲವು ನಿಮಿಷಗಳನ್ನು ಕಳೆಯಲು ಮತ್ತು ಅವರ ಕ್ಷೇಮಸಮಾಚಾರಗಳನ್ನು ವಿಚಾರಿಸಿಕೊಳ್ಳಲು ವೇಳೆಯನ್ನು ಕಲ್ಪಿಸಿಕೊಳ್ಳುತ್ತಿದ್ದ ತಂದೆಯವರನ್ನೂ, ನೋಡಿ ನಾನು ಚಕಿತಳಾಗುತ್ತಿದ್ದೆನು. ತಾನೇ ಸ್ವತಃ ಕಾವಲುಗಾರನಾಗದಿದ್ದರೂ ತನ್ನ ಮಂದೆಯ ಕಡೆಗೆ ಸದಾ ಎಚ್ಚರಿಕೆಯ ನೋಟವನ್ನು ಬೀರುವ ಕುರುಬನಂತೆ ಅವರಿದ್ದರು. ಅಲ್ಲದೆ, ಅವರು ಮಾಡಿದುದೆಲ್ಲ ಸರ್ವಸಂಪೂರ್ಣವಾಗಿರುತ್ತಿತ್ತು.

ನಾನು ಜನಿಸುವುದಕ್ಕೆ ಕೆಲವು ಸಂವತ್ಸರಗಳ ಮುಂಚೆ ಮಗನೊಬ್ಬನು ಹುಟ್ಟಿ ಸಾವಿಗೆ ತುತ್ತಾಗಿದ್ದನು. ತಾಯಿಗಂತು ಆ ದುರಂತವನ್ನು ಸಹಿಸಲಾಗಿರಲಿಲ್ಲ. ನಾನು ಹುಟ್ಟಿದಾಗ ತಾಯಿಯವರು ನಿರಾಶೆಯ ಬೇನೆಗೆ ಗುರಿಯಾದರು; ಆದರೆ ತಂದೆಯ ಮನಸ್ಸಿನಲ್ಲಿ ಯಾವ ಮಾರ್ಪಾಡುಗಳೂ ಉಂಟಾಗಲಿಲ್ಲ. ಒಬ್ಬಿಬ್ಬರು ಸಂಗಾತಿಗಳನ್ನು ಬಿಟ್ಟರೆ ನನ್ನ ಬಾಲ್ಯಜೀವನ ಒಂಟಿಯಾಗಿಯೇ ಸಾಗಿತು. ಮುಂಜಾನೆಯಿಂದ ಮುಚ್ಚಂಜೆಯ ತನಕ ಪ್ರತಿಯೊಂದು ಕ್ಷಣದಲ್ಲಿಯೂ ನನ್ನ ಬಾಳು ಕಟ್ಟುನಿಟ್ಟುಗಳ ಸರಹದ್ದಿನಲ್ಲಿಯೇ ಸಾಗುತ್ತಿತ್ತು. ಇದರಿಂದ ನನಗೆ ಅಸಹನೆ ಮಿತಿಮೀರಿತು. ನನಗೆ ಗೊತ್ತಿದ್ದ ನನ್ನ ಓರಗೆಯ ಮಕ್ಕಳಿಗೆ ಅವರ ತಂದೆತಾಯಿಯರಿಂದ ಹೆಚ್ಚು ಸ್ವಾತಂತ್ರ್ಯ ಲಭಿಸುತ್ತಿದ್ದುದಲ್ಲದೆ, ಕಠಿಣ ನಿಯಮಗಳನ್ನು ವಿಧಿಸುವ ಉಪಾಧ್ಯಾಯಿನಿಯೂ ಇರಲಿಲ್ಲ. ನನ್ನ ಉಪಾಧ್ಯಾಯಿನಿಯು ನನ್ನ ಮೇಲೆ ಚಲಾಯಿಸುತ್ತಿದ್ದ ಅಧಿಕಾರವನ್ನು ಸಹಿಸದೆ ಉಲ್ಲಂಘಿಸುತ್ತಿದ್ದೆನು. ನಾನು ಹಟಗಾತಿ ಮಾತ್ರವೇ ಅಲ್ಲದೆ, ಭಾವಾವೇಗದ ಹುಚ್ಚು ಹೊಳೆಯಲ್ಲಿ ತೇಲಿಹೋಗುತ್ತಿದ್ದೆನು. ಆ ಆವೇಗ ಜಾಗ್ರತೆ ಉಬ್ಬಿದರೂ ಕ್ಷಣಿಕವಾದುದು ಮತ್ತು ಬಾಲಸ್ವಭಾವವುಳ್ಳುದು; ಅದು ಅಲ್ಪಾವಧಿಯುಳ್ಳುದು ಮತ್ತು ಮಾತ್ಸರ್ಯರಹಿತವಾದುದು. ಆದರೂ ಅದು ಅನೇಕ ವೇಳೆ ಅನಾವಶ್ಯಕವಾದ ತೊಂದರೆಗೀಡುಮಾಡುತ್ತದೆ!

ಅನೇಕವೇಳೆ ನನ್ನನ್ನು ಕೋಣೆಯೊಂದರಲ್ಲಿ ಕೂಡಿ ಬೀಗಹಾಕು

ವುದರ ಮೂಲಕವೋ ಇರುಳೂಟವನ್ನು ನಿಲ್ಲಿಸುವುದರ ಮೂಲಕವೊ ನನಗೆ ಶಿಕ್ಷೆ ಸಲ್ಲುತ್ತಿತ್ತು. ಆದರೆ ನನ್ನ ಸಹೋದರಿ ಸಾಮಾನ್ಯವಾಗಿ ಇಂತಹ ಶಿಕ್ಷೆಗೆ ಗುರಿಯಾಗುತ್ತಿರಲಿಲ್ಲ. ಅವಳು ಸದಾ ವಿಧೇಯ ಳಾಗಿಯೂ ಸಾಧುವಾಗಿಯೂ ಇದ್ದಳು. ಬಹುಶಃ ಅವಿಧೇಯಳಾ ಗಿರದೆ ವಿಧೇಯಳಾಗಿದ್ದುದರಿಂದಲೇ ತೊಂದರೆಯನ್ನು ಅನುಭವಿಸ ಬೇಕಾಗಿರಲಿಲ್ಲ. ನನ್ನಲ್ಲಿ ಕ್ರೋಧ ಅಸಹನೆಗಳಿದ್ದರೂ, ಆ ನನ್ನ ಉಪಾ ಧ್ಯಾಯಿನಿಯನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಿದ್ದೆನು. ಅವರು ನನ್ನನ್ನು ಅಕ್ಕರೆಯಿಂದ ಕಾಣುತ್ತಿದ್ದರೆಂಬುದೂ ನನಗೆ ಗೊತ್ತಿತ್ತು.

ನಾನು ಮಗುವಾಗಿದ್ದಾಗ ನನ್ನ ತಾಯಿತಂದೆಯರ ವಿಷಯ ದಲ್ಲಿ ಹೆಚ್ಚಾಗಿ ತಿಳಿವಳಿಕೆಯಿರಲಿಲ್ಲ. ತಂದೆಯವರು ಸದಾ ಗುರುತರ ವಾದ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಬೆಳಿಗ್ಗೆಯಾಗಲೀ, ಸಾಯಂ ಕಾಲವಾಗಲೀ, ಅವರನ್ನು ಸ್ವಲ್ಪಹೊತ್ತು ಮಾತ್ರ ನೋಡಬಹುದಾ ಗಿತ್ತು. ತಾಯಿಯು ಆರೋಗ್ಯದಿಂದಿದ್ದಾಗ ಸುಮ್ಮನೆ ಕುಳಿತಿರುತ್ತಿರಲಿಲ್ಲ. ಅಪ್ಪಣೆಗಾಗಿ ಕಾದುಕೊಂಡಿದ್ದು ಅದನ್ನು ಶಿರಸಾವಹಿಸಿ ನಡೆಸಲು ಸಿದ್ಧ ರಾಗಿದ್ದ ಸೇವಕರ ತಂಡವಿದ್ದರೂ, ಏನಾದರೂ ಮನೆಗೆಲಸವನ್ನು ಅಂಟಿಸಿ ಕೊಳ್ಳದೆ ಇರುತ್ತಿರಲಿಲ್ಲ. ನನಗೆ ಅವರಮೇಲೆ ಬಹಳ ಅಕ್ಕರೆ, ಅವರ ಲಾವಣ್ಯದಲ್ಲಿ ವಿಶೇಷಗೌರವ; ಆದರೂ ನಾನು ಅಪೇಕ್ಷಿಸಿದಷ್ಟು ಎಚ್ಚರಿಕೆ ಯಿಂದ ನನ್ನನ್ನು ಅವರು ನೋಡಿಕೊಳ್ಳುತ್ತಿರಲಿಲ್ಲವಾದುದರಿಂದ ನನ್ನ ಎಳಎದೆಯು ಅನೇಕವೇಳೆ ಪರಿತಪಿಸುತ್ತಿತ್ತು.

ನನ್ನ ಅಣ್ಣ ಜವಹರನು ತಾಯಿಯ ಕಣ್ಮಣಿಯಾಗಿದ್ದನು. ಆತನ ಮೇಲಣ ಮಮತೆಯನ್ನು ಆಕೆ ಮುಚ್ಚಿಡುತ್ತಿರಲಿಲ್ಲ. ಜವಹರ ನನ್ನು ಪ್ರೀತಿಸುವುದರಲ್ಲಿ ತಂದೆಯವರಂತು ತಾಯಿಗೇನೂ ಕಡಮೆ ಯಾಗಿರಲಿಲ್ಲ; ಒಂದು ಕೈ ಮೇಲೇ ಆಗಿದ್ದರು. ಮಗನೆಂದರೆ ಅವರಿಗೆ ಹೆಮ್ಮೆ. ನ್ಯಾಯ ನೀತಿಗಳ ಹೆಚ್ಚು ಪರಿಜ್ಞಾನವುಳ್ಳವರಾದುದರಿಂದ, ತಮ್ಮ ಪ್ರೇಮಾತಿಶಯವನ್ನು ವ್ಯಕ್ತಪಡಿಸುತ್ತಿರಲಿಲ್ಲ. ತಾನು ಪಕ್ಷ ಪಾತಿಯಾಗಿದ್ದೇನೆಂಬ ಅರಿವು ಯಾರಿಗೂ ಆಗದಿರಲೆಂಬುದೇ ಅವರ ಆಶಯ. ಇದರ ಪರೀಕ್ಷೆಯಲ್ಲೇನೋ ತೇರ್ಗಡೆಯಾದರು. ಆದರೂ

ಆಗಾಗ್ಗೆ ಜವಹರನ ಹೊಗಳಿಕೆಯ ನುಡಿಗಳನ್ನು ಕೇಳಿ ಕೇಳಿ, ನನ್ನಲ್ಲಿ ಮಾತ್ಸರ್ಯ ಅಂಕುರಿಸಿತು. ಆತ ಮನೆಯಿಂದ ದೂರವಾಗಿದ್ದುದರಿಂದ ನನಗೆ ವ್ಯಥೆ ಅಷ್ಟಾಗಿರಲಿಲ್ಲ.

ನನ್ನ ಸಹೋದರಿ ಸ್ವರೂಪಳು ತುಂಬಾ ಲಾವಣ್ಯವತಿಯಾಗಿದ್ದುದರಿಂದ ಎಲ್ಲರೂ ಆಕೆಯನ್ನು ಮುದ್ದಿಸುವವರೇ! ಆದರೆ ನಾನೆಂದೂ ಆಕೆಯನ್ನು ಕಂಡು ಹೊಟ್ಟೆಕಿಚ್ಚುಪಡಲಿಲ್ಲ. ಅಂತಹ ಸೌಂದರ್ಯವತಿಯನ್ನು ಯಾರಾದರೂ ಪ್ರೀತಿಸುವುದು ಸಹಜವೆಂದು ನಿಶ್ಚಯಿಸಿಕೊಂಡೆನು; ಅಲ್ಲದೆ ಆಕೆಯಲ್ಲಿ ನನಗೆ ವಿಶೇಷವಾದ ಮಮತೆ ಮೂಡಿತು.

ನನ್ನ ಬಾಲ್ಯ ಜೀವನದಲ್ಲಿ ಗಡಿಯಾರದ ಒಂದು ಕ್ರಮವಿತ್ತು. ಮುಂಜಾನೆಯ ಕುದುರೆ ಸವಾರಿಯಿಂದ ಪ್ರತಿನಿತ್ಯದ ಕಾರ್ಯಕ್ರಮ ಆರಂಭವಾಗುತ್ತಿತ್ತು. ಕುದುರೆ ಸವಾರಿಯೆಂದರೆ ಇಂದಿಗೂ ನನಗೆ ಅತಿ ಪ್ರೀತಿ. ತಂದೆ ಅತ್ಯುತ್ತಮ ಸವಾರರಾಗಿದ್ದುದರಿಂದ ಒಳ್ಳೆಯ ಲಾಯವನ್ನಿಟ್ಟಿದ್ದರು. ಜವಹರ, ಸ್ವರೂಪಳು ಮತ್ತು ನಾನು—ಮೂವರೂ ನಡಿಗೆ ಕಲಿತಾಗಲೇ ಕುದುರೆ ಸವಾರಿಯನ್ನೂ ಕಲಿತೆವು. ಈಗ ಕುದುರೆ ಸವಾರಿ ಮಾಡಲು ಸಾಕಾದಷ್ಟು ಅವಕಾಶ ದೊರೆಯದಿದ್ದರೂ, ಆಗ ಅದು ನಮಗೆ ಬಹಳ ಇಷ್ಟವಾಗಿತ್ತು. ಕುದುರೆಯ ಏರಾಟವಾದನಂತರ ನಮ್ಮ ದೊಡ್ಡ ತೋಟದ ಮೂಲೆಯೊಂದರಲ್ಲಿ ಉಪಾಧ್ಯಾಯಿನಿಯ ಹತ್ತಿರ ಕುಳಿತು ಪಾಠ ಕಲಿಯುತ್ತಿದ್ದೆನು. ತಿಂಡಿಯಾಗುವ ತನಕ ಬೆಳಗ್ಗೆ ಈ ರೀತಿ ಸಾಗುತ್ತಿತ್ತು. ಉಪಾಹಾರಾನಂತರ ವಿಶ್ರಾಂತಿ-ಅಂತು ಗಜಿಬಿಜಿಯ ಕಾರ್ಯಕ್ರಮ-ಅನಂತರ ವೀಣೆಯ ಕಲಿಕೆ, ಕೊನೆಯದಾಗಿ ಕೆಲವು ಪಾಠಗಳ ವ್ಯಾಸಂಗ. ಸಾಯಂಕಾಲ ಸಮಾಪಿಸಿತೆಂದರೆ ಎರಡು ಬರ್ಮಾದ ತಟ್ಟುಗಳನ್ನು ಕಟ್ಟಿದ್ದ ಸವಾರಿಗಾಡಿಯಲ್ಲಿ ಗಾಳಿ ಸೇವನೆಗೆ ಹೊರಡುತ್ತಿದ್ದೆವು. ಈ ಎರಡು ತಟ್ಟುಗಳು ತಂದೆಯವರ ಪ್ರಾಣಪದಕಗಳು. ಸಾಯಂಕಾಲದ ಉಳಿದ ವೇಳೆ ಸಾಮಾನ್ಯವಾಗಿ ಬೇಸರವಾಗಿರುತ್ತಿತ್ತು. ಈಗಿನ ಹಾಗೆ ಚಲನಚಿತ್ರಗಳನ್ನು ನೋಡುವುದು ಷೋಕಿಯಾಗಿರಲಿಲ್ಲ, ಅವುಗಳನ್ನು ನೋಡಲು ಅವಕಾಶವೂ ದೊರೆಯುತ್ತಿರಲಿಲ್ಲ. ಯಾವಾಗಲೋ ಒಂದು ಸಾರಿ ಸರ್ಕಸ್ಸಿಗೆ ಅಥವ ಸಂತೆಗೆ

ಹೋಗುವುದೇ ಸಾಕೆಂದು ಪರಿಗಣಿತವಾಗಿತ್ತು. ನಾನು ಹನ್ನೆರಡು ವರ್ಷದವಳಾಗಿದ್ದಾಗ ತಿಳಿದಿದ್ದುದಕ್ಕಿಂತ ಅಧಿಕವಾಗಿ ಇಂದು ಏಳೆಂಟು ವರ್ಷಗಳ ನನ್ನ ಚಿಕ್ಕ ಮಕ್ಕಳು ಭಾರತೀಯ ಮತ್ತು ಅಮೆರಿಕಾದ ಚಲನಚಿತ್ರಗಳ ಜ್ಞಾನವನ್ನು ಸಂಪಾದಿಸಿದ್ದಾರೆ. ಒಂದೊಂದು ವೇಳೆ ಆಡಲು ಕೆಲವರು ಗೆಳೆಯರು ಸಿಗುತ್ತಿದ್ದರು. ಅನೇಕ ವೇಳೆ ಒಂಟಿಯಾಗಿಯೇ ಇರುತ್ತಿದ್ದೆನು. ಜೀವನದ ವಿಷಯ ದಲ್ಲಿ ವಿಸ್ಮಯಪಡುತ್ತಾ, ಅನೇಕ ಆಲೋಚನೆಗಳನ್ನು ಅಂತರಂಗದಲ್ಲೆ ಸವಿಯುತ್ತಾ, ನಮ್ಮ ಮನೆಯ ಸುತ್ತಣ ವಿಶಾಲವಾದ ತೋಟದಲ್ಲಿ ಅಲೆದಾಡುವುದೆಂದರೆ ನನಗೆ ಅತಿ ಸಂಭ್ರಮ. ಮಕ್ಕಳನ್ನು ನೋಡಿ ಆನಂದಪಟ್ಟು ಅವರ ಪ್ರಶ್ನೆಗಳ ಕಡೆಗೆ ಕಿವುಡುಗಿವಿಯನ್ನು ತಿರುಗಿಸಬೇಕೆಂಬ, ಹೇಳಿಕೆಯನ್ನು ನಾನು ಚಿಕ್ಕಂದಿನಲ್ಲಿಯೇ ಕೇಳಿ ತಿಳಿದುಕೊಂಡಿದ್ದೆನು. ಏನಾದರೂ ತಿಳಿದುಕೊಳ್ಳಲು ಕುತೂಹಲಿ ಯಾಗಿರುವುದೂ, ಪ್ರಶ್ನೆಗಳನ್ನು ಹಾಕುವುದೂ ಕೆಟ್ಟ ನಡತೆಯ ಕುರು ಹೆಂದು ನಂಬಿಕೊಂಡಿದ್ದೆನು. ಆದುದರಿಂದ ನನ್ನ ಮನೋಗತಾರ್ಥ ವನ್ನು ಬಹಿರಂಗ ಪಡಿಸಲು ಮಾರ್ಗವೇ ಇರಲಿಲ್ಲ. ತಲೆಯ ತುಂಬ ಕಿಕ್ಕಿರಿದಿದ್ದ ನೂರಾರು ಪ್ರಶ್ನೆಗಳು ಹೊರಹೊಮ್ಮಲು ತವಕಪಡುತ್ತಿ ದ್ದರೂ, ಅವುಗಳನ್ನು ವ್ಯಕ್ತಪಡಿಸುವ ಅವಕಾಶ ನನಗೆ ದೊರಕುತ್ತಿರ ಲಿಲ್ಲ.

ಸ್ವರೂಪಳು ತಂದೆ ತಾಯಿಯರೊಡನೆ ಇಂಗ್ಲೆಂಡಿಗೆ ತೆರಳಿದಾಗ ಅವಳಿಗೆ ಐದು ವರ್ಷಗಳು ತುಂಬಿದ್ದುವು ಮತ್ತು ಮಿಸ್ ಹೂಪರ್ ಎಂಬ ನಮ್ಮ ಉಪಾಧ್ಯಾಯಿನಿಯರನ್ನು ತಂದೆಯವರು ಕರೆತಂದದ್ದೂ ಆಗಲೇ. ಅವರು ಸದ್ಗುಣ ಶೋಭಿತೆಯಾದ ಸುಶೀಲೆ ಮತ್ತು ಕುಲೀನೆ. ನಿಷ್ಠುರವಾದ ಶಿಸ್ತು, ಅಚಲವಾದ ವಿಧೇಯತೆಗಳಲ್ಲಿ ವಿಶ್ವಾಸವುಳ್ಳ ಪುರಾತನ ಸಂಪ್ರದಾಯಕ್ಕೆ ಸೇರಿದವರವರು. ಸ್ವರೂಪಳನ್ನು ಅಂಕೆ ಯಲ್ಲಿಟ್ಟುಕೊಳ್ಳುವುದು ಸುಲಭವಾಗಿತ್ತು ; ಆದರೆ ನಮ್ಮ ತಂದೆ ಮತ್ತು ಅನೇಕ ಪೂರ್ವಜರಿಂದ ಆನುವಂಶಿಕವಾಗಿ ಬೆಳೆದು ಬಂದಿದ್ದ ಹಠ ಮಾರಿತನವನ್ನು ಹೊಂದಿದ್ದ ನಾನು ಅವರಿಗೊಂದು ಸಮಸ್ಯೆಯಾದೆನು.

ಎಂತಹ ಕಠಿಣ ಶಿಕ್ಷೆಗೂ ನಾನು ಜಗ್ಗಿದವಳಲ್ಲ. ನನ್ನನ್ನು ನಾಚಿಕೆಗೆ ಗುರಿಪಡಿಸಲು ಮತ್ತು ಹೇಳಿದ ಕೆಲಸವನ್ನು ಮಾಡುವ ಕುತೂಹಲವನ್ನು ಹುಟ್ಟಿಸಲು ನಯವಾದ ಬಯ್ಗಳೇ ಸಾಕಾಗಿದ್ದುವು. ಆದರೆ ದುರದೃಷ್ಟವಶಾತ್ ಬಯ್ಗಳು ಕಡಮೆ, ಶಿಕ್ಷೆ ಅಧಿಕ. ಹೀಗೆ ಒಂಟಿತನದ ಬಾಲ್ಯವನ್ನು ಕಳೆದ ನಾನು ಕೊನೆಗೆ ನಯವಿಲ್ಲದ ನಾಣ್ಗೆಣ್ಣಾದೆನು. ಇತರರಿಂದ ಹೊಗಳಿಸಿಕೊಳ್ಳಬೇಕೆಂಬ ಕುತೂಹಲವೇನೋ ಇತ್ತು. ಜ್ಞಾನದಾಹವಿದ್ದರೂ ಸಮೆದ ದಾರಿಯನ್ನು ಬಿಟ್ಟು ಅಲುಗುತ್ತಿರಲಿಲ್ಲ. ನನ್ನ ತಾಯಿತಂದೆಯರು ನನಗೆ ಅಪರಿಚಿತರಾಗಿಯೇ ಉಳಿದರು. ಅಣ್ಣನನ್ನಂತು ನೋಡಿಯೇ ಇರಲಿಲ್ಲ. ಸದಿಯ ಮೇಲೆ ನನ್ನ ಗೌರವದ್ವೇಷಗಳಿಗೆ ಪಾತ್ರರಾಗಿದ್ದ ಉಪಾಧ್ಯಾಯಿನಿಯರನ್ನು ಬಿಟ್ಟರೆ, ನನ್ನ ಪ್ರತಿನಿತ್ಯದ ಬಾಳಿನಲ್ಲಿ ಸಂಪರ್ಕ ಹೊಂದಿದ್ದ ಮತ್ತೊಬ್ಬಳು ವ್ಯಕ್ತಿ, ಸ್ವರೂಪಳು.

೧೯೧೨ನೆಯ ಇಸವಿಯಲ್ಲಿ ಇಂಗ್ಲೆಂಡಿನಿಂದ ನನ್ನ ಅಣ್ಣ ಹಿಂದಿರುಗಿ ಬಂದದ್ದು ನನ್ನ ಬಾಳಿನ ಮೊಟ್ಟ ಮೊದಲ ವಿಶೇಷ ಘಟನೆ. ಅವನು ನನಗೆ ತುಂಬ ಅಪರಿಚಿತನಾಗಿದ್ದನು. ಆತನ ಆಗಮನದ ನಿರೀಕ್ಷೆಯಿಂದ ಸಂತೋಷವುಂಟಾಗದಿದ್ದರೂ, ಆತನು ಹೇಗಿದ್ದಾನೆಂದು ನೋಡಲು ಕುತೂಹಲಿಯಾಗಿದ್ದೆನು. ತಮ್ಮ ವಂಶೋದ್ಧಾರಕನಾದ ಪುತ್ರರತ್ನವನ್ನು ಸ್ವಾಗತಿಸಲು ಒಂದು ವಾರ ಮುಂಚಿತವಾಗಿಯೇ ತಂದೆತಾಯಿಯರು ಏರ್ಪಾಡುಗಳಲ್ಲಿ ತೊಡಗಿದರು. ಸಂತೋಷದ ಹೆಚ್ಚಳವನ್ನು ಅಣಗಿಸಿಟ್ಟುಕೊಳ್ಳಲಾರದೆ ತಾಯಿ ಕುತೂಹಲ ಜ್ವರ ಪೀಡಿತರಾದರು. ಪ್ರೀತಿಪಾತ್ರನಾದ ಮಗನ ಸ್ವಾಗತಸಮಾರಂಭಕ್ಕಾಗಿ ಸರ್ವಸಿದ್ಧತೆಗಳು ಪರಿಪೂರ್ಣವಾಗಿವೆಯೇ ಎಂದು ನೋಡುತ್ತ, ಬೆಳಗ್ಗೆಯಿಂದ ಸಾಯಂಕಾಲದ ವರೆಗೂ ಮನೆಯಲ್ಲೆಲ್ಲ ಓಡಾಡುವುದೇ ಅವರ ಕೆಲಸವಾಗಿತ್ತು. ಆ ದಿನಗಳಲ್ಲಿ ಆಕೆ ಎಷ್ಟು ಆನಂದಪರವಶಳಾಗಿದ್ದಳು, ಹಿಂದೆಂದೂ ನೋಡದ ಅಪೂರ್ವ ಕಾಂತಿ ಆಕೆಯ ಮುಖದ ಮೇಲೆ ಹೇಗೆ ತಾಂಡವವಾಡುತ್ತಿತ್ತು, ಎಂಬುದು ಇಂದಿಗೂ ನೆನಪಿದೆ. ಒಬ್ಬ ಮಗನಿಗಾಗಿ ತಾಯಿಗೇಕಿಷ್ಟು ಅರುಳು ಮರುಳು

ಎಂಬ ಭಾವನೆ ನನ್ನನ್ನು ಕೊನೆಮೊದಲಿಲ್ಲದೆ ಕಲಕುತಿತ್ತು. ಆಗಿನ ಅವರ ಕುತೂಹಲ ನನಗಿಂದು ಮನವರಿಕೆಯಾಗುತ್ತದೆ. ನನ್ನ ಅಕ್ಕನು ಸಹ ಕುತೂಹಲದ ನಿರೀಕ್ಷಣೆಯಿಂದ ಮನೆಯಲ್ಲೆಲ್ಲ ಹಾರಾಡಿದರೆ, ನನ್ನಲ್ಲಿ ಕ್ರೋಧ ಬುಸುಗುಟ್ಟುತ್ತಿತ್ತು. ಜವಹರನನ್ನು ದ್ವೇಷಿಸಲೇ ಬೇಕೆಂದು ನಿರ್ಧರಿಸಿಕೊಂಡೆನು.

ಕೊನೆಗೆ ಆ ಮಹತ್ವಪೂರ್ಣವಾದ ದಿನವೂ ಸಾಗಿಬಂತು. ಅಲ್ಲಿಯ ತನಕ ಹುದುಗಿದ್ದು ಪಕ್ಕನೆ ಸಿಡಿದ ಕುತೂಹಲವು ನನ್ನನ್ನು ತಟ್ಟದೆ ಇರಲಿಲ್ಲ. ನನಗಂತು ಆಶ್ಚರ್ಯ ಮತ್ತಷ್ಟು ವೆಗ್ಗಳಿಸಿತು. ಆಗ ಗ್ರೀಷ್ಮಋತು. ನಾವೆಲ್ಲರು ತಂಪಾದ ಪರ್ವತನಗರಿ ಮುಸ್ಸೂರಿಯಲ್ಲಿ ದ್ದೆವು. ನಿರೀಕ್ಷಿಸಿದ ವೇಳೆಗೆ ಸರಿಯಾಗಿ ಕುದುರೆ ಗೊರಸುಗಳ ಠಣ ಠಣತ್ಕಾರ ಕೇಳಬಂತು. ಜವಹರನನ್ನು ಸ್ವಾಗತಿಸಲು ಪ್ರತಿಯೊಬ್ಬರೂ ಹೊರಗಡೆ ಓಡಿದರು. ತಾಯಿಯನ್ನೇ ಹೋಲುವ ಸುಂದರನಾದ ತರುಣನೊಬ್ಬನು ನಮ್ಮೆಡೆಗೆ ಬರುತ್ತಿದ್ದುದನ್ನು ನೋಡಿ ನನ್ನ ಎದೆ ತುಸು ಕುಗ್ಗಿತು. ಆತನು ಕುದುರೆಯ ಮೇಲಿಂದ ಧುಮುಕಿದನು. ಮೊದಲು ತಾಯಿಯನ್ನಪ್ಪಿಕೊಂಡು, ಅನಂತರ ಉಳಿದೆಲ್ಲರನ್ನು ಒಬ್ಬೊಬ್ಬರನ್ನಾಗಿ ಆದರಿಸಿದನು. ನಾನು ದೂರದಲ್ಲಿಯೇ ನಿಂತು ಆಗ ತಾನೇ ಇಳಿದಿದ್ದ ಹೊಸ ಅಣ್ಣನನ್ನು ಪ್ರೀತಿಸುವುದೇ ಅಥವ ಬೇಡವೇ ಎಂದು ನಿಶ್ಚಯಿಸಿಕೊಳ್ಳಲು ಯತ್ನಿಸುತ್ತಿದ್ದೆನು. ನನ್ನ ಮನೋರಂಗ ದಲ್ಲಿ ಆಲೋಚನಾಪರಂಪರೆಗಳು ಹೊಯ್ದಾಟವಾಡುತ್ತಿರುವಾಗ, ನಾನು ಜವಹರನ ತೋಳ್ತೆಕ್ಕೆಯಲ್ಲಿ ಸಿಕ್ಕಿ ಬಿದ್ದೆನು. ಕೂಡಲೆ "ಈಕೆಯೇ ನನ್ನ ಪುಟ್ಟ ಸಹೋದರಿ, ಇವಳೀಗ ಪುಟ್ಟ ಸಹೋದರಿ, ಇವಳೀಗ ಪುಟ್ಟ ದೊರೆಸಾನಿ" ಎಂದು ಆತನ ಬಾಯಿಂದುರುಳಿದ ಮಾತುಗಳನ್ನು ಕೇಳಿಸಿ ಕೊಂಡೆನು. ನನಗೆ ಮುತ್ತಿಟ್ಟು, ಎಷ್ಟು ಬಿರುಸಾಗಿ ನನ್ನನ್ನು ಎತ್ತಿ ಕೊಂಡಿದ್ದನೋ ಅಷ್ಟೇ ಬಿರುಸಿನಿಂದ ಕೆಳಗಿಳಿಸಿದನು. ತಕ್ಷಣವೇ ಅವನು ನನ್ನ ವಿಷಯವನ್ನು ಮರೆತುಬಿಟ್ಟನು.

ನಮ್ಮ ಪರಿಚಯದ ಮೊದಲ ಕೆಲವು ತಿಂಗಳುಗಳು ಅಷ್ಟೇನೂ ಸುಖಮಯವಾಗಿರಲಿಲ್ಲ. ಜವಹರನು ದಯಾರಹಿತನಾದ ಹಿಂಸಕ

ನಾದನು. ತನಗೆ ಕೆಲಸವಿಲ್ಲದಾಗಲೆಲ್ಲ, ನನ್ನನ್ನು ಚೇಷ್ಟೆಗಳಿಗೀಡುಮಾಡಿ ಕಾಲವನ್ನು ನೂಕುತ್ತಿದ್ದನು. ನನಗೆ ಅನಿಷ್ಟವಾದ ಅಥವ ಭಯೋತ್ಪಾದಕವಾದ ಕೆಲಸಗಳನ್ನು ಮಾಡುವಂತೆ ನನ್ನನ್ನು ಒತ್ತಾಯಪಡಿಸುತ್ತಿದ್ದನು. ಒಮ್ಮೊಮ್ಮೆ ಅನಿರೀಕ್ಷಿತವಾಗಿ ಅವನು ನನ್ನ ಮೇಲೆ ದಯಾರಸವನ್ನು ಚೆಲ್ಲಿ ಬಹಳ ಹಿತನಾಗುತ್ತಿದ್ದನು. ಆದುದರಿಂದ ಆತನೊಡನೆ ಹೆಚ್ಚು ಹೊತ್ತು ಗಾಬರಿ ಪರಿಸ್ಥಿತಿಯಲ್ಲಿರಬೇಕಾಗಲಿಲ್ಲ. ಆದಾಗ್ಗೂ ನಾನು ಆತನಿಂದ ದೂರವಿರುತ್ತಿದ್ದೆನು; ಆತನ ಮೇಲೆ ಹೆಚ್ಚು ಮಮತೆಯೂ ಮೂಡಲಿಲ್ಲ.

ಮೊದಲನೆಯ ಮಹಾಯುದ್ಧವು ಶಾಂತಿಮಯವಾದ, ಆದರೆ ಒಮ್ಮೊಮ್ಮೆ ಬೇಸರದಿಂದ ಕೂಡಿದ್ದ ನನ್ನ ಬಾಳನ್ನು ತಟ್ಟಲಿಲ್ಲ. ತಾಯಿ ಅನೇಕ ವೇಳೆ ಸಮಾಜಗಳಿಗೆ ಹೋಗಿ, ಆ ಹಲವಾರು ಭಾರತೀಯ ಮತ್ತು ಪರಕೀಯ ಮಹಿಳೆಯರೊಡನೆ ಕಲೆತು ಸೈನಿಕರಿಗೋಸ್ಕರ ನೂಲಿನ ಸಾಮಾನುಗಳನ್ನು ಹೆಣೆಯುತ್ತಿದ್ದುದೇ ನಮ್ಮ ಮನೆಯಲ್ಲಾದ ಒಂದೇ ಒಂದು ಮಾರ್ಪಾಟು. ತಂದೆಯವರೂ, ಜವಹರನೂ ಆಗಾಗ್ಗೆ ಯುದ್ಧ ಸಮಾಚಾರವನ್ನು ಕೇಳಿ ಕಳವಳಗೊಳ್ಳುತ್ತಿದ್ದುದನ್ನು ನೋಡಿದ್ದೆನು.

೧೯೧೬ನೆಯ ಇಸವಿಯಲ್ಲಿ ಜವಹರನಿಗೆ ಮದುವೆಯಾಯಿತು. ಮದುವೆಯು ವಿಶೇಷ ವೈಭವಾಡಂಬರವಿಜೃಂಭಣೆಗಳಿಂದ ನಡೆಯಬೇಕಾಗಿದ್ದುದರಿಂದ ಸಿದ್ಧತೆಗಳನ್ನು ಜೋಡಿಸಲು ಕೆಲವಾರು ತಿಂಗಳುಗಳು ಹಿಡಿದವು. ಹಗಲೆಲ್ಲ ಓಡಾಡುತ್ತಿದ್ದ ದರ್ಜಿಗಳು, ವರ್ತಕರು ಮತ್ತು ರತ್ನಪಡಿ ವ್ಯಾಪಾರಗಾರರಿಂದ ಮನೆ ಸದಾ ಕಿಕ್ಕಿರಿದಿರುತ್ತಿತ್ತು. ಅನೇಕ ಕರಣಿಕರು ವಿವರಗಳ ಪಟ್ಟಿಯನ್ನು ತಯಾರಿಸುವುದರಲ್ಲಿಯೂ ಸಿದ್ಧತೆಗಳನ್ನು ಏರ್ಪಡಿಸುವುದರಲ್ಲಿಯೂ ಮಗ್ನರಾಗಿದ್ದರು.

ಮದುವೆ ದೆಹಲಿಯಲ್ಲಿ ಹೆಣ್ಣಿನ ಮನೆಯಲ್ಲಿ ನಡೆಯಬೇಕಾಗಿತ್ತು. ಗಂಡಿನ ಕಡೆಯ ಗುಂಪು ಮದುವೆಯ ದಿನಕ್ಕೆ ಒಂದು ವಾರ ಮುಂಚಿತವಾಗಿಯೇ ಶುಭದಿವಸ ಅಲಹಾಬಾದಿನಿಂದ ಹೊರಟಿತು. ತಂದೆಯವರು ನೂರು ಮಂದಿಗೆ ಮಿಾರಿ ಅತಿಥಿಗಳನ್ನು ತಮ್ಮೊಡನೆ ಕೂಡಿ

ಕೊಂಡರು. ಸುಂದರವಾಗಿ ಅಲಂಕೃತವಾಗಿದ್ದ ಪ್ರತ್ಯೇಕವಾದ ಹೊಗೆ ಬಂಡಿಯಲ್ಲಿ ನಾವೆಲ್ಲರೂ ಹೊರಟೆವು. ಇತರ ನೂರಾರು ಅತಿಥಿಗಳು ದೆಹಲಿಯಲ್ಲಿ ನಮ್ಮ ಜತೆಗೂಡಿದರು. ಅನೇಕ ಮನೆಗಳು ನಮ್ಮ ಅತಿಥಿಗಳನ್ನು ಹಿಡಿಸದಿದ್ದುದರಿಂದ, ಪ್ರತಿಯೊಬ್ಬರಿಗೂ ಅನುಕೂಲವಾಗುವಂತೆ ತಂದೆಯವರು ಅನೇಕ ಗೂಡಾರಗಳನ್ನು ಏರ್ಪಡಿಸಿದ್ದರು. ಒಂದು ವಾರದೊಳಗಾಗಿ ಗೂಡಾರಗಳ ಸಣ್ಣದೊಂದು ವಸತಿಯೇ ನಿರ್ಮಾಣವಾಯಿತು. " ನೆಹ್ರೂ ಮದುವೆಯ ಪಾಳ್ಯ "ವೆಂದೇ ಅದಕ್ಕೆ ನಾಮಕರಣವಾಯಿತು.

ದೆಹಲಿಯಲ್ಲಿ ಚಳಿ ಕೊರೆಯುವ ಕಾಲವದು. ಆದರೆ ಆ ಹವ ನನಗೆ ಪ್ರಿಯವಾಗಿದ್ದು ಕಾಲವನ್ನು ಆನಂದದಿಂದ ಕಳೆದೆನು. ನಾನು ಹಿಂದೆ ನೋಡಿರದಿದ್ದ ದಾಯಾದಿಗಳನೇಕರು ಭರತಖಂಡದ ನಾನಾ ಭಾಗಗಳಿಂದ ಬಂದಿದ್ದರು. ನಾನು ಅವರ ಜತೆಯಲ್ಲಿ ಆಡಿ ನಲಿದೆನು- ಪ್ರತಿನಿತ್ಯ ಎಲ್ಲಾದರೂ ಒಂದೆಡೆ ಭೋಜನಕೂಟವಿರುತ್ತಿತ್ತು. ಹತ್ತು ದಿನಗಳನಂತರ ಮದುವೆಯ ಮೆರವಣಿಗೆ ಅಲಹಾದಿಗೆ ಹಿಂದಿರುಗಿತು. ಅಲ್ಲಿಯೂ ಮತ್ತೆ ಕೆಲವು ಉತ್ಸವಗಳು ಜರಗಿದುವು.

ಜವಹರನು ಸುಂದರನಾದ ಮದವಣಿಗನಾಗಿದ್ದನು. ಕಮಲಳು ನಾನು ನೋಡಿರುವ ಸುಂದರಿಯರಲ್ಲೆಲ್ಲ ಅತ್ಯಂತ ಲಾವಣ್ಯವತಿ. ೧೯೧೭ನೆಯ ಇಸವಿ ನವೆಂಬರ್ ತಿಂಗಳಲ್ಲಿ ಅವರ ಒಬ್ಬಳೇ ಮಗಳು ಇಂದಿರ ಜನಿಸಿದಳು.

೧೯೧೭ನೆಯ ಇಸವಿಯವರೆಗೆ ಬಾಳಿನಲ್ಲಿ ವಿಶೇಷವಾದ ಘಟನೆಗಳಾವುವೂ ಜರುಗಲಿಲ್ಲ. ಆ ವರ್ಷ ನಮ್ಮ ಉಪಾಧ್ಯಾಯಿನಿಯು ತಮ್ಮ ಆಂಗ್ಲೇಯ ಮಿತ್ರನೊಡನೆ ಸಂಬಂಧಬೆಳೆಸಿ ಜಾಗ್ರತೆ ಮದುವೆಯಾಗಬೇಕೆಂದು ಕುತೂಹಲಿಯಾಗಿದ್ದರು. ಆಕೆಯ ನೆಂಟರಿಷ್ಟರೆಲ್ಲರು ಆಗ ಇಂಗ್ಲೆಂಡಿನಲ್ಲಿದ್ದುದರಿಂದ ತಂದೆಯವರೇ ಆಕೆಯನ್ನು ಚರ್ಚಿನಲ್ಲಿ ಧಾರೆಯೆರೆದು ಕೊಡಲು ಮುಂದೆ ಬಂದರು. ವಿವಾಹನಿರೀಕ್ಷಣೆಯೂ, ವಧುವಿನ ಗೆಳತಿಯಾಗಬೇಕಾಗುವ ಸಂಭವವೂ ನನ್ನಲ್ಲಿ ಉದ್ವೇಗವನ್ನುಂಟುಮಾಡಿದುವು. ನನ್ನ ಉಪಾಧ್ಯಾಯಿನಿಯಿಂದ ಬೇರೆಯಾಗು

ತ್ತೇನೆಂಬ ಭಾವನೆಯಂತು ನನಗೆ ಅಸಮಾಧಾನವನ್ನು ತಂದಿತು. ಹಿಂದಿನ ಮಾತ್ಸರ್ಯವನ್ನು ಸಂಪೂರ್ಣವಾಗಿ ಮರೆತೆನು. ಅನೇಕ ವರ್ಷಗಳಿಂದ ಅವರು ನನ್ನಲ್ಲಿಟ್ಟಿದ್ದ ಪ್ರೇಮಾದರಗಳು ಮಾತ್ರ ನೆನಪಿನಲ್ಲುಳಿದುವು. ಅವರು ನಮ್ಮೊಡನೆ ಹನ್ನೆರಡು ವರ್ಷಗಳ ಕಾಲ ಇದ್ದು, ನಮ್ಮ ಕುಟುಂಬದಲ್ಲೊಬ್ಬರಾಗಿದ್ದರು. ನಮಗೆ ಅವರನ್ನು ಕಂಡರೆ ಅಕ್ಕರೆ. ಅವರಿಗಂತು ನಮ್ಮಲ್ಲಿ ಅಚ್ಚಳಿಯದ ಪ್ರೀತಿ.

ಮದುವೆಯ ದಿನ ಹತ್ತಿರವಾಯಿತು. ನಾನು ವ್ಯಾಕುಲಿತಳಾದೆನು. ಎಲ್ಲವೂ ಸೊಗಸಾಗಿ ಜರುಗಿತು. ನಮ್ಮ ತಂದೆಯವರ ಏರ್ಪಾಡುಗಳಿಂದ ಅವರು ತೃಪ್ತಿಗೊಂಡರು. ಮದುವೆಯಾದನಂತರ ಅವರು ಕೌಮುದೀ ವಿಹಾರಕ್ಕೆ ಹೊರಟರು. ಅನೇಕ ದಿನಗಳ ತನಕ ನನ್ನ ಅಸಮಾಧಾನ ಆರಲಿಲ್ಲ. ನನ್ನ ಎಳೆಯ ಬಾಳಿನಲ್ಲಿ ಮೊಟ್ಟಮೊದಲು ನಾನು ಅನುಭವಿಸಿದ ಎದೆಯಿರಿತವದು. ಮಕ್ಕಳ ಸಂಕಟಗಳು ಕ್ಷಣಿಕವಾದುವು. ಕ್ರಮೇಣ ಅವರಿಲ್ಲದ ವಾತಾವರಣಕ್ಕೆ ಹೊಂದಿಕೊಂಡೆನು. ಕೂಡಲೇ ಹೊಸದಾಗಿ ದೊರೆತ ಸ್ವಾತಂತ್ರ್ಯವನ್ನು ಅನುಭವಿಸಲು ಸಿದ್ಧಳಾದೆನು. ನಾನಾಡಿದುದೇ ಆಟವಾಯಿತು. ನನ್ನ ತಿಳಿವಳಿಕೆಗೆ ಬಂದಹಾಗೆ ನಾನು ವರ್ತಿಸಬಹುದಾಗಿತ್ತು.

ಶಾಲೆಗೆ ಹೋಗಿ ಇತರ ಮಕ್ಕಳೊಡನೆ ಓದು ಬರಹ ಕಲಿಯಬೇಕೆಂಬ ಆಸೆ ನನ್ನಲ್ಲಿ ಪ್ರಬಲವಾಗಿತ್ತು. ಆದರೆ ತಂದೆಯವರು ನನ್ನ ಅಭಿಪ್ರಾಯಕ್ಕೆ ತಮ್ಮ ಅಂಗೀಕಾರದ ಮುದ್ರೆಯೊತ್ತಲಿಲ್ಲ. ಉಪಾಧ್ಯಾಯಿನಿಯ ಸನ್ನಿಧಿಯಲ್ಲಿ ಏಕಾಂತದ ಪ್ರಶಾಂತತೆಯಲ್ಲಿ ಓದು ಕಲಿಯುವುದು ಸರಿಯಾದ ಮಾರ್ಗವೆಂದು ಅವರು ನಂಬಿದ್ದರು. ವೀಣೆಯನ್ನಾಗಲೀ, ಸಂಗೀತದ ಇತರ ವಾದ್ಯಗಳನ್ನಾಗಲೀ ನುಡಿಸುವುದು ಆಗಿನ ಕಾಲದ ತರುಣಿಯರಿಗೆ ಅತ್ಯವಶ್ಯಕವಾದ ವಿದ್ಯೆಯಾಗಿತ್ತು. ಜತೆಗೆ ಸಂಭಾಷಣೆಮಾಡುವ ಯೋಗ್ಯತೆಯನ್ನು, ಜನರ ಗುಂಪಿನಲ್ಲಿ ಸಲಿಗೆಯಿಂದಿರುವ ಅಭ್ಯಾಸವನ್ನು ಸಂಪಾದಿಸಿಕೊಂಡರೆ ಸಾಕಾಗಿತ್ತು. ನನ್ನ ಅಕ್ಕನಂತು ಶಾಲೆಗೆ ಹೋದವಳಲ್ಲ. ಆಕೆಯ ವ್ಯಾಸಂಗವೆಲ್ಲ ಮನೆಯಲ್ಲಿಯೇ ನಡೆಯಿತು. ಶಾಲೆಗೆ ಹೋಗಬೇಕೆಂಬ ಆಸೆಯೂ

ಅವಳಿಗೆ ಇದ್ದಂತೆಯೂ ಕಾಣುವುದಿಲ್ಲ. ನಮ್ಮ ಉಪಾಧ್ಯಾಯಿನಿಯ ಮದುವೆಯಾದ ಮೇಲೆ ಶಾಲೆಯನ್ನು ಸೇರುವುದಕ್ಕಾಗಿ ತಂದೆಯವರ ಒಪ್ಪಿಗೆಯನ್ನು ದೊರಕಿಸಿಕೊಳ್ಳಲು ನಾನು ಪಟ್ಟ ಪ್ರಯತ್ನಗಳೆಲ್ಲ ನಿರರ್ಥಕವಾದುವು. ಮೊದಮೊದಲು ಬೇರೊಬ್ಬರು ಉಪಾಧ್ಯಾಯಿನಿಯನ್ನು ನೇಮಿಸಿಕೊಳ್ಳಬೇಕೆಂದು ನಿಶ್ಚಲಮನಸ್ಕರಾಗಿದ್ದರು. ಅನೇಕ ಉಪಾಧ್ಯಾಯಿನಿಯರು ಬಂದರೂ, ಅದೃಷ್ಟವಶಾತ್ ಅವರಾರೂ ನಿಲ್ಲಲಿಲ್ಲ. ಕೊನೆಗೆ ತಂದೆಯವರು ಗೊಣಗುಟ್ಟುತ್ತ ನನ್ನ ಇಷ್ಟಕ್ಕೆ ಸಮ್ಮತಿಯಿತ್ತರು. ನನಗಾಗಿ ಅವರು ಆರಿಸಿದ ಶಾಲೆ ನನ್ನ ವಯಸ್ಸಿನ ತರುಣ ತರುಣಿಯರಿಗೆ ಅತ್ಯುತ್ತಮವಾದ ಸಂಸ್ಥೆಯೆಂದು ಪರಿಗಣಿತವಾಗಿತ್ತು. ನಾನು ಸೇರಿದಾಗ ಅಲ್ಲಿ ಆಂಗ್ಲೇಯರ ಮಕ್ಕಳು ಅಧಿಕಸಂಖ್ಯೆಯಲ್ಲಿದ್ದರೂ ಕೊನೆಕೊನೆಗೆ ಅನೇಕ ಭಾರತೀಯರ ಮಕ್ಕಳೂ ಸೇರಿದರು.

ಹೊಸಬಾಳಿನ ನವೋದಯವದು. ಪ್ರತಿಯೊಂದು ಕ್ಷಣವನ್ನೂ ಬಿಡದೆ ಅನುಭವಿಸಿದೆನು. ಕ್ರೀಡಾವ್ಯಾಸಂಗಗಳು ನನ್ನ ವೇಳೆಯನ್ನೆಲ್ಲ ಆಕ್ರಮಿಸಿದುವು. ಒಂಟಿತನವನ್ನು ಅನುಭವಿಸಲು ಅವಕಾಶವೇ ಇಲ್ಲವಾಯಿತು. ಬಾಳು ನಿಜವಾಗಿಯೂ ಸುಂದರವಾದುದೆಂದು ಭಾಸವಾಯಿತು. ನನ್ನ ಎಳೆತನದ ಸುಖಮಯವಾದ ಕಾಲವೆಂದರೆ ನಾನು ಶಾಲೆಯಲ್ಲಿ ಕಳೆದ ದಿನಗಳು. ಕೆಲವು ವರ್ಷಗಳಲ್ಲಿಯೇ ಅವೂ ಕೂಡ ಶೀಘ್ರವಾಗಿ ಕೊನೆಗೊಂಡವು.

ಹೀಗೆ, ನನ್ನ ಆರಾಧನೆಗೆ ಪಾತ್ರವಾಗಿದ್ದ ಆ ಮನೆಯಲ್ಲಿ, ಶಾಂತಿ ಸಮಾಧಾನಗಳು ನೆಲೆಗೊಂಡಿದ್ದ ಆ ವಾತಾವರಣದಲ್ಲಿ ಬೆಳೆದೆನು.

ಹಾ! ಹಳತು ಹೊಸತಾಗಲಾಗಾಗ ಎನಿತಂದ!

—ಕೋಲ್‌ರಿಜ್

ನಮ್ಮ ಉಪಾಧ್ಯಾಯಿನಿ ಹೊರಟುಹೋದ ಮೇಲೆ, ನಾನು ಸ್ವರೂಪಳ ಆರೈಕೆಗೊಳಗಾದೆನು. ನನ್ನನ್ನು ನೋಡಿಕೊಳ್ಳುವಷ್ಟು ಶಕ್ತಿ ತಾಯಿಯವರಿಗಿರಲಿಲ್ಲ. ಸ್ವರೂಪಳು ನನ್ನೊಡನೆ ಕಠಿಣತೆಯಿಂದ ವರ್ತಿಸುತ್ತಿರಲಿಲ್ಲ. ಅನೇಕವೇಳೆ ನಾನು ನನ್ನ ಮನಸ್ಸಿಗೆ ತೋಚಿದಂತೆ ನಡೆದುಕೊಳ್ಳುತ್ತಿದ್ದೆನು. ಇಂತಹ ವರ್ತನೆ ಅವಳ ಕಷ್ಟವನ್ನು ತಗ್ಗಿಸಿತಲ್ಲದೆ ನನಗೂ ಹೊಂದಿಕೊಂಡಿತು. ಕಾವ್ಯದಲ್ಲಿ ನನ್ನ ಹಾಗೆ ಅವಳಿಗೂ ಅತ್ಯಾಸಕ್ತಿ. ತೋಟದಲ್ಲಿ ಕುಳಿತು, ಅವಳು ಗಟ್ಟಿಯಾಗಿ ಓದುತ್ತಾ, ನಾನು ಅನನ್ಯ ಮನಸ್ಕಳಾಗಿ ಆಲಿಸುತ್ತಾ, ಹಲವು ರಮಣೀಯವಾದ ಬೈಗುಗಳನ್ನು ಕಳೆದಿದ್ದೇವೆ. ಅಪೂರ್ವವೂ ಸುಂದರವೂ ಆದ ಸಂಬಂಧ ನಮ್ಮಿಬ್ಬರನ್ನು ಬಂಧಿಸಿತ್ತು. ಆ ನನ್ನ ಬಾಲ್ಯದ ದಿನಗಳಲ್ಲಿ ಸ್ವರೂಪಳು ನನಗೆ ಉಪದೇಶಕಳೂ, ಮಾರ್ಗದರ್ಶಿಯೂ ಮತ್ತು ಗೆಳತಿಯೂ ಆಗಿದ್ದಳು.

೧೯೨೧ ರಲ್ಲಿ ನನ್ನ ಸಹೋದರಿಯ ಮದುವೆ ನೆರವೇರಿತು, ಶುದ್ಧ ಕಾಶ್ಮೀರಿ ರೀತಿಯಲ್ಲಿ ಜರುಗಿದ ಆಕೆಯ ವಿವಾಹ ವೈಭವ ವಿಜೃಂಭಣೆಗಳಿಂದ ಕೂಡಿತ್ತು. ನೂರಾರು ನೆಂಟರಿಷ್ಟರು ಮತ್ತು ಅತಿಥಿಗಳು ನಮ್ಮ ಜತೆಯಲ್ಲಿದ್ದರು. ಅಲಹಾಬಾದಿನಲ್ಲಿ ಆಗಾಗ್ಗೆ ನೆರೆಯುತ್ತಿದ್ದ ಇಡೀ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ ನಮ್ಮ ಅತಿಥಿವರ್ಗದಲ್ಲಿ ಸೇರುತ್ತಿತ್ತು. ನನ್ನ ವೈಭವದ ದಿನಗಳವು. ನನ್ನ ವಿಷಯವನ್ನು ವಿಚಾರಿಸಿಕೊಳ್ಳುವ ಗೋಜಿಗೆ ಯಾರೂ ಬರುತ್ತಿರಲಿಲ್ಲ. ಹೀಗೆ ಮಾಡು, ಹಾಗೆ ಮಾಡಬೇಡ ಎಂದು ಹೇಳುವವರೂ ಇರಲಿಲ್ಲ. ನನ್ನ ಸಹೋದರಿಯಿಂದ ವಿಯೋಗ ಹೊಂದುವ ಭಾವನೆ ನನ್ನಲ್ಲಿ ಅಸಮಾಧಾನವನ್ನುಂಟುಮಾಡಿದರೂ, ವಿವಾಹದ ಸಂಭ್ರಮ ಸಡಗರಗಳು ಅದನ್ನು ಮರೆಯಿಸಿ ಆನಂದದಲ್ಲಿ ಮುಳುಗಿಸಿದ್ದವು.

ಸ್ಥಳೀಯ ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸ್ ನಾಯಕರ ಸಾನ್ನಿಧ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ

ಜಿಲ್ಲಾ ಸಮ್ಮೇಳನವನ್ನು ಏರ್ಪಡಿಸಿದ್ದರು. ಸಮ್ಮೇಳನವನ್ನು ನೋಡಲು ಸುತ್ತಮುತ್ತಣ ಹಳ್ಳಿಗಳಿಂದ ಅಸಂಖ್ಯಾತ ರೈತರು ಗುಂಪು ಕೂಡಿದರು. ಸಾಮಾನ್ಯವಾಗಿ ಸುಪ್ತಾವಸ್ಥೆಯಲ್ಲಿದ್ದ ಹಳೆಯ ಅಲಹಾಬಾದ್ ಪಟ್ಟಣ ಕಾರ್ಯೋತ್ಸಾಹಗಳ ಕೇಂದ್ರವಾಯಿತು. ಈ ಸಮಾರಂಭ ಆ ಪಟ್ಟಣದ ಆಂಗ್ಲೇಯ ನಿವಾಸಿಗಳ ಮನಸ್ಸಿನ ಮೇಲೆ ವಿಚಿತ್ರವಾದ ಪರಿಣಾಮವನ್ನುಂಟುಮಾಡಿತು. ದೇಶದ ರಾಜಕೀಯ ಜಾಗೃತಿಯನ್ನು ನೋಡಿ ಅವರು ಕಳವಳಗೊಂಡುದಲ್ಲದೆ, ಪ್ರಬಲವಾದ ಘರ್ಷಣೆಯುಂಟಾಗಬಹುದೆಂದು ನಿರೀಕ್ಷಿಸಿದರು. ಆಗ ನಾವು ಅವರ ಭೀತಿಯು ಮತ್ತು ವಿಚಿತ್ರವರ್ತನೆಯ ಮೂಲಕಾರಣಗಳನ್ನು ತಿಳಿಯಲಾರದೆ ಹೋದೆವು. ನನ್ನ ಸಹೋದರಿಯ ಮದುವೆಗೆಂದು ಗೊತ್ತಾಗಿದ್ದ ಮೇ ಹತ್ತನೆಯ ತಾರೀಖು ಇತಿಹಾಸ ಪ್ರಸಿದ್ಧವಾದ 1857ನೆಯ ಇಸವಿಯ ವಾರ್ಷಿಕ ದಿನಾಚರಣೆಯ ದಿನವೆಂಬುದು ಅನಂತರ ಗೊತ್ತಾಯಿತು.

ನಾನು ಮಾಂಸಾಹಾರವನ್ನು ತ್ಯಜಿಸಿದುದು ಈ ಕಾಲದಲ್ಲಿಯೇ. ಅದು ನನಗೆ ಪ್ರಿಯವಾದ ತಿಂಡಿ. ಒಂದು ದಿನ ಗಾಂಧಿಜೀಯವರ ಆಪ್ತಕಾರ್ಯದರ್ಶಿ ಮಹದೇವ ದೇಶಾಯಿಯವರು ನಾನು ಉಪಹಾರ ತೆಗೆದುಕೊಳ್ಳುತ್ತಿದ್ದುದನ್ನು ಕಂಡರು. ಮಾಂಸದ ನಾನಾವಿಧವಾದ ಭಕ್ಷ್ಯಭೋಜ್ಯಗಳು ನನ್ನಮುಂದೆ ಹರಡಿದುದನ್ನು ನೋಡಿ ಅವರು ತಳಮಳಗೊಂಡರು. ಅಲ್ಲಿಯೇ, ಆಕ್ಷಣವೇ ನಾನು ಶಾಖಾಹಾರಿಯಾಗಬೇಕೆಂದು ದೀರ್ಘವಾಗಿ ಉಪದೇಶ ಮಾಡಿದರು. ನನ್ನನ್ನು ಗೆಲ್ಲುವುದು ಅವರಿಗೆ ಸುಲಭವಾಗದಿದ್ದರೂ, ನನ್ನನ್ನು ಕಂಡಾಗಲೆಲ್ಲ ಅವರು ಒತ್ತಾಯಪಡಿಸುತ್ತಿದ್ದರು. ಮದುವೆಯೊಸಗೆ ನಡೆಯುತ್ತಿದ್ದಾಗಲೇ ನಾನು ಮಾಂಸಾಹಾರವನ್ನು ತ್ಯಜಿಸಿದೆನು. ತಾಯಿಯೊಬ್ಬರನ್ನು ಬಿಟ್ಟು ಉಳಿದವರಿಗೆ ನನ್ನ ನಿರ್ಧಾರ ಅಹಿತವಾಗಿತ್ತು. ತಾಯಿಯವರಿಗೆ ಸಂತೋಷ ಉಕ್ಕಿತು. ಅವರಿಗೆ ಮಾಂಸ ಹಿಡಿಸುತ್ತಿರಲಿಲ್ಲ. ತಾವಾಗಿಯೇ ಅದನ್ನೆಂದೂ ಮುಟ್ಟಿದವರಲ್ಲ. ಕಾಹಿಲೆ ಬಂದಾಗ ಮಾತ್ರ ಅವರು ಮಾಂಸದ ಸಾರನ್ನಾಗಲೀ ಇತರ ಭಕ್ಷ್ಯಗಳನ್ನಾಗಲೀ ತೆಗೆದುಕೊಳ್ಳುವುದು ಅನಿವಾರ್ಯವಾಗಿತ್ತು. ಮೂರು ವರ್ಷಗಳಕಾಲ ಮಾಂಸದ ಚೂರನ್ನೇ ಮುಟ್ಟಲಿಲ್ಲ. ಆದರೂ

ಅದರ ಮೇಲಣ ಹಂಬಲ ಹಿಂಗಲಿಲ್ಲ. ಕ್ರಿಸ್‌ಮಸ್ ರಜಾಕಾಲದಲ್ಲಿ ಒಂದು ವಾರವನ್ನಾದರೂ ದಾಯಾದಿಗಳೊಡನೆ ಕಳೆಯೋಣವೆಂದು ಅವರ ಮನೆಗೆ ಹೋದೆನು. ಅವರೆಲ್ಲರು ಮಾಂಸ ತಿನ್ನುವುದನ್ನು ಕಂಡು ನಾನೂ ಪ್ರಬಲವಾದ ಪ್ರಲೋಭನೆಗೆ ಬಲಿಯಾದೆನು.

ಸ್ವರೂಪಳು ನಮ್ಮ ಮನೆಯನ್ನು ಬಿಟ್ಟನಂತರ, ನಾನು ಒಂಟಿತನದ ಸಂಕಟಕ್ಕೊಳಗಾದೆನು. ಅವಳ ಸಮವಯಸ್ಕಳಾದ ನನ್ನ ಅತ್ತಿಗೆ ಕಮಲ ನನ್ನೊಡನಿದ್ದಳು. ಕೆಲವು ರೀತಿಗಳಲ್ಲಿ ಅವಳು ಸ್ವರೂಪಳ ಸ್ಥಾನವನ್ನು ಆಕ್ರಮಿಸಿದಳು. ತಂದೆಯವರ ಸ್ವಭಾವ ವ್ಯಕ್ತಿತ್ವಗಳನ್ನು ನಾನು ಅರಿತುಕೊಂಡುದು ಈ ಕಾಲದಲ್ಲಿಯೇ. ಸ್ವರೂಪಳು ನನ್ನಿಂದ ದೂರವಾದುದನ್ನರಿತು, ನನ್ನ ಬೇಸರವನ್ನು ನೀಗಲು ಅವರು ಸಾಧ್ಯವಾದಷ್ಟು ಪ್ರಯತ್ನಿಸಿದರು. ಅವರು ಮೊಟ್ಟಮೊದಲನೆಯ ಬಾರಿ ಬಂಧಿತರಾಗುವ ಹೊತ್ತಿಗೆ, ಹಿಂದೆಂದೂ ಇಲ್ಲದಷ್ಟು ಅತಿಶಯವಾಗಿ ಅವರ ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಂಡು ಅವರನ್ನು ಪ್ರೀತಿಸಲಾರಂಭಿಸಿದ್ದೆನು. ಕೊಂಚಕಾಲದ ನಮ್ಮ ಜೋಡಿತನದ ಜಾಗ್ರತೆ ಕೊನೆಗೊಂಡಿತು!

ನಾನು ಮೊದಲನೆಯ ಸಾರಿ ಗಾಂಧಿಜೀಯನ್ನು ನೋಡಿದುದು ೧೯೧೯ರ ಪೂರ್ವಭಾಗದಲ್ಲಿ. ಕೆಲವು ವಿಷಯಗಳನ್ನು ಚರ್ಚಿಸುವುದಕ್ಕಾಗಿ ತಂದೆಯ ಕೋರಿಕೆಯ ಮೇರೆಗೆ ಅವರು ಅಲಹಾಬಾದಿಗೆ ಬಂದಿದ್ದರು. ಬಾಪುವಿನ ವಿಷಯವಾಗಿ ಬಹಳ ಕೇಳಿದ್ದೆನು. ಆದರೆ ಅವರು ಪೌರಾಣಿಕ ವ್ಯಕ್ತಿಯೆಂದು ನನಗೆ ಕಂಡುಬಂದರು. ನಾನು ವಯೋಪರಿಣತೆಯಲ್ಲದುದರಿಂದ ಅವರ ತತ್ತ್ವಗಳನ್ನು ಸುಲಭವಾಗಿ ಗ್ರಹಿಸಲು ಶಕ್ತಳಾಗಿರಲಿಲ್ಲ. ಅವರ ಭಾವನೆಗಳು ವಿಸ್ಮಯಕಾರಿಯಾಗಿದ್ದುವು. ನಾನು ಮೊಟ್ಟಮೊದಲು ಅವರನ್ನು ನೋಡಿದಾಗ, ಅವರು ನೀರಸವಾದ ವ್ಯಕ್ತಿಯೆಂಬ ಭಾವನೆ ಮೂಡಿತು. ತೇಜಃಪುಂಜನೇತ್ರದ್ವಯನೂ, ಸುದೀರ್ಘಸುಪುಷ್ಟದೇಹಿಯೂ, ಗಂಭೀರಗಮನನೂ ಆದ ವ್ಯಕ್ತಿಯನ್ನು ನೋಡಬಹುದೆಂದು ಎಣಿಸಿದ್ದೆನು. ಆದರೆ ತದ್ವಿರುದ್ಧವಾಗಿ ಕೃಶಾಂಗನೂ ಕ್ಷುಧಾಪೂರಿತ ದೀನದೃಷ್ಟಿಯುಳ್ಳವನೂ, ಸೌಮ್ಯವದನನೂ, ನಸುಬಾಗಿ

ದವನೂ ಮತ್ತು ಮಂಡಿಯತನಕ ಧೋತ್ರವನ್ನುಟ್ಟು ಊರೆಗೋಲಿನ ಮೇಲೆ ಬಾಗಿದವನೂ ಆದ ವ್ಯಕ್ತಿಯನ್ನು ನೋಡಿದೆನು. ನನಗೆ ತುಂಬ ನಿರಾಶೆಯುಂಟಾಯಿತು. ತಾಯ್ನಾಡಿನ ಮೇಲ್ಮೈಗಾಗಿ ಮಹತ್ಕಾರ್ಯ ಗಳನ್ನು ಸಾಧಿಸಿ, ನಮ್ಮನ್ನು ವಿದೇಶೀಯರ ವಜ್ರಬಂಧನದಿಂದ ಪಾರು ಮಾಡುವವನು ಈ ಸಣ್ಣ ವ್ಯಕ್ತಿಯೇ ಎಂದು ನಾನು ವಿಸ್ಮಯಗೊಂಡೆನು.

ಜಲಿಯನ್‌ವಾಲಾಬಾಗಿನ ಭೀಮಭಯಂಕರ ಘಟನಾವಳಿ ಗಳನ್ನು ಓದಿಯೂ ಕೇಳಿಯೂ ಬಹಳವಾಗಿ ತಿಳಿದುಕೊಂಡಿದ್ದೆನು. ನಾನು ಚಿಕ್ಕವಳಾದರೂ, ಪ್ರತೀಕಾರ ಮನೋಭಾವನೆ ನನ್ನಲ್ಲಿ ಬುಸು ಗುಟ್ಟಿತು. ಹಿಂಸೆ ಮತ್ತು ರಕ್ತಪಾತಗಳಿಂದ ಮುಯ್ಯಿತೀರಿಸಿಕೊಳ್ಳ ಬೇಕೆಂಬುದೇ ನನ್ನ ಅಭಿಪ್ರಾಯವಾಗಿತ್ತು. ಬಾಪೂಜಿಯ ಅಹಿಂಸಾ ತತ್ತ್ವೋಪದೇಶವನ್ನು ಕೇಳಿ, ಅದೊಂದು ಬರಿಯ ಭ್ರಾಂತಿಯೆಂದೂ, ಸಮಗ್ರದೇಶವೇ ಅದನ್ನು ಕಾರ್ಯತಃ ಆಚರಿಸಲಸಾಧ್ಯವೆಂದೂ, ಯೋಚಿಸಿ ದೆನು. ನಾನು ಸ್ವಲ್ಪ ಮೊಂಡುತನದ ಸ್ವಭಾವದವಳು. ಸಾಮಾನ್ಯವಾಗಿ ನನಗೆ ಗೊತ್ತಿದ್ದವರೆಲ್ಲರ ಜೀವಿತೋದ್ದೇಶ ಬಾಪೂಜಿಯನ್ನು ಆರಾಧಿಸಿ, ಅವರ ಅಲ್ಪತಮ ಆಜ್ಞೆಯನ್ನು ಸಹ ಈಡೇರಿಸುವುದಾಗಿತ್ತೆಂಬುದ ನ್ನರಿತು ನಾನು ಉದಾಸೀನ ಭಂಗಿಯನ್ನು ತಳೆದೆನು. ಈ ನನ್ನ ನಡತೆ ತಾಯಿಯವರಿಗೆ ಅಪಾರ ಯಾತನೆಯನ್ನುಂಟುಮಾಡಿತು. ನಾನು ಬಾಪೂಜಿಯನ್ನು ಹೃದಯಪೂರ್ವಕವಾಗಿ ಮೆಚ್ಚಿ ಪ್ರೀತಿಸಿದೆನು; ಅದರೆ ಇತರರಂತೆ ಅವರನ್ನು ಋಷಿಯೆಂದಾಗಲಿ ಅಥವಾ ಅಮಾನುಷ ವ್ಯಕ್ತಿ ಯೆಂದಾಗಲಿ ಭಾವಿಸಲು ನನ್ನ ಮನಸ್ಸೊಪ್ಪಲಿಲ್ಲ.

ಅವರ ವಿಷಯ ನನಗೆ ಎಷ್ಟೆಷ್ಟು ಸುಪರಿಚಿತವಾಯಿತೋ, ಅವರ ಕಡೆಗೆ ಅಷ್ಟಷ್ಟು ಹೆಚ್ಚಾಗಿ ಆಕರ್ಷಿತಳಾದೆನು. ಅವರು ಬೇರೊಂದು ಪ್ರಪಂಚಕ್ಕೆ ಸೇರಿದ ವ್ಯಕ್ತಿಯೆಂದು ಒಮ್ಮೊಮ್ಮೆ ಭಾಸವಾಗುತ್ತಿತ್ತು; ಆದರೂ ಅವರು ಪಾರ್ಥಿವಾಂಶ ಸಂಭೂತರಾಗಿದ್ದು, ಮಾರ್ತಿಕ ವಿಷಯ ಗಳಲ್ಲಿ ವಿಶೇಷ ಗೌರವವನ್ನಿಟ್ಟಿದ್ದರು. ಕೋಟ್ಯನು ಕೋಟಿ ಜನರನ್ನು ಒಲಿಸಿಕೊಂಡಂತೆ, ಅವರು ತಮ್ಮ ಸೌಮ್ಯನೇತ್ರಗಳಿಂದಲೂ, ಚಿತ್ತಾ ಕರ್ಷಕ ಮಂದಹಾಸದಿಂದಲೂ ನನ್ನನ್ನು ಸೆಳೆದುಕೊಂಡರು. ಆ ಆಕ

ರ್ಷಣೆ ಕ್ಷಣಭಂಗುರವಾಗಿರದೆ, ಆಜೀವಪರ್ಯಂತ ನೆಲೆಗೊಂಡಿರುತ್ತಿತ್ತು. ಬಾಪೂಜಿಗೆ ಒಮ್ಮೆ ಹೃತ್ಪೂರ್ವಕವಾಗಿ ಸಮರ್ಪಿತವಾದ ಭಕ್ತಿ ಎಂದೆಂದಿಗೂ ನಶಿಸುತ್ತಿರಲಿಲ್ಲ.

೧೯೨೦ನೆಯ ಇಸವಿಯಲ್ಲಿ ಗಾಂಧಿಜೀಯವರು ಸತ್ಯಾಗ್ರಹಚಳುವಳಿಯನ್ನು ಹೂಡಿದರು. ಈ ಚಳುವಳಿ ನನ್ನ ಜೀವಮಾನವನ್ನು ಮಾತ್ರವೇ ಅಲ್ಲ ಸಮಗ್ರ ಕುಟುಂಬದ ಮತ್ತು ಇತರ ನೂರಾರು ಮಂದಿಯ ಜೀವಮಾನವನ್ನು ಸಂಪೂರ್ಣವಾಗಿ ಬದಲಾಯಿಸಿತು. ಆಂಗ್ಲೇಯ ಶಾಲೆಗಳ ಬಹಿಷ್ಕಾರವೇ ಚಳುವಳಿಯ ಮೊದಲ ಮೆಟ್ಟಲು. ನಾನು ನನ್ನ ಪಾಠಪ್ರವಚನಗಳಲ್ಲಿಯೂ, ನನ್ನದೇ ಆದ ಸಂಕುಚಿತ ಪ್ರಪಂಚದಲ್ಲಿಯೂ ತಲ್ಲೀನಳಾಗಿದ್ದುದರಿಂದ, ನುಗ್ಗಿ ನುಗ್ಗಿ ಬರುತ್ತಿದ್ದ ಬಿರುಗಾಳಿಯನ್ನಾಗಲೀ ನನ್ನ ಮನೆಯಲ್ಲಿಯೇ ನನ್ನ ಸುತ್ತಮುತ್ತಲೂ ಸಂಭವಿಸುತ್ತಿದ್ದ ಮಾರ್ಪಾಡುಗಳನ್ನಾಗಲಿ ನಾನು ಲಕ್ಷಿಸಲಿಲ್ಲ. ಸಮಯ ಸಂದರ್ಭಗಳಲ್ಲಿ ವಿವರಿಸಿ ನಾನು ಶಾಲೆಯನ್ನು ಬಿಡಬೇಕೆಂದು ತಂದೆಯವರು ಹೇಳಿ ಕಳುಹಿಸಿದಾಗ, ನನಗೆ ಪೆಟ್ಟು ಬಡಿದಂತಾಯಿತು. ಶಾಲೆ ನನಗೆ ತುಂಬ ಒಗ್ಗಿಹೋಗಿತ್ತು; ಅಲ್ಲದೆ, ಅಲ್ಲಿ ಅನೇಕರ ಗೆಳೆತನವನ್ನು ಸಂಪಾದಿಸಿದ್ದೆನು. ಶಾಲೆಯಿಂದ ದೂರವಾಗುವ ಚಿಂತೆ ಸ್ವಲ್ಪಕಾಲ ವಿಷಾದವನ್ನುಂಟುಮಾಡಿತಾದರೂ, ಕೊನೆಗೆ ಅದೇ ಸರಿಯಾದ ಮಾರ್ಗವೆಂದು ಅನುಭವವೇದ್ಯವಾಯಿತು. ಬೇರೆ ಶಾಲೆಯನ್ನು ಸೇರಲು ಆಗ ಅ ಸಮಯವಾದುದರಿಂದ, ನಮ್ಮ ಮನೆಗೆ ಬಂದು ಬೋಧಿಸಲು ತಂದೆಯವರು ಉಪಾಧ್ಯಾಯರನ್ನು ನೇಮಿಸಿದರು. ಅನೇಕ ವಾರಗಳತನಕ ಏನೂ ಕೆಲಸವಿಲ್ಲದೆ ಅನಿಶ್ಚಿತಳಾಗಿಯೂ, ಆನಂದರಹಿತಳಾಗಿಯೂ ಇರಬೇಕಾಯಿತು. ಆದರೆ ಬಾಳು ತೀವ್ರವಾಗಿ ಮುಂಬರಿಯಿತು. ನಮ್ಮ ರಾಷ್ಟ್ರದ ಸಮಗ್ರ ಪರಿಸ್ಥಿತಿಯನ್ನೇ ರೂಪಾಂತರಗೊಳಿಸುವ ಘಟನಾವಳಿಗಳ ಜಂಝಾವಾತದಲ್ಲಿ ನಾನೂ ತೂರಿಹೋದೆನು.

ಪ್ರತಿನಿತ್ಯ ಸಂಭವಿಸುತ್ತಿದ್ದ ನವನವೀನ ಘಟನೆಗಳು ಏಕಪ್ರಕಾರವಾದ ನಿತ್ಯಕ್ರಮದ ಬೇಸರಿಕೆಯ ಬಾಳನ್ನು, ನಿತ್ಯನೂತನವೂ ಸ್ಫೂರ್ತಿದಾಯಕವೂ ಆದ ವಾತಾವರಣಕ್ಕೊಯ್ಯುತ್ತಿದ್ದುವು. ಮರುಕ್ಷಣದಲ್ಲಿ

ಏನಾಗಬಹುದೆಂಬುದೇ ಗೊತ್ತಾಗುತ್ತಿರಲಿಲ್ಲ. ಜವಹರನು ಗಾಂಧೀಜಿಯವರ ಜತೆ ಸೇರಬೇಕೆಂದಿದ್ದನು. ಚಳುವಳಿಯಲ್ಲಿ ಮುಳುಗುವ ಮುಂಚೆ ಅದರ ಸಾಧಕ ಬಾಧಕಗಳನ್ನೆಲ್ಲ ಪರ್ಯಾಲೋಚಿಸಬೇಕೆಂಬುದೇ ತಂದೆಯವರ ಅಪೇಕ್ಷೆಯಾಗಿತ್ತು. ಜವಹರನು ದೃಢನಿಶ್ಚಿತನಾಗಿ, ಚಳುವಳಿಯಲ್ಲಿ ಭಾಗವಹಿಸಲು ಪಣತೊಟ್ಟನು. ಮಾನಸಿಕ ತುಮುಲ ಕಲಹವಿಲ್ಲದೆ ಆತನು ಆ ನಿರ್ಧಾರಕ್ಕೆ ಬಂದಿರಲಿಲ್ಲ. ಸ್ವಾತಂತ್ರ್ಯ ಸಂಪಾದನೆಗೆ ಗಾಂಧೀಜಿಯವರ ನಾಯಕತ್ವವನ್ನುಳ್ಳ ಸತ್ಯಾಗ್ರಹ ಚಳುವಳಿಯೇ ಏಕಮಾತ್ರಮಾರ್ಗವೆಂದು ಜವಹರನು ಭಾವಿಸಿದನು. ಆದರೆ ಬಾಪುವಿನ ಜತೆಸೇರಲು ತಂದೆಯವರ ಸಂಪೂರ್ಣ ಸಮ್ಮತಿಯನ್ನು ಸಂಪಾದಿಸುವ ಕಾರ್ಯ ಸುಲಭಸಾಧ್ಯವಾಗಿರಲಿಲ್ಲ. ಗಾಂಧೀಜಿಯವರ ಅಭಿಪ್ರಾಯಗಳು ಅವರಿಗೆ ಬೇಗನೆ ಹಿಡಿಸಲಿಲ್ಲ. ಚಳುವಳಿಯ ವಿಷಯದಲ್ಲಿ ಅವರು ವಿಶೇಷವಾಗಿ ಆಲೋಚಿಸಿದ್ದರೂ ಅವರಿಗೆ ಅದು ಸ್ವಲ್ಪವೂ ಸರಿಬೀಳಲಿಲ್ಲ. ಸೆರೆಮನೆಗೆ ಹೋಗುವುದರಲ್ಲಿ ವಿವೇಕವಿದ್ದಂತೆ ತೋರಲಿಲ್ಲ. ಜವಹರನು ಬಂಧನಾಸಕ್ತನಾಗಿ ಹೋಗುವುದಂತು ಅವರಿಗೆ ಸರಿಬೀಳಲಿಲ್ಲ. ಇನ್ನೂ ಸೆರೆಮನೆಯ ಯಾತ್ರೆ ಪ್ರಾರಂಭವಾಗಿರಲಿಲ್ಲ. ತಂದೆಯವರು ಜವಹರನನ್ನು ಗಾಢವಾಗಿ ಪ್ರೀತಿಸುತ್ತಿದ್ದರು. ತಮ್ಮ ಮಗ ಸೆರೆಮನೆಯ ಕಷ್ಟಕಾರ್ಪಣ್ಯಗಳನ್ನು ಅನುಭವಿಸುವುದು ಅವರಿಗೆ ಸ್ವಲ್ಪವೂ ಇಷ್ಟವಿರಲಿಲ್ಲ.

ಅನೇಕ ದಿನಗಳತನಕ ಜವಹರನ ಮತ್ತು ತಂದೆಯವರ ಮನೋರಂಗದಲ್ಲಿ ತಿಕ್ಕಾಟ ನಡೆಯುತ್ತಿತ್ತು. ಆಗಾಗ್ಗೆ ತೀಕ್ಷ್ಣವಾದ ವಾಗ್ವಾದಗಳೂ, ಬಿಸಿ ಬಿಸಿಯ ಮಾತುಗಳೂ ನಡೆಯುತ್ತಿದ್ದವು. ಒಬ್ಬರು ಮತ್ತೊಬ್ಬರನ್ನು ಒಪ್ಪಿಸುವ ಪ್ರಯತ್ನದಲ್ಲಿ ಅನೇಕ ಯಾತನೆಯ ಹಗಲಿರುಳುಗಳು ಕಳೆದುವು. ಬಾಪುವನ್ನು ಹಿಂಬಾಲಿಸಲೇಬೇಕೆಂಬ ಜವಹರನ ನಿಶ್ಚಯ ತಂದೆಗೆ ವ್ಯಥೆಯನ್ನುಂಟುಮಾಡಿತು. ಮುಂದೆ ಜವಹರನು ಸೆರೆಮನೆಯಲ್ಲಿ ನೆಲದಮೇಲೆ ಮಲಗಬೇಕೆಂಬುದನ್ನರಿತು, ತಾವೇ ನೆಲದಮೇಲೆ ಮಲಗಿ ಅದರ ಅನುಭವ ಹೇಗಿರುತ್ತದೆಂಬುದನ್ನು ಪರೀಕ್ಷಿಸುತ್ತಿದ್ದುದೂ ಉಂಟು! ನಮಗೆಲ್ಲರಿಗೂ ದುಃಖದ ದಿನಗಳವು.

ಕೊನೆಮೊದಲಿಲ್ಲದ ಸಂಭಾಷಣೆಗಳಿಂದಲೂ, ರಾಜಕೀಯ ಪ್ರಸಂಗಗಳಿಂದಲೂ, ತಂದೆಮಕ್ಕಳ ಸಂಬಂಧ ಕಿತ್ತುಹೋಗಬಹುದೆಂದು ಕಮಲ ಮತ್ತು ತಾಯಿಯರು ಅಸದಳವಾದ ಸಂಕಟಕ್ಕೆ ಗುರಿಯಾದರು. ವಾತಾವರಣವಂತು ಸದಾ ವಿಷಮತೆಯಿಂದ ಕೂಡಿರುತ್ತಿತ್ತು. ತಂದೆಯವರು ಸಿಟ್ಟುಗೊಳ್ಳಬಹುದೇನೋ, ಜವಹರನು ಉದ್ರೇಕಗೊಳ್ಳಬಹುದೇನೋ ಎಂಬ ಭೀತಿಯಿಂದ ಯಾರೂ ಸಮ್ಮ ಪಿಟಕ್ಕೆನ್ನಲು ಶಕ್ತರಾಗಿರಲಿಲ್ಲ.

ಪಂಜಾಬಿನಲ್ಲಿ ನಡೆದ ದುರಂತಘಟನೆಗಳು ಮತ್ತು ಜಲಿಯನ್ ವಾಲಾಬಾಗಿನ ಘೋರಕೃತ್ಯಗಳು ತಂದೆಯವರನ್ನು ಹೆಚ್ಚುಕಡಮೆ ಜವಹರನ ಆಲೋಚನಾ ಪ್ರಪಂಚಕ್ಕೆ ಒಯ್ಯುತ್ತಿದ್ದುವು. ಸತ್ಯಾಗ್ರಹ ಚಳುವಳಿಯ ವಿಷಯದಲ್ಲಿ ಪುತ್ರನ ನಿಷ್ಠೆ, ತೋದ್ವೇಶ ಮತ್ತು ದೃಢ ವಿಶ್ವಾಸ, ಜತೆಗೆ ಏಕಮಾತ್ರ ಪುತ್ರನಲ್ಲಿದ್ದ ಅಪಾರ ವಾತ್ಸಲ್ಯ ಇವುಗಳಿಗೆ ಕಟ್ಟುಬಿದ್ದ ತಂದೆಯವರಿಗೆ ತಮ್ಮ ನ್ಯೂನತೆಯ ಅರಿವಾಯಿತು. ಮಗನ ಅದೃಷ್ಟದಲ್ಲಿ ತಾವೂ ಭಾಗಿಯಾಗಿ, ಗಾಂಧೀಜೀಯನ್ನು ಹಿಂಬಾಲಿಸಬೇಕೆಂದು ನಿಶ್ಚಯಿಸಿದರು. ತಮ್ಮ ನಿರ್ಧಾರವನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಮುಂಚೆ ಲಾಭದಾಯಕವಾದ ಶ್ರೀಮಂತ ವಕೀಲವೃತ್ತಿಯನ್ನು ಬಿಟ್ಟುಬಿಟ್ಟರು. ಹೀಗಾಗಿ ಸುಖಭೋಗಗಳಲ್ಲಿ ತೇಲುತ್ತಿದ್ದ ನಮ್ಮ ಜೀವನ ಸಾವಕ್ಯಸಂಕಷ್ಟಗಳಿಗೆ ಗುರಿಯಾಯಿತು.

ತಂದೆಯವರು ಅಪಾರವಾಗಿ ಧನವನ್ನು ಗಳಿಸುತ್ತಿದ್ದರು; ಆದರೆ ಕೈಹಿಡಿತವಿಲ್ಲದೆ ದುಂದುಮಾಡಿ, ಕಷ್ಟದಿನಗಳಿಗಾಗಿ ಏನನ್ನೂ ಕೂಡಿಟ್ಟರಲಿಲ್ಲ. ಅವರು ಉದ್ಯೋಗವನ್ನು ಬಿಟ್ಟಕೂಡಲೆ, ನಾವು ಮನೆಯಲ್ಲಿ ಕೆಲವು ಮಾರ್ಪಾಡುಗಳನ್ನು ತರಬೇಕಾಯಿತು. ಸಂಪಾದನೆ ನಿಂತುಹೋದಾಗ ಹಿಂದಿನ ದುಂದುಗಾರಿಕೆಯ ಬಾಳು ಸಾಧ್ಯವಾಗುತ್ತಿರಲಿಲ್ಲ. ಮೊಟ್ಟಮೊದಲು ಕುದುರೆ ಮತ್ತು ಗಾಡಿಗಳನ್ನು ಮಾರಿದರು. ತಮ್ಮ ಪ್ರಾಣಪದಕವೆಂದು ಅತ್ಯಂತ ಆದರದಿಂದ ಸಾಕಿದ್ದ ಕುದುರೆಗಳನ್ನು ಮಾರುವುದು ಕಷ್ಟಸಾಧ್ಯವಾಯಿತು. ಬೇರೆ ಮಾರ್ಗವೇ ಇರಲಿಲ್ಲ. ಸೇವಕರ ಸೈನ್ಯದಲ್ಲಿ ಕೆಲವರನ್ನು ವಜಾಮಾಡಬೇಕಾಯಿತು, ಸರ್ವರೀತಿಗಳಿಂದ ವೆಚ್ಚವನ್ನು ಕುಗ್ಗಿಸುವುದೇ ನಮ್ಮ ಉದ್ದೇಶವಾಗಿತ್ತು.

ಔತಣಸಮಾರಂಭಗಳು ನಿಂತವು. ಇಬ್ಬರು ಅಥವ ಮೂವರು ಅಡಿಗೆಯವರಿಗೆ ಪ್ರತಿಯಾಗಿ ಒಬ್ಬನೇ ಸಾಕಾಯಿತು. ಹಿಂಬಾಲಿಸುತ್ತಿದ್ದ ಅನೇಕ ಉಪಗ್ರಹಗಳುಳ್ಳ ಚತರರಾದ ಬಟ್ಲರುಗಳೂ ಬೇಕಾಗಲಿಲ್ಲ. ಚೆಲುವಾದ ಡ್ರೆಸ್ಡೆನ್ನಿನ ಮತ್ತು ವೆನಿಷಿಯನ್ ಚೀಣಾ ಪಾತ್ರೆಗಳನ್ನೂ, ಗಾಜಿನ ಲೋಟಾಗಳನ್ನೂ ಮತ್ತು ಅಮೂಲ್ಯವೂ ಸುಂದರವೂ ಆದ ಅನೇಕ ವಸ್ತುಗಳನ್ನೂ ಮಾರಿದೆವು. ಕೇವಲ ಅಲ್ಪಮಂದಿ ಸೇವಕರಿಂದಲೂ, ಕಡಮೆ ವೆಚ್ಚದ ನಿತ್ಯಜೀವನದಿಂದಲೂ ತೃಪ್ತರಾಗಬೇಕಾಯಿತು. ನಾನೇನೋ ಚಿಕ್ಕವಳಾದುದರಿಂದ ಅವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ; ಆದರೆ ಇತರರಿಗೆ, ಅದರಲ್ಲಿಯೂ ನನ್ನ ತಂದೆತಾಯಿಯರಿಗೆ ನೂತನ ಪರಿಸ್ಥಿತಿ ಬಹಳ ಕಠಿಣವಾಗಿದ್ದಿರಬೇಕು.

ನಮ್ಮ ಬಾಳಿನಲ್ಲಿ ಈ ಮಾರ್ಪಾಡುಗಳು ಸಂಭವಿಸುವ ವೇಳೆಗೆ ವಿಚಿತ್ರಕರವಾದುದೊಂದು ಘಟನೆ ನಡೆಯಿತು. ನಮ್ಮ ಮನೆಯ ಹಿಂದುಗಡೆ ಅನೇಕ ಉಪಗೃಹಗಳಿದ್ದುವು. ಅವುಗಳಲ್ಲಿ ಕಲ್ಲಿದ್ದಲು, ಮರಮೊದಲಾದ ಪದಾರ್ಥಗಳನ್ನು ಒಡ್ಡುವುದು ರೂಢಿಯಾಗಿತ್ತು. ಮರ ಒಟ್ಟಲಿದ್ದ ಉಪಗೃಹದಲ್ಲಿ ದೊಡ್ಡದಾದ ಒಂದು ಕಾಳಸರ್ಪ ನೆಲಸಿತ್ತು. ನನ್ನಲ್ಲಿ ಜ್ಞಾಪಕಶಕ್ತಿ ಮೊಳೆತಾಗಿನಿಂದ ಅದು ಅಲ್ಲೇ ಇತ್ತು. ಅದು ಯಾರನ್ನೂ ಬೆದರಿಸಿರಲಿಲ್ಲ. ರಾತ್ರಿಯ ಅವೇಳೆಯಲ್ಲಿಯು ಸಹ ಸೇವಕರು ನಿರ್ಭಯವಾಗಿ ಹೋಗುತ್ತಿದ್ದರು. ಉಪವನ ಮತ್ತು ಉಪಗೃಹಗಳ ಸುತ್ತಮುತ್ತ ಅದು ಹರಿದಾಡುತ್ತಿದ್ದುದನ್ನು ಅನೇಕ ವೇಳೆ ನೋಡಿದ್ದೆವು. ಅದರಿಂದ ಯಾರೂ ಹೆದರಿರಲಿಲ್ಲ. ಅದರ ವಿಷಯವನ್ನು ತಲೆಗೂ ಅಂಟಿಸಿಕೊಂಡಿರಲಿಲ್ಲ. ಕುಟುಂಬದ ರಕ್ಷಣಾಭಾರವನ್ನು ವಹಿಸಿ ಅದು ಅಲ್ಲಿ ವಾಸಿಸುವತನಕ, ನಮ್ಮ ಮನೆಗೆ ಯಾವ ತೊಂದರೆಯೂ ಪ್ರಾಪ್ತವಾಗದೆ ವಿಭವೋನ್ನತಿಗಳು ಮಾತ್ರ ಒದಗುತ್ತಿರುತ್ತವೆ ಎಂದು ಜನರಲ್ಲಿ ಮೂಢನಂಬಿಕೆ ಬೆಳೆದು ಬಂದಿತ್ತು.

೧೯೨೦ನೆಯ ಇಸವಿಯಲ್ಲಿ ನಮ್ಮ ತಂದೆಯವರು ವಕೀಲಿವೃತ್ತಿಯನ್ನು ಬಿಡುವ ಮುನ್ನ ಒಂದು ಸಂಜೆ ಹಿಂದೆಂದೂ ಸರ್ಪದ ಇರವನ್ನೇ ಅರಿಯದಿದ್ದ ಹೊಸ ಆಳೊಬ್ಬನು ಅದನ್ನು ನೋಡಿದನು. ಆತನು

ಭೀತನಾಗಿ ಇನ್ನು ಕೆಲವರೊಡಗೂಡಿ ಅದನ್ನು ಕೊಂದು ಹಾಕಿದನು. ಹಳೆಯ ಆಳುಗಳು ಭಯಪೀಡಿತರಾದರು. ತಾಯಿ ಕಳವಳಗೊಂಡರು. ಆದರೆ ಕೆಲಸ ಕೈಮೀರಿತ್ತು. ಇದಾದಕೂಡಲೆ ಅನೇಕ ಮಾರ್ಪಾಡು ಗಳುಂಟಾದುವು. ಭೋಗದ ಮನೆ ತ್ಯಾಗಸರಳತೆಗಳ ನೆಲೆಯಾಯಿತು. ತಂದೆ ಜವಹರರಿಬ್ಬರೂ ಸೆರೆಮನೆಗೆ ತೆರಳಿದರು. ನಮ್ಮ ದುರ್ಗತಿಗೆ ಹಾವಿನ ಕೊಲೆಯೇ ಕಾರಣವೆಂದು ಸೇವಕರು ಆರೋಪಿಸಿದರು.

ಅಸಹಕಾರ ಚಳುವಳಿಯಲ್ಲಿ ಭಾಗಿಯಾಗುವುದಾದರೆ ಹಳೆಯ ಬಾಳಿನಿಂದ ದೂರ ಸರಿದು, ಅರುವತ್ತರಮುಪ್ಪಿನಲ್ಲಿ ಹೊಸಬಾಳನ್ನು ರೂಪಿಸಿಕೊಳ್ಳಬೇಕಾಗುತ್ತದೆಯೆಂದು ತಂದೆಯವರು ಅಭಿಪ್ರಾಯಪಟ್ಟಿದ್ದರು. ನೂತನ ಪರಿಸ್ಥಿತಿಯ ಪರಿಣಾಮವಾಗಿ ಔದ್ಯೋಗಿಕ ಮತ್ತು ರಾಜಕೀಯ ಸಹೋದ್ಯೋಗಿಗಳಿಂದ ದೂರ ಸರಿಯಬೇಕಾಯಿತಲ್ಲದೆ ಬಾಪುವನ್ನಾಗಲಿ, ತಮ್ಮನ್ನಾಗಲಿ ಅರ್ಥಮಾಡಿಕೊಳ್ಳಲಾರದ ಆಜನ್ಮ ಮಿತ್ರರನ್ನು ಸಹ ಬಿಡಬೇಕಾಯಿತು. ಅನೇಕ ಸುಖ ಸೌಲಭ್ಯಗಳನ್ನು ತ್ಯಜಿಸಬೇಕಾಯಿತು. ಅವರು ಸದಾ ಸುಖವಾಗಿ ಬಾಳಿದವರು. ತಾವು ಹಿಡಿದ ದಾರಿ ಸರಿಯೆಂದು ಒಮ್ಮೆ ಮನಸ್ಸಿಗೆ ತೋರಿದರೆ ಸಾಕು, ಕಳೆದ ಕಾಲವನ್ನೆಂದೂ ಎಣಿಕೆಹಾಕಿದವರಲ್ಲ.

ದಿನ ಕ್ರಮೇಣ ತಂದೆಜವಹರರು ರಾಜಕೀಯಸಾಗರದಲ್ಲಿ ಹೆಚ್ಚು ಹೆಚ್ಚು ನಿಮಗ್ನರಾಗುತ್ತಿದ್ದರು. ಸುಲಲಿತವಾದ ಜೀವನ ಸಾಗುತ್ತಿದ್ದ ಮನೆ ಈಗ ಗಲಿಬಿಲಿಯಕೇಂದ್ರವಾಯಿತು. ದೇಶದ ಮೂಲೆ ಮೊಡಕು ಗಳಿಂದ ಅನೇಕ ಕಾಂಗ್ರೆಸ್ ಕೆಲಸಗಾರರು ವಿಚಾರವಿನಿಮಯಕ್ಕಾಗಿ ಬಂದು ಸ್ವಲ್ಪಕಾಲ ತಂಗುತ್ತಿದ್ದರು. ಹೆಚ್ಚುಕಡಮೆ ಪ್ರತಿನಿತ್ಯವೂ ಸಭೆ ಗಳು ಜರುಗುತ್ತಿದ್ದುವು. ಮನೆಯ ಹೊರಗೆ ಒಳಗೆ ಮಂದಿಯ ಪ್ರವಾಹ ನಿರಂತರವಾಗಿ ಹರಿಯುತ್ತಿತ್ತು. ನಮ್ಮತಂದೆಯವರನ್ನು ನೋಡಲು ಬರುತ್ತಿದ್ದ ಅನೇಕ ದೊಡ್ಡಮನುಷ್ಯರನ್ನು ನಾನುಮೊದಲೇ ಕಂಡಿದ್ದೆನು. ಆದರೆ ಅವರೆಲ್ಲರು ಬೇರೆ ರೀತಿಯವರು. ತಮ್ಮ ವೈಭವಾ ಡಂಬರಗಳನ್ನು ಪ್ರದರ್ಶಿಸುವ ಹುರುಡಿನಿಂದ ಪ್ರತಿಯೊಬ್ಬರು ಮೋಟಾರು ಬಂಡಿಯಲ್ಲೋ, ಸುಂದರವಾದ ಕುದುರೆಗಳನ್ನು ಹೂಡಿದ

ತೇರಿನಲ್ಲೋ ಬರುತ್ತಿದ್ದರು. ಚಳುವಳಿ ಆರಂಭವಾದನಂತರ ಕೆಲವರು ಶ್ರೀಮಂತ ಮಿತ್ರರು ಬರುವುದನ್ನೇ ನಿಲ್ಲಿಸಿದರು. ದರ್ಪಶ್ರೀಮಂತತೆಗಳು ತಾಂಡವವಾಡುತ್ತಿದ್ದ ಸ್ಥಾನದಲ್ಲಿ ಈಗ ಸರಳರೂ, ವಿನಯಶೀಲರೂ, ಖಾದಿವಸ್ತ್ರಧಾರಕರೂ ಆದ ಗಂಡಸರು ಹೆಂಗಸರನ್ನು ನೋಡಬಹುದಾಗಿತ್ತು. ಪ್ರತಿಯೊಬ್ಬರ ಹೃದಯದಲ್ಲಿಯೂ ದೃಢನಿಶ್ಚಲತೆ ಮತ್ತು ಅಸ್ಖಲಿತ ಧೈರ್ಯಗಳು ನೆಲಸಿದುವು. ಭರತಮಾತೆಯ ಶ್ರೇಯಸ್ಸಾಧನೆಗಾಗಿ ಮತ್ತು ಬಂಧನವಿಮೋಚನೆಗಾಗಿ ತಮ್ಮ ಪ್ರಾಣಗಳನ್ನು ಸಮರ್ಪಿಸಲು ಸಿದ್ಧರಾಗಿದ್ದರು.

೧೯೨೧ನೆಯ ಇಸವಿಯಲ್ಲಿ ಪರಿಸ್ಥಿತಿ ಉತ್ಕಟವಾಯಿತು. ದೇಶಸೇವಕರನ್ನೆಲ್ಲ ಬಂಧಿಸುವ ಕಾರ್ಯಕ್ರಮವನ್ನು ಬ್ರಿಟಿಷ್ ಸರ್ಕಾರ ಕೈಗೊಂಡಿತು. ಸಾವಿರಾರು ಜನರು ಸೆರೆಮನೆಗೆ ಹೋಗಲು ಸಿದ್ಧರಾದರು. ಅಲ್ಲಿಯವರೆಗೆ ಸೆರೆಮನೆ ಗೊತ್ತುಗುರಿಯಿಲ್ಲದ ವಿಚಿತ್ರ ಪ್ರಪಂಚವಾಗಿತ್ತು. ಆದರೆ ಕ್ಷಿಪ್ರದಲ್ಲಿಯೇ ಅದು ಅನೇಕರಿಗೆ ದ್ವಿತೀಯ ಸ್ವಗೃಹವಾಯಿತು. ಚಕ್ರವರ್ತಿಕುಮಾರರು ಭರತಖಂಡಕ್ಕೆ ಭೇಟಿಯಿತ್ತುದು ಈ ಕಾಲದಲ್ಲಿಯೇ. ಅವರು ಅಲಹಾಬಾದಿಗೂ ಬರುವವರಾಗಿದ್ದರು. ಕೆಲವು ದಿನಗಳು ಮುಂಚಿತವಾಗಿಯೇ ಅಲಹಾಬಾದಿನ ಜಿಲ್ಲಾ ನ್ಯಾಯಾಧಿಪತಿಗಳಿಂದ ತಂದೆಯವರಿಗೊಂದು ಕಾಗದಬಂತು. ನಿಯಮಿತವೇಳೆಯಲ್ಲಿ ಮನೆಯಬಾಗಿಲುಗಳನ್ನು ಮುಚ್ಚಬೇಕೆಂದೂ, ಮನೆಗೆ ಬರುತ್ತಿದ್ದವರನ್ನು ತಪ್ಪಿಸಬೇಕೆಂದೂ, ಮನೆಯ ಮುಂದಣ ಮೈದಾನವನ್ನು ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟುಕೊಡಬೇಕೆಂದೂ, ಅದರಲ್ಲಿ ಬರೆದಿತ್ತು. ತಮ್ಮ ಸ್ವಂತ ಆಸ್ತಿಯ ಬಳಕೆಯ ವಿಚಾರದಲ್ಲಿ ನ್ಯಾಯಾಧಿಪತಿಗೆ ಯಾವ ಹಕ್ಕೂ ಇರುವುದಿಲ್ಲವೆಂತಲೂ, ತಮಗೆ ನ್ಯಾಯವೆಂದೂ ಸರಿಯೆಂದೂ ತೋಚಿದ ರೀತಿಯಲ್ಲಿ ತಮ್ಮ ಆಸ್ತಿಪಾಸ್ತಿಗಳನ್ನು ಉಪಯೋಗಿಸಿಕೊಳ್ಳುವುದಾಗಿಯೂ, ನ್ಯಾಯಾಧಿಪತಿಗೆ ಉತ್ತರ ಬರೆದು ಕಳುಹಿಸಿದರು. ರಾಜಕುಮಾರರು ಅಲಹಾಬಾದಿಗೆ ಭೇಟಿಯೀಯುವ ಸಮಯದಲ್ಲಿ ಅವರಿಗೆ ಯಾವತೊಂದರೆಯೂ ಉಂಟಾಗದ ಹಾಗೆ ನೋಡಿಕೊಳ್ಳುವುದು ತಮ್ಮಂತಹ ಸತ್ಯಾಗ್ರಹಿಯ

ಕರ್ತವ್ಯವೆಂದು ತಂದೆಯವರು ವಾಗ್ದಾನಮಾಡಿದರು. ಈ ರೀತಿ ವಿಶ್ವಾಸ ತೋರಿಸಿದುದರ ಪರಿಣಾಮವಾಗಿ ಅವರಿಗೆ ಸೆರೆಮನೆಯ ವಾಸ ಲಭಿಸಿತು. ಜಿಲ್ಲಾ ನಾಯಕರು ಮತ್ತು ಪ್ರಮುಖಕಾರ್ಯಕರ್ತರು ಬಂಧಿತರಾಗುತ್ತಾರೆಂಬ ಸುದ್ದಿ ಒಂದು ಸಂಜೆ ನಮಗೆ ಗೊತ್ತಾಯಿತು. ಅದೇ ಸಾಯಂಕಾಲ ೧೯೨೧ನೆಯ ಇಸವಿಯ ಡಿಸೆಂಬರ್ ಆರನೆಯ ತಾರೀಖು–ತಂದೆ ಮತ್ತು ಜವಹರರನ್ನು ಸೆರೆಹಿಡಿಯಬೇಕೆಂಬ ಆಜ್ಞಾಪತ್ರವನ್ನು ಹಿಡಿದು ಪೋಲೀಸಿನವರು ಮೊಟ್ಟಮೊದಲನೆಯ ಬಾರಿ ಆನಂದಭವನವನ್ನು ಹೊಕ್ಕರು. ಅಂದಿನಿಂದ ಅವರು ನಮ್ಮ ಕುಟುಂಬದಲ್ಲಿ ಯಾರಾದರೊಬ್ಬರನ್ನು ಸೆರೆಗೊಯ್ಯುವುದಕ್ಕಾಗಲೀ, ಅವರ ಕಲ್ಪನಾ ಪ್ರಪಂಚದ ಬಹಿಷ್ಕೃತ ಸಾಹಿತ್ಯ, ಗ್ರಂಥಾನ್ವೇಷಣದ ನೆಪದಿಂದ ಮನೆಯನ್ನು ಶೋಧಿಸುವುದಕ್ಕಾಗಲೀ, ಆಗಾಗ್ಗೆ ಬರುತ್ತಲೇ ಇದ್ದಾರೆ. ದಂಡದ ಹಣವನ್ನು ಎತ್ತುವ ಸಲುವಾಗಿ ನಮ್ಮ ಮೋಟಾರುಗಳನ್ನಾಗಲೀ, ಗೃಹೋಪಕರಣಗಳನ್ನಾಗಲೀ ಕಸಿದುಕೊಂಡುಹೋಗಲೂ ಅವರು ಆಗಾಗ್ಗೆ ಬರುತ್ತಿದ್ದರು.

ಆ ದಿನ ಸಂಜೆ ಪೋಲೀಸಿನವರ ಆಗಮನವು ನಮ್ಮ ಮನೆಯ ವಾತಾವರಣವನ್ನು ಪ್ರಕ್ಷುಬ್ಧಗೊಳಿಸಿತು. ಕೆಲವು ಸೇವಕರು ಕ್ರೋಧಾವಿಷ್ಟರಾಗಿ, ಪೋಲೀಸಿನವರನ್ನು ಹೊಡೆದು ಗೋಡೆಯಿಂದಾಚೆ ನೂಕಲು ಯತ್ನಿಸಿದರು. ನೀಚತನದಿಂದ ವರ್ತಿಸಬಾರದೆಂದು ತಾಯಿ ಅವರನ್ನು ಗದರಿಸಿದರು. ತಂದೆ ಜವಹರರನ್ನು ಬಿಟ್ಟು ಉಳಿದೆಲ್ಲರು ಈ ಆಕಸ್ಮಿಕವಾದ ಬಂಧನದಿಂದ ವ್ಯಾಕುಲಚಿತ್ತರಾದೆವು. ನಮಗೆ ಪ್ರೀತಿಪಾತ್ರರಾದವರು ಸೆರೆಮನೆಯಲ್ಲಿರುವರೆಂಬ ಭಾವನೆಯೇ ಅಸಹನೀಯವಾಗಿತ್ತು. ಅವರಿಗಾಗಿ ಏನೇನುಕಾಟಗಳು ಕಾದಿದ್ದುವೋ ನಮಗೆ ಗೊತ್ತಿರಲಿಲ್ಲ. ನಮ್ಮ ತಾಯಿಯವರ ಸಂಕಟವಂತು ಶಬ್ದಾತೀತವಾಗಿತ್ತು. ಕೆಲವು ತಿಂಗಳುಗಳು ಪ್ರತಿನಿತ್ಯವೂ ಸಂಭವಿಸುತ್ತಿದ್ದ ಮಾರ್ಪಾಟುಗಳು ಅವರ ಕಲ್ಪನೆಗೆ ನಿಲುಕದ ದುಃಸ್ವಪ್ನಗಳಂತಿದ್ದುವು. ಆದರೆ ಅವರು ವೀರರಮಣಿಯಾಗಿದ್ದರು; ಅದಕ್ಕಿಂತಲೂ ಮಿಗಿಲಾಗಿ ವೀರಮಾತೆಯಾಗಿದ್ದರು. ಏನಾದರು ಸರಿಯೆ, ಆ ಸಮಯದಲ್ಲಿ ಅವರು ತಮ್ಮ ವ್ಯಥೆಯನ್ನು ಇತರರಿಗೆ

ತೋರ್ಪಡಿಸುತ್ತಿರಲಿಲ್ಲ. ತಂದೆ ಮತ್ತು ಜವಹರರು ನಮ್ಮಿಂದ ಬೀಳ್ಕೊಂಡರು. ಪೋಲೀಸ್ ಕಾರೊಂದು ಅವರನ್ನು ಜಿಲ್ಲಾ ಜೈಲಿಗೆ ತೆಗೆದುಕೊಂಡುಹೋಯಿತು. ತಮ್ಮ ಗಂಡಂದಿರಿಂದ ಬೇರ್ಪಡುವಾಗ ತಾಯಿ ಮತ್ತು ಕಮಲ ಧೈರ್ಯದಿಂದ ಮುಗುಳ್ನಗೆ ಸೂಸಿದರು. ಅವರ ಮುಗುಳ್ನಗೆಯಲ್ಲಿ ಧೈರ್ಯ ಮಿಂಚುತ್ತಿದ್ದಿತು. ಅವರ ಹೃದಯಗಳಲ್ಲಿ ವಿಯೋಗದುಃಖ ತುಂಬಿತ್ತು. ಕಾರು ಕಣ್ಮರೆಯಾದನಂತರ ನಾವು ಮನೆಗೆ ಹಿಂದಿರುಗಿದೆವು. ಒಂದುಗಳಿಗೆಯ ಹಿಂದೆ ಚೈತನ್ಯಮಯವಾಗಿದ್ದ ಮನೆಯನ್ನು ಹಠಾತ್ತನೆ ಬೀರುವ ಆನಂದಶೂನ್ಯತೆಗಳು ಆವರಿಸಿದುವು.

೧೯೨೧ನೆಯ ಇಸವಿ ಡಿಸೆಂಬರ್ ತಿಂಗಳು ೭ನೆಯ ತಾರೀಖು ಜಿಲ್ಲಾನ್ಯಾಯಾಧೀಶರ ಸಮ್ಮುಖದಲ್ಲಿ ತಂದೆ, ಜವಹರ್ ಇತರರ ವಿಚಾರಣೆ ನಡೆಯಿತು. ಸರ್ಕಾರದ ಪರವಾಗಿ ವಾದವನ್ನಾರಂಭಿಸಿದ ವಕೀಲನು ತಂದೆಯವರ ಹತ್ತಿರದ ಹಳೆಯ ಗೆಳೆಯನೂ ಸಹೋದ್ಯೋಗಿಯೂ ಆಗಿದ್ದನು. ತಂದೆಯವರನ್ನು ವಿಚಾರಣೆಗೆ ಗುರಿಪಡಿಸದೆ ಇರುವುದಕ್ಕಾಗಲೀ, ತನ್ನ ಕೆಲಸಕ್ಕೆ ರಾಜೀನಾಮೆ ಕೊಡುವುದಕ್ಕಾಗಲೀ ಆತನಿಗೆ ಎದೆಗಾರಿಕೆಯಿರಲಿಲ್ಲ. ವಿಚಾರಣೆಯ ವೇಳೆಯಲ್ಲಿ ಅವನ ಹಾಗೆ ನಡುಕ ನಾಚಿಕೆಗಳಿಂದ ಕುಗ್ಗಿದವರನ್ನು ನಾನೆಂದೂ ನೋಡಿರಲಿಲ್ಲ. ಆತನ ದೃಷ್ಟಿ ಸದಾ ಬೇರೆ ಕಡೆಗೆ ತಿರುಗಿರುತ್ತಿತ್ತು; ತಂದೆಯವರ ಕಡೆಗೆ ಗುರಿಯಿಟ್ಟು ನೋಡಲೇಇಲ್ಲ. ಆತನ ವಾದ ಅಸ್ಪಷ್ಟವಾದ ಕ್ಷೀಣ ಸ್ವರದಿಂದ ಕೂಡಿತ್ತು. ಈ ಪ್ರಕರಣ ನಡೆಯುವ ಮುನ್ನ ಅವರು ಪ್ರತಿನಿತ್ಯವೂ ತಂದೆಯವರನ್ನು ಭೇಟಿಮಾಡಿ, ಅವರ ಆದರಪೂರ್ಣವಾದ ಆತಿಥ್ಯವನ್ನು ಸ್ವೀಕರಿಸಿ, ಗೆಳೆತನದ ಸೌಭಾಗ್ಯವನ್ನೆಲ್ಲ ಅನುಭವಿಸಿದ್ದರು. ತಂದೆಯವರು ಸೆರೆಮನೆ ಸೇರಿದಾಗ ಅದೆಲ್ಲ ಮರೆತುಹೋಯಿತು. ತಂದೆ ಮತ್ತು ಜವಹರರಿಗೆ ಆರು ತಿಂಗಳ ಸಾಧಾರಣ ಶಿಕ್ಷೆ ವಿಧಾಯಕವಾಯಿತು. ಅನಂತರ ತಂದೆಯವರು ತಮ್ಮ ಗೆಳೆಯರಿಗೆ ಕೆಳಗಣ ಸಂದೇಶವನ್ನು ಕಳುಹಿಸಿದರು.—

"ನಿಮ್ಮೊಡನಿದ್ದಾಗ ನನ್ನ ಶಕ್ತ್ಯನುಸಾರವಾಗಿ ನಿಮ್ಮ ಸೇವೆಯನ್ನು ಮಾಡಿದ್ದೇನೆ. ನನ್ನ ಏಕಮಾತ್ರ ಪುತ್ರನೊಡನೆ ಸೆರೆಮನೆಗೆ

ಹೋಗಿ ತಾಯ್ನಾಡನ್ನು ಸೇವಿಸುವ ಸುಯೋಗವೀಗ ಲಭಿಸಿದೆ. ಕೆಲವು ದಿನಗಳಲ್ಲಿಯೇ ನಾವು ಸ್ವತಂತ್ರ ಭಾರತೀಯರಾಗಿ ಮತ್ತೆ ಸಂಧಿಸುತ್ತೇವೆಂಬ ಪೂರ್ಣಭರವಸೆ ನನಗಿದೆ. ನಿಮ್ಮಿಂದ ಬೇರೆಯಾಗುವ ಸಂದರ್ಭದಲ್ಲಿ ನಾನು ಈಯುವ ಸಂದೇಶವೊಂದೇ: ಸ್ವರಾಜ್ಯ ಲಭಿಸುವತನಕ ಅವಿಚ್ಛಿನ್ನವೂ ಅಹಿಂಸಾತ್ಮಕವೂ ಆದ ಅಸಹಕಾರ ಚಳುವಳಿಯನ್ನು ಮುಂದುವರಿಸಿ. ಹತ್ತಾರು, ನೂರಾರು, ಸಾವಿರಾರು, ಸ್ವಯಂಸೇವಕರನ್ನು ಸೇರಿಸಿಕೊಳ್ಳಿ. ಈಗ ಭರತಖಂಡದಲ್ಲಿರುವ ಸ್ವಾತಂತ್ರ್ಯದ ಏಕಮಾತ್ರ ದೇಗುಲವೆಂದರೆ ಸೆರೆಮನೆ. ಈ ದೇಗುಲದ ಯಾತ್ರೆ ಮಾತ್ರ ನಿರಂತರ ಸಾಗುತ್ತಿರಲಿ. ದಿನ ಕಳೆದ ಹಾಗೆಲ್ಲ ಯಾತ್ರಿಕರ ಪ್ರವಾಹ ಎಡೆತಡೆಯಿಲ್ಲದೆ ಉಕ್ಕಲಿ. ನಮಸ್ಕಾರ."

ನೂತನ ಜೀವನದ ಉದಯವಿದು. ಅನಿಶ್ಚಯವೂ, ತ್ಯಾಗಮಯವೂ, ಹೃದಯ ವಿದ್ರಾವಕವೂ, ದುಃಖಮಯವೂ ಆದ ಜೀವಮಾನ. ನಮ್ಮ ಹೋರಾಟದ ಉದ್ದೇಶ ಒರಿದಾಗಿಯೂ, ಪವಿತ್ರವಾಗಿಯೂ ಇದ್ದುದರಿಂದ ಇವೆಲ್ಲ ಸಾರ್ಥಕವೆಂದು ಕಂಡುಬಂದವು. ತಂದೆ ಜವಹರರ ವಿಯೋಗದುಃಖ ಅಸಹ್ಯವಾಗಿದ್ದರೂ, ಅವರ ಕರ್ತವ್ಯ ಪರಾಯಣತೆಯನ್ನೂ, ಮಾತೃಭೂಮಿಗೆ ಸಂಭವಿಸಿದ ವಿಪತ್ಸಮಯದಲ್ಲಿ ಬದ್ಧಕಂಕಣರಾಗಿ ಮುಂದೆ ನುಗ್ಗಿರುವುದನ್ನೂ ನೋಡಿ ನಮಗೆ ಹೆಮ್ಮೆ.

ಅವರ ಬಂಧನಾನಂತರ ಪೋಲೀಸಿನವರು ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದರು. ಬಂದಾಗ ಮನೆಯನ್ನೆಲ್ಲ ಹುಡುಕುವುದು ಅವರ ವಾಡಿಕೆಯಾಗಿತ್ತು. ಅವರು ಬಂದಾಗಲೆಲ್ಲ ಮರಮುಟ್ಟುಗಳನ್ನೋ ಇತರ ಚರಸ್ವತ್ತುಗಳನ್ನೋ ಜುಲ್ಮಾನೆಗೆ ಪ್ರತಿಯಾಗಿ ಕಸಿದುಕೊಂಡು ಹೋಗುತ್ತಿದ್ದರು. ತಾವು ತೆಗೆದುಕೊಂಡು ಹೋಗುತ್ತಿದ್ದ ಸಾಮಾನಿನ ಕಡೆಗೆ ಲಕ್ಷ್ಯವೇ ಇರುತ್ತಿರಲಿಲ್ಲ. ತಮಗೆ ಸಲ್ಲಬೇಕಾಗಿದ್ದ ಮೊತ್ತ ಕೇವಲ ಐನೂರು ರೂಪಾಯಿಗಳಾಗಿದ್ದರೂ, ಅನೇಕ ಸಾಮಾನುಗಳ ಜತೆಗೆ ಸಾವಿರಾರು ರೂಪಾಯಿ ಬೆಲೆಬಾಳುವ ಜಮಖಾನವನ್ನು ಸಹ ತೆಗೆದುಕೊಂಡು ಹೋಗುವುದು ಸರಿಯಲ್ಲವೆಂಬ ವಿಷಯ ಅವರ ಅಂತಃಕರಣವನ್ನು ತಾಕಲಿಲ್ಲ. ನಾನಂತು ಮೊದಮೊದಲು ಕೋಪ ಕ್ರೋಧಗ

ಳಿಂದ ಕುದಿಯುತ್ತಿದ್ದೆನು. ಕೊನೆಕೊನೆಗೆ ಈ ನೂತನಾನುಭವವೂ ಒಗ್ಗಿ ಹೋಯಿತು.

ತಂದೆ ಮತ್ತು ಜವಹರರು ಸೆರೆಮನೆಯಲ್ಲಿದ್ದಾಗ, ಕಾಂಗ್ರೆಸ್ ಮಹಾಧಿವೇಶನವು ಅಹಮದಾಬಾದಿನಲ್ಲಿ ಜರುಗಿತು. ಗಾಂಧಿಜೀಯವರು ಆಗ ಸೆರೆಮನೆಯಲ್ಲಿರಲಿಲ್ಲ. ಅಧಿವೇಶನಕ್ಕೆ ಬರಬೇಕೆಂದು ಅವರು ತಾಯಿ ಮತ್ತು ಕಮಲರನ್ನು ಕರೆದರು. ತಾಯಿ, ಕಮಲ ಮತ್ತು ಆಕೆಯ ಪುಟ್ಟಮಗಳು ಇಂದಿರಾ, ಮತ್ತು ನಾನು—ನಾಲ್ವರೂ ಹೋಗಲು ನಿಶ ಯಿಸಿಕೊಂಡೆವು. ಕೆಲವರು ದಾಯಾದಿಗಳು ನಮ್ಮ ಜತೆಯಲ್ಲಿ ಬಂದರು. ಅವರ ಗಂಡಂದಿರೆಲ್ಲ ಬಂದೀಖಾನೆಯಲ್ಲಿದ್ದರು. ನಮ್ಮ ಜೀವಮಾನದಲ್ಲಿ ಮೊಟ್ಟಮೊದಲು ನಾವು ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡಿದುದು ಅಂದೇ. ಆ ಅನುಭವ ನೂತನವಾದರೂ ಕೊನೆಗೆ ರೂಢಿಯಾಯಿತು. ಪ್ರಯಾಣ ಅಷ್ಟೇನೂ ಹಿತಕರವಾಗಿರಲಿಲ್ಲ, ಅಲ್ಲದೆ ತುಂಬಾ ದೀರ್ಘವಾಗಿತ್ತು. ಅದು ನನಗಂತು ಸುಖದಾಯಕವಾಗಿತ್ತು. ಅದರಲ್ಲಿಯೂ ನಾವು ಕಲಿಯಬೇಕಾದುದಿತ್ತು. ಜನತೆ ಗಾಂಧಿಜೀಯಲ್ಲಿಯೂ ಇತರ ಕಾಂಗ್ರೆಸ್‌ಮುಖಂಡರಲ್ಲಿಯೂ ಎಷ್ಟು ರೂಢಮೂಲವಾದ ವಿಶ್ವಾಸ ವಾತ್ಸಲ್ಯಗಳನ್ನಿಟ್ಟಿತ್ತೆಂಬುದನ್ನು ಆಗ ನಾನು ಮೊದಲು ಬಾರಿ ಮನಗಂಡೆನು. ಹೊತ್ತು ಮೀರಿರಲಿ ಇಲ್ಲವೆ ಮುಂಚಿತವಾಗಿರಲಿ ಪ್ರತಿಯೊಂದು ನಿಲ್ದಾಣದಲ್ಲಿಯು ಜನರ ಗುಂಪು ನಮ್ಮ ಪೆಟ್ಟಿಗೆಯ ಸುತ್ತ ಮುತ್ತ ಕಿಕ್ಕಿರಿದಿರುತ್ತಿತ್ತು. ಹೂವು ತಿಂಡಿಗಳ ರಾಶಿಯನ್ನೇ ನಮ್ಮ ಮುಂದೆ ಸುರಿಯುತ್ತಿದ್ದರು. ಸ್ವರಾಜ್ಯ ಸಂಪಾದನೆಗಾಗಿ ನಾಯಕರು ಮಾಡುತ್ತಿದ್ದ ತ್ಯಾಗಗಳನ್ನು ಮೆಚ್ಚಿದರು; ಆ ಮೆಚ್ಚಿಗೆಯನ್ನು ನೂರಾರು ಸರಳ ರೀತಿಗಳಲ್ಲಿ ಪ್ರದರ್ಶಿಸಲು ಪ್ರಯತ್ನಿಸುತ್ತಿದ್ದರು. ಪರಕೀಯರ ವಜ್ರಬಂಧನದಿಂದ ಅವರನ್ನು ಬಿಡುಗಡೆಮಾಡಲು ನಾವು ಶ್ರಮಿಸುತ್ತಿರುವುದಾಗಿ ಅವರು ನಂಬಿದ್ದರು. ಜನತೆ ನಮ್ಮ ಮೇಲೆ ಸೂಸುತ್ತಿದ್ದ ನಿಷ್ಕಳಂಕಪ್ರೇಮ ದೃಢವಿಶ್ವಾಸಗಳನ್ನು ಕಂಡು ವಿಸ್ಮಿತಳಾದೆನು. ತಮ್ಮ ಭವಿಷ್ಯತ್ ನಿರ್ಮಾಣದ ಹೊಣೆಗಾರಿಕೆಯನ್ನು ಕೃಷಾಂಗ ವ್ಯಕ್ತಿಯ ಕೈಯಲ್ಲಿ ಬಿಡಲು ಅವರು ಸಿದ್ಧರಾಗಿದ್ದರು. ಆ ವ್ಯಕ್ತಿಯೇ ಗಾಂಧಿಜೀ.

ಎಂದೆಂದಿಗು ಮರೆಯಲಾಗದ ಪ್ರಯಾಣ ಮುಗಿದನಂತರ ಸಬರ ಮತಿ ಆಶ್ರಮವನ್ನು ಸೇರಿದೆವು. ಆಶ್ರಮದ ವಿಚಾರವಾಗಿ ಬೇಕಾದಷ್ಟು ವಿಸ್ಮಯಗಳನ್ನು ಕೇಳಿದ್ದೆವೇ ಹೊರತಾಗಿ 'ಏನನ್ನೂ ತಿಳಿದುಕೊಂಡಿರ ಲಿಲ್ಲ. ಗಾಂಧಿಜೀಯವರು ನಮ್ಮನ್ನು ಅತ್ಯಂತ ವಾತ್ಸಲ್ಯದಿಂದ ಸ್ವಾಗತಿ ಸಿದರು. ತಂದೆ ಮತ್ತು ಜವಹರರ ಕ್ಷೇಮಸಮಾಚಾರಗಳನ್ನು ಕೇಳಿದ ನಂತರ, ನಾವು ಇಳಿದುಕೊಳ್ಳಲು ಕೋಣೆಗಳನ್ನು ತೋರಿಸುವಂತೆ ಯಾರಿಗೋ ಹೇಳಿದರು. ನಿರಲಂಕೃತವೂ, ವಿಶೇಷ ಸೌಲಭ್ಯಶೂನ್ಯವೂ ಆದ ವಿದ್ಯಾರ್ಥಿನಿಲಯದಂತಹ ಮಂದಿರವೊಂದರಲ್ಲಿ ನಾವು ಇಳಿದು ಕೊಂಡೆವು. ನಾವೆಲ್ಲರು ಒಂದೇ ಒಂದು ದೊಡ್ಡ ಕೋಣೆಯಲ್ಲಿ ಮಲಗ ಬೇಕಾಗಿತ್ತು. ತಾಯಿಯವರಿಗೆ ಮಾತ್ರ ಬೇರೆ ಕೊಟಡಿಯಿತ್ತು. ಡಿಸೆಂಬರ್ ತಿಂಗಳ ಕೊರೆವ ಚಳಿಯಾದರೂ, ಬೆಳಗ್ಗೆ ನಾಲ್ಕು ಘಂಟೆಗೆ ಎದ್ದು, ಪ್ರಾರ್ಥನೆಯನ್ನು ಮುಗಿಸಿ, ಸ್ನಾನಮಾಡಿ, ಬಟ್ಟೆಗಳನ್ನು ಚೊಕ್ಕಟಮಾಡಿಕೊಳ್ಳಬೇಕಾಗಿತ್ತು. ಅನಂತರ ಬಾಪುವಿನೊಡನೆ ಸ್ವಲ್ಪ ಕಾಲವನ್ನು ಕಳೆದರೆ, ಉಳಿದ ವೇಳೆಯನ್ನು ನಮ್ಮ ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಳ್ಳಬಹುದಾಗಿತ್ತು. ಮೊದಮೊದಲು ಒಂದೆರಡು ದಿನಗಳ ತನಕ ಹೊತ್ತಿಗೆಮುಂಚೆ ಏಳುವುದು ಕಠಿಣವಾಯಿತು. ಆದರೆ ತೊಂದರೆಗೆ ತಕ್ಕ ಪ್ರಯೋಜನ ಇಲ್ಲದೆ ಇರಲಿಲ್ಲ. ಸಬರಮತಿಯ ದಡ ಗಳ ಮೇಲೆ ಜರುಗುತ್ತಿದ್ದ ಪ್ರಾರ್ಥನಾಗೋಷ್ಠಿಗಳು ಆಪ್ಯಾಯಮಾನ ವಾಗಿದ್ದುವು. ಒಂದು ದಿನವಾದರು ಅವುಗಳನ್ನು ಕಳೆದುಕೊಳ್ಳಲು ಇಷ್ಟ ವಿರಲಿಲ್ಲ.

ಅಲ್ಲಲ್ಲಿ ಚೆದರಿಹೋಗಿದ್ದ ಹಲವಾರು ಸಣ್ಣ ಸಣ್ಣ ಗುಡಿಸಲುಗಳು ಸೇರಿ ಆಶ್ರಮವಾಗಿತ್ತು. ಕೇಂದ್ರಸ್ಥಾನದಲ್ಲಿದ್ದ ಪ್ರಧಾನ ಕುಟೀರವೇ ಬಾಪುವಿನದು. ಇತರ ಗುಡಿಸಲುಗಳಲ್ಲಿ ಮಹದೇವ ದೇಶಾಯಿ, ಗಾಂಧಿಜೀಯವರ ದಾಯಾದಿಗಳ ಮತ್ತು ಇತರರು ಇರುತ್ತಿದ್ದರು. ಒಂದೊಂದು ಗುಡಿಸಿಲಿನಲ್ಲಿ ಅನೇಕ ಕುಟುಂಬಗಳು ಇರುತ್ತಿದ್ದುದುಂಟು. ಸಾಮಾನ್ಯವಾಗಿ ಪ್ರತಿಯೊಬ್ಬರು ನೆಲದಮೇಲೆ ಮಲಗುತ್ತಿದ್ದರು. ಇದು ನನಗೆ ಅಹಿತವಾಗಿ ಕಂಡುಬಂದರೂ, ಕೊನೆ ಕೊನೆಗೆ ಒಗ್ಗಿಹೋಯಿತು.

ನಮ್ಮ ಆಹಾರವಂತು ಅತಿ ಸರಳವಾಗಿತ್ತು. ಅದರಲ್ಲಿ ಮಸಾಲೆಯ ವಾಸನೆಯಾಗಲೀ, ರುಚಿದಾಯಕವಾದ ಸಂಭಾರ ಪದಾರ್ಥಗಳಾಗಲೀ ಇರುತ್ತಿರಲಿಲ್ಲ. ಅದು ಬೇಯಿಸಿದ ಬರಿಯ ಆಹಾರ ಮಾತ್ರ ಮೊದ ಮೊದಲು ಅದನ್ನು ತಿನ್ನಲು ಕಷ್ಟವಾಯಿತು. ನನಗಂತು ಹಸಿವು ಯಾವಾಗಲು ಹಿಂಗುತ್ತಿರಲಿಲ್ಲ ಎಂದಿಗೆ ಮನೆಗೆ ಹೋಗಿ ಹೊಟ್ಟೆಯ ತುಂಬ ಉಣ್ಣುವುದೆಂದು ಹಾರೈಸಿಕೊಂಡಿದ್ದೆನು.

ಆಶ್ರಮದಲ್ಲಿ ನಮ್ಮ ಬಟ್ಟೆಗಳನ್ನು ನಾವೇ ಒಗೆದುಕೊಳ್ಳಬೇಕಾಗಿತ್ತು. ದಪ್ಪ ನೂಲಿನ ಖಾದಿ ಬಟ್ಟೆಯನ್ನು ಒಗೆಯುವುದು ಸುಲಭವಾಗಿರಲಿಲ್ಲ. ಆಗಿನ ಕಾಲದಲ್ಲಿ ನಮ್ಮ ಸೀರೆಗಳಂತು ಮಿತಿಮೀರಿ ಒರಟಾಗಿದ್ದುವು. ಮುಪ್ಪಿನ ದಾಯಾದಿಯೊಬ್ಬರ ಮತ್ತು ತಾಯಿಯವರ ಬಟ್ಟೆಗಳನ್ನು ಒಗೆದುಕೊಡಲು ಒಬ್ಬ ಚಿಕ್ಕ ಹುಡುಗನನ್ನು ಗೊತ್ತುಮಾಡಿದ್ದರು. ಉಳಿದ ನಾವೆಲ್ಲರು ನಮ್ಮ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕಾಗಿತ್ತು. ನಮ್ಮ ಪ್ರಥಮ ಪ್ರಯತ್ನಗಳು ಸಾಕಾದಷ್ಟು ಜಯಪ್ರದವಾಗಿರಲಿಲ್ಲ; ಆದರೆ ಮನೆಗೆ ಹಿಂದಿರುಗುವವೇಳೆಗೆ ನಮ್ಮ ಗುಂಪಿನಲ್ಲಿ ಕೆಲವರು ಬಟ್ಟೆಗಳನ್ನು ಒಗೆಯುವುದರಲ್ಲಿ ಪ್ರವೀಣೆಯರಾಗಿದ್ದರು. ನಾನು ಹಾಗಾಗಲಿಲ್ಲ.

ಅಹಮ್ಮದಾಬಾದಿನಲ್ಲಿ ಹದಿನೈದು ದಿನಗಳು ಕಳೆದನಂತರ ನಾವು ಮನೆಯ ಕಡೆಗೆ ತಿರುಗಿದೆವು. ದಾರಿಯ ಅನುಭವಗಳು ಹೋಗುವಾಗ ಇದ್ದಂತೆಯೇ ಇದ್ದವು. ಆಶ್ರಮದ ವಾಸ ಮತ್ತು ಬಾಪುವಿನ ಹೃದಯ ಸಂಪರ್ಕಗಳಂತು ದಿವ್ಯಾನುಭವಗಳು. ಆ ಅನುಭವಗಳು ನನ್ನ ನೆನಪಿನಲ್ಲಿ ಅಚ್ಚಳಿಯದೆ ನಿಂತಿವೆ. ಕೇಲವು ಜನರು ಬಾಪುವಿನ ಹತ್ತಿರ ಬಂದು ಸ್ವಂತವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವನ್ನು ಕೇಳುತ್ತಿದ್ದರು. ಅವರು ಹಾಗೆ ಮಾಡುತ್ತಿದ್ದುದು ಸರಿದೋರಲಿಲ್ಲ. ವೈಯಕ್ತಿಕ ಸಮಸ್ಯೆಗಳ ವಿಷಯದಲ್ಲಿ ಬಾಪು ಏಕೆ ಬುದ್ಧಿ ಹೇಳುತ್ತಿದ್ದರೆಂಬುದು ನನಗೆ ಅರ್ಥವಾಗಲಿಲ್ಲ. ಸಲಹೆಗಳು ನಿರೀಕ್ಷಿಸಿದಂತೆ ಪರಿಣಾಮಕಾರಿಯಾಗದಿದ್ದಲ್ಲಿ ಬಾಪು ದೂಷಣೆಗೆ ಗುರಿಯಾಗುತ್ತಿದ್ದರು.

ಮೊದಲನೆಯ ಸಾರಿ ತಂದೆ ಮತ್ತು ಜವಹರರಿಗೆ ಆರು ತಿಂಗಳು

ಕಠಿಣ ಶಿಕ್ಷೆ ವಿಧಾಯಕವಾಗಿತ್ತು. ನಾವು ಅಹಮದಾಬಾದಿನಿಂದ ಹಿಂದಿರುಗಿದ ತಕ್ಷಣವೇ ಜವಹರನ ಬಿಡುಗಡೆಯಾಯಿತು. ಅವನು ಶಿಕ್ಷೆಯನ್ನು ಅನುಭವಿಸಿದ್ದುದು ಮೂರು ತಿಂಗಳು ಮಾತ್ರ. ಆದರೆ ಅವನು ಹೊರಗಡೆ ಬಹಳ ದಿನಗಳಿರಲಿಲ್ಲ. ಕೇವಲ ಆರು ವಾರಗಳೊಳಗಾಗಿ ಅವನು ಮತ್ತೆ ಸೆರೆಮನೆಯೊಳಗಿದ್ದನು. ಅಂದಿನಿಂದ ಸೆರೆಮನೆಗೆ ಹೋಗಿ ಬರುವುದೆಂದರೆ ನಮ್ಮ ಮನೆಯಲ್ಲಿ ಹಲವರಿಗೆ ಅಚಲವಾದ ರೂಢಿಯಾಗಿದೆ.

ದಿನಗಳ ಮೇಲೆ ದಿನಗಳು, ತಿಂಗಳುಗಳ ಮೇಲೆ ತಿಂಗಳುಗಳುರುಳಿದಂತೆಲ್ಲ ಬಾಳೂ ಸಾಗಿತು. ನಾನು ಮನೆಯಲ್ಲಿಯೇ ಓದಿಕೊಳ್ಳುತ್ತಿದ್ದೆನು. ಸೆರೆಮನೆಗಳಿಗೆ ಆಗಾಗ್ಗೆ ಭೇಟಿಕೊಡುತ್ತಿದ್ದುದನ್ನುಳಿದು ಬೇರೆಲ್ಲಿಯೂ ಹೋಗುತ್ತಿರಲಿಲ್ಲ. ೧೯೨೩ನೆಯ ಇಸವಿಯಲ್ಲಿ ರಾಜಕೀಯ ಖೈದಿಗಳೆಲ್ಲರು ಬಿಡುಗಡೆಹೊಂದಿದರು. ತಂದೆ ಮತ್ತು ಜವಹರರನ್ನು ಪುನಃ ನೋಡುವುದೆಂದರೆ ಮತ್ತು ಬಹಳ ದಿನಗಳಿಂದ ಮೌನಾವಸ್ಥೆಯನ್ನು ತಾಳಿದ್ದ ಮನೆಯಲ್ಲಿ ಅನುರಣಿತವಾಗುವ ತಂದೆಯು ಸರ್ವವ್ಯಾಪಕವಾದ ನಗುವನ್ನು ಕೇಳುವುದೆಂದರೆ ಅತ್ಯಾನಂದವಾಗುತ್ತಿತ್ತು. ಪುನಃ ಆನಂದಭವನದಲ್ಲಿ ಯಥಾಕ್ರಮ ಜೀವನದ ಪ್ರಶಾಂತತೆಯು ಛಾಯೆ ತಲೆದೋರಿತು.

ಹೊಂಬಿಸಿನಲಿ ನಲಿನಲಿದು ಬೊಂಬೆಯೊಡನಾಡುತಿಹ
ಕಂದನೆಡೆ ಹೊಂಬಯಕೆಗೆ ಎಣೆಯಪ್ಪುದೀ ಲೋಕ!
ಎಸಿತಗಲ ಕಾಂಬುದದು ಸೊಡರ ತಸಿವೆಳಗಿನಲಿ ;
ಗತಕಾಲದೆದುರಿನಲಿ ಮೇಣದುವೆ ಏನ್ ಕಿರಿದು!

ಚಾರ್ಲ್ಸ್ ಬೋದಿಲ್ಯೆರ್

೧೯೨೩ನೆಯ ಇಸವಿಯ ಕೊನೆಯಭಾಗದಲ್ಲಿ ನಾಭಾ ಸಂಸ್ಥಾನದಲ್ಲಿ ಜವಹರನು ಬಂಧಿತನಾದನು. ಬಿಡುಗಡೆ ಹೊಂದಿ ಮನೆಗೆ ಹಿಂತಿರುಗಿದ ಕೆಲವುದಿನಗಳಲ್ಲಿಯೇ ಟೈಫಾಯಿಡ್ ಜ್ವರಪೀಡಿತನಾಗಿ ಸುಮಾರು ಒಂದು ತಿಂಗಳಕಾಲ ವಿಷಮಾವಸ್ಥೆಯಲ್ಲಿದ್ದನು. ಅವನು ಗುಣಮುಖ ನಾದ ಮೇಲೆ ಸಮಾಧಾನದಿಂದ ಉಸಿರೆಳೆದೆವು.

ಸಾಮಾನ್ಯವಾಗಿದ್ದ ಸೆರೆಮನೆಯ ವಾಸ ಕೆಲವು ಕಾಲ ತಪ್ಪಿದುದ ರಿಂದ ನಾವು ಒಬ್ಬರನ್ನೊಬ್ಬರು ಹೆಚ್ಚು ಅರಿತುಕೊಳ್ಳಲನುಕೂಲ ವಾಯಿತು. ಗಯಾ ಕಾಂಗ್ರೆಸ್ ಅಧಿವೇಶನ ಮುಕ್ತಾಯವಾದನಂತರ ತಂದೆಯವರೂ, ಸಿ. ಆರ್. ದಾಸ್‌ರವರೂ ಸೇರಿ ಸ್ವರಾಜ್ಯಪಂಗಡದ ಭಾವನೆಯನ್ನು ಗ್ರಹಿಸಿದರು. ಆ ಪಕ್ಷದ ಮೊದಲನೆಯ ಸಭೆ ಆನಂದ ಭವನದಲ್ಲಿ ಸೇರಿತು. ಶ್ರೀ ಸಿ. ಆರ್. ದಾಸರು ಅಧ್ಯಕ್ಷರಾದರು ; ತಂದೆ ಯವರು ಪ್ರಧಾನ ಕಾರ್ಯದರ್ಶಿಯಾದರು.

೧೯೨೫ನೆಯ ಇಸವಿಯ ಜೂನ್ ತಿಂಗಳಲ್ಲಿ ಸಿ. ಆರ್ ದಾಸರು ಸ್ವರ್ಗಸ್ಥರಾದರು. ಸಿ. ಆರ್. ದಾಸರು ತಂದೆಯವರ ನಂಬುಗೆಯ ಸಹೋದ್ಯೋಗಿಯಾಗಿದ್ದರಲ್ಲದೆ ಆಪ್ತ ಮಿತ್ರರೂ ಆಗಿದ್ದರು. ಅವರ ಮರಣ ಸಮಾಚಾರದಿಂದ ತಂದೆಯವರಿಗೆ ಸಿಡಿಲುಬಡಿದಂತಾಯಿತು. ತಂದೆಯವರು ಸ್ವರಾಜ್ಯ ಪಕ್ಷದ ಅಧ್ಯಕ್ಷರಾಗಿ ಚುನಾಯಿತರಾದರು. ಪ್ರಜಾಪ್ರತಿನಿಧಿ ಸಭೆಯ ಕಾರ್ಯಕಲಾಪಗಳಿಂದ ಅವರಿಗೆ ಬಿಡುವೇ ಇರಲಿಲ್ಲ. ವಿರೋಧಪಕ್ಷದ ಮತ್ತು ಸ್ವರಾಜ್ಯಪಂಗಡದ ನಾಯಕರಾಗಿ ದ್ದುದರಿಂದ ಅವರು ಗುರುತರವಾದ ಭಾರವನ್ನು ಹೊರಬೇಕಾಯಿತು. ಕೆಲವು ಸುಧಾರಣೆಗಳ ವಿಷಯದಲ್ಲಿ ಸರ್ಕಾರದ ಮನೋಭಾವ ಸರಿ

ಯಾಗಲ್ಲದುದರಿಂದ, ೧೯೨೯ನೆಯ ಇಸವಿಯ ದೆಹಲಿಯ ಅಧಿವೇಶನದಲ್ಲಿ ಮೊದಲೇ ನಿರ್ಧರಿಸಿಕೊಂಡಿದ್ದಂತೆ ಸ್ವರಾಜ್ಯಪಕ್ಷ ತಂದೆಯವರ ನಾಯಕತ್ವದಲ್ಲಿ ಸಭಾತ್ಯಾಗವಮಾಡಿತು. ಆಗ ತಂದೆಯವರು ಮಾಡಿದ ಭಾಷಣ ಉಜ್ವಲವಾಗಿತ್ತು. ಆ ಸಮಯದಲ್ಲಿ ಅನೇಕವೇಳೆ ಒಂದೊಂದು ವಾರವೋ ಹೆಚ್ಚಾಗಿಯೋ ತಂದೆಯವರೊಡನೆ ದೆಹಲಿಯಲ್ಲಿದ್ದು ಅಧಿವೇಶನದ ಕಾರ್ಯಕಲಾಪಗಳನ್ನು ನೋಡುತ್ತಿದ್ದೆನು. ಗಾಂಭೀರ್ಯ ಶ್ರೀಮಂತತೆಗಳಿಂದ ಕೂಡಿ, ಸ್ವಚ್ಛವಾದ ಬಿಳಿಯ ಖಾದಿಯ ಉಡುಪಿನಲ್ಲಿ ವಿರಾಜಿಸುತ್ತಿದ್ದ ತಂದೆಯವರನ್ನು ಕಂಡರೆ ನನಗೆ ಅಮಿತವಾದ ಹೆಮ್ಮೆ. ಜಟಿಲಸಮಸ್ಯೆಗಳನ್ನು ಬಿಡಿಸುವ ಮತ್ತು ಇತರರು ಕೇಳುತ್ತಿದ್ದ ಪ್ರಶ್ನೆಗಳಿಗೆ ಪ್ರತ್ಯುತ್ತರಕೊಡುವ ಬಗೆಯನ್ನು ನೋಡಿ ಬೆರಗಾಗುತ್ತಿದ್ದೆನು. ಯಾವುದಾದರೂ ವಿಷಯದಲ್ಲಿ ತಮ್ಮ ಪಂಗಡ ಒಂದು ನಿರ್ಧಾರಕ್ಕೆ ಬಂದಿತೆಂದರೆ, ಯಾರಿಗೂಸಗ್ಗದೆ ಅದನ್ನು ಕೊನೆಯ ತನಕ ಸಾಧಿಸುತ್ತಿದ್ದರು. ತಮ್ಮ ಸಹೋದ್ಯೋಗಿಗಳು ಅಪ್ರದರ್ಶನೀಯ ದೌರ್ಬಲ್ಯವನ್ನಾಗಲೀ ದೋಷವನ್ನಾಗಲೀ ವ್ಯಕ್ತಪಡಿಸಿದಾಗ, ಅವರನ್ನು ನಿಷ್ಕರುಣತೆಯಿಂದ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಈ ರೀತಿ ನಿರಂಕುಶತೆಯಿಂದ ವರ್ತಿಸುತ್ತಿದ್ದರೂ, ಅವರನ್ನು ನೋಡಿದವರು ಮತ್ತು ಅರಿತವರು ಅವರನ್ನು ವಿಶೇಷವಾಗಿ ಗೌರವಿಸುತ್ತಿದ್ದರಲ್ಲದೆ ಪ್ರೀತಿಸುತ್ತಲೂ ಇದ್ದರು. ಅವರನ್ನು ಕಂಡರೆ ಅವರ ಹಗೆಗಳಿಗಂತು ಅತಿಭೀತಿ, ಮತ್ತು ಅವರು ತಂದೆಯವರಿಂದ ದೂರವಿರಲುಯತ್ನಿಸುತಿದ್ದರು.

ಬಿಸಿ ಬಿಸಿ ಚರ್ಚೆನಡೆಯುತ್ತಿದ್ದಾಗ ಅಧಿವೇಶನಗಳನ್ನು ನೋಡುವುದೆಂದರೆ ನನಗೆ ತುಂಬಾ ಆಸೆ. ಕೆಲವುವೇಳೆ ತಂದೆಯವರು ಔತಣಗಳನ್ನಾಗಲೀ, ಸಂತೋಷಕೂಟವನ್ನಾಗಲೀ ಏರ್ಪಡಿಸಿದಾಗ, ತಾಯಿಯವರಿಲ್ಲದುದರಿಂದ ನಾನೇ ಯಜಮಾನ್ಯವನ್ನು ವಹಿಸಬೇಕಾಗಿತ್ತು. ಅತಿಥಿಗಳನ್ನು ಸ್ವಾಗತಿಸುವ ಸಂಭ್ರಮದಲ್ಲಿ ತಂದೆಯವರಿಗೆ ನೆರವಾಗುವುದೆಂದರೆ ಎಷ್ಟು ಆನಂದ!

ಸುಪ್ರಸಿದ್ಧ ಗಿರಣಿಮಾಲೀಕರಾದ ನನ್ನ ಪತಿಯ ಚಿಕ್ಕಪ್ಪಂದಿರು,

ಕಸ್ತೂರಿಭಾಯಿ ಲಾಲಾಭಾಯಿಯವರು, ಸಹ ಆಗಿನಕಾಲದಲ್ಲಿ ಪ್ರತಿನಿಧಿಸಭೆಯ ಸದಸ್ಯರಾಗಿದ್ದರು. ನನ್ನ ಪತಿ ರಾಜಾರವರು ಕೆಲವುವೇಳೆ ಅವರ ಜೊತೆಯಲ್ಲಿಯೇ ಇರುತ್ತಿದ್ದರು. ರಾಜಾರವರು ನನ್ನನ್ನೊಮ್ಮೆ ಅಲ್ಲಿಯೇ ನೋಡಿದ್ದು. ಆಗಲೇ ನನ್ನನ್ನು ಮದುವೆಯಾಗಲು ಅವರು ನಿರ್ಧರಿಸಿಕೊಂಡ ಹಾಗೆ ಈಗಲೂ ಹೇಳುತ್ತಿರುತ್ತಾರೆ. ದುರದೃಷ್ಟವಶಾತ್ ನಾನವರನ್ನು ನೋಡಿದ ನೆನಪಿಲ್ಲ. ಈ ವಿಷಯವಂತು ರಾಜಾರವರನ್ನು ಈಗಲೂ ಒಮ್ಮೊಮ್ಮೆ ಬಾಧಿಸುತ್ತಿರುತ್ತದೆ. ಮದುವೆಯಾಗುವುದಕ್ಕೆ ಎಂಟುವರ್ಷಗಳು ಮುಂಚಿತವಾಗಿ ಆ ರೀತಿ ನಿರ್ಧರಿಸಿದುದಕ್ಕಾಗಿ ನನಗಂತು ಸಂತೋಷವೇ !

೧೯೩೫ನೆಯ ಇಸವಿಯ ಕೊನೆಕೊನೆಗೆ ಕಮಲಳು ಕ್ರೂರವಾದ ರೋಗಕ್ಕೆ ಗುರಿಯಾದಳು. ಅನೇಕವರ್ಷಗಳಿಂದ ಅವಳು ಬೇನೆಯಿಂದ ನರಳುತ್ತಿದ್ದುದರಿಂದ, ಜವಹರ ಮತ್ತು ತಂದೆತಾಯಿಯರು ವ್ಯಾಕುಲ ಪೀಡಿತರಾದರು. ಚಿಕಿತ್ಸೆಗಾಗಿ ಅವಳನ್ನು ಸ್ವಿಟ್ಜರ್‌ಲೆಂಡಿಗೆ ಕರೆದುಕೊಂಡುಹೋಗುವುದು ಒಳ್ಳೆಯದೆಂದು ಪಂಡಿತರು ಸೂಚಿಸಿದರು. ೧೯೩೬ನೆಯ ಇಸವಿ ಮಾರ್ಚಿತಿಂಗಳಲ್ಲಿ ಹೆಂಡತಿ ಮತ್ತು ಮಗಳು ಇಂದಿರೆಯನ್ನೂ ಕೂಡಿಕೊಂಡು ಜವಹರನು ಯೂರೋಪಿಗೆ ತೆರಳಿದನು. ಅವರ ಜತೆಯಲ್ಲಿ ನನ್ನ ಅಕ್ಕ ಸ್ವರೂಪಳು ಅವಳ ಪತಿ ರಣಜಿತ್‌ರವರೂ ಹೊರಟರು. ವಿಶ್ರಾಂತಿಗಾಗಿ ಅಲ್ಲಿಗೆ ಹೋಗಬೇಕೆಂದು ಅವರು ಬಹಳ ದಿನಗಳ ಹಿಂದೆಯೇ ಯೋಚಿಸಿಕೊಂಡಿದ್ದರು.

ಅದೇ ವರ್ಷ ಜೂನ್‌ತಿಂಗಳಲ್ಲಿ ಯೂರೋಪಿಗೆ ಹೋಗಬೇಕೆಂದು ತಂದೆಯವರೂ ಯೋಚಿಸಿಕೊಂಡಿದ್ದರು. ಅವರಜತೆಯಲ್ಲಿ ನಾನೂ ಹೊರಡಬೇಕೆಂದು ಗೊತ್ತಾಗಿತ್ತು. ಅನೇಕ ವರ್ಷಗಳಿಂದ ಅವರಿಗೆ ವಿರಾಮವೇ ಇರಲಿಲ್ಲ. ನಿರಂತರ ಪರಿಶ್ರಮದ ಪರಿಣಾಮವಾಗಿ ಸ್ವಲ್ಪ ವಿಶ್ರಾಂತಿಯೂ, ಹವಾಬದಲಾವಣೆಯೂ ಆಗತ್ಯವೆಂದು ಅವರು ಭಾವಿಸಿದ್ದರು.

ದುರಾದೃಷ್ಟವಶಾತ್ ಕೊನೆಯ ಗಳಿಗೆಯಲ್ಲಿ ಅವರು ತಮ್ಮ ಪ್ರಯಾಣವನ್ನು ನಿಲ್ಲಿಸಬೇಕಾಯಿತು. ಪ್ರಾಮುಖ್ಯವಾದುದೊಂದು

ಮೊಕದ್ದಮೆಯನ್ನು ಮುಂದುವರಿಸಲು ಆಗದಿದ್ದುದೇ ಇದಕ್ಕೆ ಕಾರಣ ವಕೀಲಿವೃತ್ತಿಯಲ್ಲಿದ್ದಾಗಲೆ ಈ ಮೊಕದ್ದಮೆಯನ್ನು ಅವರು ವಹಿಸಿಕೊಂಡಿದ್ದರು. ನ್ಯಾಯಾಸ್ಥಾನಕ್ಕೆ ಪುನಃ ಹೋಗಲು ಇಷ್ಟವಿಲ್ಲದಿದ್ದರೂ. ಹಳೆಯ ಕಕ್ಷಿಗಾರರಿಗೆ ನೆರವಾಗದಿರಲು ಅವರ ಮನಸ್ಸು ಒಪ್ಪಲಿಲ್ಲ.

ತಂದೆಯವರು ವಕೀಲವೃತ್ತಿಯನ್ನು ಬಿಟ್ಟನಂತರ, ಅವರ ಹಳೆಯ ಕಕ್ಷಿಗಾರರಲ್ಲಿ ಹಲವರು ತಮಗಾಗಿ ಅಲ್ಪಸ್ವಲ್ಪ ವಿನಾಯಿತಿ ತೋರಿಸಿ, ತಮ್ಮ ಮೊಕದ್ದಮೆಯನ್ನು ಮುಂದುವರಿಸುವಂತೆ ಬೇಡಿಕೊಳ್ಳುತ್ತಿದ್ದರು. ಆದರೆ ತಂದೆಯವರು ಅವರ ಬೇಡಿಕೆಗಳನ್ನು ಸದಾ ತಿರಸ್ಕರಿಸುತ್ತಿದ್ದರು. ಅಳತೆಮೀರಿ ಫೀಜನ್ನು ತೆರಲು ಅವರು ಸಿದ್ಧರಾಗಿದ್ದರೂ, ತಂದೆಯವರ ಮನಸ್ಸು ಒಡಂಬಡಲಿಲ್ಲ. ಒಮ್ಮೆ ಕಕ್ಷಿಗಾರನೊಬ್ಬನು ಯಾವುದೋ ಮೊಕದ್ದಮೆಗಾಗಿ ಒಂದುಲಕ್ಷ ರೂಪಾಯಿಗಳನ್ನು ಮುಂದಿರಿಸಿ, ತನ್ನ ಪರ ವಾದಿಸುವಹಾಗೆ ತಂದೆಯವರನ್ನು ಬೇಡಿಕೊಂಡನು. ತಂದೆಯವರು ಆ ಗಂಟಿನ ಕಡೆಗೆ ತಾತ್ಸಾರ ದೃಷ್ಟಿಯನ್ನು ಬೀರಿದರು. "ಮಗು, ಈ ಮೊಕದ್ದಮೆಯನ್ನು ವಹಿಸಿಕೊಳ್ಳುವುದು ನಿನಗೆ ಸೂಕ್ತವೆಂದು ತೋರುತ್ತದೆಯೋ?" ಎಂದು ಹತ್ತಿರವೇ ನಿಂತಿದ್ದ ನನ್ನನ್ನು ಕೇಳಿದರು. ನನಗೇನೂ ಹೊಳೆಯದೆ ತುಸುಹೊತ್ತು ಸಸಂಶಯಳಾಗಿದ್ದೆನು. ತಂದೆಯವರ ಕೈಲಿ ಸಾಕಾದಷ್ಟು ದುಡ್ಡಿಲ್ಲದ ವೇಳೆಯಲ್ಲಿ ಈ ಒಡ್ಡಿ ಮೋಪಾಗಿ ದೊರಕುತ್ತದೆಂಬ ಅಂಶ ಹೊಳೆದರೂ, ಆಗ ಅದನ್ನು ತೆಗೆದುಕೊಳ್ಳುವುದು ಸರಿಯಲ್ಲವೆಂದು ಕಂಡಿತು. 'ಅಪ್ಪಾಜೀ, ಇದನ್ನು ನೀವು ತೆಗೆದುಕೊಳ್ಳಬಾರದೆಂಬುದೇ ನನ್ನ ಅಭಿಮತ"ವೆಂದು ಒಂದೇ ಸಮನೆ ಉಸುರಿದೆನು. ನನ್ನ ನಿಶ್ಚಯವಾಣಿಯನ್ನು ಕೇಳಿದ ಅವರು ತುಂಬ ಹೆಮ್ಮೆಗೊಂಡು ನನ್ನ ಕೈಯನ್ನು ಕುಲುಕಿದರು; ಮತ್ತೆ ಅವರು ಕಕ್ಷಿಗಾರರ ಕಡೆಗೆ ತಿರುಗಿ "ನಿಮ್ಮ ಇಷ್ಟಾರ್ಥವನ್ನು ನೆರವೇರಿಸದಿರಲು ನನಗೆ ವ್ಯಥೆಯಾಗುತ್ತಿದೆ. ನನ್ನ ಮಗಳ ಅಭಿಮತವನ್ನು ಸಹ ಈಗತಾನೇ ತಿಳಿದುಕೊಂಡಿದ್ದೀರಿ" ಎಂದು ನುಡಿದುಬಿಟ್ಟರು. ತಮಗೆ ಅನುಗುಣಳಾದ ಮಗಳಾಗಿದ್ದೇನೆಯೋ ಇಲ್ಲವೆ ಪ್ರಲೋಭನಗಳಿಗೆ ಪರವಶಳಾಗಿ ತಂದೆಯ ಘನತೆಗೆ

ಕಳಂಕವನ್ನು ತರುವ ಮಗಳಾಗಿದ್ದೇನೆಯೋ ಎಂಬುದನ್ನು ಪರೀಕ್ಷಿಸಲು ತಂದೆಯವರು ಆ ರೀತಿ ಪ್ರಶ್ನಿಸಿದರೆಂದು ಅನಂತರ ಗೊತ್ತಾಯಿತು.

ಕುಟುಂಬವನ್ನು ಬಿಟ್ಟು ನಾನೆಂದೂ ಮನೆಯಿಂದ ದೂರ ಹೋಗಿರಲಿಲ್ಲ; ಇಲ್ಲವೆ ಒಂಟಿಯಾಗಿ ಪ್ರಯಾಣ ಮಾಡಿರಲಿಲ್ಲ. ನಾನು ಒಬ್ಬಂಟಿಗಳಾಗಿ ಯೂರೋಪಿಗೆ ತೆರಳುವುದೇ ಅಥವಾ ನನ್ನ ಪ್ರಯಾಣವನ್ನು ನಿಲ್ಲಿಸುವುದೇ, ತಂದೆಯವರಿಗೆ ಗೊತ್ತಾಗಲಿಲ್ಲ. ಅವರು ನನ್ನೊಡನೆ ಈ ವಿಷಯವನ್ನು ಪ್ರಸ್ತಾಪಿಸಿ, ನನಗೆ ಇಷ್ಟಬಂದಂತೆ ವರ್ತಿಸಬಹುದೆಂದು ಸೂಚಿಸಿದರು. ನನಗೇನೋ ಸಂಶಯ ಮೂಡಿತು. ಎರಡು ಬಯಕೆಗಳ ನಡುವೆ ನನ್ನ ಮನಸ್ಸು ತೂಗುಯ್ಯಾಲೆಯಾಯಿತು. ತಂದೆಯವರೊಡನೆ ಪ್ರಯಾಣಮಾಡಬೇಕೆಂದು ಅತ್ಯಾಶೆಯುಳ್ಳವಳಾಗಿದ್ದುದರಿಂದ ನಾನೊಬ್ಬಳೇ ಹೋಗುವುದು ಮನಸ್ಸಿಗೆ ಹಿಡಿಸಲಿಲ್ಲ. ಆದರೆ ಆ ಸಮಯವನ್ನು ಉಪಯೋಗಿಸಿಕೊಳ್ಳದಿದ್ದರೆ, ಹತ್ತಿರದಲ್ಲಿಯೇ ಅಂತಹ ಸನ್ನಿವೇಶ ಒದಗುವ ಸಂಭವ ಇರಲಿಲ್ಲ. ಅಂತು ಪ್ರಯಾಣ ಬೆಳೆಯಿಸಲು ನಿರ್ಧರಿಸಿದೆನು; ಅದು ವಿವೇಕಯುತವಾದ ನಿರ್ಧಾರವೆಂದೂ ಭಾವಿಸುತ್ತೇನೆ.

ತಾಯಿ ತುಂಬಾ ಸಂಕಟಕ್ಕೆ ಗುರಿಯಾದರು. ನನ್ನ ಮಾರ್ಗವನ್ನು ನಾನೇ ನಿರ್ಧರಿಸಿಕೊಳ್ಳಲು ಅವಕಾಶ ವಿತ್ತುದಕ್ಕಾಗಿ ತಂದೆಯ ವಿಷಯದಲ್ಲಿ ಅಸಮಾಧಾನಗೊಂಡರು. ಅಪರಿಚಿತವಾದ ವಿದೇಶಕ್ಕೆ ಹರೆಯದ ತರುಣಿ ಒಬ್ಬಂಟಿಗಳಾಗಿ ಪ್ರಯಾಣ ಮಾಡುವುದು ತರವಲ್ಲವೆಂದವರಿಗನ್ನಿಸಿತು. ನನ್ನ ಪ್ರಯಾಣವನ್ನು ನಿಲ್ಲಿಸಲು ಬಹಳ ಶ್ರಮಪಟ್ಟರು. ಅವರಿಗೆ ವ್ಯಥೆಯನ್ನುಂಟುಮಾಡಬೇಕೆಂಬ ಇಷ್ಟ ನನಗಿರಲಿಲ್ಲ; ಆದರೆ ನನ್ನ ಆಸೆ ಅತಿ ತೀವ್ರವಾಗಿತ್ತು. ಬೇಕಾದಷ್ಟು ವಾದವಿವಾದಗಳಾದ ನಂತರ, ಮೊಟ್ಟಮೊದಲು ನನ್ನ ಬಾಳಿನಲ್ಲಿ ಸಂಗಾತಿಯರಿಲ್ಲದೆ ಯೂರೋಪಿಗೆ ತೆರಳಿದೆನು. ಹೊರಡುವಾಗ ಅಲ್ಪಸ್ವಲ್ಪ ಭಯವೂ, ನೂತನ ಜೀವನಾಗಮನ ಕುತೂಹಲವೂ ನನ್ನನ್ನಾವರಿಸಿದುವು. ನಾನು ಒಂಟಿಯಾಗಿದ್ದುದರಿಂದ ಮೊದಮೊದಲು ಬೇಸರವಾಗು

ತ್ತಿತ್ತು; ಆದರೆ ಜಾಗ್ರತೆಯಾಗಿ ಗೆಳೆತನ ಸಂಪಾದಿಸಿಕೊಂಡೆನು. ಅಮೇಲಂತು ಹಡಗಿನ ಪ್ರಯಾಣ ಆಪ್ಯಾಯಮಾನವಾಗಿತ್ತು. ನನ್ನ ಬೆಂಗಾವಲಿಗೆ ಯಾರೂ ಇಲ್ಲದಿದ್ದುದರಿಂದ ಹಡಗಿನ ಕೆಲವರು ಗೆಳತಿಯರು ತಾವಾಗಿಯೇ ನನ್ನ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ಹೊತ್ತು ಕೊಂಡರು. ದೋಣಿಯಲ್ಲಿದ್ದ ಕೆಲವು ಮಂದಿ ತರುಣರೊಂದಿಗೆ ನಾನು ಮಾತಾಡುತ್ತಿದ್ದುದನ್ನು ಅವರು ಕಂಡಾಗ, ಅಪರಿಚಯಸ್ಥರೊಡನೆ ಗೆಳೆತನವನ್ನು ಸಂಪಾದಿಸುವುದು ಅಪಾಯಕರವೆಂದು ಒಂದು ಉಪನ್ಯಾಸ ವನ್ನೇ ಮಾಡುತ್ತಿದ್ದರು. ಪ್ರತಿರಾತ್ರಿ ಹತ್ತುಗಂಟೆಯ ಹೊತ್ತಿಗೆ ಮಲು ಗುತ್ತಿದ್ದೆನು. ಕೆಲವು ದಿನಗಳತನಕ ಈ ಕಾರ್ಯಕ್ರಮಕ್ಕೆ ತಲೆಬಾಗಿ ದರೂ, ಕೊನೆಗೆ ಅದನ್ನು ಅತಿಕ್ರಮಿಸಿದೆನು. ಇದರ ಪರಿಣಾಮವಾಗಿ, ಅನೇಕ ಬುದ್ಧಿವಾದಗಳ ಸುರಿಮಳೆಯನ್ನು, ಕೊಂಕುನೋಟಗಳನ್ನೂ ಸದ್ದಿಲ್ಲದೆ ಸಹಿಸಿಕೊಂಡಿರಬೇಕಾಗಿತ್ತು. ಯಾವ ತೊಂದರೆಯೂ ಇಲ್ಲದೆ ಈ ಪರೀಕ್ಷೆಯಲ್ಲಿ ಜಯಶೀಲಳಾದೆನು.

ಆ ಸಮಯದಲ್ಲಿ ಜವಹರನು ಜಿನೀವಾ ನಗರದಲ್ಲಿದ್ದನು. ಅವನು ನನ್ನನ್ನು ಬ್ರಿಂಡಸಿಯಲ್ಲಿ ಸಂಧಿಸಬೇಕಾಗಿತ್ತು. ರೈಲು ಸಿಕ್ಕ ಲಿಲ್ಲದುದರಿಂದ, ಆತ ಬರಲಿಲ್ಲ. ಒಂಟಿತನದ ಬೇಸರ ನನ್ನನ್ನು ವಿಪ ರೀತವಾಗಿ ಕಾಡುತ್ತಿತ್ತು. ನನ್ನೊಡನೆ ದೋಣಿಯಲ್ಲಿ ಪ್ರಯಾಣ ಮಾಡಿದ ಕೆಲವರು ಹೊಸಗೆಳೆಯರು ನನ್ನ ಹತ್ತಿರ ಇಲ್ಲದೆ ಇದ್ದಲ್ಲಿ, ನಾನು ಬಹಳವಾಗಿ ಸಂಕಟಪಡಬೇಕಾಗುತ್ತಿತ್ತು.

ಜವಹರನು ನೇಪಲ್ಸ್ ನಗರದಲ್ಲಿ ನನ್ನ ಜತೆ ಸೇರಿದನು. ನಾವು ಜಿನೀವಾನಗರಕ್ಕೆ ನೇರವಾಗಿ ಹೋಗದೆ, ದಾರಿಯಲ್ಲಿ ರೋಮ್, ಫ್ಲಾರೆನ್ಸ್ ಮೊದಲಾದ ಪಟ್ಟಣಗಳಿಗೆ ಭೇಟಿಯಿತ್ತೆವು. ನಾನು ಕಂಡ ಹಲವಾರು ವಸ್ತುಗಳಲ್ಲಿ ನನ್ನ ಮನಸ್ಸು ಸೆರೆಯಾಯಿತು. ರೋಮ್, ಫ್ಲಾರೆನ್ಸ್ ನಗರಗಳ ವಿಷಯವಾಗಿ ಸಾಕಾದಷ್ಟು ಓದಿದ್ದೆನು. ರೋಮ್ ನಗರದ ಗತವೈಭವದ ನೆನಪು ನನ್ನನ್ನು ಸದಾ ರೋಮಾಂಚನ ಗೊಳಿ ಸುತ್ತಿದೆ. ಈ ಪ್ರಯಾಣಕಾಲದಲ್ಲಿಯೇ ಜವಹರನ ವಿಷಯವಾಗಿ ನಾನು ತುಂಬ ತಿಳಿದುಕೊಂಡುದು. ಆತನು ನನಗೆ ಆದರ್ಶಮಿತ್ರ

ನಂತೆಯೂ, ಆನಂದದಾಯಕನಾದ ಮಾರ್ಗ ದರ್ಶಕನಂತೆಯೂ ಕಂಡನು. ಈಗವನು ಭಯಾನಕಸ್ವರೂಪನಾದ ದೊಡ್ಡ ಅಣ್ಣನಾಗಿರದೆ ಪ್ರೀತಿಪಾತ್ರನಾದ ಒಡನಾಡಿಯಾಗಿದ್ದನು. ನಾನು ಆತನ ಜತೆಯಲ್ಲಿ ಕಳೆದ ಕೆಲವು ದಿನಗಳು ನಿಜವಾಗಿಯೂ ಸುಖಮಯವಾಗಿದ್ದವು.

ಜಿನೀವಾದಲ್ಲಿ ನಾವು ಮಹಡಿಯೊಂದರ ಕೆಳಭಾಗದಲ್ಲಿ ಇಳಿದು ಕೊಂಡಿದ್ದೆವು. ಅಂತಹ ಚಿಕ್ಕಮನೆಯಲ್ಲಿ ನಾವೆಂದೂ ವಾಸಿಸಿರಲಿಲ್ಲ. ಆದರೂ ಮೊದಮೊದಲು ನಾನು ಹರ್ಷದಿಂದಿದ್ದೆನು. ಆ ಕೆಲವು ದಿನಗಳ ನಂತರ ಅದು ನನಗೆ ಹಿಡಿಸಲಿಲ್ಲ. ಆನಂದಭವನದ ದೊಡ್ಡ ಕೊಟಡಿಗಳು ಮತ್ತು ವಿಶಾಲವಾದ ಮೈದಾನಗಳು ನನ್ನ ಪಾಲಿಗೆ ಇಲ್ಲ ವಾದುವು. ನಾನು ಅಲ್ಲಿಗೆ ಹೋದ ಒಂದು ವಾರದೊಳಗಾಗಿ ಜವ ಹರನು ಜಿನೀವಾದ ಒಂದು ನಕ್ಷೆಯನ್ನು, ಇಂಗ್ಲಿಷ್–ಫ್ರೆಂಚ್ ಕೋಶ ವನ್ನು ಮತ್ತು ಬಸ್–ಟ್ರಾಂಗಳ ಚೀಟಿಗಳನ್ನುಳ್ಳ ಒಂದು ಪುಸ್ತಕ ವನ್ನು ತಂದುಕೊಟ್ಟನು. ನನ್ನ ವ್ಯವಹಾರಕ್ಕೆ ಅಷ್ಟೇ ಸಲಕರಣೆಗಳು ಸಾಕೆಂದೂ, ನನ್ನ ಕೆಲಸಗಳನ್ನು ನಾನೇ ಮಾಡಲು ಆರಂಭಿಸಿದರೆ ಎಲ್ಲವೂ ಸರಿಹೋಗುವುದೆಂದೂ, ಆತನು ಸೂಚನೆಯಿತ್ತನು. ಕಮಲಳು ಅನಾರೋಗ್ಯಳಾಗಿದ್ದನಿಮಿತ್ತ ಮನೆಯನ್ನು ಒಪ್ಪವಾಗಿಡುವ ಕಾರ್ಯ ವನ್ನು ನಾನೇ ಮಾಡಬೇಕೆಂದು ಗೊತ್ತಾಯಿತು. ಪ್ರಾರಂಭದಲ್ಲಿ ಆ ಕೆಲಸ ಸುಲಭವಾಗಿ ಕಾಣದಿದ್ದರೂ, ಕೊನೆಕೊನೆಗೆ ಅದು ಒಳ್ಳೆಯ ಶಿಕ್ಷಣವಾಗಿ ಪರಿಣಮಿಸಿದಲ್ಲದೆ ಅದಕ್ಕೆ ಒಗ್ಗಿಕೊಂಡೆನು. ನನಗೆ ಆ ಫ್ರೆಂಚ್ ಅತಿ ಸ್ವಲ್ಪವೇ ಬರುತ್ತಿತ್ತು. ನಾನು ಶಾಲೆಯಲ್ಲಿ ಕಲಿತಿದ್ದ ಅಲ್ಪಸ್ವಲ್ಪ, ಕಲಿಯದಿದ್ದಂತೆಯೇ ಸರಿ. ಅಣ್ಣನ ಕೊನೆಯ ಎಚ್ಚರಿಕೆ ಯಿಂದ ಸ್ವಲ್ಪ ಹಿಂಜರಿದರೂ, ಆತನೊಡನೆ ವಾದಿಸುವುದರಿಂದ ಪ್ರಯೋ ಜನವಿಲ್ಲವೆಂದು ಗೊತ್ತಾಯಿತು. ಆದುದರಿಂದ ನಾನು ನಮ್ರತೆಯಿಂದ ಬಾಗಿ ಕಠಿಣವಾದ ಕೆಲಸವನ್ನು ಸಾಧಿಸಲನುವಾದೆನು. ಮೊದಲು ಹರೆಯದವಳೂ, ಚಿತ್ತಾಕರ್ಷಕಳೂ ಆದ ಸ್ವಿಸ್ ತರುಣಿಯೊಬ್ಬಳಿಂದ ಫ್ರೆಂಚ್‌ಭಾಷೆಯನ್ನು ಕಲಿಯಲು ಆರಂಭಿಸಿದೆನು. ಕಾಲಕ್ರಮೇಣ ಆಕೆ ನನ್ನ ಸಲುಗೆಯ ಸಂಗಾತಿಯಾದಳು. ನಮ್ಮ ದಾದಿ ಮಾರ್ಗ

ರೆಟಳು ಗೃಹಕೃತ್ಯಕ್ಕೆ ಸಂಬಂಧಪಟ್ಟ ರಹಸ್ಯಗಳನ್ನೆಲ್ಲ ಹೇಳಿಕೊಟ್ಟಳು. ನಾವಿಬ್ಬರೂ ಸೇರಿ ಗೃಹವ್ಯಾಪಾರಗಳನ್ನು ಅಣಿಯಾಗಿ ನಡೆಯಿಸುತ್ತಿದ್ದೆವು. ಆಗಾಗ್ಗೆ ಸಣ್ಣಪುಟ್ಟ ತೊಂದರೆಗಳು ಉದ್ಭವಿಸುತ್ತಿದ್ದರೂ, ನಾನು ಮೊದಲು ಊಹಿಸಿಕೊಂಡ ಹಾಗೆ ಬಾಳು ಕಠಿಣವಾಗಿರಲಿಲ್ಲ.

ಜಿನೀವಾದಲ್ಲಿ ಅಂತರ್ರಾಷ್ಟ್ರೀಯ ಬೇಸಗೆಯ ಶಾಲೆಯೊಂದಿತ್ತು ಪ್ರಪಂಚದ ಎಲ್ಲಾ ಭಾಗಗಳಿಂದ ಜನರು ಅಲ್ಲಿ ಗುಂಪುಕೂಡುತ್ತಿದ್ದರು; ಅದರಲ್ಲಿಯೂ ಬೇಸಗೆಯ ಸಮಯಲ್ಲಿ ವಿದ್ಯಾರ್ಥಿಗಳು ಕಿಕ್ಕಿರಿದಿರುತ್ತಿದ್ದರು. ಭಾರತೀಯರು, ಚೀಣಿಯರು, ಸಿಂಹಳೀಯರು, ಅಮೇರಿಕಾದವರು, ಫ್ರೆಂಚರು, ಜರ್ಮನರು ಮತ್ತು ಇನ್ನೂ ಅನೇಕ ಜನಾಂಗಗಳ ಪ್ರತಿನಿಧಿಗಳು ಅಲ್ಲಿದ್ದರು. ಜವಹರನೂ ಅಲ್ಲಿ ಸೇರಿದನು; ಕೆಲವು ದಿನಗಳಲ್ಲಿಯೇ ನಾನೂ ಸೇರಿದೆನು. ಅಲ್ಲಿ ಅನೇಕರು ನನಗೆ ಗೆಳೆಯರಾದರು. ಅಂತರ್ರಾಷ್ಟ್ರೀಯ ಸಂಸ್ಥೆಯ ಅಧಿವೇಶನಗಳಲ್ಲಿ ಭಾಗವಹಿಸಲು ಬಂದಿದ್ದ ಪ್ರಸಿದ್ಧ ರಾಜಕೀಯವೇತ್ತರಿಂದ, ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮತ್ತು ಇತರ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಂದ ಮತ್ತು ಪ್ರಖ್ಯಾತಲೇಖಕರಿಂದ ಉಪನ್ಯಾಸಗಳಾಗುತ್ತಿದ್ದುವು. ಉಪನ್ಯಾಸಗಳು ಆಕರ್ಷಣೀಯವಾಗಿದ್ದುವಲ್ಲದೆ, ಪ್ರಪಂಚದ ನಾನಾ ಭಾಗಗಳ ಮತ್ತು ನಾನಾ ರೀತಿಗಳ ಜನರನ್ನು ಸಂಧಿಸುವ ಸುಯೋಗ ನಮಗೆ ಅಲ್ಲಿ ಲಭಿಸಿತು.

ಪ್ರತಿ ವಾರಾಂತ್ಯದಲ್ಲಿಯೂ ವಿಹಾರಗಳು ವ್ಯವಸ್ಥಿತವಾಗುತ್ತಿದ್ದುವು. ಕಮಲಳ ಆರೋಗ್ಯ ಅನುಕೂಲವಾಗಿದ್ದಾಗ ನಾನು ಮತ್ತು ಜವಹರನು ಅನೇಕವೇಳೆ ಇತರರ ಜತೆಗೂಡುತ್ತಿದ್ದೆವು. ಒಂದು ಸಾರಿ ಕೋಲ್ ಡಿ ವೋಜಾ ಪರ್ವತಕ್ಕೆ ಹೋಗಬೇಕೆಂದು ನಿರ್ಧರಿಸಿದೆವು. ಅಮೇರಿಕನರು ಮತ್ತು ಸ್ವಿಸ್ಸರೇ ಅಧಿಕ ಸಂಖ್ಯೆಯಲ್ಲಿದ್ದ ನಮ್ಮ ಗುಂಪು ಸದಾ ವಿನೋದದಿಂದ ಕೂಡಿರುತ್ತಿತು. ಜವಹರ, ಸಿಂಧೀಯ ವಿದ್ಯಾರ್ಥಿ ಮತ್ತು ನಾನು–ಈ ಮೂವರೇ ಭಾರತೀಯರು. ಸಿಂಧೀಯ ಗೆಳೆಯನಾದರೋ ಶಿಸ್ತುಗಾರ; ಉಡಿಗೆ ತೊಡಿಗೆಗಳಲ್ಲಿ ತುಂಬಾ ಎಚ್ಚರಿಕೆಯುಳ್ಳವನು; ತಾನು ಶಿಸ್ತುಗಾರನೆಂಬ ಅರಿವೂ ಆತನಿಗಿತ್ತು.

ಇಜಾರ, ಮೇಲಂಗಿ, ಮತ್ತು ದಪ್ಪನೆಯ ದುಂಡು ಮೊಳೆಯ ಬೂಟು ಗಳೇ ಉಳಿದವರ ಉಡಿಗೆ ತೊಡಿಗೆಗಳು. ನಮ್ಮ ಸಿಂಧೀ ಗೆಳೆಯನಾದರೊ ನವಿರಾದ ಉಣ್ಣೆ ಪೋಷಾಕನ್ನೂ ಪೋಷ್ (posh) ಷೂ ಗಳನ್ನೂ ತೊಟ್ಟು ಬಂದನು. [ಆತನೀಗ ಭರತಖಂಡದ ಯಾವುದೋ ಪ್ರಾಂತ್ಯದಲ್ಲಿ ದೊಡ್ಡ ಐ.ಸಿ.ಎಸ್. ಅಧಿಕಾರಿಯಾಗಿದ್ದಾನೆ]. ನಾವೆಲ್ಲರು ಹೊಗೆಬಂಡಿಯಲ್ಲಿ ಹೊರಟೆವು. ಅನಂತರ ರಜ್ಜುವಿನ ಸಹಾಯದಿಂದ ಓಡುವ ಹೊಗೆಬಂಡಿಯಲ್ಲಿ ಸ್ವಲ್ಪದೂರ ಹೋಗಿ, ನಿಯಮಿತ ಸ್ಥಾನದ ಕಡೆಗೆ ಹತ್ತಲು ಆರಂಭಿಸಿದೆವು. ಒಂದೆರಡು ಗಂಟೆಗಳು ಪ್ರಯಾಸದಿಂದ ಹತ್ತಿದಮೇಲೆ ಮಳೆ, ಹಿಮಮಳೆ ಮತ್ತು ಮಂಜುಗಳ ಹೊಡೆತಕ್ಕೆ ಸಿಕ್ಕಿ ನಾವೆಲ್ಲರೂ ಸಂಪೂರ್ಣವಾಗಿ ಒದ್ದೆಯಾದೆವು. ನಮ್ಮ ಸಿಂಧೀಗೆಳೆಯನಾದರೋ, ತನ್ನ ಷೂಗಳು ಆಗಾಗ್ಗೆ ಜಾರುತ್ತಿದ್ದುದರಿಂದ ಬೆಟ್ಟವನ್ನು ಹತ್ತಲು ಬಹಳ ಕಷ್ಟಪಡುತ್ತಿದ್ದನು. ಕಟ್ಟುಬಟ್ಟೆಗಳನ್ನು (Bandages), ಐಯೋಡಿನ್ ಮತ್ತು ಇತರ ಅತ್ಯಗತ್ಯವಾದ ವಸ್ತುಗಳನ್ನು ಅಣಿಮಾಡಿಕೊಳ್ಳದೆ ಜವಹರನು ವಿಹಾರಕ್ಕೆ ಯಾವಾಗಲೂ ಹೊರಟವನಲ್ಲ. ತತ್‌ಕ್ಷಣವೆ ಅವನು ಹಗ್ಗದ ಅಟ್ಟೆಗಳನ್ನುಳ್ಳ ಒಂದು ಜತೆ ಷೂಗಳನ್ನು ನಮ್ಮ ಗೆಳೆಯನಿಗೆ ಕೊಟ್ಟನು. ಅವು ಆತನ ಪ್ರಯಾಸವನ್ನು ಸ್ವಲ್ಪ ಕಡಮೆಮಾಡಿದವು.

ಮತ್ತೊಂದು ಗಂಟೆಯ ಕಾಲ ನಡೆಯುವ ಹೊತ್ತಿಗೆ ಚರ್ಮವೆಲ್ಲ ತೊಯ್ದುಹೋಯಿತು. ಹೊಸ ಇಬ್ಬನಿ ಕವಿದು, ಬಿಸಿಲೂ ಶಾಖವೂ ಹರಡಿದ್ದ ಬೆಟ್ಟದ ಬೇರೊಂದು ಬದಿಗೆ ಹೋದೆವು. ತುಂಬಾ ದಣಿದಿದ್ದರೂ, ನವನೀಹಾರಿಕೆಯ ದೃಶ್ಯದಲ್ಲಿ ಜವಹರನು ಮೊದಲುಗೊಂಡು ನಮ್ಮ ಗುಂಪೆಲ್ಲ ತಲ್ಲೀನವಾಯಿತು. ಇಬ್ಬಿಬ್ಬರಾಗಿಯೂ, ಮೂಮೂವರಾಗಿಯೂ ಒಬ್ಬರಹಿಂದೆ ಮತ್ತೊಬ್ಬರು ಕುಳಿತು ಇಳಿಜಾರಿನಲ್ಲಿ ಮತ್ತೆ ಮತ್ತೆ ಜಾರಾಟವಾಡಿದರು. ನನಗೆ ಮಿತಿಮೀರಿ ಆಯಾಸವಾಗಿದ್ದುದರಿಂದ ಸುಮ್ಮನೆ ಕುಳಿತು ನೋಡುತ್ತಿದ್ದೆನು. ಜವಹರನು ಮತ್ತೊಂದು ಸಲ ಜಾರಲನುವಾಗುತ್ತಿರುವಷ್ಟರಲ್ಲಿ ವಿದ್ಯಾರ್ಥಿಗಳಲ್ಲೊಬ್ಬನು ಆತನ ಹಿಂದೆ ಕುಳಿತುಕೊಳ್ಳುವ ಅವಸರದಲ್ಲಿ ಆತನನ್ನು ಸ್ವಲ್ಪ ನೂಕಿದನು.

ಸಿದ್ಧವಾಗುವುದಕ್ಕೆ ಮುಂಚಿತವಾಗಿ ಜವಹರನೊಬ್ಬನೇ ಜಾರಲಾರಂಭಿಸಿದನು. ಜಾರುಗುಪ್ಪೆಯ ಬುಡದಲ್ಲಿ ದೊಡ್ಡದೊಂದು ಪ್ರಪಾತವಿತ್ತು. ತನ್ನ ಅಂಗಾಂಗಗಳ ಮೇಲಣ ಹಿಡಿತ ತಪ್ಪಿಹೋಗಿ, ಆತನು ನೇರವಾಗಿ ಪ್ರಪಾತದೆಡೆಗೆ ಸರ್ರನೆ ಜಾರಿದನು. ನಮಗೆಲ್ಲರಿಗೂ ಉಸಿರು ಕಟ್ಟಿದಂತಾಯಿತು. ಆ ಕೆಲವು ಕ್ಷಣಗಳಲ್ಲಿ ನಾನಂತು ಅನೇಕಸಾರಿ ಸತ್ತಂತೆ ಭಾಸವಾಗುತ್ತಿತ್ತು. ಕ್ಷಣೇ ಕ್ಷಣೇ ಪ್ರಪಾತ ಸನ್ನಿಹಿತವಾಗುತ್ತಿದ್ದುದು ಜವಹರನಿಗೆ ಗೊತ್ತಿತ್ತು; ಆದರೆ ಆತ ಪ್ರತ್ಯುತ್ಪನ್ನಮತಿವಂತನಾಗಿದ್ದನು. ಅಮಾನುಷ ಸಾಹಸದಿಂದ ಬೇರೊಂದೆಡೆಗೆ ಹೊರಳಲು ಪ್ರಯತ್ನಿಸಿ ಜಯಶೀಲನಾದನು. ಮಂಜುಗಡ್ಡೆಗಳಿಂದ ಹೊರಗೆ ಚಾಚಿಕೊಂಡಿದ್ದ ಕಲ್ಲು ಚಕ್ಕೆಗಳ ಮೇಲೆ ಉರುಳಿದನು. ಮುಖ ಮತ್ತು ತೋಳುಗಳು ಬಹಳ ಪರಚಿಕೊಂಡಿದ್ದುವು; ಆದರೂ ಅಪಾಯದಿಂದ ಪಾರಾದನು. ಇಷ್ಟೆಲ್ಲ ಕೆಲವೇ ಕ್ಷಣಗಳಲ್ಲಿ ನಡೆದುಹೋಗಿತ್ತು. ಆದರೆ ಆಮೇಲೆ ಗಂಟೆಗಟ್ಟಳೆ ನನ್ನ ಮೊಣಕಾಲುಗಳು ನಡುಗುತ್ತಿದ್ದುವು.

ಈ ಘಟನೆ ನಡೆದನಂತರ ನಾವು ನಿಶ್ಶಬ್ದರಾಗಿ ಹತ್ತಿರದ ಜೋಪಡಿಯೆಡೆಗೆ ತೆರಳಿ, ಅಗ್ನಿದೇವನ ಸುತ್ತಮುತ್ತ ಗುಂಪುಕೂಡಿದೆವು. ನಮ್ಮ ಸಿಂಧೀ ಗೆಳೆಯನು ಇತರರಂತೆಯೇ ತನ್ನ ತೆಳ್ಳನೆಯ ಷೂಗಳನ್ನು ಬೆಂಕಿಯ ಮುಂದೆ ಒಣಗಲು ಇಟ್ಟನು. ತುಸು ಹೊತ್ತಾದಮೇಲೆ ಅವನು ತನ್ನ ಷೂಗಳನ್ನು ನೋಡಿಕೊಂಡಾಗ, ಅವು ಸುಕ್ಕುಹಿಡಿದು ಧರಿಸುವುದಕ್ಕೆ ಯೋಗ್ಯವಾಗಿರಲಿಲ್ಲ. ಆತನಿಗೆ ಬಹಳ ಅಸಮಾಧಾನವಾಯಿತು. ನಮ್ಮ ದಪ್ಪನೆಯ ಬೂಟುಗಳೆಲ್ಲ ಯಾವ ಅಪಾಯವೂ ಇಲ್ಲದೆ ಆರಿಹೋಗಿದ್ದವು.

ಮುಪ್ಪಿನ ಗಂಡಹೆಂಡತಿಯರೇ ಆ ಮನೆಯ ಯಜಮಾನರು. ಅವರು ಹಿತಕರವಾದ ಆಹಾರವನ್ನು ಕೊಟ್ಟರು. ಆ ರಾತ್ರಿ ಹಿಂದಿರುಗಲು ಆಗಲಿಲ್ಲವಾದುದರಿಂದ ಅವರು ತೋರಿಸಿದ ಮರದ ಜೋಪಡಿಯೊಂದರಲ್ಲಿ ನಾವೆಲ್ಲರೂ ಇಳಿದುಕೊಂಡೆವು. ಎಲ್ಲರಿಗೂ ಸಾಕಾಗುವಷ್ಟು ಹಾಸಿಗೆಗಳಿಲ್ಲವಾದುದರಿಂದ ಇಬ್ಬರು ತರುಣಿಯರು ಅಲ್ಲಿದ್ದ ಒಂದೇ ಒಂದು ಹಾಸಿಗೆಯ ಮೇಲೆಯೂ, ಗಂಡಸರು ನೆಲದ ಮೇಲೆಯೂ

ಮಲಗಿಕೊಂಡರು. ಚಳಿ ಕೊರೆಯುತ್ತಿತ್ತು. ಆದುದರಿಂದ ನಾನು ಹಾಸಿಗೆಯ ಬಟ್ಟೆಗಳನ್ನು ಎತ್ತಿ ಹಿಡಿದುಕೊಂಡರೆ ತಾನು ಒಳಭಾಗವನ್ನೆಲ್ಲ ಮೇಣದ ಬತ್ತಿಯಿಂದ ಬಿಸಿಮಾಡುವುದಾಗಿ ನನ್ನ ಹತ್ತಿರವಿದ್ದ ಮಾಲಿ ಎಂಬ ಹುಡುಗಿ ನನಗೆ ಸೂಚಿಸಿದಳು. ಆ ಸಲಹೆಯನ್ನೊಪ್ಪಿಕೊಳ್ಳಲು ನಾನು ಹಿಂಜರಿಯಲಿಲ್ಲ. ಮೇಲು ಹೊದಿಕೆಯನ್ನು ನಾನು ಎತ್ತಿ ಹಿಡಿದುಕೊಂಡೆನು. ಮಾಲಿ ಮೇಣದ ಬತ್ತಿಯನ್ನು ಹಿಂದೆ ಮುಂದೆ ಆಡಿಸಿ ಹಾಸಿಗೆಯನ್ನು ಬಿಸಿಮಾಡಿದಳು. ಕೂಡಲೆ ಏನೋ ಉರಿಯುವ ವಾಸನೆ ನಮ್ಮ ಮೂಗಿಗೆ ತಟ್ಟಿತು. ಹಚ್ಚಡ ತೂತಾಗಿದ್ದುದನ್ನು ನೋಡಿ ನಮಗೆ ಹೆದರಿಕೆಯಾಯಿತು. ಮೇಣದ ಬತ್ತಿಯನ್ನು ಆರಿಸಿ ಹಾಸಿಗೆಯ ಮೇಲೊರಗಿದೆವು. ಮನೆಗೆ ಯಾವವಿಧವಾದ ಅಪಾಯವೂ ಸಂಭವಿಸದಿದ್ದುದಕ್ಕಾಗಿ ಸಂತೋಷಗೊಂಡೆವು. ಮೂರನೆಯದಿನ ಜಾಗ್ರತೆ ಹಿಂದಿರುಗುವ ಕಾತರತೆಯಿಂದ, ಆಯಾಸ ಮತ್ತು ಪರಿತಾಪಗಳಿಂದ ಕೂಡಿ ಮನೆಯ ಕಡೆಗೆ ಹೊರಟೆವು.

ಜಿನೀವಾನಗರಕ್ಕೆ ಅನತಿದೂರದಲ್ಲಿಯೇ ವಿಲಿನಾವಿನಲ್ಲಿ ವಾಸಿಸುತ್ತಿದ್ದ ರೋಮೆನ್ ರೋಲೆಂಡವರನ್ನೂ ಕಾಣಲು ಕೆಲವುವೇಳೆ ಅಣ್ಣನೊಡನೆ ಹೋಗುತ್ತಿದ್ದೆನು. ಅನೇಕ ಸುಪ್ರಸಿದ್ಧ ಗ್ರಂಥಕರ್ತರನ್ನು, ಸಂಗೀತಗಾರರನ್ನು ಮತ್ತು ವೈಜ್ಞಾನಿಕರನ್ನು ಸಹ ನಾನು ಸಂಧಿಸಿದೆನು. ಅವರಲ್ಲಿ ಐನ್‌ಸ್ಟೀನ್ ಮತ್ತು ಆರ್ನೆಸ್ಟ್ ಟೋಲರ್ ಅವರು ಇನ್ನೂ ನನ್ನ ಸ್ಮೃತಿಪಥದಲ್ಲಿ ಸುಸ್ಪಷ್ಟವಾಗಿ ನಿಂತಿದ್ದಾರೆ. ಮೊದಲನೆಯವರನ್ನು ನಾನು ಸಾಕ್ಷಾತ್ತಾಗಿ ಸಂಧಿಸಲಿಲ್ಲ, ಸರ್ ಜೆ.ಸಿ. ಬೋಸರ ಉಪನ್ಯಾಸವನ್ನು ಕೇಳಲು ಹೋಗಿದ್ದಾಗ ಅವರನ್ನು ನಾನು ನೋಡಿದುದು. ಅವರು ವೇದಿಕೆಯ ಮೇಲೆ ಜನರ ಗುಂಪಿನಲ್ಲಿ ಮರೆಯಾಗಿ ಕುಳಿತಿದ್ದರು. ಅಮೇರಿಕ ದೇಶದ ವಿದ್ಯಾರ್ಥಿಯೊಬ್ಬನು ಅವರನ್ನು ಗುರುತಿಸಿ, ಸುತ್ತ ಮುತ್ತ ಇದ್ದ ಜನರಿಗೆ ಪ್ರಚುರಪಡಿಸಿದನು. ಅಲ್ಲಿಯತನಕ ಅವರಿರುವ ವಿಷಯ ಯಾರಿಗೂ ಗೊತ್ತಿರಲಿಲ್ಲ. ಅನಂತರ ಅಲ್ಲಿ ದೊಡ್ಡ ಗದ್ದಲವೆದ್ದಿತು. ಪ್ರತಿಯೊಬ್ಬರೂ ಅವರನ್ನು ನೋಡಲು ಕಾತರರಾಗಿದ್ದರು. ಬಹಳ ಹಠಮಾರಿತನದ ಪರಿಣಾಮವಾಗಿ ಅವರು

ಮೇಲೆದ್ದು ಬಂದು ಪ್ರತಿಯೊಬ್ಬರನ್ನು ಲಜ್ಜೆಯಿಂದಲೇ ವಂದಿಸಿದರು. ಜನರು ಅವರಲ್ಲಿಟ್ಟಿದ್ದ ಗೌರವಾದರಗಳನ್ನು ಪ್ರದರ್ಶಿಸಿದುದಕ್ಕಾಗಿ, ಅವರು ವಿಶೇಷ ಭಯಚಕಿತರಾದಂತೆ ಕಂಡುಬಂದರು. ವೇದಿಕೆಯ ಮೇಲೆ ಕೇವಲ ಕೆಲವು ಕ್ಷಣಗಳು ಮಾತ್ರ ನಿಂತಿದ್ದು ಹಿನ್ನೆಲೆಗೆಲ್ಲಿಯೋ ಸರ್ರನೆ ಸರಿದರು.

ಬ್ರಸಲ್ಸ್‌ನಲ್ಲಿ ನಾನು ಟೋಲರ್ ಅವರನ್ನು ನೋಡಿದೆನು. ನೋಡುವುದಕ್ಕೆ ಅವರು ಸುಂದರವಾಗಿರಲಿಲ್ಲ; ಆದರೆ ಅವರ ಸವಿಸ್ಮಯನೇತ್ರಗಳು ನಿಮ್ಮ ಅತ್ಯಂತಭೂರ್ತ ಆಲೋಚನೆಗಳನ್ನು ಓದುವ ಹಾಗೆ ಕಂಡುಬಂದುವು. ಅವರೊಡನೆ ಮಾತಾಡುವುದೆಂದರೆ ಬಹಳ ಹಿತಕರವಾಗಿತ್ತು. ಅನೇಕವೇಳೆ ಅವರ ಮುಖ ಮಿತಿಮೀರಿದ ವ್ಯಸನದಿಂದ ಕೂಡಿದ ಹಾಗೆಯೂ, ಅವರ ಕಣ್ಣುಗಳು ಹುಡುಕುನೋಟವನ್ನು ಬೀರುವಂತೆಯೂ ಕಂಡುಬಂದುವು.

ನಾಜಿಸರ್ಕಾರದ ದಬ್ಬಾಳಿಕೆಗೆ ಬಲಿಯಾದ ಟೋಲರ್ ಸ್ವದೇಶವನ್ನು ಬಿಟ್ಟು ಪರದೇಶದಲ್ಲಿ ಆಶ್ರಯವನ್ನು ಅರಸಬೇಕಾಯಿತು. ಅವರು ಮಹಾ ಕವಿ. ಸತ್ಯಾನ್ವೇಷಣೆ ಸ್ವಾತಂತ್ರ್ಯೋಪಾಸನೆಗಳೇ ಅವರ ಬಾಳಿನ ತೀವ್ರಾಭಿಲಾಷೆಗಳು ನಾನು ನೋಡಿರುವ ಧೀರಪುರುಷರಲ್ಲಿ ಅವರೊಬ್ಬರು. ಯಾವುದಾದರೊಂದು ತತ್ತ್ವವನ್ನು ನಂಬಿ, ಅದೇ ಸರಿಯೆಂದು ಅವರ ಅಂತಃಕರಣ ಒಪ್ಪಿ, ಅದನ್ನು ಅವರು ಅನುಸರಿಸುತ್ತಿದ್ದರು. ಯಾರೂ ಅವರನ್ನು ಅದರಿಂದ ತಪ್ಪಿಸಲಾಗುತ್ತಿರಲಿಲ್ಲ.

ಹತಾಶನೂ, ವಿರಕ್ತನೂ, ಜನ್ಮಭೂಮಿಯಿಂದ ದೂರೀಕೃತನೂ ಆದ ಅವರು ಪ್ರಾಣಹತ್ಯಕ್ಕೊಳಗಾಗಿ ಜಾಜ್ವಲ್ಯವಾದ ಜೀವಮಾನವನ್ನು ಕೊನೆಗಾಣಿಸಿದರು. ಅವರ ಸಾವಿನಿಂದ ಪ್ರಪಂಚಕ್ಕೆ ಅಪಾರನಷ್ಟ ಸಂಭವಿಸಿತು; ಆದರೆ ಅವರ ಕೃತಿಗಳಾಗಲಿ ಅಥವ ಟೋಲರ್ ಆತ್ಮವಾಗಲಿ ಅವಿನಾಶಿಗಳು. ಅವು ಯುಗಯುಗಾಂತರದವರೆಗೆ ಚಿರವಾಗಿ ನಿಲ್ಲುವುವು.

ಜಿನೀವಾದಲ್ಲಿ ಕೆಲವು ತಿಂಗಳುಗಳನ್ನು ಕಳೆದನಂತರ, ನಾವು ಮೊಂಟಾನವೆಂಬ ಪರ್ವತಕ್ಕೆ ತೆರಳಿದೆವು. ಅದು ಹಳ್ಳಿಯ ಹಾಗೆ

ಚಿಕ್ಕದಾದರೂ ಬಹಳ ಸುಂದರವಾದುದು. ಅಲ್ಲಿ ಅನೇಕ ತಿಂಗಳುಗಳು ನಿಂತೆವು. ಹಿಮಗಾಲದ ಕ್ರೀಡೆಗಳಲ್ಲಿ ನಾನು ಮೊಟ್ಟಮೊದಲು ಭಾಗ ವಹಿಸಿದುದು ಅಲ್ಲಿಯೇ. ಮಂಜುಗಡ್ಡೆಯ ಮೇಲೆ ಜಾರಾಡುವುದನ್ನು ಕಲಿತೆನು. ಆ ಆಟ ನನಗೆ ತುಂಬಾ ಇಷ್ಟವಾಗಿದ್ದುದರಿಂದ, ಅನೇಕ ಗಂಟೆಗಳ ಕಾಲ ಅದರಲ್ಲಿಯೇ ತಲ್ಲೀನಳಾಗುತ್ತಿದ್ದೆನು.

ನಾವು ಮೊಂಟಾನದಲ್ಲಿದ್ದಾಗ, ಜವಹರನೂ ನಾನೂ ಆಗಾಗ್ಗೆ ಪ್ಯಾರಿಸ್, ಬೆಲ್ಜಿಯಮ್, ಮತ್ತು ಜರ್ಮನಿಗೂ, ಕೆಲವು ವೇಳೆ ಇಂಗ್ಲೆಂಡಿಗೂ ಹೋಗಿಬರುತ್ತಿದ್ದೆವು. ಇಂಗ್ಲೆಂಡ್ ನನ್ನನ್ನು ಆಕರ್ಷಿಸಲಿಲ್ಲ; ಆದರೆ ಫ್ರಾನ್ಸ್‌ದೇಶ, ಅದರಲ್ಲಿಯೂ ಪ್ಯಾರಿಸ್‌ನಗರವಂತು ನನ್ನನ್ನು ಮುಗ್ಧಗೊಳಿಸಿದುವು. ಯಾವುದಾದರೂ ಸಭೆಯ ಕಾರ್ಯಕಲಾಪಗಳನ್ನು ನೋಡುವುದಕ್ಕಾಗಲೀ, ಅದೀರ್ಘ ವಿಹಾರಕ್ಕಾಗಲೀ ನಾವು ಅಲ್ಲಿಗೆ ಹೋಗಿಬರುತ್ತಿದ್ದೆವು. ಮೊದಮೊದಲು ಜವಹರನೊಬ್ಬನೆ ಹೋಗುತ್ತಿದ್ದನು. ನಾನು ಆತನ ಕಾರ್ಯದರ್ಶಿಯಾಗಿದ್ದುಕೊಂಡು ಸಹಾಯವನ್ನು ನೀಡುವುದಾದರೆ ನನ್ನನ್ನೂ ತನ್ನ ಜತೆಯಲ್ಲಿ ಕರೆದುಕೊಂಡುಹೋಗುವುದಾಗಿ ತಿಳಿಸಿದನು. ಆತನೊಡನೆ ಹೋಗುವ ನಿರೀಕ್ಷಣೆಯೇ ನನ್ನನ್ನು ಆನಂದಗೊಳಿಸಿತು. ಆದರೆ ಆತನ ಕಾರ್ಯದರ್ಶಿಯಾಗಿದ್ದುಕೊಂಡು ಕೆಲಸಮಾಡಲು ತುಸ ಅಂಜಿದೆನು. ಏಕೆಂದರೆ ಜವಹರನು ಕಠೋರನೂ ಕಾರ್ಯದಕ್ಷನೂ ಆದ ಯಜಮಾನನಾಗಿದ್ದುದಲ್ಲದೆ, ಕ್ಲೈಬ್ಯದೌರ್ಬಲ್ಯಗಳನ್ನು ಸಹಿಸುತ್ತಿರಲಿಲ್ಲ. ಹೊಸಹುದ್ದೆ ಆಕರ್ಷಣೀಯವಾಗಿದ್ದುದರಿಂದ ಅದನ್ನು ಬಿಡಲಿಲ್ಲ. ನೆಟ್ಟನೆ ಆತನ ಟೈಪ್‌ರೈಟರನ್ನು ತೆಗೆದುಕೊಂಡು, ಮುಂದಿನ ಕೆಲಸಕ್ಕೆ ಅನುಕೂಲವಾಗುವಂತೆ ಸರಿಪಡಿಸಿಕೊಂಡೆನು. ಅಲ್ಲಿಂದೀಚೆಗೆ ಎಲ್ಲಿಗೂ ತಪ್ಪದೆ ಆತನ ಜತೆಯಲ್ಲಿ ಹೋಗುತ್ತಿದ್ದೆನು. ನನಗೆ ಒಳ್ಳೆಯ ಶಿಕ್ಷಣವೇನೋ ದೊರೆಯಿತು. ಆದರೆ ನಾನು ಮೊದಲೇ ಯೋಚಿಸಿಕೊಂಡಿದ್ದಹಾಗೆ ನನ್ನ ಕಾರ್ಯ ತಮಾಷೆಯಾಗಿರಲಿಲ್ಲ. ದುಡಿಮೆ, ಬಾಳಿಗೆ ಹಿತವೆಂಬ ಸೂತ್ರವನ್ನು ಆತನು ನಂಬಿಕೊಂಡಿದ್ದುದರಿಂದ, ನನ್ನನ್ನೆಂದೂ ಸುಮ್ಮನೆ ಬಿಡುತ್ತಿರಲಿಲ್ಲ. ಹಿಂದೆ ಯಾವಾಗಲೂ

ನಾನು ಕಷ್ಟ ಸಹಿಷ್ಣುವಾಗಿರಲಿಲ್ಲವೆಂದೇ ಅವನ ಭಾವನೆಯಾಗಿತ್ತು. ನಾನು ಅನಾಯಾಸವಾದ ಜೀವನವನ್ನು ಸಾಗಿಸುತ್ತಿದ್ದುದಾಗಿಯೂ, ಅಲ್ಪಸ್ವಲ್ಪ ಶ್ರಮ ನನ್ನನ್ನು ಬಹಳವಾಗಿ ಉತ್ತಮಪಡಿಸುವುದಾಗಿಯೂ, ಅವನು ಹೇಳಿದನು. ಆ ಮಾತು ನಿಜವಾಯಿತು.

ನನಗೆ ಹೆಚ್ಚು ಕೆಲಸವಿಲ್ಲದಿದ್ದಾಗ, ಜವಹರನು ವಿಚಿತ್ರ ವಸ್ತು ಸಂಗ್ರಹಾಲಯ, ಕಲಾಪ್ರದರ್ಶನಶಾಲೆ ಮೊದಲಾದುವಗಳನ್ನು ನೋಡಲು ಕರೆದುಕೊಂಡು ಹೋಗುತ್ತಿದ್ದನು. ಒಂದೊಂದು ವೇಳೆ ಹಗಲೆಲ್ಲ ಪ್ರಯಾಸದಿಂದ ನಡೆಯುತ್ತಿದ್ದೆವು. ನನಗೆ ಬಳಲಿಕೆಯಾದಾಗ, ಬಾಡಿಗೆಯ ಮೋಟಾರಿನಲ್ಲಿ ಕುಳಿತು ಉಳಿದ ದೃಶ್ಯಗಳನ್ನು ನೋಡುವುದೆಂದು ಅಣ್ಣನಿಗೆ ಸೂಚಿಸುತ್ತಿದ್ದೆನು. ರಾತ್ರಿಯವೇಳೆ ನಾಟಕಶಾಲೆಗೆ ಹೋಗುವುದಿಲ್ಲವೆಂಬ ಷರತ್ತಿಗೆ ನಾನು ಸಮ್ಮತಿಯಿತ್ತಾಗ, ಅವನು ನನ್ನ ಸಲಹೆಯನ್ನು ಅಂಗೀಕರಿಸುತ್ತಿದ್ದನು. ಒಂದೇ ಸಾರಿ ದುಂದುವೆಚ್ಚ ಮಾಡುವುದು ಸರಿಯಲ್ಲವೆಂದವನ ಭಾವನೆಯಾಗಿತ್ತು. ಸಾಯಂಕಾಲ ನಾಟಕಶಾಲೆಗೆ ತಪ್ಪಿಸಿಕೊಳ್ಳುವುದಕ್ಕಿಂತ ನಡೆಯುವುದೇ ಮೇಲೆಂದು ಸಿಡುಕಿನಿಂದ ಸುಮ್ಮನಾಗುತ್ತಿದ್ದೆನು. ಅದೇನೋ ಉತ್ತಮ ಶಿಕ್ಷಣವೆಂದು ಒಪ್ಪಿಕೊಳ್ಳುತ್ತೇನೆ. ಭರತಖಂಡದಲ್ಲಿದ್ದಿದ್ದರೆ ಅಂತಹ ಅನುಭವವೇ ಉಂಟಾಗುತ್ತಿರಲಿಲ್ಲ. ಅನಾವಶ್ಯವಾಗಿ ನನ್ನನ್ನು ಕಷ್ಟಗಳಿಗೆ ಗುರಿಮಾಡುತ್ತಿದ್ದನೆಂದು ಒಂದೊಂದು ವೇಳೆ ಅಣ್ಣನನ್ನು ದೂಷಿಸುತ್ತಿದ್ದೆನು.

ನಾನು ಹೋದೆಡೆಯಲ್ಲೆಲ್ಲ ಸರ್ವಜನಾಂಗದವರ ಗೆಳೆತನವನ್ನು ಸಂಪಾದಿಸುತ್ತಿದ್ದೆನು. ಅವರಲ್ಲಿ ಅನೇಕರು ವಿದ್ಯಾರ್ಥಿಗಳು ಮತ್ತು ಕಲಾವಿದರು. ಅಡ್ಡಿ ಆತಂಕಗಳಿಲ್ಲದ ಸ್ವಾತಂತ್ರ್ಯ ವಾತಾವರಣದಲ್ಲಿ ಹಿರಿಯರು ನನ್ನನ್ನು ಬೆಳೆಸಿದ್ದರಲ್ಲದೆ, ಹುಡುಗ ಹುಡುಗಿಯರಲ್ಲಿ ಯಾವ ಭೇದವೂ ಇಲ್ಲವೆಂದು ನನಗೆ ಹೇಳಿಕೊಟ್ಟಿದ್ದರು. ವಸ್ತುತಃ ನಾನು ಹುಡುಗರಂತೆಯೇ ವರ್ತಿಸುತ್ತಿದ್ದೆನು. ಅದಕ್ಕಾಗಿ ತಾಯಿಯವರು ನನ್ನನ್ನು ಅನೇಕವೇಳೆ ಬಯ್ಯುತ್ತಿದ್ದರು. ತರುಣತರುಣಿಯರು ಒಂದೆಡೆ ಕಲೆಯುವ ಸ್ವಾತಂತ್ರ್ಯ ನನಗೆ ಹೊಸದಾಗಿ ಇಲ್ಲವೆ

ವಿಚಿತ್ರವಾಗಿ ಕಾಣಿಸಲಿಲ್ಲ. ನಾನು ಗಂಡಸರನ್ನು ಸಂಧಿಸಿದಾಗ ನಾಚಿಕೆಯಿಂದಾಗಲೀ, ಯದ್ವಾತದ್ವವಾಗಿಯಾಗಲೀ ವರ್ತಿಸುತ್ತಿರಲಿಲ್ಲ. ನಾನು ಸಂಪಾದಿಸಿದ ಗೆಳೆಯರಲ್ಲಿ ಕೆಲವರು ಅತ್ಯುತ್ತಮರಾದವರು. ಸಾಂಪ್ರತಿಕ ಯುದ್ಧವಾರಂಭವಾಗಿ ಒಂದು ವರ್ಷವಾದ ಮೇಲೆಯೂ ನಾವು ಪರಸ್ಪರ ವ್ಯವಹಾರವನ್ನು ನಿಲ್ಲಿಸಿರಲಿಲ್ಲ. ಇತ್ತೀಚೆಗೆ ಆ ವ್ಯವಹಾರ ನಿಂತು ಹೋಗಿದೆ. ನಾಜೀಪಡೆಯು ಅವರ ದೇಶಗಳನ್ನು ವಶಪಡಿಸಿಕೊಂಡ ಮೇಲೆ, ಕ್ರಮೇಣ ಒಬ್ಬೊಬ್ಬ ಗೆಳೆಯನ ಕುರುಹನ್ನು ಮರೆತೆನು. ಈಗ ಅವರು ಎಲ್ಲಿದ್ದಾರೆಂಬುದೇ ಗೊತ್ತಿಲ್ಲ. ಅವರು ಖೈದಿಗಳ ಶಿಬಿರದಲ್ಲಿದ್ದಾರೆಯೋ, ನಿಸ್ಸಹಾಯಕರಾದ ನಿರಾಶ್ರಿತರ ಹಾಗೆ ಸ್ಥಳದಿಂದ ಸ್ಥಳಕ್ಕೆ ಓಡಾಡುತ್ತಿದ್ದಾರೆಯೋ ಏನೊಕಾಣೆ! ಈ ನನ್ನ ಗೆಳೆಯರು ಚೈತನ್ಯದ ಚಿಲುಮೆಗಳಾಗಿದ್ದರು. ತಮ್ಮ ಭವಿತವ್ಯದ ವಿಷಯದಲ್ಲಿ ನಿರ್ಭೀತರಾಗಿದ್ದರು. ಶಾಂತಿಸುಖಸಂಪತ್ತುಗಳ ಭವ್ಯ ಪ್ರಪಂಚವನ್ನು ನಿರ್ಮಿಸಿಕೊಳ್ಳುವುದಾಗಿ ಅವರು ಯೋಚಿಸಿಕೊಂಡಿದ್ದರು. ಆದರೆ ಹಾಗಾಗಲಿಲ್ಲ. ಅವರ ಕನಸುಗಳು ನುಚ್ಚುನೂರಾದುವು. ಮತ್ತೆ ಅವರನ್ನು ನೋಡಬಹುದೆಂಬ ಭರವಸೆಯಾದರು ಯಾರಿಗಿದೆ?

ನಾನು ಅತ್ಯಂತ ಸಂತೋಷದಿಂದ ಕಳೆದ ಕಾಲವೆಂದರೆ ಸ್ವಿಟ್ಜರ್ಲೆಂಡ್ ಮತ್ತು ಪ್ಯಾರಿಸ್ಸಿನಲ್ಲಿ. ನಿಶ್ಚಿಂತೆ ಸಂತೋಷಗಳಿಂದ ಕೂಡಿದ ಅಂದಿನ ಬಾಳನ್ನು ಮತ್ತೆ ಮತ್ತೆ ನೆನಸಿಕೊಳ್ಳುತ್ತಿದ್ದೇನೆ. ಹಳೆಯ ಗೆಳೆಯರನ್ನು ಪುನಃ ಸಂಧಿಸಲು ಮತ್ತು ಹಿಂದಿನ ಬಾಳನ್ನು ಮತ್ತೆ ಅನುಭವಿಸಲು ಅನೇಕವೇಳೆ ಬಯಸಿದ್ದೇನೆ. ನಾನು ಆಗಾಗ್ಗೆ ಹೂಡಿದ ಯೋಜನೆಗಳು ಪ್ರಯೋಜನಕಾರಿಯಾಗಲಿಲ್ಲ. ಕಳೆದ ಕಾಲ ಮರಳಲಿಲ್ಲ.

೧೯೨೭ನೆಯ ಇಸವಿಯ ಪೂರ್ವಭಾಗದಲ್ಲಿ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಸಲುವಾಗಿ ಬ್ರಸಲ್ಸ್‌ನಗರದಲ್ಲಿ ಅಂತರ್ರಾಷ್ಟ್ರೀಯ ಸಮ್ಮೇಳನ ನೆರೆಯಿತು. ಆ ಸಮ್ಮೇಳನದಲ್ಲಿ ತನ್ನ ಪ್ರತಿನಿಧಿಯಾಗಿ ಭಾಗವಹಿಸುವಂತೆ, ಭಾರತೀಯ ರಾಷ್ಟ್ರೀಯ ಮಹಾಸಭೆ ಜವಹರನನ್ನು ಕೇಳಿಕೊಂಡಿತು. ಎಂದಿನಂತೆ ನಾನೂ ಅವನ ಜತೆಯಲ್ಲಿ ಹೊರಟೆನು.

ಪ್ರಪಂಚದ ನಾನಾ ಭಾಗಗಳಿಂದ ಬಹುದೂರದ ಚೀನಾ, ಜಾವಾ, ಸಿರಿಯ, ಪ್ಯಾಲೆಸ್ಟೈನ್, ಆಫ್ರಿಕ, ಅಮೆರಿಕ ಮತ್ತು ಇತರ ಹಿರಿಯ ರಾಷ್ಟ್ರಗಳಿಂದ ಪ್ರತಿನಿಧಿಗಳು ಬಂದಿದ್ದರು. ಅಮೆರಿಕ ಮತ್ತು ಆಫ್ರಿಕಾ ಖಂಡಗಳ ನೀಗ್ರೋ ಪ್ರತಿನಿಧಿಗಳು ಮಾಡಿದ ಕೆಲವು ಭಾಷಣಗಳು ಅತ್ಯಂತ ಸ್ಫೂರ್ತಿದಾಯಕವೂ, ಕರುಣಾಜನಕವೂ ಆಗಿದ್ದುವು.

ಸರೋಜಿನಿನಾಯ್ಡುರವರ ಸಹೋದರ ವೀರೇಂದ್ರ ಚಟ್ಟೋಪಾಧ್ಯಾಯನನ್ನು ನಾನು ಮೊದಲು ಬಾರಿ ನೋಡಿದುದು ಇಲ್ಲಿಯೇ. 'ಚಟ್ಟೋ ಚಿಕ್ಕಪ್ಪ' ಎಂಬ ಹೆಸರಿನಿಂದ ಅವನು ಎಲ್ಲರಿಗು ಪರಿಚಿತನಾಗಿದ್ದನು. ಅನೇಕ ವರ್ಷಗಳ ಕಾಲ ತಾಯ್ನಾಡಿನಿಂದ ಭ್ರಷ್ಟನಾಗಿ, ನೆಲೆಯಿಲ್ಲದೆ ಕಾಸಿಲ್ಲದೆ, ದೇಶವಿದೇಶಗಳಲ್ಲಿ ಒಂಟಿಯಾಗಿ ಅಲೆದು, ಬಹಳ ಕಷ್ಟದಿಂದ ಬಾಳನ್ನು ಹೊರೆದುಕೊಂಡಿದ್ದನು. ಆದರೆ ಅಂತಹ ದುರವಸ್ಥೆಗೀಡಾದವರು ಅಂದುಕೊಳ್ಳಬಹುದಾಗಿದ್ದಂತೆ, ಅವನು ಬಾಳನ್ನು ಕಹಿಯೆಂದು ಹಳಿಯಲಿಲ್ಲ. ಆತನ ಮುಖದ ಮೇಲೆ ಮುಗುಳ್ನಗೆ ಸದಾ ತಾಂಡವ ವಾಡುತ್ತಿತ್ತು; ಪ್ರತಿಯೊಬ್ಬರನ್ನು ಹಿತಕರವಾದ ನುಡಿಗಳಿಂದ ಆದರಿಸುತ್ತಿದ್ದನು. ಆತನು ಚತುರನೂ, ಸಭ್ಯನೂ ಮತ್ತು ಚಿತ್ತಾಕರ್ಷಕನೂ ಆಗಿದ್ದನು. ನಾನು ನೋಡಿರುವ ಅತ್ಯಂತ ಮನೋಹರ ವ್ಯಕ್ತಿಗಳಲ್ಲಿ ಈತನೊಬ್ಬ. ನನಗೆ ಆತನನ್ನು ಕಂಡರೆ ಬಹಳ ಪ್ರೀತಿ; ಅವನೂ ನನ್ನ ವಿಷಯದಲ್ಲಿ ಹಾಗೆಯೇ. ನಾನು ಆತನ ವಿಷಯವನ್ನು ಹೆಚ್ಚು ಹೆಚ್ಚು ತಿಳಿದುಕೊಂಡಂತೆಲ್ಲ, ಆತನಲ್ಲಿ ನನಗೆ ಭಕ್ತಿಗೌರವಗಳು ಅಧಿಕವಾಗುತ್ತಿದ್ದುವು. ಹೊಟ್ಟೆಗಿಲ್ಲದೆ ನರಳುತ್ತಿದ್ದರೂ, ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಅನೇಕವೇಳೆ ಉಪಾಹಾರಕ್ಕಾಗಿ ಒಂದೆರಡು ಸೇಬುಹಣ್ಣುಗಳಿದ್ದರೂ, ಅವುಗಳನ್ನು ಬಡತನದ ಬೇಗೆಯಲ್ಲಿ ಬೆಂಡಾಗಿದ್ದ ಮತ್ತೊಬ್ಬ ಭಾರತೀಯ ವಿದ್ಯಾರ್ಥಿಯೊಡನೆ ಪಾಲುಮಾಡಿಕೊಂಡು ತಿನ್ನುತ್ತಿದ್ದನು. ೧೯೨೭ನೆಯ ಅಕ್ಟೋಬರ್ ತಿಂಗಳಲ್ಲಿ ನಾವು ಬರ್ಲಿನ್ನಿಗೆ ಹೋದಾಗ ಮತ್ತೆ ಚಟ್ಟೋವನ್ನು ನೋಡಿ, ಆತನಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಅರಿತುಕೊಂಡೆವು. ಆತನ ಮೇಲೆ ನಮಗೆ ವಿಶೇಷವಾದ ವಾತ್ಸಲ್ಯವಿತ್ತು. ನಮಗಾಗಿ ಆತನು ತನ್ನ ಪ್ರೇಮವನ್ನೆಲ್ಲ ಸೂರೆ

ಗೊಟ್ಟನು. ತನ್ನನ್ನು ಸಮಾಜಬಾಹಿರನೆಂದು ದೂರದೆ, ತಮ್ಮ ಕುಟುಂಬಕ್ಕೆ ಸೇರಿದ ಬಂಧುವೆಂದು ಗಣಿಸಿದ್ದ ಕೆಲವು ವ್ಯಕ್ತಿಗಳನ್ನು ಬಹಳದಿನಗಳ ಮೇಲಾದರೂ ಸಂಧಿಸಿದೆನೆಂಬ ಆನಂದವೇ ಆತನ ಪ್ರೀತಿಗೆ ಕಾರಣವಾಗಿದ್ದಿರಬಹುದು.

ನಾವು ಬರ್ಲಿನ್ ನಗರವನ್ನು ಬಿಟ್ಟ ಸಂಜೆ ನಮ್ಮನ್ನು ಬೀಳ್ಕೊಡಲು ಅವನು ನಿಲ್ದಾಣಕ್ಕೆ ಬಂದಿದ್ದನು. ಅಲೆದಾಟ ಒಂಟಿತನಗಳಿಗೆ ಅವನ ಬಾಳು ಒಗ್ಗಿ ಜಿಡ್ಡುಹಿಡಿದು ನೀರಸವಾಗಿದ್ದರೂ, ನಮ್ಮಿಂದ ಬೇರ್ಪಡುವಾಗ ಅವನು ಬಹಳ ತಳಮಳಗೊಂಡನು. ಜಗಲಿಯ ಮೇಲೆ ನಿಂತು ನನಗೆ ನಮಸ್ಕಾರ ಮಾಡಿದಾಗ ಆತನ ಕಣ್ಣುಗಳು ನೀರಿನಿಂದ ತೊಯ್ದಿದ್ದುವು. "ಕೃಷ್ಣಾ, ಇದೇ ಕೊನೆಯ ವಂದನೆಯೋ ಅಥವ ಮತ್ತೆ ಸಂಧಿಸುವೆವೋ ಹೇಳಲಾರೆನು. ಪುನಃ ನಿನ್ನನ್ನು ನೋಡುವೆನೆಂಬ ಭರವಸೆಯೇನೋ ಇದೆ. ಅರೆಕ್ಷಣವಾದರು ನಿನ್ನನ್ನು ನೋಡಲು ಹಿಂದೂಸ್ಥಾನದ ಗಡಿಗೆ ನಾನು ಬಂದರೂ ಬರಬಹುದೇನೋ" ಎಂದವನು ಮೆಲ್ಲನೆ ನುಡಿದನು. ನನ್ನ ಎದೆ ಕರಗಿತು; ಕಣ್ಣುಗಳಿಂದ ನೀರು ತುಳುಕುವುದರಲ್ಲಿತ್ತು. ಆತನನ್ನು ಮತ್ತೆ ನೋಡಲಾರೆನೆಂಬ ಭಾವನೆ ನನ್ನನ್ನಾವರಿಸಿತು. ಹೊಗೆಬಂಡಿ ನಿಲ್ದಾಣವನ್ನು ಬಿಟ್ಟನಂತರ, ಆತನು ಮರೆಯಾಗುವತನಕ ಕೈಬೀಸುತ್ತಿದ್ದೆನು. ಎಷ್ಟು ತಡೆದರೂ ಸಾಧ್ಯವಾಗದೆ ಆತನ ತುಟಿಗಳಿಂದ ಮಿಂಚಿದ ಕೊಟ್ಟಕೊನೆಯ ಮುಗುಳುನಗೆ ಈಗಲೂ ನನ್ನ ನೆನಪಿನಲ್ಲಿ ಅಚ್ಚಳಿಯದೆ ನಿಂತಿದೆ. ನಿಲ್ದಾಣದ ಜಗಲಿಯ ಮೇಲೆ ಏಕಾಕಿಯೂ, ಅನಾಥನೂ ಆದ ಆ ವ್ಯಕ್ತಿಯನ್ನು ಬಿಟ್ಟು ನಾವು ಮುಂದುವರಿದೆವು. ಸಂಕಷ್ಟ ಅನಿಶ್ಚಯತೆ ಏಕಾಂತತೆಗಳ ದುರವಸ್ಥೆಯಲ್ಲಿ ಆತನನ್ನು ಬಿಟ್ಟು, ಸಕಲ ಸುಖಭದ್ರತೆಗಳಿಂದ ಕೂಡಿದ ನಮ್ಮ ಬೀಡಿಗೆ ನಾವು ಹಿಂದಿರುಗಿದೆವು. ಆಗಾಗ್ಗೆ ಜವಹರನೂ ನಾನೂ ಆತನ ವಿಷಯವನ್ನು ಕಾಗದ ಪತ್ರಗಳ ಮೂಲಕ ತಿಳಿದುಕೊಳ್ಳುತ್ತಿದ್ದೆವು. ಕೆಲವು ದಿನಗಳನಂತರ ಯಾವ ಸಮಾಚಾರವೂ ತಿಳಿಯಲಿಲ್ಲ. ಆತನ ವಿಷಯವಾಗಿ ಅನೇಕ ಊಹಾಪೋಹಗಳು ಹುಟ್ಟಿಕೊಂಡವು. ಆತನು ಜೀವಂತನಾಗಿದ್ದು ಭೀಕರವಾದ ದುಃಖ

ದಾರಿದ್ರ್ಯಗಳಿಗೆ ಗುರಿಯಾಗಿ ಸಂಕಟಪಡುತ್ತಿದ್ದನೆಂದು ಕೆಲವರೂ, ರಷ್ಯಾದೇಶದಲ್ಲಿ ಬಂಧಿತನಾಗಿ ಗುಂಡಿನ ಬಾಯಿಗೆ ತುತ್ತಾದನೆಂದು ಕೆಲವರೂ, ಹೇಳಿಕೊಳ್ಳುತ್ತಿದ್ದರು. ವಾಸ್ತವಿಕವಾಗಿ ಏನು ಸಂಭವಿಸಿತೆಂಬುದು ಯಾರಿಗೂ ಗೊತ್ತಿಲ್ಲ. ಆತನ ಉಳಿವು ಅಳಿವುಗಳ ವಿಷಯ ಇನ್ನೂ ಒಗಟೆಯಾಗಿಯೇ ಉಳಿದಿದೆ.

ಇನ್ನೂ ಅನೇಕ ಕ್ರಾಂತಿಕಾರರನ್ನು ನಾವು ಬರ್ಲಿನ್ ಮತ್ತು ಇತರ ನಗರಗಳಲ್ಲಿ ಸಂಧಿಸಿದೆವು. ಅವರ ಹತ್ತಿರ ಕುಳಿತು ಅವರ ವಿವಿಧ ಸಾಹಸ ಕೃತ್ಯಗಳ ಕಥೆಗಳನ್ನು ಕೇಳುವುದೆಂದರೆ ನನಗೆ ಅತ್ಯಾದರ; ಅವರ ಧೈರ್ಯವನ್ನು ನೋಡಿ ಅವರಲ್ಲಿ ನನಗೆ ಅಪಾರವಾದ ಗೌರವ ಮೂಡಿತು. ಅವರು ತಮ್ಮ ಸರ್ವಸ್ವವನ್ನೆಲ್ಲ ತ್ಯಾಗಮಾಡಿ, ಅನೇಕ ಕಷ್ಟನಿಷ್ಠುರಗಳಿಗೆ ಗುರಿಯಾಗಿದ್ದರು; ಮಿಗಿಲಾಗಿ ಅವರ ಆರ್ಥಿಕ ಅವ್ಯವಸ್ಥೆ ಶಾಶ್ವತ ಸಮಸ್ಯೆಯಾಗಿ ಪರಿಣಮಿಸಿತ್ತು. ಅಡ್ಡಿ ಆತಂಕಗಳ ಪಡೆ ಅವರ ಮೇಲೆ ಧಾಳಿ ನಡೆಸಿದರೂ, ಅವರ ಬಾಳು ಹಸನಾಗಿಯೂ ಗೆಲುವಾಗಿಯೂ ಇತ್ತು. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಈ ದೇಶಭ್ರಷ್ಟರು ಚೆಲ್ಲಾಪಿಲ್ಲಿಯಾಗಿ ಹರಡಿದ್ದಾರೆ. ಅವರೆಂತಹ ಸುಸಂಸ್ಕೃತರು, ಸಾಹಸದಲ್ಲಿ ಕಲ್ಪನಾತೀತರು ! ನಮ್ಮ ದೇಶದಲ್ಲಿ ಅವರ ವಿಷಯವನ್ನು ಅರಿತಿರುವವರೆಷ್ಟುಮಂದಿ, ಅಥವಾ ಅವರ ವಿಷಯ ತಿಳಿದಿದ್ದು, ಒಮ್ಮೆಯಾದರು ಅವರನ್ನು ಸ್ಮರಿಸಿಕೊಳ್ಳುವವರೆಷ್ಟುಮಂದಿ ?

ನನ್ನ ನೆನಪಿನಲ್ಲಿ ಅಚ್ಚಳಿಯದೆ ನಿಂತಿರುವ ಮತ್ತೊಬ್ಬ ಮನೋಹರ ಮೂರ್ತಿ ಧನಗೋಪಾಲಮುಖರ್ಜಿ. ಸ್ವಗೃಹದಿಂದ ಓಡಿಹೋಗಿದ್ದ ವಂಗದೇಶದ ತರುಣ ಗ್ರಂಥಕರ್ತನವನು. ಅನೇಕ ಆಶ್ಚರ್ಯಜನಕ ಸಾಹಸಕೃತ್ಯಗಳನ್ನೆಸಗಿದನಂತರ, ಅಮೆರಿಕಾ ಖಂಡವನ್ನು ತಲುಪಿ ಅಲ್ಲಿಯೇ ನೆಲಸಿದ್ದನು. ಬಿಡುವಾದಾಗ ದುಡಿದು ಫೀಜಿಗೆ ಸಾಕಾದಷ್ಟು ದುಡ್ಡನ್ನು ಗಳಿಸಿಕೊಂಡು ಕಾಲೇಜು ವ್ಯಾಸಂಗವನ್ನು ಪೂರ್ಣಗೊಳಿಸಿದ್ದನು. ಕಾಲೇಜನ್ನು ಬಿಟ್ಟನಂತರ ಅವನು ಗ್ರಂಥಗಳನ್ನು ರಚಿಸಲಾರಂಭಿಸಿದನು. ದುರದೃಷ್ಟವಶಾತ್ ಭರತಖಂಡದಲ್ಲಿ ಅತನ ಕೃತಿಗಳ ವಿಷಯ ಹೆಚ್ಚಾಗಿ ತಿಳಿದಿಲ್ಲ. 'ಶಾಂತಿಯ ಮುಖ' 'ಜಾತಿ ಮತ್ತು

ಜಾತಿಬಾಹಿರ' ಮತ್ತು 'ನನ್ನ ಸಹೋದರನ ಮುಖ' ಎಂಬಿವು ನಾನು ಓದಿರುವ ಗ್ರಂಥಗಳಲ್ಲಿ ಕೆಲವು. 'ಸೊಬಗಿನ ಕೊರಳು' ಮತ್ತು 'ಆನೆ'ಯೇ ಮೊದಲಾದ ಅನೇಕ ಮನರಂಜಕವಾದ ಪುಸ್ತಕಗಳನ್ನು ಸಹ ಮಕ್ಕಳಿಗಾಗಿ ಬರೆದನು.

ನಾವು ಜಿನೀವದಲ್ಲಿದ್ದಾಗ, ಒಂದುದಿನ ಧನಗೋಪಾಲನಿಂದ ಒಂದು ಪತ್ರ ಬಂದಿತ್ತು. ಅದು ಅಣ್ಣನನ್ನು ಉದ್ದೇಶಿಸಿ ಬರೆದದ್ದು. ಆಗ ಅಣ್ಣ ಇಂಗ್ಲೆಂಡಿನಲ್ಲಿದ್ದುದರಿಂದ ಕಮಲ ಅದನ್ನು ಬಿಚ್ಚಿದಳು. ಧನಗೋಪಾಲನು ನಮ್ಮನ್ನು ನೋಡಬೇಕೆಂದು ಬರೆದಿದ್ದನು. ಜವ ಹರನು ಊರಲ್ಲಿಲ್ಲವೆಂದೂ, ಅವನು ಇಷ್ಟಬಂದಾಗ ಬರಬಹುದೆಂದೂ ಕಮಲ ಉತ್ತರಬರೆದಳು. ಎರಡು ದಿನಗಳಾದನಂತರ ಸಂಜೆ ಐದು ಗಂಟೆಯ ಸಮಯದಲ್ಲಿ ಗಂಟೆಯ ದನಿ ಕೇಳಿಸಿತು. ಅಂದು ದಾಸಿಗೆ ರಜಾದಿನವಾದುದರಿಂದ ನಾನೇ ಬಾಗಿಲನ್ನು ತೆರೆಯಲು, ಹೊರಗಡೆ ತರುಣನೊಬ್ಬನು ಕಾಣಿಸಿಕೊಂಡನು. ಏನು ಬೇಕೆಂದು ಅವನನ್ನು ಪ್ರಶ್ನಿಸಿದೆನು. ಶ್ರೀಮತಿ ನೆಹ್ರೂರವರನ್ನೂ, ಅವರ ಪುತ್ರಿಯನ್ನೂ ನೋಡಬೇಕೆಂದನು. ಸಂಶಯಪೂರ್ವಕವಾಗಿ ಆತನನ್ನು ದೃಷ್ಟಿಸಿ ನೋಡಿ, ನೀವು ಯಾರೆಂದೆನು. ತಾನು ಧನಗೋಪಾಲಮುಖರ್ಜಿ ಎಂದು ಉತ್ತರವಿತ್ತನು. ಧನಗೋಪಾಲನೆಂಬುವನು ನಿಲುವಂಗಿ ಯುಟ್ಟು ಗಡ್ಡವನ್ನುಳ್ಳ ಮುದುಕನಿದ್ದಿರಬಹುದೆಂದು ಕಮಲ ಮತ್ತು ನಾನು ಮೊದಲೇ ಊಹಿಸಿಕೊಂಡಿದ್ದುದರಿಂದ, ನಾನು ತಳಮಳ ಗೊಂಡೆನು. ಆದರೆ ನಮ್ಮ ಊಹೆಗೆ ವಿರುದ್ಧವಾಗಿ ಅಮೇರಿಕದ ವರಸೆ ಯುಳ್ಳವನೂ ಸಸ್ನೇಹ ದೃಷ್ಟಿಯುಳ್ಳವನೂ ಆದ ಸುಂದರನಾದ ತರುಣ ನೊಬ್ಬನನ್ನು ಕಂಡೆನು. ನನ್ನ ಆಶ್ಚರ್ಯವನ್ನು ಬಚ್ಚಿಡಲು ಯತ್ನಿಸಿ, ಅವನನ್ನು ಒಳಕ್ಕೆ ಕರೆದು, ಕಮಲಳಿಗೆ ತಿಳಿಸಲು ಹೋದೆನು. ಸ್ವಲ್ಪ ಹೊತ್ತಿನಲ್ಲಿಯೇ ನಾವು ಹೊರಗೋಣೆಗೆ ಬಂದು ನೋಡಲು, ಧನಗೋಪಾ ಲನು ಕುಕ್ಕುರುಗಾಲಿನಲ್ಲಿ ಕುಳಿತು ಆರಿಹೋಗಿದ್ದ ಬೆಂಕಿಯನ್ನು ಹಚ್ಚಿ ಸುತ್ತಿದ್ದನು. ನಾವು ಒಳಗೆ ಪ್ರವೇಶಿಸಿದ ಕೂಡಲೇ ಆತನು ಎದ್ದು ನಿಂತು "ಓಹೋ, ಕೆಲವು ಅನುಕೂಲತೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದೆ

ನಾದುದರಿಂದ ನೀವೇನೂ ತಿಳಿದುಕೊಳ್ಳಲಾರಿರಿ ತಾನೆ" ಎಂದು ಹೇಳಿ ಮುಗುಳುನಗೆ ನಕ್ಕನು. ಅಂತಹ ಮಂದಹಾಸದಿಂದ ಅನೇಕ ಜನರನ್ನು ಆಕರ್ಷಿಸಿಕೊಂಡಿದ್ದನು. ಹಾಗೆಯೇ ಕಮಲೆ ಮತ್ತು ನಾನು ಇಬ್ಬರೂ ಆಕರ್ಷಿತರಾದೆವು. ಅಲ್ಲಿಂದೀಚೆಗೆ ಧನಗೋಪಾಲನೊಡನೆ ಕಳೆದ ಬಾಳು ವಿಚಿತ್ರವಾಗಿತ್ತು. ಅವನು ಒಂದೊಂದು ಸಾರಿ ಹೂಹಣ್ಣು ಗಳನ್ನು ತರುತ್ತಿದ್ದನು, ಕೆಲವುವೇಳೆ ಕಾಯಿಪಲ್ಯಗಳನ್ನು ತರುತ್ತಿದ್ದನು. ಆ ತರಕಾರಿಗಳಿಂದ ಬಂಗಾಳಿ ರೀತಿಯಲ್ಲಿ ಅಡಿಗೆಮಾಡಬೇಕೆಂದು ಒತ್ತಾಯಪಡಿಸುತ್ತಿದ್ದನು. ಆದರೆ ಅದು ಬಂಗಾಳಿ ಅಡಿಗೆಯಾಗುತ್ತಿರಲಿಲ್ಲ. ಅವನು ನನನ್ನು ಆಗಾಗ್ಗೆ ಗಾಳಿ ಸೇವನೆಗೆ ಜತೆಯಲ್ಲಿ ಕರೆದುಕೊಂಡುಹೋಗುತ್ತಿದ್ದನು. ವೈಕೈ ತುಸು ಬಿಸಿಯಾದಾಗ ಎಲ್ಲಿದ್ದರಲ್ಲಿಯೆ ತನ್ನ ಕೋಟನ್ನು ಮತ್ತು ಕವಚವನ್ನು ಕಳೆದು ಮೂಟೆ ಕಟ್ಟಿ ತೋಳ ಸಂದಿಯಲ್ಲಿರುಕಿಕೊಂಡು ನಡಿಗೆಯನ್ನು ಮುಂದುವರಿಸುತ್ತಿದುದು ನನಗೆ ವಿಸ್ಮಯವನ್ನುಂಟುಮಾಡುತ್ತಿತ್ತು. ನಾನು ಇತರ ಭಾರತೀಯರಂತಿಲ್ಲವೆಂದೂ, ವಿಶ್ರಾಂತಿಯಿಲ್ಲದೆ ಸದಾ ಕೆಲಸಗಳಲ್ಲಿ ತೊಡಗಿರುವೆನೆಂದೂ, ಶಾಂತಿಸಮತೆಗಳನ್ನು ಸಂಪಾದಿಸಲು ಪ್ರತಿದಿನ ಬೆಳಗ್ಗೆ ಅರ್ಧಗಂಟೆ ಕಾಲವಾದರೂ ಧ್ಯಾನಲೀನಳಾಗಬೇಕೆಂದೂ ಅವನು ಸದಾ ನನಗೆ ಹೇಳುತ್ತಿದ್ದನು. ಸ್ವಸ್ವಭಾವ ನಿಷ್ಠವಾದ ಆತನ ಗುಣಗಳು ವಿಚಿತ್ರವಾಗಿದ್ದರೂ, ಅವನು ಅತ್ಯಂತ ಚಿತ್ತಾಕರ್ಷಕನಾದ ವ್ಯಕ್ತಿಯಾಗಿದ್ದನು. ಅನೇಕ ವರ್ಷಗಳ ತನಕ ನಾವು ಪತ್ರವ್ಯವಹಾರವನ್ನಿಟ್ಟುಕೊಂಡಿದ್ದೆವು. ೧೯೩೭ನೆಯ ಇಸವಿಯಲ್ಲಿ ಧನಗೋಪಾಲನು ಭರತಖಂಡಕ್ಕೆ ಬಂದು ಕೆಲವು ದಿನಗಳು ಮಾತ್ರ ಇದ್ದನು. ಅವನ ಎಳೆತನದ ಹುರುಪುಹುಮ್ಮಸ್ಸುಗಳು ಇಳಿಮುಖವಾಗಿದ್ದುವು. ಬಾಳನ್ನು ವಿರಕ್ತಿ ಆವರಿಸಿತ್ತು. ಲೇಖನವೃತ್ತಿಯಲ್ಲಿ ಜಯಶೀಲನಾಗದೆ ನಿರಾಶನಾಗಿದ್ದನು. ಧನಗೋಪಾಲನು ಅಮೇರಿಕಾದೇಶದ ಹೆಣ್ಣನ್ನು ಮದುವೆಯಾಗಿದ್ದನು. ಅವನಿಗೊಬ್ಬ ಚಿಕ್ಕಮಗನೂ ಇದ್ದನು. ಆಗ ಆತನ ವಯಸ್ಸು ಬಹುಶಃ ಇಪ್ಪತ್ತೈದಿರಬಹುದು. ವಯಸ್ಸಿನಲ್ಲಿ ಅವನಿಗಿಂತ ಅವನ ಹೆಂಡತಿಯೇ ಹಿರಿಯವಳು. ಅವಳು ನ್ಯೂಯಾರ್ಕಿನಲ್ಲಿ ದೊಡ್ಡ

ದೊಂದು ಬಾಲಿಕಾ ಪಾಠಶಾಲೆಯ ಮುಖ್ಯಸ್ಥೆಯಾಗಿದ್ದಳು. ಅವಳು ತುಂಬ ಒಳ್ಳೆಯವಳು; ಮತ್ತು ದಕ್ಷತೆಯುಳ್ಳವಳು. ಆ ಕುಟುಂಬದಲ್ಲಿ ಕ್ರಮವಾಗಿ ಸಂಪಾದನೆಮಾಡುತ್ತಿದ್ದವರೆಂದರೆ ಅವಳೊಬ್ಬಳೆ. ತನ್ನ ಹೆಂಡತಿಯ ಗಳಿಕೆಯಲ್ಲಿ ತಾನೂ ಹೊಟ್ಟೆ ಹೊರೆದುಕೊಳ್ಳುತ್ತಿದ್ದುದು ಆತನಲ್ಲಿ ಅಸಮಾಧಾನವನ್ನು ಉಂಟುಮಾಡಿರಬೇಕೆಂದು ಕಾಣುತ್ತದೆ. ೧೯೩೨ನೆಯ ಇಸವಿಯಿಂದೀಚೆಗೆ ಧನಗೋಪಾಲನಿಂದ ಕಾಗದಗಳು ಹೆಚ್ಚು ಹೆಚ್ಚಾಗಿ ಬರುತ್ತಿದ್ದುವು. ಆದರೆ ಅವುಗಳು ಕೆಚ್ಚುನೆಚ್ಚುಗಳ ವಿನಾಶತೆಯನ್ನು ಸೂಚಿಸುತ್ತಿದ್ದುವು. ಅನಂತರ ಅವುಗಳೂ ನಿಂತು ಹೋದುವು. ಅವನು ನೇಣುಹಾಕಿಕೊಂಡು ತೀರಿಹೋದನೆಂದು ೧೯೩೬ನೆಯ ಇಸವಿಯಲ್ಲಿ ನಮಗೆ ತಿಳಿಯಿತು.

ಧನಗೋಪಾಲನು ನಮ್ಮ ಕಟ್ಟೊಲುಮೆಯ ಗೆಳೆಯ. ಆತನ ಮರಣವಾರ್ತೆಯನ್ನು ಕೇಳಿದಾಗ ಜವಹರ, ಕಮಲ ಮತ್ತು ನನಗೆ ಸಿಡಿಲು ಬಡಿದಂತಾಯಿತು. ನಾವು ವಿಶ್ವಾಸಾರ್ಹನಾದ ಮಿತ್ರನೊಬ್ಬನನ್ನು ಕಳೆದುಕೊಂಡೆನು. ಭರತಖಂಡವು ಅತ್ಯಂತ ಮೇಧಾವಿಯಾದ, ಆದರೆ ಬೆಳಕಿಗೆ ಬಾರದ ಸುಪುತ್ರನನ್ನು ಕಳೆದುಕೊಂಡಿತು.

೧೯೨೬ನೆಯ ಇಸವಿಯ ಬೇಸಗೆಯಲ್ಲಿ ತಂದೆಯವರು ಯೂರೋಪಿಗೆ ಬಂದರು. ಜವಹರನಿಗೂ ನನಗೂ ಬಹಳ ಸಂತೋಷವಾಯಿತು; ಏಕೆಂದರೆ, ತಂದೆಯವರಿಗೆ ವಿಶ್ರಾಂತಿಯೂ, ಹವಾ ಬದಲಾವಣೆಯೂ ಅತ್ಯಗತ್ಯವಾಗಿದ್ದುವು. ಕೊನೆಯ ಗಳಿಗೆಯಲ್ಲಿ ಏನಾದರೂ ಒದಗಿ ಮತ್ತೆ ಅವರು ಪ್ರಯಾಣವನ್ನು ತಡೆಗಟ್ಟಬಹುದೇನೋ ಎಂದು ನಾವು ಹೆದರಿದ್ದೆವು. ಅಂತು, ಏನೂ ಸಂಭವಿಸಲಿಲ್ಲ. ಪ್ರಯಾಣಸಿದ್ಧತೆಗಳೆಲ್ಲ ಮುಗಿದಿವೆಯೆಂದು ನನಗೊಂದು ಕಾಗದ ಬರೆದರು. "ನಾನು ಯೂರೋಪಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ನೀನೂ ಅಣ್ಣನೂ (ಜವಹರನೂ) ಒತ್ತಾಯಪಡಿಸುತ್ತಾ ಇದ್ದೀರಿ. ಇಲ್ಲಿ ಸ್ವರೂಪಳು ಮತ್ತು ರಣಜಿತ್ತನು ಸಹ ಹಾಗೆಯೇ ಬಲಾತ್ಕಾರ ಮಾಡುತ್ತಿದ್ದಾರೆ. ಅಂತು ಸದ್ಯದ ಪ್ರಯಾಣ ಬೆಳೆಸಲು ಸಾಧ್ಯವಾಗಿದೆ. ಕಳೆದ ಏಳು ವರ್ಷಗಳ ಅವಿಚ್ಛಿನ್ನ ಸಾರ್ವಜನಿಕ ಕಾರ್ಯಕಲಾಪಗಳಿಂದ

ಸ್ವಲ್ಪ ಬಳಲಿದ್ದೇನೆ. ಇಷ್ಟು ದೀರ್ಘಕಾಲದ ಅವಿಶ್ರಾಂತ ಪ್ರಯತ್ನದ ಪರಿಣಾಮವಾಗಿ ದೇಶದ ಧ್ಯೇಯಸಾಧನೆ ಸಾಕಾದಷ್ಟು ಮುಂದುವರಿದಿಲ್ಲವೆಂಬ ಕೊರತೆ ನನ್ನನ್ನು ಪೀಡಿಸುತ್ತಿದೆ. ಆದುದರಿಂದ ವಿರಾಮವನ್ನು ತೆಗೆದುಕೊಂಡು ನಿಮ್ಮೆಲ್ಲರೊಡನೆ ಇರುವ ಆನಂದವನ್ನಾದರು ಸವಿಯಲು ನಿಶ್ಚಯಿಸಿದ್ದೇನೆ." ಹೀಗೆಂದು ಹಡಗು ಹತ್ತುವುದಕ್ಕೆ ಮುಂಚೆ ಬರೆದ ಕಾಗದದಲ್ಲಿ ಅವರು ತಿಳಿಸಿದರು. ಬ್ರಸಲ್ಸ್ ನಗರದಲ್ಲಿ ನಡೆದ ಅಂತರ್ರಾಷ್ಟ್ರೀಯ ಸಮ್ಮೇಳನದ ವಿಷಯವನ್ನು ಕುರಿತು ನನ್ನ ಹಿಂದಿನ ಕಾಗದದಲ್ಲಿ ಪ್ರಸ್ತಾಪಿಸಿದ್ದೆನು. ಆ ವಿಷಯವನ್ನುದ್ದೇಶಿಸಿ ತಮ್ಮ ಪತ್ರದಲ್ಲಿ ಈ ರೀತಿ ಬರೆದರು—"ನಿನ್ನ ಕಾಗದ ತಲುಪಿತು. ನೀನು ಸಂಗ್ರಹಿಸಿರುವ ಬ್ರಸಲ್ಸ್ ಸಮ್ಮೇಳನದ ಕಾರ್ಯಕಲಾಪಗಳ ವರದಿಯನ್ನೂ, ಆ ವಿಷಯಕ್ಕೆ ಸಂಬಂಧಿಸಿದ ನಿನ್ನ ಹೃದಯದ ಪ್ರತಿಧ್ವನಿಯನ್ನೂ ನಾನು ಸಂತೋಷದಿಂದ ಗ್ರಹಿಸಿದ್ದೇನೆ. ನೀನು ಪುಟ್ಟ ರಾಜಕೀಯ ನೀತಿಜ್ಞೆಯಾಗಿದ್ದೀಯೆಂದು ತೋರುತ್ತದೆ. ರಾಜಕೀಯ ಕ್ಷೇತ್ರದಲ್ಲಿ ನೀನು ಹುಡುಗಿಯಾಗಿರುವುದೊಂದು ಅಡಚಣೆಯೆಂದು ಸರ್ವಥಾ ಯೋಚಿಸಬೇಡ. ತಮ್ಮ ತಮ್ಮ ಮಾತೃಭೂಮಿಯ ಸೇವೆಯಲ್ಲಿ ಗಂಡಸರಂತೆಯೆ ಅನೇಕ ಹೆಂಗಸರೂ ಅದ್ಭುತಶಕ್ತಿ ಸಾಮರ್ಥ್ಯಗಳನ್ನು ತೋರಿಸಿದ್ದಾರೆ. ಕೆಲವು ಹೆಂಗಸರು ಗಂಡಸರನ್ನು ಮೀರಿಸಿದ್ದಾರೆ. ಉಜ್ವಲ ಸ್ವದೇಶಾಭಿಮಾನ, ಉತ್ಥಾಪನಕಾರ್ಯದಲ್ಲಿ ಆತ್ಮಸಮರ್ಪಣ ಮನೋನಿಶ್ಚಯ, ಇವೇ ದೇಶಸೇವಕರ ಮುಖ್ಯಗುಣಗಳು. ರಾಜಕೀಯಕ್ಷೇತ್ರದಲ್ಲಿ ಲಿಂಗಭೇದವಿಲ್ಲ. ಅಷ್ಟೇ ಅಲ್ಲ, ಪಣತೊಟ್ಟ ಹೆಂಗಸಿನ ಪ್ರಭಾವ ಗಂಡಸಿನ ಪೌರುಷವನ್ನು ಕೂಡ ಮೀರಿಸಬಲ್ಲುದು. ಆದುದರಿಂದ ನಿನಗೂ ಬೇಕಾದಷ್ಟು ಅವಕಾಶವಿದೆ. ನಿಷ್ಕಪಟ ದೇಶಾಭಿಮಾನ ನಿನ್ನ ಧಮನಿ–ಧಮನಿಗಳಲ್ಲಿ ಪ್ರವಹಿಸುತ್ತಿದೆಯೆಂಬುದನ್ನು ಮರೆಯಬೇಡ. ನೀನು ಅದನ್ನು ಪ್ರಯಾಸದಿಂದ ಅದುಮುದಿದ್ದಲ್ಲಿ ಇಂದೋ ನಾಳೆಯೋ ಅದು ತನ್ನ ಪ್ರಭಾವವನ್ನು ಬೀರಲೇಬೇಕು."

೧೯೨೭ ನೆಯ ಇಸವಿಯ ಸೆಪ್ಟೆಂಬರ್ ತಿಂಗಳಲ್ಲಿ ಅವರು ಬಂದರು. ಅವರು ನಮ್ಮ ನಡುವೆ ಇದ್ದಾಗ ನಮ್ಮ ಆನಂದಕ್ಕೆ ಪಾರವೇ

ಇರುತ್ತಿರಲಿಲ್ಲ. ಒಂದು ವರ್ಷದ ವಿಯೋಗಾನಂತರ ತನ್ನ ಮಕ್ಕಳೊಡನೆ ಮತ್ತೆ ಕಲೆಯುವುದೆಂದರೆ ಅವರಿಗೆ ಹಿಡಿಸಲಾರದಷ್ಟು ಸಂತೋಷ. ಜವಹರನೊಡನೆ ಓದುತ್ತಲೋ, ಆತನ ಕಾರ್ಯದರ್ಶಿಯಾಗಿದ್ದು ಅನೇಕ ವಿಧಗಳಲ್ಲಿ ಆತನಿಗೆ ಉಪಕಾರಿಯಾಗಿಯೂ, ಸಹಾಯಕಳಾಗಿಯೂ ಇರುತ್ತಲೋ ಅಂದಿನವರೆಗಿನ ಕಾಲವನ್ನು ಕಳೆದಿದ್ದೆನು. ತದ್ವಿರುದ್ಧವಾಗಿ ಆಮೇಲಣ ತಿಂಗಳುಗಳನ್ನು ತಂದೆಯವರೊಡನೆ ಸುಖಸಂತೋಷಗಳಿಂದಲೂ ಸೋಮಾರಿತನದಿಂದಲೂ ಕಳೆದೆನು. ಆದರೆ ಮಿತಿ ಮೀರಲಿಲ್ಲ. ಒಟ್ಟಿನಲ್ಲಿ ಆ ಕಾಲವನ್ನು ಚೆನ್ನಾಗಿ ಅನುಭವಿಸಿದೆನೆಂದು ಒಪ್ಪಿಕೊಳ್ಳುತ್ತೇನೆ.

ನಾವೆಲ್ಲರೂ ಒಟ್ಟಿಗೆ ಲಂಡನ್ನಿಗೆ ಹೋದೆವು. ಅನೇಕ ವರ್ಷಗಳ ಹಿಂದೆ ತಂದೆಯವರು ಜವಹರನನ್ನು ಹ್ಯಾರೋವಿಗೆ ಕರೆದೊಯ್ದಿದ್ದಾಗ ಇಳಿದುಕೊಂಡಿದ್ದ ಹೋಟಲಿನಲ್ಲಿಯೇ ಮತ್ತೆ ಇಳಿದುಕೊಂಡೆವು. ನಾವು ಹೋಟಲನ್ನು ತಲುಪಿದ ಕೂಡಲೆ ನಡುಮನೆಯ ಕಾವಲುಗಾರನ ಹತ್ತಿರ ಹೋಗಿ ನಮಗೆ ಏನಾದರೂ ಕಾಗದಗಳಿದ್ದುವೆ ಎಂದು ಕೇಳಿದೆನು. “ ನಿಮ್ಮ ಹೆಸರೇನು ?” “ ನೆಹ್ರೂ ” ಎಂದೆನು. “ ನೆಹ್ರೂ ? ” ಎಂದು ತನಗೆ ತಾನೇ ಗೊಣಗುಟ್ಟುತ್ತಾ ಸ್ವಲ್ಪ ಹೊತ್ತು ಕಾಗದದ ಗೂಡುಗಳನ್ನು ಶೋಧಿಸಿದನು. ತತ್‌ಕ್ಷಣವೇ ನನ್ನ ಕಡೆಗೆ ತಿರುಗಿ “ ಬಹಳ ವರ್ಷಗಳ ಹಿಂದೆ ನೆಹ್ರೂ ಎಂಬೊಬ್ಬರು ಸಭ್ಯಗೃಹಸ್ಥರನ್ನು ಕಂಡಿದ್ದೆನು. ಅವರು ತುಂಬ ಶ್ರೀಮಂತರು. ಅವರ ಪತ್ನಿ ಲಾವಣ್ಯವತಿ. ಅವರ ಚಿಕ್ಕಮಗ ಹ್ಯಾರೋವಿನಲ್ಲಿ ವ್ಯಾಸಂಗಮಾಡುತ್ತಿದ್ದನು. ನೀವೇನಾದರು ಅವರಿಗೆ ಸಂಬಂಧಿಯಾಗಿರಬಹುದೆ ? ” ಎಂದು ಕೇಳಿದನು. ನನಗೆ ರೋಮಾಂಚವಾಯಿತು. ಹಿಂದೊಂದು ಸಾರಿ ಅಲ್ಲಿ ತಂಗಿದ್ದ ವ್ಯಕ್ತಿಯೇ ನನ್ನ ತಂದೆ, ತುಸು ಬೋಳು ತಲೆಯ ಇನ್ನೊಬ್ಬ ವ್ಯಕ್ತಿಯೇ ಹ್ಯಾರೋವಿಗೆ ಹೋಗುತ್ತಿದ್ದ ಆ ಚಿಕ್ಕ ಹುಡುಗ, ಎಂದು ವಿಸ್ಮಯದಿಂದ ತಳತಳಿಸುತ್ತಿದ್ದ ಕಾವಲುಗಾರನ ಕಡೆಗೆ ನೋಡುತ್ತ ಹೇಳಿದೆನು. ಮುಪ್ಪಿನ ಕಾವಲುಗಾರನ ಆನಂದಕ್ಕೆ ಪಾರವೇ ಇರಲಿಲ್ಲ. ನಮ್ಮನ್ನು ಅತಿಶಯವಾದ ಶ್ರದ್ಧೆಯಿಂದ ನೋಡಿಕೊಂಡನು.

ಎಷ್ಟೋ ವರ್ಷಗಳು ಕಳೆದು ಹೋಗಿದ್ದರು ಅವನು ನಮ್ಮ ಹೆಸರನ್ನು ನೆನಪಿನಲ್ಲಿಟ್ಟುಕೊಂಡಿದ್ದುದು ಗಣನೀಯವಾದ ಅಂಶ. ಅದುಕಂಡು ನನ್ನಲ್ಲಿ ವಿಸ್ಮಯಾನಂದಗಳು ಏಕಕಾಲದಲ್ಲಿ ಉದಯಿಸಿದುವು.

ತಂದೆಯವರೊಡನೆ ಹೋದೆಡೆಯಲ್ಲೆಲ್ಲ ನಮಗೆ ರಾಜಮರ್ಯಾದೆ ದೊರಕುತ್ತಿತ್ತು. ಯಾವುದಾದರೂ ಹೋಟಲಿಗೆ ಹೋಗುವುದೇ ತಡ, ಪಾರುಪತ್ಯಗಾರನು ವಂದನಾಪೂರ್ವಕವಾಗಿ ಹಾರತುರಾಯಿಗಳನ್ನು ಕಳುಹಿಸಿ ನಮ್ಮನ್ನು ಸ್ವಾಗತಿಸುತ್ತಿದ್ದನು. ಅವನು ಸ್ವತಃ ಬಂದು ನಮ್ಮ ಸೌಕರ್ಯಗಳ ವಿಷಯವಾಗಿ ವಿಚಾರಿಸಿಕೊಳ್ಳುತ್ತಿದ್ದನು. ಹಗಲೆಲ್ಲ ಹಲವರು ನಮ್ಮ ಸುತ್ತಮುತ್ತ ಸುಳಿದಾಡುತ್ತಿದ್ದರು. ನೂತನ ವಾತಾವರಣ ಸ್ವಲ್ಪ ಕಾಲ ಮಾತ್ರ ನನಗೆ ಸಂತೋಷದಾಯಕವಾಗಿತ್ತು.

ಒಮ್ಮೆ ತಂದೆಯವರು ಒಬ್ಬರೇ ಲಂಡನ್ನಿಗೆ ಹೋಗುವವರಾಗಿದ್ದರು. ಉಳಿದವರೆಲ್ಲರು ಪ್ಯಾರಿಸ್ಸಿನಲ್ಲಿಯೇ ತಂಗಬೇಕಾಗಿತ್ತು. ಲಂಡನ್ನಿನಿಂದ ನನಗಾಗಿ ಏನು ತರಬೇಕೆಂದು ಅವರು ನನ್ನನ್ನು ಕೇಳಿದರು. ಚಿಕ್ಕದೊಂದು ಚರ್ಮದ ಕಂಚುಕವನ್ನು ಪಡೆಯಬೇಕೆಂಬ ಬಯಕೆ ಬಹಳ ದಿನಗಳಿಂದ ಇದೆಯೆಂದೆನು. ಅದು ಅನಾವಶ್ಯಕವೆಂದು ಜವಹರನು ಹೇಳಿದ್ದುದರಿಂದ, ನನಗೆ ದೊರಕಿರಲಿಲ್ಲ. ಅದನ್ನು ತಂದು ಕೊಡುವುದಾಗಿ ತಂದೆಯವರು ಮಾತುಕೊಟ್ಟರು. ಆದರೆ ನನ್ನ ಅಳತೆ ತೆಗೆದುಕೊಳ್ಳುವುದನ್ನು ಮರೆತರು. ಲಂಡನ್ನಿಗೆ ಹೋದ ಮೇಲೆ ಒಂದು ದಿನ ತಂದೆಯವರು ಸೇಲ್‌ಫ್ರಿಡ್ಜಿಗೆ ಹೋಗಿ ಅಲ್ಲಿಯ ಯಜಮಾನರನ್ನು ನೋಡಬೇಕೆಂದರು. ಮಾಲೀಕನು ಬಂದನಂತರ ತಮ್ಮ ಮಗಳಿಗೊಂದು ಚರ್ಮದ ಕಂಚುಕವನ್ನು ಕೊಳ್ಳಲು ಬಂದಿರುವುದಾಗಿ ತಿಳಿಸಿದರು. ಆದರೆ ನಿಖರವಾದ ಅಳತೆ ಗೊತ್ತಿಲ್ಲದುದರಿಂದ, ಸುಮಾರು ಐದು ಅಡಿ ಏಳು ಅಂಗುಲ ಎತ್ತರವಿದ್ದ ಅಂಗಡಿಯ ಕೆಲವು ಹುಡುಗಿಯರನ್ನು ಸಾಲಾಗಿ ನಿಲ್ಲಿಸಿ, ಅವರಿಗೆ ಅಂಗಿಗಳನ್ನು ತೊಡಿಸಿದರೆ, ಆಗ ತಮಗೆ ಸರಿಕಾಣುವ ಅಂಗಿಯನ್ನು ಗೊತ್ತುಮಾಡಿಕೊಂಡು ಆರಿಸಿಕೊಳ್ಳುವುದಾಗಿ ತಂದೆಯವರು ಮಾಲೀಕನನ್ನು ಕೇಳಿದರು.

ಅಸಾಧಾರಣವಾದ ಆ ಪ್ರಾರ್ಥನೆಯನ್ನು ಕೇಳಿದ ಮಾಲೀಕ ವಿಸ್ಮಯ ಚಕಿತನಾದನು. ತಂದೆಯವರು ಒತ್ತಾಯಪಡಿಸಿದುದರಿಂದ, ಆತನು ಅವರ ಇಷ್ಟಾರ್ಥವನ್ನು ಈಡೇರಿಸಲು ನಿರ್ಧರಿಸಿಕೊಂಡನು. ಅಂತು ತಂದೆಯವರು ನನಗೊಂದು ಸುಂದರವಾದ ಕಂಚುಕವನ್ನೇನೋ ತಂದು ಕೊಟ್ಟರು. ಆದರೆ ವರಣವಿಧಾನವನ್ನು ಮಾತ್ರ ಅವರು ಮನಸ್ಸಿಗೆ ಅಂಟಿಸಿಕೊಂಡಂತೆ ಕಾಣಲಿಲ್ಲ. ಅದು ಅಸಾಧುವೊ ಅಥವ ಅಸಾಧಾರಣವೊ ಎಂದು ಯೋಚಿಸಬೇ ಇಲ್ಲ. ಅವರು ನಮಗೆ ಆ ಕಥೆಯನ್ನು ವಿಸ್ತರಿಸಿದಾಗ, ನಾನೂ ಕಮಲಳೂ ನಕ್ಕೆವು; ಆದರೆ ಜವಹರನು ಕೆರಳಿದನು. ಅಂತಹ ಕಾರ್ಯ ಸುಲಭಸಾಧ್ಯವಾದ ಮಾತ್ರಕ್ಕೆ, ತಂದೆಯವರು ಹಾಗೆ ಮಾಡಿದುದು ತಪ್ಪೆಂದು ಅವನು ಭಾವಿಸಿದನು.

೧೯೨೭ ನೆಯ ನವೆಂಬರ್ ತಿಂಗಳಲ್ಲಿ ನಾವೆಲ್ಲರು ಬರ್ಲಿನ್ನಿಗೆ ಹೋಗಿ ಕೆಲವು ದಿನಗಳಿದ್ದೆವು. ರಷ್ಯಾಕ್ರಾಂತಿಯ ಹತ್ತನೆಯ ವಾರ್ಷಿಕೋತ್ಸವದಲ್ಲಿ ಭಾಗವಹಿಸುವುದಕ್ಕಾಗಿ ಜವಹರನು ಮಾಸ್ಕೋವಿಗೆ ಹೋಗಲಪೇಕ್ಷಿಸಿದನು. ಆತನಿಗೂ ತಂದೆಯವರಿಗೂ ಅಹ್ವಾನಪತ್ರಿಕೆಗಳು ಬಂದಿದ್ದುವು. ನಾನೂ ಕಮಲಳೂ ಹೋಗಲು ಕುತೂಹಲಿಗಳಾಗಿದ್ದೆವು. ವಾರ್ಸೇಲ್ಸಿಗೆ ಹೋಗಿ ಹಡಗು ಹತ್ತಲು ನಮಗಿದ್ದುದು ಒಂದೇ ವಾರದ ಸಮಯ. ಆ ಅತ್ಯಲ್ಪಾವಧಿಯಲ್ಲಿ ರಷ್ಯಾ ದೇಶವನ್ನು ನೋಡಿ ಬರುವುದು ಅಸಾಧ್ಯವಾದುದರಿಂದ, ಪ್ರಯಾಣ ಅನಾವಶ್ಯಕವೆಂದು ತಂದೆಯವರು ಮೊದಲೇ ಹೇಳಿಬಿಟ್ಟರು. ಜವಹರನ ಕುತೂಹಲ ತೀವ್ರವಾಗಿದ್ದುದರಿಂದ ತಂದೆಯವರು ಸಮ್ಮತಿಸಬೇಕಾಯಿತು. ಎಲ್ಲರು ಮಾಸ್ಕೋವಿಗೆ ಹೋದೆವು. ಪ್ರಯಾಣ ಪ್ರಯಾಸಕರವಾಗಿಯೂ, ಸುಖರಹಿತವಾಗಿಯೂ ಇತ್ತು. ಒಮ್ಮೊಮ್ಮೆ ತಂದೆಯವರು ತುಂಬ ರೇಗುತ್ತಿದ್ದರು.

ಮಾಸ್ಕೋನಗರವು ರೌದ್ರತೆ ವಿಷಣ್ಣತೆಗಳ ಮುಸುಕನ್ನು ಹೊದೆದುಕೊಂಡಿದ್ದಂತೆ ಕಾಣುತ್ತಿತ್ತು. ಒರಟಾದ ಸರಳವಸ್ತ್ರಗಳನ್ನು ಧರಿಸಿದ್ದ ಅಲ್ಲಿನ ಸ್ತ್ರೀಪುರುಷರ ಅಂತರಂಗದಲ್ಲಿ ಏನೋ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಯಾವುದೋ ಹೃದಯಾಂತ

ರ್ಗತ ಮಹಿಮೆಯಿಂದ ಅವರು ಪ್ರದೀಪ್ತರಾಗಿಯೂ ಚಿತ್ತಾಕರ್ಷಕ ರಾಗಿಯೂ ಇದ್ದರು. ತಮ್ಮ ರಾಷ್ಟ್ರವನ್ನು ಪ್ರಪಂಚದಲ್ಲೆಲ್ಲ ಅತ್ಯಂತ ವಿಭವೋನ್ನತವೂ ಮಹಿಮಾನ್ವಿತವೂ ಆದುದನ್ನಾಗಿ ಮಾಡಲೇಬೇಕೆಂಬುದೇ ಅವರ ಹೆಬ್ಬಯಕೆಯಾಗಿತ್ತು. ಆ ಆದರ್ಶಸಾಧನೆಗಾಗಿ ಅವರು ಸಮಸ್ತ ದುಃಖತ್ಯಾಗಗಳನ್ನು ಸಹಿಸಲು ದೃಢಸಂಕಲ್ಪವುಳ್ಳವರಾಗಿಯೂ, ಸ್ಥಿರನಿಶ್ಚಯವುಳ್ಳವರಾಗಿಯೂ ಇದ್ದರು.

ನಾವು ಗ್ರ್ಯಾಂಡ್ ಹೋಟಲಿನಲ್ಲಿ ಇಳಿದುಕೊಂಡೆವು. ಅದು ದೊಡ್ಡ ದೊಡ್ಡ ಕೋಣೆಗಳಿಂದ ಕೂಡಿದ ಸವಿಸ್ತಾರವಾದ ಗೃಹ. ಮಧ್ಯ ಯುಗದ ವಾತಾವರಣವನ್ನು ಮರೆಸಲು, ಜಾರನಕಾಲದ ಮರ ಮುಟ್ಟುಗಳನ್ನೆಲ್ಲ ದಪ್ಪನೆಯ ಒರಟು ಬಟ್ಟೆಯಿಂದ ಮುಚ್ಚಿತ್ತು. ಚಳಿ ಕೊರೆಯುತ್ತಿತ್ತು. ಬೆಳಗ್ಗೆ ದಾದಿಯನ್ನು ಕೂಗಿ ಸ್ನಾನಕ್ಕೋಸ್ಕರ ಬಿಸಿನೀರನ್ನು ಕೇಳಲು, ಅವಳು ಆಶ್ಚರ್ಯಗೊಂಡು ನನ್ನನ್ನೇ ಎವೆಯಿಕ್ಕದೆ ನೋಡಿದಳು. ಸ್ನಾನಕ್ಕೆ ಸಾಕಾಗುವಷ್ಟು ನೀರು ದೊರಕುವುದು ಅಸಾಧ್ಯವೆಂದು ಆಕೆ ಅನೇಕ ರೀತಿಯ ಸನ್ನೆಗಳಿಂದಲೂ, ಅಂಗಭಂಗಿಯಿಂದಲೂ ಪ್ರಕಾಶಪಡಿಸಿದಳು. ಸ್ನಾನ ಮಾಡಬೇಕೆಂಬ ನನ್ನ ಆಸೆಯನ್ನು ಯಾರಿಗೆ ತಿಳಿಸಬೇಕು? ಮುಖ ತೊಳೆಯಲು ಅರೆತೊಟ್ಟೆ ಬಿಸಿನೀರು ಸಿಗುತ್ತಿತ್ತು. ನಾವೆಲ್ಲರು ಅಷ್ಟರಿಂದಲೆ ತೃಪ್ತರಾಗಬೇಕಾಗಿತ್ತು. ಆದರೆ ತಂದೆಯವರಿಗೆ ಅಷ್ಟೇ ಸಾಲದು. ಕೊರೆವ ಚಳಿಯಾಗಲಿ, ಉರಿವ ಬಿಸಿಲಾಗಲಿ, ಅವರು ಪ್ರತಿನಿತ್ಯವು ಸ್ನಾನಮಾಡಲೇಬೇಕಾಗಿತ್ತು. ರಷ್ಯಾವೊ ಗಿಷ್ಯಾವೊ, ತಮ್ಮ ನಿತ್ಯಕರ್ಮಗಳನ್ನು ಖಂಡಿತ ಬಿಡುವವರಲ್ಲ ಸ್ನಾನಕ್ಕಾಗಿ ಬಿಸಿನೀರು ಬೇಕೆಂಬ ಅವರ ಒತ್ತಾಯದಿಂದ ಹೋಟಲಿನ ಕೆಲಸಗಾರರು ಕಕ್ಕಾಬಿಕ್ಕಿಯಾದರು.

ಇತರ ವ್ಯಕ್ತಿಗಳ ಜತೆಗೆ ತಂದೆಯವರು ವಿದೇಶಾಂಗ ಸಚಿವರಾದ ಚಿಚರೀನರನ್ನು ಭೇಟಿಮಾಡಬೇಕಾಗಿತ್ತು. ಚಿಚರೀನರು ಕುಶಾಗ್ರ ಬುದ್ಧಿಯುಳ್ಳ ವಿವೇಕಿ, ಮತ್ತು ಉತ್ತಮ ಭಾಷಾಶಾಸ್ತ್ರ ಪಂಡಿತರು. ಭೇಟಿಯನ್ನು ಗೊತ್ತುಮಾಡಿಕೊಂಡಾಯಿತು. ಆ ರಾತ್ರಿಯೆಲ್ಲ ಸ್ವಲ್ಪವೂ ವಿರಾಮವಿಲ್ಲದುದರಿಂದ ಮಾರನೆಯ ಬೆಳಗ್ಗೆ ನಾಲ್ಕು ಗಂಟೆಗೆ ಚಿಚರೀನ

ರನ್ನು ನೋಡಬಹುದೆಂದು ರಷ್ಯ ಯುವಕನೊಬ್ಬನು ಬಂದು ತಂದೆಯ
ವರಿಗೆ ತಿಳಿಸಿದನು. ವರ್ತಮಾನವಾಹಕನಿಗೆ ಜ್ಞಾನ ಸರಿಯಾಗಿದೆಯೋ
ಇಲ್ಲವೋ ಎಂದು ತಂದೆಯುವರು ಆತನನ್ನು ಶಂಕೆಯಿಂದ ನೋಡಿ, ಆ
ವರ್ತಮಾನವನ್ನು ತಾವೇ ಪುನರುಚ್ಚರಿಸಿದರು. ಯುವಕ ತಲೆ
ಅಲ್ಲಾಡಿಸಿ, ತಾನು ಹೇಳಿದುದು ತಂದೆಯುವರಿಗೆ ಅರ್ಥವಾಗಿದೆ
ಯೆಂದೂ, ಬೆಳಗ್ಗೆ ನಾಲ್ಕು ಗಂಟೆಗೆ ಭೇಟಿಯೆಂದೂ ಮತ್ತೆ ಹೇಳಿದನು.
ಬೆಳಗ್ಗೆ ನಾಲ್ಕು ಗಂಟೆಯುತನಕ ಏನು ಮಾಡುವುದೆಂದು ತಂದೆಯುವರು
ತುಂಬ ಬೇಸರಗೊಂಡರು. ಅಂತಹ ವೇಳೆಯಲ್ಲಿ ಹೋಗಲು ಅವರಿಗೆ
ಇಷ್ಟವಿಲ್ಲದುದರಿಂದ ಮಧ್ಯರಾತ್ರಿಯನಂತರ ಒಂದು ಗಂಟೆಯ ಹೊತ್ತಿಗೆ
ಭೇಟಿ ನಿರ್ಧರವಾಯಿತು.

ಉತ್ಸವಗಳು ವೈಭವಯುತವಾಗಿಯೂ, ಮನರಂಜಕವಾಗಿಯೂ ಇದ್ದುವು. ಕೆಂಪು ಸೈನ್ಯದ ಮೆರೆವಣಿಗೆ ವಿಶಿಷ್ಟ ದೃಶ್ಯವಾಗಿತ್ತೆಂದು ಕೇಳಿದೆವು. ನಾವು ಒಂದು ದಿನ ತಡವಾಗಿ ಬಂದುದರಿಂದ ಅದನ್ನು ನೋಡಲಾಗಲಿಲ್ಲ. ಕೆಂಪು ಚೌಕದಲ್ಲಿ ಲೆನಿನ್ನನ ಗೋರಿಯಿತ್ತು. ಶವ ಕೆಡದಹಾಗೆ ದ್ರವ್ಯವಿಶೇಷಗಳನ್ನು ಬಳಿದು ಗಾಜಿನ ಪೆಟ್ಟಿಗೆಯಲ್ಲಿ ಅದನ್ನು ಇಟ್ಟಿತ್ತು. ನಿಯಮಿತ ಸಮಯದಲ್ಲಿ ಜನರು ಅಲ್ಲಿಗೆ ಹೋಗಿ ಲೆನಿನ್ನನಿಗೆ ತಮ್ಮ ಭಕ್ತಿಯನ್ನು ಸಮರ್ಪಿಸಲು ಅವಕಾಶವಿತ್ತು. ನೂರಾರು ಮಂದಿ ಅನಾವೃತಶಿರಸ್ಸುಳ್ಳವರಾಗಿ ಸಾಲಾಗಿ ನಿಂತು ನಿಸ್ತಬ್ಧತೆಯಿಂದ ಆ ಕಾರ್ಯವನ್ನು ನೆರವೇರಿಸುತ್ತಿದ್ದರು. ಹೊರಗಡೆ ಸಶಸ್ತ್ರಧಾರಿಗಳಾದ ಇಬ್ಬರು ಸೈನಿಕರೂ, ಒಳಗಡೆ ಕೆಲವು ಸೈನಿಕರೂ ಕಾವಲಿರುತ್ತಿದ್ದರು. ನಾವು ಸಹ ಗೋರಿಯನ್ನು ನೋಡಿದೆವು. ಆತನು ಯಾವ ಕ್ಷಣವಲ್ಲಾದರು ಎದ್ದು ಬಂದು ಮಾತಾಡಬಹುದೆನ್ನುವಷ್ಟು ಜೀವಂತನಾಗಿ ಕಂಡುಬಂದನು.

ಒಂದು ದಿನ ಸೋವಿಯಟ್ ಸರ್ಕಾರದ ಅತಿಥಿಗಳ ಗೌರವಾರ್ಥವಾಗಿ ದೊಡ್ಡದೊಂದು ರಾಜಭೋಜನಕೂಟ (State banquet) ಏರ್ಪಾಡಾಗಿತ್ತು. ಹೃದಯಂಗಮವಾದ ಮುಖಮುದ್ರೆಯುಳ್ಳ, ದೀರ್ಘಶ್ಮಶ್ರುಧಾರಿಗಳಾದ ರಷ್ಯಾ ದೇಶದ ಮುಖ್ಯಾಧಿಕಾರಿಗಳಿಬ್ಬರ ಮಧ್ಯ

ನಾನು ಕುಳಿತುಕೊಳ್ಳಬೇಕಾಯಿತು. ಅವರು ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಸರಾಗವಾಗಿ ಮಾತಾಡುತ್ತಿದ್ದರು. ಊಟ ನಿಧಾನವಾಗಿ ಸಾಗಿತು. ನನಗೆ ತುಂಬ ಬಾಯಾರಿಕೆಯಾಯಿತು. ಆದರೆ ಪಾನೀಯವೇನೂ ಇದ್ದ ಹಾಗೆ ಕಾಣಲಿಲ್ಲ. ಆ ಅಧಿಕಾರಿಗಳನ್ನು ಕೇಳಲು ನನಗೆ ಇಷ್ಟವಾಗಲಿಲ್ಲ. ಏನಾದರೂ ಕುಡಿಯಲು ಸಿಗುತ್ತದೆಯೇ ಎಂದು ಸುತ್ತಮುತ್ತ ನೋಡುತ್ತ ಶಾಂತಳಾಗಿದ್ದೆನು. ಪ್ರತಿಯೊಂದು ತಟ್ಟೆಯ ಪಕ್ಕದಲ್ಲಿ ಸಣ್ಣ ಸಣ್ಣ ಲೋಟಾಗಳಿದ್ದುದನ್ನೂ, ಮೇಜಿನ ಮೇಲೆ ಅಲ್ಲಲ್ಲೆ ನೀರು ತುಂಬಿದ ಲೋಟಾಗಳಿದ್ದುದನ್ನೂ ನೋಡಿದೆನು. ಅವುಗಳಲ್ಲಿದ್ದ ನೀರು ಬಳಕೆಗೆ ಯೋಗ್ಯವಾದುದೆಂಬಂತೆ ಕಂಡುಬಂದಿತು. ಅವುಗಳಲ್ಲೊಂದನ್ನು ತೆಗೆದುಕೊಳ್ಳಲು ನಾನು ಕೈಚಾಚಿದೆನು. ಆದರೆ ನನ್ನ ಪಕ್ಕದಲ್ಲಿದ್ದ ಅಧಿಕಾರಿಗಳಲ್ಲೊಬ್ಬನು ನನ್ನ ಇಂಗಿತವನ್ನರಿತು, ತನ್ನ ಮತ್ತು ನನ್ನ ಮುಂದಿನ ಚಿಕ್ಕ ಲೋಟಾಗಳನ್ನು ತುಂಬಿದನು. ಆತನು ಆ ಪಾನೀಯವನ್ನು ಗಳಗಳನೆ ಕುಡಿಯುತ್ತಿದುದನ್ನು ನೋಡಿದೆನು. ನನಗೆ ಬಾಯಾರಿಕೆ ಬಹಳವಾಗಿದ್ದುದರಿಂದ ನಾನೂ ಹಾಗೆಯೇ ಕುಡಿದೆನು. ಆ ಲೋಟದ ಅರೆಪಾಲು ಪಾನೀಯವನ್ನು ಒಂದೆರಡು ಗುಟುಕುಗಳಲ್ಲಿ ಕುಡಿಯುವಷ್ಟರಲ್ಲಿ ನನಗೆ ಉಸಿರುಕಟ್ಟಿದ ಹಾಗಾಯಿತು. ನನ್ನ ಗಂಟಲು ಸುಟ್ಟು ಹೋಯಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡು ಉರಿಯಲಾರಂಭಿಸಿದುವು. ಸದ್ದಿಲ್ಲದೆ ಲೋಟವನ್ನು ಕೆಳಗಿರಿಸಿ ಮುಂದಿದ್ದ ಆಹಾರವನ್ನು ಗಬಗಬನೆ ಮುಕ್ಕಿದೆನು. ಉರಿತ ದೀರ್ಘಕಾಲ ಇರುವುದೆಂದುಕೊಂಡಿದ್ದೆನು. ಆದರೆ ಕೊಂಚ ವೇಳೆಯಲ್ಲಿಯೇ ಸರಿಹೋಗುತ್ತಾ ಬಂದಿತು. ನಾನು ಕುಡಿದ ದ್ರವ್ಯ ನೀರಾಗಿರದೆ ರಷ್ಯಾ ದೇಶದಲ್ಲಿ ಪ್ರಸಿದ್ಧವಾಗಿರುವ ವೋಡ್ಕವೆಂಬ ಪಾನೀಯವೆಂದು ಅನಂತರ ಅರಿತುಕೊಂಡೆನು.

ನಾವು ಮಾಸ್ಕೋವಿನಲ್ಲಿ ಹಲವಾರು ವಸ್ತುಗಳನ್ನು ನೋಡಿದೆವು. ರಷ್ಯಾ ದೇಶದಲ್ಲಿ ನಾವು ನೋಡಿದ ಪಟ್ಟಣ ಅದೊಂದೇ. ಅನೇಕ ಚರ್ಚುಗಳು ವಿಚಿತ್ರವಸ್ತುಸಂಗ್ರಹಾಲಯಗಳಾಗಿದ್ದುವು. ಆದರೆ ಯಾರಾದರು ಮುದುಕ ಮುದುಕಿಯರು ಚರ್ಚಿನ ಮುಂದೆ ಬಂದಾಗ ಕ್ರಾಸ್

ಕುಳಿತುಕೊಳ್ಳುತ್ತಿದ್ದರು. 'ಧರ್ಮ ಜನರ ಮಾದಕದ್ರವ್ಯ' ಎಂದು ಚರ್ಚಿನ ಸುತ್ತಮುತ್ತ ಪ್ರಸಿದ್ಧ ಪತ್ರಿಕೆಗಳನ್ನು ಅಂಟಿಸಿತ್ತು. ಅಂತು ಜನರ ಮನೋಬುದ್ಧಿಗಳಿಂದ ದೇವರ ಭಾವನೆ ಸಂಪೂರ್ಣವಾಗಿ ಮರೆಯಾಗಿರಲಿಲ್ಲ.

ನಾವು ನೋಡಿದ ಸೆರೆಮನೆ ನನ್ನ ಮನಸ್ಸಿನ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿತು. ೧೯೨೦ ನೆಯ ಇಸವಿಯಿಂದೀಚೆಗೆ ಅನೇಕ ಸೆರೆಮನೆಗಳನ್ನು ನೋಡಿದ್ದೆನು. ಸೋವಿಯಟ್ ದೇಶದವರು ರಾಜಕೀಯ ಮತ್ತು ರಾಜಕೀಯೇತರ ಬಂದಿಗಳನ್ನು ಹೇಗೆ ಕಾಣುತ್ತಿದ್ದರೆಂಬುದನ್ನು ತಿಳಿಯಲು ತುಂಬಾ ಕುತೂಹಲಿಯಾಗಿದ್ದೆನು. ಭರತಖಂಡದ ಸೆರೆಮನೆಗಳಲ್ಲಿ ಹೆಬ್ಬಾಗಿಲ ಹೊರಗಡೆ ಸಶಸ್ತ್ರಧಾರಿಗಳಾದ ಕಾವಲುಗಾರರು ಕಾದಿರುತ್ತಾರೆ. ಒಳಗಡೆಯು ಸಹ ಕಾವಲುಗಾರರು ದೊಣ್ಣೆಗಳನ್ನೋ, ಒಂದೊಂದುಸಾರಿ ಇತರ ಆಯುಧಗಳನ್ನೋ ಹಿಡಿದಿರುತ್ತಾರೆ. ನಾವು ರಷ್ಯಾ ದೇಶದ ಸೆರೆಮನೆಯ ಹತ್ತಿರ ಹೋದಾಗ ಹೆಬ್ಬಾಗಿಲಲ್ಲಿ ಬಂದೂಕವನ್ನು ಹೊತ್ತು ಹಿಂದಕ್ಕೂ ಮುಂದಕ್ಕೂ ತಿರುಗುತ್ತಿದ್ದ ವ್ಯಕ್ತಿಯೊಬ್ಬನನ್ನು ನೋಡಿದೆವು. ಒಳಗಡೆಯ ಕಾವಲುಗಾರರು ನಿರಾಯುಧರಾಗಿದ್ದರು. ಅವರ ಹತ್ತಿರ ದೊಣ್ಣೆಗಳಾಗಲೀ, ಬಂದೂಕಗಳಾಗಲೀ ಇರಲಿಲ್ಲ. ನಾವು ನೆಟ್ಟಗೆ ಒಳಗಡೆ ಹೋದೆವು ನಾವು ಇಷ್ಟಪಟ್ಟ ಕೋಣೆಗಳಿಗೆ ಹೋಗಬಹುದೆಂದು ಸೆರೆಮನೆಯ ಮುಖ್ಯಾಧಿಕಾರಿ ನಮಗೆ ತಿಳಿಸಿದನು. ಅದು ಸಾಧಾರಣ ಸಂಪ್ರದಾಯವೊ ಅಥವಾ ಪ್ರೇಕ್ಷಕರ ಮನಸ್ಸನ್ನು ಒಲಿಸಿಕೊಳ್ಳಲು ಏರ್ಪಡಿಸಿದ್ದ ವಿಶೇಷ ವ್ಯವಸ್ಥೆಯೊ, ನನಗೆ ಗೊತ್ತಿಲ್ಲ. ನಾವೇ ಕೆಲವು ಕೋಣೆಗಳನ್ನು ಆರಿಸಿಕೊಂಡ ನಂತರ, ಒಳಗೆ ಕರೆದುಕೊಂಡು ಹೋಗಿ ತೋರಿಸಿದರು. ಅನೇಕ ಖೈದಿಗಳಿಗೆ ಪ್ರತ್ಯೇಕವಾದ ಕೋಣೆಗಳಿದ್ದುವು. ಪ್ರತಿಯೊಂದು ಕೋಣೆಯ ಬಾಗಿಲು ತೆರೆದಿತ್ತು. ಸೆರೆಯಾಳುಗಳು ತಮಗೆ ಬೇಕಾದಾಗ ಹೊರಗೆ ಬಂದು ಹೋಗುತ್ತಿದ್ದರು. ಕಾವಲುಗಾರರು ಮಧ್ಯಾಂಗಣದಲ್ಲಿ ಎಚ್ಚರಿಕೆಯಿಂದಿರುತ್ತಿದ್ದರೇ ಹೊರತು, ಬೇರೆಕಡೆ ಲಕ್ಷ್ಯವಿಡುತ್ತಿರಲಿಲ್ಲ. ಕೆಲವರು ಸೆರೆಯಾಳುಗಳು ಬಾನುಲಿಯಂತ್ರವನ್ನು ತಮಗೆ

ತೋಚಿದ ಕಡೆ ತಿರುಗಿಸಿಕೊಂಡು ಆಲಿಸುತ್ತಿದ್ದರು. ಕೆಲವರು ಸಂಗೀತ ಗಾರರು ವಾದ್ಯಗಳನ್ನು ನುಡಿಸುತ್ತಿದ್ದರು. ಅವರು ತಮ್ಮದೇ ಒಂದು ಸಂಗೀತಕೂಟವನ್ನು ಏರ್ಪಡಿಸಿಕೊಂಡಿದ್ದು, ವಾರಕ್ಕೊಂದು ಬಾರಿ ಸೆರೆಮನೆಯ ಒಳಗಡೆ ಸಂಗೀತಕಚೇರಿಯನ್ನು ನಡೆಸುತ್ತಿದ್ದರು. ಕೆಲವರು ತಮ್ಮ ಕೋಣೆಗಳಲ್ಲಿಯೆ ಕುಳಿತುಕೊಂಡು ಹಾಡುಗಳನ್ನು ಕಟ್ಟುತ್ತಿದ್ದರು; ಇತರರು ಹೊರಗಡೆ ಹಿತ್ತಲಲ್ಲಿಯೋ ಕಾರ್ಖಾನೆ ಯಲ್ಲಿಯೋ ಕೆಲಸ ಮಾಡುತ್ತಿದ್ದರು. ಅಂತು ಅವರು ಮಾನವ ರಂತೆ ಕಂಡುಬಂದರು. ಭರತಖಂಡದ ಸೆರೆಮನೆಗಳಲ್ಲಿ ನಾನು ನೋಡಿದ್ದ ಅನೇಕ ಖೈದಿಗಳು ಸದಾ ಭಯಜ್ವರ ಹಿಡಿದು ಬೆದರುನೋಟದಿಂದ ಕೂಡಿದ್ದರು. ಅವರನ್ನು ಪ್ರಾಣಿಗಳಂತೆಯೋ ಕಾಡುಮನುಷ್ಯರಂತೆಯೋ ಕಾಣುತ್ತಿದ್ದರು. ನಾವು ನೋಡಿದ ಸೆರೆಮನೆ ಹೆಚ್ಚುಕಡಮೆ ಪರಿ ಪೂರ್ಣವಾಗಿತ್ತು. ರಷ್ಯಾ ದೇಶದ ಸೆರೆಮನೆಗಳ ವಿಷಯವಾಗಿ ಓದಿ ಕೇಳಿ ಸಂಪಾದಿಸಿರುವ ತಿಳಿವಳಿಕೆಯಿಂದ ಅವೆಲ್ಲ ಮೇಲೆ ಹೇಳಿದ ಸೆರೆಮನೆಯಂತಿಲ್ಲವೆಂದು ಭಾವಿಸುತ್ತೇನೆ.

ಮಾಸ್ಕೋವಿನಲ್ಲಿದ್ದಾಗ ವಿಚಿತ್ರವಾದೊಂದು ಘಟನೆ ನಡೆಯಿತು. ಒಮ್ಮೆ ವಿಶೇಷಾಲಂಕಾರ ಭೂಷಿತೆಯಾಗದೆ, ಸರಳವಾದ ಢಾಕ್ಕಾ ಸೀರೆ ಯನ್ನುಟ್ಟು ಸಭೆಯೊಂದರಲ್ಲಿ ಕುಳಿತ್ತಿದ್ದೆನು. ಆ ಕಾಲದಲ್ಲಿ ವಸ್ತ್ರ ಭೂಷಣಗಳನ್ನು ತಾತ್ಸಾರಭಾವನೆಯಿಂದ ಕಾಣುತ್ತಿದ್ದರು. ಸ್ವಲ್ಪ ಹೊತ್ತು ನನ್ನ ಪಕ್ಕದಲ್ಲಿ ಕುಳಿತಿದ್ದ ಕಮ್ಯೂನಿಸ್ಟ್ ಚಿಕ್ಕ ಹುಡುಗಿ ಯೊಬ್ಬಳು ನನ್ನ ಕಡೆಗೆ ಬಾಗಿ, ಹಣೆಯ ಮೇಲಿದ್ದ ಕುಂಕುಮವನ್ನು ಮುಟ್ಟುವುದರಲ್ಲಿದ್ದಳು. "ಅದನ್ನು ಇಟ್ಟುಕೊಳ್ಳುವುದೇತಕ್ಕೆ? ಅದೊಂದು ಮತಚಿಹ್ನೆ ಅಲ್ಲವಾನೆ; ಏಕೆಂದರೆ ರಷ್ಯಾದಲ್ಲಿ ನಮಗೆ ಮತವನ್ನು ಕಂಡ ರಾಗದು." ಎಂದು ಆಕೆ ಹೇಳಿದಳು. ಆ ವಿಷಯವಾಗಿ ನಾನೆಂದೂ ಆಲೋಚಿಸಿರಲಿಲ್ಲವಾದುದರಿಂದ ವಿಸ್ಮಿತಳಾದೆನು. ಕುಂಕುಮವು ನನ್ನ ಉಡಿಗೆತೊಡಿಗೆಗಳ ಮುಖ್ಯಾಂಗವೆಂದು ತಿಳಿದುಕೊಂಡಿದ್ದೆನು. ಆ ಪ್ರಶ್ನೆಯನ್ನು ಮತ್ತೆ ಒತ್ತಾಯಪಡಿಸಲು ಅವಳಿಗೆ ನಿಜವನ್ನು ತಿಳಿಸಿ ದೆನು. ಆಕೆಗೆ ನನ್ನ ಮಾತಿನಲ್ಲಿ ನಂಬಿಕೆಯಿದ್ದಂತೆ ಕಾಣಲಿಲ್ಲ. " ಅದು

ಮತಸೂಚಕ ಚಿಹ್ನೆಯಲ್ಲದಿದ್ದಲ್ಲಿ ಸೌಂದರ್ಯವರ್ಧಕ ಚಿಹ್ನೆಯಾಗಿರ ಬೇಕು. ನಾನು ಹೇಳುವುದು ನಿಜವಲ್ಲವೆ? ಅಸ್ವಾಭಾವಿಕವಾದ ಸಾಧನ ಗಳಿಂದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವುದು ಮಧ್ಯಯುಗದ ಸಂಪ್ರ ದಾಯ. ಸಮತಾವಾದಿಗಳಿಗೆ ಅದರಲ್ಲಿ ನಂಬಿಕೆಯಿಲ್ಲ." ಎಂದವಳು ಹೇಳಿದಳು. ನಾನು ಸಮತಾವಾದಿಯಲ್ಲವೆಂದೂ, ಎಂದಾದರೊಂದು ದಿನ ಆವರೂ ಆಗಬಹುದೆಂದು ಉತ್ತರವಿತ್ತೆನು. ಅಂತು ರಷ್ಯಾದೇಶ ದವರನ್ನು ವಿಶೇಷವಾಗಿ ಮೆಚ್ಚಿದೆನು. ಆ ಹುಡುಗಿ ಸ್ವಲ್ಪ ಸಮಾಧಾನ ವನ್ನು ತಾಳಿದಳು, ನಾನು ಶೂನ್ಯಾತ್ಮಳೆಂಬಂತೆ ನನ್ನ ಕಡೆಗೆ ಅಸಮ್ಮ ತಿಯ ದೃಷ್ಟಿಯನ್ನು ಬೀರಿದಳು. ಅಂದು ರಷ್ಯಾದೇಶದಲ್ಲಿ ನವಿರುಡುಗೆ ಯನ್ನು ತೊಟ್ಟವನು ಎಂತಹ ವಿಷಮಪರಿಸ್ಥಿತಿಗೊಳಗಾಗುತ್ತಿದ್ದನು ಮತ್ತು ಹೇಗೆ ಅವಮಾನಿತನಾಗುತ್ತಿದ್ದನೆಂಬುದು ಆಶ್ಚರ್ಯಜನಕ ವಾಗಿತ್ತು. ಅತ್ಯುತ್ತಮವಾದ ನಮ್ಮ ಸೀರೆಗಳಿಗೆ ಅಲ್ಲಿ ಸ್ಥಳವಿರಲಿಲ್ಲ. ಸಾಮಾನ್ಯಜನತೆಯನ್ನುದ್ಧರಿಸಲು ಅಗತ್ಯವಾದ ಸ್ಥೈರ್ಯಸಂಕಲ್ಪಗಳು ಧೃಢವಾಗಿ ನಿಲ್ಲಲು ಸೌಂದರ್ಯದ ಶ್ರೇಷ್ಠತೆಯನ್ನು ನಿಷೇಧಿಸಬೇಕೇ. ಇಲ್ಲವೆ ನಾನು ಸಂಧಿಸಿದ ಹುಡುಗಿ ಉಗ್ರಗಾಮಿಗಳಲ್ಲೊಬ್ಬಳಿರಬಹುದೇ ಎಂದು ವಿಸ್ಮಯಗೊಂಡೆನು.

ಒಂದು ವಾರದನಂತರ ನಾವು ಬರ್ಲಿನ್ನಿಗೆ ಹಿಂದಿರುಗಿದೆವು. ನಮ್ಮ ತಂಗಡೆಯ ಅವಧಿ ಪರಿಮಿತವಾಗಿದ್ದರು, ಅದೊಂದು ಸಾರಭೂತ ವಾದ ಅನುಭವವಾಗಿತ್ತು. ಹಲವಾರು ಯೋಜನೆಗಳು ಇನ್ನೂ ಕೈರವಾ ವಸ್ಥೆಯಲ್ಲಿದ್ದುವು. ನೂತನ ಆಶಾಭಾವನೆ ಧೃಢಸಂಕಲ್ಪಗಳು ನಾವು ಸಂಧಿಸಿದ ಪ್ರತಿಯೊಬ್ಬರಿಗು ಪ್ರೇರಕಶಕ್ತಿಗಳಾಗಿದ್ದಂತೆ ಕಂಡುಬಂದುವು. ಆ ಅನುಭವವಂತು ನನ್ನ ಹೃದಯದಲ್ಲಿ ಸ್ಥಿರವಾಗಿ ಬೇರೂರಿತು. ಅಂತಹ ಚೈತನ್ಯ ಹಿಮಾಚಲಸದೃಶ ಪ್ರತಿಬಂಧಕಗಳನ್ನಾದರು ತಪ್ಪದೆ ಕೊಚ್ಚಬಲ್ಲದು. ಇಡೀ ಮಾನವ ಕುಟುಂಬದ ಸ್ಥಿತಿಗತಿಗಳನ್ನು ಉತ್ತ ಮಗೊಳಿಸುವಂತಹ ಶ್ರೇಷ್ಠಸಂಸ್ಥೆಯ ಸಂಸ್ಥಾಪನಾ ಕಾರ್ಯದಲ್ಲಿ ಅವರು ಎಂದಾದರೊಂದು ದಿನ ಜಯಶಾಲಿಗಳಾಗುತ್ತಾರೆಂಬ ಆಶಾ ಭಾವನೆ ನನ್ನಲ್ಲಿ ಮೂಡಿತು.

ಆಧುನಿಕ ರಷ್ಯಾದೇಶವನ್ನು ಮತ್ತು ಸೋವಿಯಟ್ಟರ ಸಾಮಾಜಿಕ ತತ್ವವನ್ನು ಅರಿತುಕೊಳ್ಳಲು ತಂದೆಯವರು ಶ್ರಮಪಟ್ಟರು. ಅವರ ಶಿಕ್ಷಣ ವಾತಾವರಣ ಸನ್ನಿವೇಶಗಳು ತೀರ ಭಿನ್ನವಾದುದರಿಂದ ತಮ್ಮ ವಿಚಾರಶಕ್ತಿಯನ್ನು ನೂತನ ಭಾವಗಳಿಗೂ, ಕ್ರಾಂತಿ ಕಾರಕವಿಷಯ ಗಳಿಗೂ ಹೊಂದಿಸಿಕೊಳ್ಳುವುದು ಕಷ್ಟವಾಯಿತು. ಅಂತು ಅಲ್ಲಿಗೆ ಹೋದು ದಕ್ಕಾಗಿ ಅವರು ಸಂತೋಷಗೊಂಡರು. ಅವರು ನೋಡಿದುದು ಸ್ವಲ್ಪ ವಾದರೂ ಅತ್ಯಮೂಲ್ಯವಾದುದು. ನೂತನ ರಾಷ್ಟ್ರನಿರ್ಮಾಣವಾಗುವುದ ರಲ್ಲಿತ್ತು. ಅದು ನಮ್ಮೆಲ್ಲರ ಮೇಲೆ ಅಪಾರ ಪ್ರಭಾವವನ್ನು ಬೀರಿತು. ಭೇಟಿ ಕ್ಷಣಿಕವಾದುದಾದರು ಎಂದೆಂದಿಗೂ ಮರೆಯಲಾಗದುದು.

ಗತವೈಭವವ ನೆನೆದು ಗೋಳ್ಗರೆವುದೇಂ ತರವೆ ?
ನಾಣ್ಗೊಳಿತೆ ನಮಗಿಂತು ? ರಕ್ತಹರಿಯಿತು ಪಿತರ.
ನಿನ್ನೆದೆಯ ಸೆರೆಯಿಂದ ಬಿಟ್ಟುಕೊಡು ಸೀನ್ ಮತ್ತೆ
ಮೃತಿವಡೆದ ಸ್ಪಾರ್ಟರೊಳು ಕೆಲವರನು ಭೂಮಾತೆ.
ಮುನ್ನೂರ್ವರೊಳು ಮೂವರೆಯೆ ಸಾಕೆಮಗೆ ಕಳುಹು
ಸೃಷ್ಟಿಸಲು ಮತ್ತೊಂದು ಥರ್ಮಪಿಲೆಯ !

ಬೈರನ್—

ಮಾಸ್ಕೋವಿನಿಂದ ಬರ್ಲಿನ್ನಿಗೆ ಹಿಂದಿರುಗಿ ಅಲ್ಲಿಂದ ಪ್ಯಾರಿಸ್ಸಿಗೆ ಹೋದೆವು. ಕೆಲವು ವಾರಗಳನಂತರ ಮಾರ್ಸೇಲ್ಸಿಗೆ ಹೋಗಿ ಅಲ್ಲಿಂದ ಗೃಹಾಭಿಮುಖವಾಗಿ ತೆರಳಿದೆವು.

ಹಿಂದೆಂದೂ ಇಷ್ಟು ದಿನಗಳು ತಾಯಿಯಿಂದ ದೂರವಿರಲಿಲ್ಲ. ಅವಳನ್ನು ನೋಡಲು ಹಿಂದಿರುಗಬೇಕೆಂದು ಮನಸ್ಸು ಹಾತೊರೆಯುತ್ತಿದ್ದರೂ ನಾವು ಪ್ಯಾರಿಸ್ಸನ್ನು ಬಿಟ್ಟ ದಿನ ತುಸು ಕಳವಳವೂ ಸ್ವಲ್ಪ ವ್ಯಥೆಯೂ ನನ್ನನ್ನಾವರಿಸಿದುವು. ಅನೇಕ ಸುಖಮಯವಾದ ದಿನಗಳನ್ನಲ್ಲಿ ಕಳೆದಿದ್ದೆನು. ಮನೋಹರವೂ ಸುಂದರವೂ ಆದ ಆ ಪಟ್ಟಣವನ್ನು ಬಹಳವಾಗಿ ಪ್ರೀತಿಸಿದ್ದೆನು. ಪ್ಯಾರಿಸ್ಸು ಎಂತಹ ಆಕರ್ಷಣೀಯವೂ ಮೋಹಕವೂ ಆದ ರಮಣೀಯತೆಯನ್ನು ಹೊಂದಿದ್ದಿತೆಂಬುದನ್ನು ನಮ್ಮ ವಿಯೋಗ ಸನ್ನಿಹಿತವಾಗುವವರೆಗು ಅರಿತುಕೊಂಡಿರಲಿಲ್ಲ. ನಮ್ಮ ಹೊಗೆ ಬಂಡಿಯು ನಿಲ್ದಾಣವನ್ನು ಮೆಲ್ಲಮೆಲ್ಲಗೆ ಬಿಟ್ಟಾಗ, ಫ್ರಾನ್ಸ್‌ದೇಶದ ಲೋಕಮೋಹಕ ರಾಜಧಾನಿಯನ್ನು ಮುಂದೆಂದು ನೋಡುವುದೆಂದು ಬೆರಗಾದೆನು. ನಾನು ಪುನಃ ಅದನ್ನು ನೋಡುವುದಿಲ್ಲವೆಂದೂ, ಒಂದು ಪಕ್ಷ ನೋಡುವುದಾದರೆ ಅದು ವಿಶೇಷವಾಗಿ ಮಾರ್ಪಾಡಾಗಿರುವುದೆಂದೂ ಹೇಗೋ ನನ್ನ ಮನಸ್ಸಿನಲ್ಲಿ ವಿಚಿತ್ರಭಾವನೆಯೊಂದು ಹೊಳೆಯಿತು. ನಾನು ಪ್ರೀತಿಸಿದ ಪ್ಯಾರಿಸ್ಸು ಲೋಕವಿಖ್ಯಾತವಾದ ಸಂಗೀತ ಕಲಾಮಂದಿರಗಳನ್ನು ಕಳೆದುಕೊಂಡು, ಕೆಲವು ವರ್ಷಗಳ ನಂತರ ನಾಜಿಗಳ ಹಸ್ತಗತವಾಗುವುದೆಂದು ನಾನಾಗ ಲೇಶವೂ ಊಹಿಸಿರಲಿಲ್ಲ.

ತಂದೆಯವರು ಯೂರೋಪಿನಲ್ಲಿ ಇನ್ನು ಕೆಲವು ತಿಂಗಳುಗಳಿರಲು ನಿರ್ಧರಿಸಿದರು. ೧೯೨೭ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಜವಹರ, ಕಮಲ, ಅವರ ಮಗಳು ಇಂದಿರಾ ಮತ್ತು ನಾನು ಕೊಲಂಬೊ ಮಾರ್ಗವಾಗಿ ಭರತಖಂಡಕ್ಕೆ ಹಿಂದಿರುಗಿದೆವು. ಚಳಿಗಾಲದಲ್ಲಿ ಭರತಖಂಡದ ರಾಷ್ಟ್ರೀಯ ಮಹಾಧಿವೇಶನವು ಮದ್ರಾಸಿನಲ್ಲಿ ಸೇರುವುದರಲ್ಲಿತ್ತು. ಅಧಿವೇಶನವನ್ನು ನೋಡುವುದಕ್ಕೋಸ್ಕರ ನಮ್ಮ ಪ್ರಯಾಣವನ್ನು ಮೊಟಕು ಮಾಡಿದೆವು. ಮದ್ರಾಸಿನಲ್ಲಿ ಹತ್ತುದಿನಗಳಿದ್ದು ಅಲಹಾಬಾದಿಗೆ ಹೊರಟೆವು.

ಮತ್ತೆ ನನ್ನ ಮನೆಯ ಸುಪರಿಚಿತವಾದ ವಾತಾವರಣದಲ್ಲಿದ್ದರೂ ವಿಚಿತ್ರವಾದ ಅವಿಶ್ರಾಂತತೆ ನನ್ನನ್ನಾವರಿಸಿತು. ನಾನು ಹಿಂದಿರುಗಿದ ನಂತರ ಮೊದಲ ಕೆಲವು ತಿಂಗಳುಗಳು ನನಗೆ ನೆಮ್ಮದಿಯಿರಲಿಲ್ಲ, ಇಲ್ಲವೆ ತೃಪ್ತಿಯಿರಲಿಲ್ಲ. ಯೂರೋಪಿನಲ್ಲಿ ಬಾಳು ಸದಾ ಚಟುವಟಿಕೆಯಿಂದ ಕೂಡಿತ್ತು. ಮನೆಯಲ್ಲಾದರೊ ನಾನು ಸಡಿಲವಾಗಿ ನೆಲದಮೇಲೆ ನಿಂತಂತೆ ಭಾಸವಾಯಿತು. ಹೊರೆಹೊರೆಯಾಗಿ ಓದುವುದನ್ನು ಬಿಟ್ಟರೆ ಯಾವ ರೀತಿ ಕಾಲಕಳೆಯಬೇಕೆಂಬುದೇ ನನಗೆ ತೋಚಲಿಲ್ಲ. ಬೇಸರ ವೆಗ್ಗಳಿಸಿತು. ಹಳೆಯ ಕಾರ್ಯಕ್ರಮಕ್ಕೆ ಒಗ್ಗಿಸಿಕೊಳ್ಳಲಾರದೆ ದಿಗ್ಭ್ರಮೆಹಿಡಿದಂತಾದೆನು. ಇಷ್ಟರಲ್ಲಿಯೆ ಅಲಹಾಬಾದಿನಲ್ಲಿ ಮಾಂಟೆಸ್ಸೊರಿ ಶಾಲೆಯನ್ನು ತೆರೆಯುತ್ತಾರೆಂಬ ಸುದ್ದಿ ತಿಳಿಯಿತು. ಯಾವಾಗಲು ನನಗೆ ಪುಟ್ಟ ಮಕ್ಕಳಲ್ಲಿ ತುಂಬಾ ಮಮತೆ. ಮಾಂಟೆಸ್ಸೊರಿ ವಿದ್ಯಾಭ್ಯಾಸಕ್ರಮದಲ್ಲಿ ನನಗೆ ಉತ್ಸಾಹವಿತ್ತು. ಜತೆಗೆ ಅದರ ತಿಳುವಳಿಕೆಯೂ ತಕ್ಕಮಟ್ಟಿಗಿತ್ತು. ಆದುದರಿಂದ ಪ್ರಯತ್ನಮಾಡಿ ಅಲ್ಲೊಂದು ಕೆಲಸವನ್ನು ಹೊಂಚಿಕೊಳ್ಳಬೇಕೆಂದು ನಿರ್ಧರಿಸಿದೆನು. ಕೆಲಸ ದೊರೆಯುವುದು ಸುಲಭವಾಗಿತ್ತು. ಆದರೆ ತಂದೆಯವರ ಅನುಮತಿ ಅತ್ಯಗತ್ಯವೆಂಬ ಅಂಶವನ್ನು ಮರೆತುಬಿಟ್ಟೆನು. ಇದೇ ಸಮಯದಲ್ಲಿ ತಮ್ಮ ಚಿಕ್ಕ ಮಗಳು ಚಂದ್ರಲೇಖ ಮತ್ತು ನಯನತಾರೆಯನ್ನು ತಾಯಿಯವರ ಹತ್ತಿರ ಬಿಟ್ಟು ನನ್ನ ಸಹೋದರಿಯೂ ಆಕೆಯ ಪತಿಯೂ ಪುನಃ ಯೂರೋಪಿಗೆ ಹೋದರು. ತಾಯಿಯವರು ಬಹಳ

ಅಸ್ವಸ್ಥರಾಗಿದ್ದುದರಿಂದ, ಅವರ ಪಾಲನೆ ಪೋಷಣೆಗಳ ಹೊರೆ ನನ್ನ ಪಾಲಿಗೆ ಬಂದಿತು. ನನ್ನಗೆ ಆ ಮಕ್ಕಳಲ್ಲಿ ತುಂಬಾ ಮಮತೆಯಿತ್ತು. ಆದರೆ ನಾನು ಕೈಗೊಂಡ ಕಾರ್ಯ ಸುಲಭವಾಗಿರಲಿಲ್ಲ.

ತಂದೆಯವರು ಆಗ ತಾನೆ ಯೂರೋಪಿನಿಂದ ಹಿಂದಿರುಗಿದ್ದರು. ಒಂದು ದಿನ ಅವರು ಸಂತೋಷದಿಂದ್ದಾಗ ನಾನು ಯೋಚಿಸಿದ್ದ ವಿಷಯ ವನ್ನು ಕುಶಲತೆಯಿಂದ ಎತ್ತಿದೆನು. ನಾನು ಕೆಲಸವಿಲ್ಲದೆ ಸುಮ್ಮನಿರ ಲಾಗದೆಂದೂ, ದಿನಕ್ಕೆ ಐದಾರು ಗಂಟೆಗಳಾದರು ನನಗೆ ಒಗ್ಗುವ ಕೆಲಸ ದಲ್ಲಿ ತೊಡಗಿರಬೇಕೆಂಬ ಬಯಕೆಯಿದೆಯೆಂದೂ, ಅವರಿಗೆ ತಿಳಿಸಿದೆನು. ಅದಕ್ಕೆ ಅವರು ಸಮ್ಮತಿಸಿ, ನನ್ನ ದೃಷ್ಟಿಯಲ್ಲಿ ಯಾವುದಾದರೂ ಅಂತಹ ಕೆಲಸವಿದೆಯೇ ಎಂದು ಕೇಳಿದರು. ನಾನು ಅವರಿಗಾಗಲೀ, ಜವಹರನಿ ಗಾಗಲೀ ಕಾರ್ಯದರ್ಶಿಯಂತೆ ಇರಬೇಕೆಂದು ಸೂಚಿಸಿದರು. ಆ ಅಭಿ ಪ್ರಾಯ ಅಭಿನಂದನಾರ್ಹವಾಗಿದ್ದರು ಅದನ್ನು ಕಾರ್ಯರೂಪದಲ್ಲಿ ತರು ವುದು ಕಷ್ಟವೆಂದೆನಿಸಿತು. ಅದಲ್ಲದೆ ನಿಯಮಿತವೇಳೆಯಲ್ಲಿ ಕ್ರಮಬದ್ಧ ವಾದ ಕೆಲಸವಿರುವಂತಿಲ್ಲ. ನನ್ನ ಯೋಚನೆ ಅದಲ್ಲವೆಂದೆನು. ಶಾಲೆಯ ಷನಿಯವನ್ನು ತಿಳಿಸಿ, ಅಲ್ಲಿ ನಾನು ಭೋಧಕಗಳಾಗಿರಬೇಕೆಂಬ ಅಪೇಕ್ಷೆ ಯನ್ನು ಅವರಿಗೆ ತಿಳಿಸಿದೆನು. ಮೊದಮೊದಲು ಅವರು ನನ್ನ ಮಾತನ್ನು ನಂಬಲಿಲ್ಲ. ನಾನು ಆ ವಿಷಯದಲ್ಲಿ ವಾಸ್ತವವಾಗಿ ಅನು ರಕ್ತಳಾಗಿದ್ದೇನೆಂಬ ಅಂಶ ಸ್ಪಷ್ಟವಾದಾಗ, ಹಿಂದು ಮುಂದು ನೋಡದೆ ಅವರು ಆ ವಿಷಯದ ಗೊಡವೆಯನ್ನೇ ಬಿಟ್ಟುಬಿಟ್ಟರು. ಮಕ್ಕಳ ಗುಂಪಿನಲ್ಲಿ ವಿಶೇಷ ಕಾಲವನ್ನು ಕಳೆಯುವದು ಸುಖಕರವಲ್ಲವೆಂದು ತಿಳಿಸಿದರು. ಕಾಲ ಕಳೆಯುವ ಸಲುವಾಗಿ ಪ್ರತಿದಿನ ಕೆಲವು ಗಂಟೆಗಳ ಕಾಲ ಅಲ್ಲಿಗೆ ಹೋಗಿ ಬರಬಹುದೆಂದರು. ನನ್ನ ದೃಢನಿಶ್ಚಯ ಅವರಿಗೆ ಹೊಳೆಯಲಿಲ್ಲವೆಂದೂಹಿಸಿದೆನು. ಮತ್ತೊಮ್ಮೆ ನನ್ನ ಧೈರ್ಯಸರ್ವಸ್ವ ವನ್ನು ಒಟ್ಟುಗೂಡಿಸಿಕೊಂಡು, [ಏನನ್ನಾದರು ತಂದೆಯವರಿಗೆ ತಿಳಿಸ ಬೇಕಾಗಿದ್ದಲ್ಲಿ ಸ್ವಲ್ಪ ಧೈರ್ಯ ಅತ್ಯಾವಶ್ಯಕವಾಗಿತ್ತು.] ನಾನು ಮೊದಲೇ ಆ ಕೆಲಸಕ್ಕೆ ಅರ್ಜಿಹಾಕಿದ್ದು ಅದನ್ನು ಪಡೆದಿದ್ದೇನೆಂದು ಶಾಂತತೆಯಿಂದ ತಿಳಿಸಿದೆನು. ನನಗೆ ಬೇಕಾಗಿದ್ದುದು ಅವರ ಅಪ್ಪಣೆ ಮಾತ್ರ. ನಾನು

ಗೌರವಾರ್ಥವಾಗಿ ಕೆಲಸಮಾಡುವುದಿಲ್ಲವೆಂಬ ಅಂಶವನ್ನೂ ತಿಳಿಸಿದೆನು. ನಾನು ಮೊದಲೇ ನಿರೀಕ್ಷಿಸಿದ್ದಂತೆ ನನ್ನ ಮಾತು ಮುಗಿಯುವುದರೊಳಗಾಗಿ ಬಿರುಗಾಳಿ ಎದ್ದಿತು. ಆ ವೃತ್ತಿ ಸ್ವೀಕಾರ ವಿಷಯದಲ್ಲಿ ತಂದೆಯವರಿಗೆ ವಿಶೇಷ ಅಭ್ಯಂತರವಿಲ್ಲದಿದ್ದರು, ಗೌರವಾರ್ಥವಾಗಿ ಕೆಲಸಮಾಡಬೇಕೆಂದು ಸಲಹೆಯಿತ್ತರು. ಆ ವಿಷಯದಲ್ಲಿ ಬಹಳ ಹೊತ್ತು ಚರ್ಚೆ ನಡೆಯಿಸಿದೆವು. ಇಬ್ಬರೂ ಮೊಂಡರಾದೆವು. ಕ್ರಿಯಾಶೀಲೆಯಾದ ತರುಣಿಯಾಗಬೇಕೆಂಬ ನನ್ನ ಸ್ವರ್ಣಸ್ವಪ್ನಗಳು ಮತ್ತು ಆಶೋತ್ತರಗಳು ಕಣ್ಮರೆಯಾದುವು. ತಂದೆಯವರನ್ನು ಎದುರಿಸಲು ಪ್ರಯತ್ನಿಸಿದಾಗ ಅವರ ಮೇಲಣ ವಾತ್ಸಲ್ಯ ಅಡ್ಡಬರುತ್ತಿತ್ತು. ನಾನವರ ಅಧಿಕಾರಕ್ಕೆ ಮಣಿಯಲು ಇಷ್ಟಪಡದಿದ್ದುದು ಇದೇ ಮೊಟ್ಟಮೊದಲನೆಯ ಬಾರಿ. ತಾಳ್ಮೆಯಿಂದಲೇ ಅವರ ಹೃದಯವನ್ನು ಪರಿವರ್ತನಗೊಳಿಸಲು ಹಲವಾರು ರೀತಿನೀತಿಗಳನ್ನು ಹುಡುಕಲು ಪ್ರಯತ್ನಿಸಿದೆನು. ಆದರೆ ನನ್ನ ಪ್ರಯತ್ನ ಸಫಲವಾಗಲಿಲ್ಲ. ತಾಯಿಯವರ ಸಹಾಯವನ್ನು ಪಡೆಯಲು ಯತ್ನಿಸಿದೆನು. ಕಾರಣಾಂತರದಿಂದ ಅವರೂ ತಿರಸ್ಕರಿಸಿದರು. ನಾನು ಮದುವೆಯಾಗಿ ಒಂದೆಡೆ ನೆಲಸಬೇಕೆಂಬುದೇ ಅವರ ಆಸೆ. ಯಾವುದಾದರು ಕೆಲಸವನ್ನು ಹವಣಿಸಿಕೊಂಡರೆ, ನಾನು ಮದುವೆಯಾಗುವ ಸಂಭವ ದೂರವಾಗುತ್ತದೆಂದು ಅವರ ಭಾವನೆ. ಜವಹರನನ್ನು ಕೇಳಿದೆನು. ಅವನು ನನ್ನ ನಿರ್ಣಯವನ್ನೊಪ್ಪಿಕೊಂಡುದಲ್ಲದೆ, ಸಂಬಳವನ್ನು ತೆಗೆದುಕೊಂಡು ಕೆಲಸಮಾಡುವಂತೆ ಹೇಳಿದನು. ನನ್ನ ತೀರ್ಮಾನವನ್ನು ಕೇಳಿ ಸಂತೋಷಪಟ್ಟು ತಂದೆಯನ್ನು ಒಪ್ಪಿಸುವುದಾಗಿ ಮಾತುಕೊಟ್ಟನು. ಮನಸ್ಸು ಶಾಂತವಾಯಿತು. ನನ್ನ ವಿಷಯವನ್ನು ಆತನ ವಶಕ್ಕೊಪ್ಪಿಸಿ, ತುಂಬಾ ಭರವಸೆಯಿಂದಿದ್ದೆನು. ಬಹಳ ವಾದ ವಿವಾದಗಳಾದನಂತರ ತಂದೆಯವರು ಒಪ್ಪಿಗೆಯಿತ್ತರು. ನಾನು ಶಾಲೆಯನ್ನು ಸೇರಿದೆನು. ಅಲ್ಲಿ ಒಂದೂವರೆ ವರ್ಷದ ತನಕ ಬೋಧಕಳಾಗಿದ್ದು ಸಂಪೂರ್ಣವಾಗಿ ತೃಪ್ತಿಹೊಂದಿದೆನು. ಕೊನೆಗೆ ನಾನು ರಾಜಕೀಯ ರಂಗದಲ್ಲಿ ಭಾಗವಹಿಸಬೇಕಾಗಿದ್ದುದರಿಂದಲೂ, ಎರಡು ಕೆಲಸಗಳನ್ನು ಒಂದೇ ಸಾರಿ ಮಾಡಲು ಸಾಧ್ಯವಿಲ್ಲದುದರಿಂದಲೂ, ಆ ಕೆಲಸಕ್ಕೆ

ರಾಜೀನಾಮೆಯಿತ್ತೆನು. ರಾಜಕೀಯ ಪ್ರಸಂಗ ಮಾನವನ ಬಾಳನ್ನೆಲ್ಲ ಆಕ್ರಮಿಸಿಕೊಳ್ಳುತ್ತದೆ. ಅಸಹಕಾರ ಚಳುವಳಿ ಪ್ರಾರಂಭವಾಗಿತ್ತು. ನನ್ನ ಸಮಯವನ್ನೆಲ್ಲ ಅದಕ್ಕಾಗಿ ಮೀಸಲಾಗಿರಿಸಲು ಕಾತರತೆಯಿಂದಿದ್ದೆನು.

೧೯೨೮ನೆಯ ಇಸವಿಯಲ್ಲಿ ಕಾಂಗ್ರೆಸ್ ಅಧಿವೇಶನವು ಕಲ್ಕತ್ತೆಯಲ್ಲಿ ನೆರೆಯಿತು. ತಂದೆಯವರು ಅಧ್ಯಕ್ಷರಾಗಿದ್ದರು. ರೈಲಿಗೆ ತಗಲಿ ಹಾಕಿದ್ದ ವಿಶೇಷ ತರಹದ ಗಾಡಿಗಳಲ್ಲಿ ನಮ್ಮ ದೊಡ್ಡ ಗುಂಪು ಅಲಹಾಬಾದಿನಿಂದ ಹೊರಟಿತು. ಕಲ್ಕತ್ತೆಯಲ್ಲಿದ್ದಾಗ ನಾವು ಕಾಂಗ್ರೆಸ್ಸಿನ ಅತಿಥಿಗಳಾಗಿದ್ದೆವು. ಅಧ್ಯಕ್ಷರ ಹಿರಿಮೆಗೆ ಸರಿಗಟ್ಟುವ ರೀತಿಯಲ್ಲಿ ತಳಿರುತೋರಣಗಳಿಂದಲೂ ಹೂಗೊಂಚಲು ಬಾವುಟಗಳಿಂದಲೂ ಅಲಂಕೃತವಾಗಿದ್ದ ದೊಡ್ಡ ಭವನವೊಂದು ನಮಗೆ ಮೀಸಲಾಗಿತ್ತು. ಏಕ ಪ್ರಕಾರದ ಉಡುಪನ್ನು ಧರಿಸಿದ್ದ ತರುಣರು ಬಾಗಿಲ ಹೊರಗಡೆ ಕುದುರೆಯ ಮೇಲೆ ಕುಳಿತು ಕಾವಲಿರುತ್ತಿದ್ದರು. ಅವರು ತುಂಬಾ ಚುರುಕಾಗಿದ್ದರಲ್ಲದೆ ಉಪಕಾರಶೀಲರು. ನಮ್ಮ ತಂದೆಯವರು ಮನೆಬಿಟ್ಟು ಕಾರಿನಲ್ಲಿ ಹೊರಟರೆಂದರೆ ಅತುಲವಾದ ರಾಜಮರ್ಯಾದೆ ಲಭಿಸುತ್ತಿತ್ತು. ಧೀರತನಗಾಂಭೀರ್ಯಗಳಿಂದ ಕುದುರೆಗಳ ಮೇಲೆ ಕುಳಿತಿದ್ದ ಸ್ವಪ್ರಜ್ಞೆಯುಳ್ಳ ತರುಣರ ಪರಿವಾರವೊಂದು ಮುಂದೆ ಹೊರಡುತ್ತಿತ್ತು. ಸೇನಾಧಿಪತಿಯ ಉಡಿಗೆತೊಡಿಗೆಗಳಲ್ಲಿ ದೇದೀಪ್ಯಮಾನನಾಗಿ ಪ್ರಜ್ವಲಿಸುತ್ತಿದ್ದ ಸ್ವಯಂಸೇವಕದಳದ ಶ್ರೇಷ್ಠ ನಾಯಕ ಸುಭಾಷ್ ಚಂದ್ರಬೋಸರ ಕಾರು ಆನಂತರ ಸರಿಯುತ್ತಿತ್ತು. ಅದರ ಹಿಂದೆ ತಂದೆಯವರ ಕಾರು ಚಲಿಸುತ್ತಿತ್ತು. ಅದೊಂದು ರಮಣೀಯ ದೃಶ್ಯ. ತುಸು ಹೊತ್ತಾದನಂತರ ಈ ಭೂಷಣಾಲಂಕಾರಗಳೆಲ್ಲ ಅನಾವಶ್ಯಕವೆಂದು ತಂದೆಯವರಿಗೆ ಕಂಡು ಬಂದಿತು. ತನ್ನ ಪ್ರಾಣಕ್ಕೆ ಯಾವ ಅಪಾಯವು ಇಲ್ಲದುದರಿಂದ ರಕ್ಷಣಾಗಣವಿಲ್ಲದೆ ಅಲ್ಲಿ ಇಲ್ಲಿ ಹೋಗಲು ಅವಕಾಶವೀಯುವಂತೆ ಮುಖ್ಯಸ್ಥರನ್ನು ಕೇಳಿದರು.

ತಂದೆ ಮತ್ತು ಜವಹರರ ಭಿನ್ನಾಭಿಪ್ರಾಯಗಳು ಶಿಖರವನ್ನು ಮುಟ್ಟಿದುದು ಈ ಅಧಿವೇಶನದ ಕಾಲದಲ್ಲಿಯೇ. ಅನೇಕವೇಳೆ ಅವ

ರಿಬ್ಬರಿಗು ವಾದವಿವಾದಗಳಾಗುತ್ತಿದ್ದುವು; ಅವರವರಿಗೆ ಭಿನ್ನತೆಗಳಿಲ್ಲ
ದಿರಲಿಲ್ಲ. ಆದರೆ ಇಂತಹ ವಿಷಮ ಸನ್ನಿವೇಶವೆಂದೂ ಒದಗಿರಲಿಲ್ಲ.
ಡೊಮಿನಿಯನ್ ಸ್ಥಾನಮಾನದ ರಾಜ್ಯಾಂಗರಚನೆಗಾಗಿ ಸರ್ವಪಕ್ಷ
ಸಮ್ಮೇಳನದ ಬೆಂಬಲವನ್ನು ಸಂಪಾದಿಸಲು ತಂದೆಯವರು ಕಾತುರ
ರಾಗಿದ್ದರು. ಸಂಪೂರ್ಣ ಸ್ವರಾಜ್ಯಸ್ಥಾಪನೆಗೆ ತಮ್ಮ ನೆರವು ನೀಡಲು
ಆ ಪಕ್ಷ ಇಷ್ಟಹೊಂದಿರಲಿಲ್ಲ. ಅರ್ಧಸಮರ್ಥವಾದ ಈ ರಾಜಿಗೆ ಜವಹರನು
ಒಪ್ಪವಂತಿರಲಿಲ್ಲ. ತಂದೆಮಕ್ಕಳ ಮಾನಸಿಕ ಸಂಗ್ರಾಮ
ಮುಂದುವರಿಯಿತು. ಮನೆಯ ಬಾಹ್ಯಾಂತರ ವಾತಾವರಣ ದಿನೇ ದಿನೇ
ಉಲ್ಬಣವಾಗುತ್ತಿತ್ತು. ಡೊಮಿನಿಯನ್ ಸ್ಟೇಟಸ್ಸಿಗೆ ಗೊತ್ತುವಳಿ ಬಹಿ
ರಂಗ ಅಧಿವೇಶನದಲ್ಲಿ ಅಂಗೀಕೃತವಾಯಿತು. ಜವಹರನಂತು ಅದನ್ನು
ವಿರೋಧಿಸಿದನು.

ಮಾರನೆಯ ವರ್ಷ ಭರತಖಂಡದ ಮೂಲೆ ಮೂಲೆಗಳಲ್ಲಿ ಕಾರ್ಯೋ
ತ್ಸಾಹದ ಹುರುಪು ಹೊನಲಿಟ್ಟಿತು. ಜನರು ರಾಜಕೀಯ ಕ್ಷೇತ್ರದಲ್ಲಿ
ವಿಶೇಷಾಸಕ್ತಿಯನ್ನು ವಹಿಸಿ ಹೊಸಹುರುಪು ಹುಮ್ಮಸ್ಸುಗಳಿಂದ
ಮುನ್ನುಗ್ಗುವ ಹಾಗೆ ಕಂಡು ಬಂದರು. ಎಲ್ಲೆಲ್ಲಿಯೂ ಕ್ರಿಯಾಶಕ್ತಿ
ನಿಧಾನವಾಗಿ ಪುಟಗೊಳ್ಳುತ್ತಿರುವುದನ್ನು ಕಾಣಬಹುದಾಗಿತ್ತು.
ಯಾವುದೋ ಮಹತ್ತರವಾದ ಘಟನೆ ಹೆಚ್ಚೆಯಿಡುತ್ತಿದ್ದಂತೆ ತೋರು
ತ್ತಿತ್ತು. ಭೂಮಿಯ ಮೇಲಣ ಶಕ್ತಿ ಸಾಮರ್ಥ್ಯಗಳು ಪ್ರತಿಭಟಿಸ
ಲಾರದ ಅಪೂರ್ವವಾದೊಂದು ತೇಜಸ್ಸು ಉದಯಿಸುತ್ತಿದ್ದಂತೆ
ಭಾಸವಾಗುತ್ತಿತ್ತು. ಆ ಕಾಲದಲ್ಲಿ ಅಪರಿಮಿತವಾದ ಅಶಾಂತಿ
ನೆಲಸಿದ್ದ ಸಂಯುಕ್ತ ಪ್ರಾಂತದ ಒಕ್ಕಲಿಗರಲ್ಲಿ ಆ ಶಕ್ತಿಯನ್ನು
ನೋಡಬಹುದಾಗಿತ್ತು. ಎಲ್ಲೆಲ್ಲಿಯೂ ಯುವಕರ ಚಳುವಳಿ ರಭಸ
ವಾಗಿ ಹಬ್ಬಲಾರಂಭಿಸಿತು. ಅತ್ಯಲ್ಪ ವೇಳೆಯಲ್ಲಿಯೇ ಭರತಖಂಡ
ದಲ್ಲೆಲ್ಲ ಯುವಕ ಸಂಘಗಳು ತಲೆದೋರಿದುವು. ಅವು ಸಮ್ಮೇಳನ
ಗಳನ್ನು ಕೂಡಿಸಿ ಭಾರತಮಾತೆಯ ಸ್ವಾತಂತ್ರ್ಯಸಾಧನೆಗಾಗಿ
ದುಡಿಯಲು ಪಣತೊಟ್ಟುವು. ತಮ್ಮ ಯುವಕಯುವತಿಯರನ್ನು
ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಿ, ನಿರ್ದಿಷ್ಟಾವಧಿಯತನಕ ಹಳ್ಳಿ

ಗರ ನಡುವೆ ಕೆಲಸಮಾಡುತ್ತಿದ್ದವು. ಬಂಗಾಳದ ವಿದ್ಯಾರ್ಥಿಯೊಬ್ಬ ನೊಡನೆ ನಾನು ಅಲಹಾಬಾದಿನ ಯುವಕಸಂಘದ ಜಂಟಿ ಕಾರ್ಯ ದರ್ಶಿಯಾಗಿದ್ದೆನು. ಜವಹರನೇ ನಮ್ಮ ಅಧ್ಯಕ್ಷ. ನನ್ನ ಸಹೋದ್ಯೋಗಿ ಕಾವೇರಿದ ಹುರುಪುಳ್ಳ ಧೈರ್ಯಶಾಲಿಯಾದ ತರುಣ. ಆದರೆ ಒಂದೆರಡು ವರ್ಷಗಳನಂತರ ಆತನು ಕಾಂಗ್ರೆಸ್ಸಿನ ಮೇಲಣ ಮಮತೆಗೌರವಗಳನ್ನು ತೊರೆದನು; ತನ್ನ ಅಭಿಪ್ರಾಯವಿಪರ್ಯಯದ ಜತೆಗೆ ತನ್ನ ಕಾರ್ಯ ಕ್ಷೇತ್ರವನ್ನು ಬದಲಾಯಿಸಿಕೊಂಡನು. ಯಾರೂ ಆತನನ್ನು ಹಿಂಬಾಲಿ ಸಲಿಲ್ಲ. ಆಗಿನ ನನ್ನ ಸಹೋದ್ಯೋಗಿಗಳನೇಕರು ಬೇರೆ ಬೇರೆ ಕ್ಷೇತ್ರ ಗಳಲ್ಲಿ ನುಗ್ಗಿದರು. ಹಲವರು ಸಮತಾವಾದಿಗಳಾದರು. ಯಾರೊಡನೆ ದೀರ್ಘಕಾಲ ಕೆಲಸಮಾಡಿದ್ದೆನೋ, ಯಾರೊಡನೆ ಲಾಠೀಪ್ರಹಾರ ಗಳನ್ನೂ ಮತ್ತಿತರ ತೊಂದರೆಗಳನ್ನೂ ಅನುಭವಿಸಿದ್ದೆನೋ, ಆ ಸಹೋ ದ್ಯೋಗಿಗಳನ್ನು ಈಗ ಸಂಧಿಸಿದರೆ ಅಪರಿಚಯಸ್ಥರನ್ನು ಸಂಧಿಸಿದ ಹಾಗೆ ಭಾಸವಾಗುತ್ತದೆ.

ಆ ವರ್ಷ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನಕ್ಕೆ ಜವಹರನು ಅಧ್ಯಕ್ಷಪದವಿಗೆ ಚುನಾಯಿತನಾದನು. ಕಾಂಗ್ರೆಸ್ಸಿನ ಇತಿ ಹಾಸದಲ್ಲಾಗಲೀ, ಇಡೀ ಪ್ರಪಂಚದ ಈ ರೀತಿಯ ಸಂಸ್ಥೆಗಳ ಇತಿ ಹಾಸದಲ್ಲಾಗಲೀ ಹಿಂದೆಂದೂ ಅಧ್ಯಕ್ಷಪದವಿ ತಂದೆಯಿಂದ ಮಗನಿಗೆ ಲಭಿಸಿಲ್ಲ. ತಂದೆಯವರಿಗಂತು ಅದೊಂದು ಹಿರಿಯೊಸಗೆಯಾಯಿತು. ತಮ್ಮ ಪ್ರಾಪಂಚಿಕ ಸಂಪತ್ತಿಗೆ ಮಾತ್ರವೇ ಅಲ್ಲದೆ ರಾಜಕೀಯ ಕ್ಷೇತ್ರದ ಅಧ್ಯಕ್ಷ ಪೀಠಕ್ಕೂ ಉತ್ತರಾಧಿಕಾರಿಯಾದ ಜವಹರನಿಗೆ ಹೆಮ್ಮೆಯಿಂದಲೂ ಆನಂದದಿಂದಲೂ ತಮ್ಮ ಪದವಿಯನ್ನು ವಹಿಸಿ ಕೊಟ್ಟರು. ಭಾರತಮಾತೆಯು ತನ್ನ ಮಗನೊಬ್ಬನಿಗೆ ಅನುಗ್ರಹಿಸ ಬಹುದಾದ ಶ್ರೇಷ್ಠತಮಗೌರವವೆಂದರೆ ಅಧ್ಯಕ್ಷಪದವಿ.

ಈ ಕಾಂಗ್ರೆಸ್ ಅಧಿವೇಶನವು ಅನೇಕ ವಿಧಗಳಿಂದ ಚಿರಸ್ಮರಣೀ ಯವಾದುದು. ಡಿಸೆಂಬರ್ ತಿಂಗಳಲ್ಲೊಂದುದಿನ ಬೆಳಗ್ಗೆ ಕೊರೆವ ಚಳಿಯಲ್ಲಿ ಸಾವಿರಾರು ಜನರು ರಾವಿನದಿಯ ದಡದ ಮೇಲೆ ಕಲೆತು ಸಂಪೂರ್ಣ ಸ್ವರಾಜ್ಯಸಾಧನೆಗಾಗಿ ಪ್ರತಿಜ್ಞೆಯನ್ನು ಕೈಗೊಂಡರು.

ಆ ನಿರ್ಣಯದ ಪರಿಣಾಮವಾಗಿ ನಮ್ಮ ದೇಶದ ಇತಿಹಾಸದಲ್ಲಿ ಹೊಸ ಬೆಳಕು ತಲೆದೋರಿತು. ಚುಚ್ಚುವ ಚಳಿಯನ್ನು ಲಕ್ಷಿಸದೆ ಗಂಡಸರು, ಹೆಂಗಸರು ಮತ್ತು ಮಕ್ಕಳು ಮರಿಗಳು ನೆರೆದಿದ್ದರು. ಅಲ್ಲಿ ಅವರು ಆ ನೀಲಾಕಾಶದ ಕೆಳಗೆ ನಿಂತು ಗಾಂಭೀರ್ಯಪೂರ್ಣರಾಗಿ, ಹೃದಯಗರ್ಭೋತ್ಪನ್ನ ಭಕ್ತಿಭಾವಸಂಯುತರಾಗಿ ಸ್ವಾತಂತ್ರ್ಯದೀಕ್ಷೆಯನ್ನು ಕೈಗೊಂಡರು. ಜವಹರನು ಪ್ರಮಾಣಪತ್ರವನ್ನು ಪಠಿಸಿದನು; ಉಳಿದವರು ಅದನ್ನೇ ಪುನರುಚ್ಚರಿಸಿದರು.

ಈ ರೀತಿಯಲ್ಲಿ ಭರತಖಂಡ ಸ್ವಾತಂತ್ರ್ಯದೀಕ್ಷೆಯನ್ನು ಕೈಗೊಂಡಿತು. ೧೯೨೯ನೆಯ ವರ್ಷದ ಚಳಿಗಾಲದಿಂದೀಚೆಗೆ ಕೆಲವರು ತಮ್ಮ ಪ್ರತಿಜ್ಞೆಯನ್ನು ಮರೆತಿದ್ದರೂ ಸಾವಿರಾರು ಜನರು ತಮ್ಮ ಪ್ರತಿಜ್ಞೆಯನ್ನುಳಿಸಿಕೊಂಡಿರುವರಲ್ಲದೆ, ಭರತಖಂಡದ ನಿರಂತರ ಶಾಂತಿಸುಖಗಳಿಗೆ ಮೂಲವಾದ ಸ್ವರಾಜ್ಯಸಂಪಾದನೆಗಾಗಿ ಅನವರತ ಹೋರಾಡಿ, ಅಸಂಖ್ಯಾತ ಸಂಕಷ್ಟಗಳಿಗೆ ಗುರಿಯಾಗಿದ್ದಾರೆ.

ಅಧಿವೇಶನ ಮುಗಿದಕೂಡಲೆ ನಾವು ಅಲಹಾಬಾದಿಗೆ ಹಿಂದಿರುಗಿದೆವು. ಭವಿಷ್ಯವಂತು ಪ್ರಕಾಶಮಾನವಾಗಿರುವಂತೆ ಕಾಣಲಿಲ್ಲ. ಅನೇಕ ಎಡರುಗಳು ಮತ್ತು ಕಿತ್ತಾಟ ಬೇನೆಗಳು ಮುಂದೆ ಕಾದಿದ್ದುವೆಂಬುದು ಖಚಿತವಾಗಿತ್ತು. ಆದರೆ ಅದಕ್ಕೆ ಯಾರೂ ಜಗ್ಗಲಿಲ್ಲ. ಅಲ್ಲದೆ, ಭವಿಷ್ಯತ್ತಿನ ಬೃಹತ್ಕುಕ್ಷಿಯಲ್ಲಡಗಿರುವುದನ್ನೆಲ್ಲ ಹಿಂಜರಿಯದೆ ಎದುರಿಸುವ ಹುರುಪು ಎದೆಗಾರಿಕೆಗಳು ಪ್ರತಿಯೊಬ್ಬರಲ್ಲಿಯೂ ಮೂಡಿದುವು.

ಕಾಂಗ್ರೆಸ್ ಅಧಿವೇಶನಕ್ಕೆ ಕೆಲವು ತಿಂಗಳುಗಳ ಮುಂಚೆ ತಂದೆಯವರು ನಮ್ಮ ಹಳೆಯ ಮನೆಯನ್ನು ರಾಷ್ಟ್ರಕ್ಕೋಸ್ಕರ ದಾನವಾಗಿ ಕೊಟ್ಟರು. ಬಹಳ ದಿನಗಳ ಬಯಕೆ ನೆರವೇರಿದುದಕ್ಕಾಗಿ ಅವರು ಅಮಿತವಾಗಿ ಆನಂದಿಸಿದರು. ಜವಹರನಿಗು ಮತ್ತು ಆತನ ಕುಟುಂಬಕ್ಕು ಪ್ರತ್ಯೇಕವಾಗಿ ಕಟ್ಟಿದ್ದ ಹೊಸಮನೆಗೆ ನಾವು ಹೋದೆವು. ಅದು ರಮಣೀಯವಾಗಿತ್ತು. ತಂದೆಯವರಿಗೆ ಅದನ್ನು ಕಂಡರೆ ಬಹಳ ಆನಂದ. ನಾನು ಯೂರೋಪಿನಲ್ಲಿದ್ದಾಗ ತಂದೆಯವರೊಡನೆ ಅಂಗಡಿ

ಗಳನ್ನು ಸುತ್ತಿ, ನೂತನಮಂದಿರಕ್ಕೆ ಬೇಕಾದ ವಿದ್ಯುಚ್ಛಕ್ತಿಯಂತ್ರ ಸಲಕರಣೆಗಳನ್ನು ಅಣಿಮಾಡಿಕೊಳ್ಳಲು ಅನೇಕ ಗಂಟೆಗಳನ್ನು ಕಳೆಯುತ್ತಿದ್ದನು. ಈ ತಲೆದಾಟದಿಂದ ತಂದೆಯವರು ಎಂದೂ ಬೇಸರಗೊಂಡವರಲ್ಲ. ಅವರ ಉತ್ಸಾಹವನ್ನು ನೋಡುವುದೇ ಒಂದು ಸಂತೋಷವಾಗಿತ್ತು.

ಆನಂದಭವನವನ್ನು ಬಿಟ್ಟು ಬೇರೆಲ್ಲಿಯೂ ವಾಸಿಸುವ ಇಷ್ಟ ತಂದೆಯವರಿಗಿಲ್ಲದುದರಿಂದ ಹೊಸಮನೆಗೆ 'ಆನಂದಭವನ' ವೆಂದು ಹೆಸರಿಟ್ಟರು. ಹಳೆಯ ಮನೆಯ ಹೆಸರನ್ನು 'ಸ್ವರಾಜ್ಯಭವನ' ವೆಂದು ಮಾರ್ಪಡಿಸಿದರು. ಈಗಲೂ ಅದರ ಒಂದು ಭಾಗದಲ್ಲಿ ಕಾಂಗ್ರೆಸ್ಸಿನ ಆಸ್ಪತ್ರೆಯೂ, ಮತ್ತೊಂದು ಭಾಗದಲ್ಲಿ ಭಾರತ ಕಾಂಗ್ರೆಸ್ ಸಮಿತಿಯ ಕಚೇರಿಯೂ, ಇವೆ. ಆಗಾಗ್ಗೆ ಪೋಲೀಸಿನವರು ಬೀಗ ಮುದ್ರೆಗಳನ್ನು ಜಡಿದಾಗ ಮಾತ್ರ ಅವು ಇರುವಂತಿಲ್ಲ.

೧೯೩೦ನೆ ಇಸವಿ ಮಾರ್ಚಿ ೧೨ನೆಯ ತೇದಿ ಗಾಂಧಿಜೀಯವರು ಕೇವಲ ಕೆಲವು ಆಯ್ಕೆಯ ಶಿಷ್ಯರೊಡನೆ ಲೋಕಪ್ರಖ್ಯಾತವಾದ ದಂಡಿಯ ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿದರು. ದೇಶಸೇವಕರ ಪ್ರವಾಹ ಹೊನಲೇರಿ ಅವರನ್ನು ಹಿಂಬಾಲಿಸಿತ್ತು. ಅನೇಕ ಸಂವತ್ಸರಗಳಿಂದ ತಮಗೆ ನಿಷಿದ್ಧವಾಗಿದ್ದ ನ್ಯಾಯಸ್ವಾತಂತ್ರ್ಯಗಳನ್ನು ಸಾಧಿಸಲು ಈ ಪುಟ್ಟ ಮನುಷ್ಯನು ಹೂಡಿದ ನೂತನರೀತಿಯ ಅಹಿಂಸಾತ್ಮಕ ಚಳುವಳಿಯನ್ನು ನೋಡಲು ಇಡೀ ಭರತಖಂಡವೇ ಕಾದಿತ್ತು. ಸರ್ಕಾರದವರು ಉಪ್ಪಿನ ಮೇಲಿಟ್ಟುಕೊಂಡಿದ್ದ ಸರ್ವಸ್ವಾಮ್ಯವನ್ನು ವಿರೋಧಿಸಲು, ಪ್ರತಿಯೊಂದು ಪಟ್ಟಣವೂ, ಪ್ರತಿಯೊಂದು ಹಳ್ಳಿಯೂ ಉಪ್ಪಿನಶಾಸನೋಲ್ಲಂಘನ ಚಳುವಳಿಯಲ್ಲಿ ಭಾಗವಹಿಸಿದುವು. ಅಲಹಾಬಾದಿನಲ್ಲಿ ದೊಡ್ಡದೊಂದು ಮೆರೆವಣಿಗೆಯೇ ಹೊರಟಿತು. ಅಲ್ಲಿ ನೆರೆದ ದೊಡ್ಡದೊಂದು ಸಭೆಯಲ್ಲಿ ಕಾನೂನಿಗೆ ವಿರೋಧವಾಗಿ ಉಪ್ಪು ತಯಾರುಮಾಡಲು ಜವಹರನೇ ಮೊದಲಿಗನಾದನು.

ಮೊದಲೇ ನಿರೀಕ್ಷಿಸಿದಂತೆ ಗಾಂಧಿಜೀಯವರನ್ನು ದಂಡಿಯಲ್ಲಿ ಬಂಧಿಸಲಿಲ್ಲ. ಮುಂದಿನ ಹಳ್ಳಿಗೆ ಹೋಗಲು ಅವರಿಗೆ ಅವಕಾಶ

ವಿತ್ತು. ಅಲ್ಲಿ ಮಧ್ಯರಾತ್ರಿಯ ಸಮಯದಲ್ಲಿ ಅವರು ಬಂಧಿತರಾದರು. ಅತ್ಯಂತ ಶಕ್ತಿಯುತವಾದ ಸರ್ಕಾರವು ಸಹ ಇರುಳ್ಗಳ್ಳನ ಹಾಗೆ ವರ್ತಿಸಿದುದು ಚೋದ್ಯವೇ ಸರಿ. ಯಾವ ಜನತೆಯ ಸ್ವಾತಂತ್ರ್ಯಾವೇಗವನ್ನು ದಬ್ಬಾಳಿಕೆಯಿಂದ ಮರ್ದಿಸಬಹುದೆಂದು ನಂಬಿಕೊಂಡಿದ್ದರೋ ಅದನ್ನು ಉದ್ರೇಕಗೊಳಿಸಲು ಹೆದರಿದರು.

ಕೂಡಲೆ ಜವಹಿರನೂ ಕೈಸೆರೆಯಾದನು. ತತ್‌ಕ್ಷಣವೇ ಪ್ರತಿಯೊಂದು ಹಳ್ಳಿ ಪಟ್ಟಣಗಳು ಕಾರ್ಯರಂಗಕ್ಕೆ ಧುಮುಕುವಂತೆ ಕಂಡು ಬಂದವು. ದೃಢಸಂಕಲ್ಪರೂ ಅಹಿಂಸಾತ್ಮಕರೂ ಆದ ಜನರು, ಬಂಧನ, ಗುಂಡಿನ ಸಿಡಿತ, ಲಾಠೀಪ್ರಹಾರ, ಮತ್ತು ರಾಕ್ಷಸೀಕೃತ್ಯಗಳಿಗೆ ಗುರಿಯಾದರು. ಜನರು ತಮ್ಮ ಘನತೆಗೌರವಗಳನ್ನು ಮತ್ತು ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಕಂಕಣಬದ್ಧರಾಗಿ ನಿಂತರು; ಅನಾಗರಿಕ ಕೃತ್ಯಗಳ ಆಘಾತಗಳನ್ನು ಧೈರ್ಯವಾಗಿ ಸಹಿಸಿದರು. ನಾನು ಮಾಂಟಿಸ್ಸೋರಿ ಶಾಲೆಯ ಕೆಲಸಕ್ಕೆ ರಾಜೀನಾಮೆಯಿತ್ತು ಸ್ವಯಂಸೇವಕ ದಳವನ್ನು ಸೇರಿದೆನು. ವಿದೇಶೀ ವಸ್ತ್ರಗಳನ್ನು ಮಾರುತ್ತಿದ್ದ ಅಂಗಡಿಗಳ ಮುಂದೆ ಸತ್ಯಾಗ್ರಹವನ್ನು ಹೂಡುತ್ತ, ವ್ಯಾಯಾಮವನ್ನು ಬಿಡದೆ ಮೆರವಣಿಗೆಗಳನ್ನು ವ್ಯವಸ್ಥೆಗೊಳಿಸುತ್ತ ಮತ್ತು ಕಾಂಗ್ರೆಸ್ ಅಧಿಕಾರಿಗಳು ನಿಯಮಿಸಿದ ಕೆಲಸಗಳನ್ನು ಮಾಡುತ್ತ ಬಹುಭಾಗ ಕಾಲವನ್ನು ಕಳೆಯುತ್ತಿದ್ದೆನು. ಕಮಲ, ಅಕ್ಕ ಮತ್ತು ನಾನು ಹಗಲೆಲ್ಲ ಸುಡುವ ಬಿಸಿಲಿನಲ್ಲಿ ಅಲೆಯುತ್ತಿದ್ದುದು ತಂದೆಯವರಿಗೆ ಸರಿಯೆನಿಸಲಿಲ್ಲ. ನಮಗೆ ಬುದ್ಧಿವಾದವನ್ನು ಹೇಳಲು ಅವರಿಗೆ ಇಷ್ಟವಿರಲಿಲ್ಲ. ನಾವು ಮಾಡುತ್ತಿದ್ದ ಕೆಲಸವನ್ನು ತ್ಯಜಿಸುವಂತೆ ಎಂದೂ ಅವರು ಒತ್ತಾಯಪಡಿಸಲಿಲ್ಲ. ಅವರ ಆರೋಗ್ಯ ಸರಿಯಾಗಿರಲಿಲ್ಲವಾದುದರಿಂದ ಮಕ್ಕಳೆಲ್ಲರು ಹತ್ತಿರವಿರಬೇಕೆಂಬುದೇ ಅವರ ಆಸೆಯಾಗಿತ್ತು. ಜವಹಿರನು ಸೆರೆಮನೆಯಲ್ಲಿದ್ದುದರಿಂದ ನಮ್ಮಲ್ಲಿ ಯಾರೂ ಬಂಧನಕ್ಕೊಳಗಾಗಬಾರದೆಂಬುದು ಅವರ ಆಕಾಂಕ್ಷೆ. ಅವರ ದೇಹಸ್ಥಿತಿ ಚಳುವಳಿಗೆ ಅಡ್ಡಿಬರಲಿಲ್ಲ. ಆದರೆ ಮುಂಜಾನೆಯಿಂದ ಇರುಳಿನವರೆಗಿನ ಬಿಡುವಿಲ್ಲದ ದುಡುಮೆಯ ಬಳಲಿಕೆಯನ್ನು ಅವರು ಸಹಿಸುವಂತಿರಲಿಲ್ಲ.

ವಿಶ್ರಾಂತಿ ತೆಗೆದುಕೊಳ್ಳುವಂತೆ ಚಿಕಿತ್ಸಕರು ಅವರಿಗೆ ಸಲಹೆಕೊಟ್ಟರು. ಆದರೆ ಸರಕಾರವು ವೈದ್ಯರಿಗಿಂತ ಮುಂಚೆಯೇ ವಿವೇಕವನ್ನು ಕುದುರಿಸಿಕೊಂಡು 1930 ನೆಯ ಇಸವಿ ಜೂನ್ 30 ರಲ್ಲಿ ಅವರನ್ನು ಬಂಧಿಸಿತು. ಅಂತು ಪರ್ವತನಗರಕ್ಕೆ ಹೋಗುವ ಬದಲು ಅವರು ಗಂಗಾನದಿಯನ್ನು ದಾಟಿ ನೈನಿ ಸೆರೆಮನೆಯನ್ನು ಸೇರಿದರು.

ತಂದೆಯುವರು ಸೆರೆಮನೆಗೆ ಹೋದ ಹತ್ತು ವಾರಗಳಲ್ಲಿಯೇ ಅವರ ಆರೋಗ್ಯ ಕ್ರಮೇಣ ಕುಂದಿತು. ಶರೀರ ಜೀರ್ಣವಾಗಿ ಹಿಂದಿನ ಛಾಯೆ ಮಾತ್ರ ಉಳಿದಾಗ, ಅವರನ್ನು ಬಿಡುಗಡೆಮಾಡುವುದು ಸರಿಯೆಂದು ಇಂಗ್ಲಿಷ್ ಸರಕಾರ ಯೋಚಿಸಿತು. ಅವರು ಹೊರಗಡೆ ಬಂದಕೂಡಲೆ ನಾವೆಲ್ಲರು ಮುಸ್ಸೋರಿಗೆ ತೆರಳಿದೆವು. ಅಲ್ಲಿಯ ಪರ್ವತಮಾರುತ ಮತ್ತು ಗೃಹಸೌಲಭ್ಯಗಳು ನರುಳುತ್ತಿದ್ದ ದೇಹದಲ್ಲಿ ಸ್ವಲ್ಪ ಚೈತನ್ಯವನ್ನುಕ್ಕಿಸಿದುವು. ಅಷ್ಟರಲ್ಲಿಯೇ ಜವಹರನೂ ಬಿಡುಗಡೆ ಹೊಂದಿ ಅಲಹಾಬಾದಿನಲ್ಲಿದ್ದನು. ಅವನು ಆಗಾಗ್ಗೆ ನಮ್ಮನ್ನು ಸಂಧಿಸುತ್ತಿದ್ದುದರಿಂದ, ತಂದೆಯುವರು ಸಂತೋಷ ಸಮಾಧಾನಗಳಿಂದಿರುತ್ತಿದ್ದರು.

ಆದರೆ ಜವಹಿರನು ಬಹಳದಿನಗಳು ಸ್ವತಂತ್ರನಾಗಿ ಹೊರಗಡೆ ಇರುವಂತಿರಲಿಲ್ಲ. ಬೆನ್ನಟ್ಟಿ ಬರುತ್ತಿದ್ದ ಬಂಧನದ ವರ್ತಮಾನ ಎಲ್ಲೆಲ್ಲೂ ಹಬ್ಬಲಾರಂಭಿಸಿತು. ಇದರಿಂದ ವೈದ್ಯರ ಸಲಹೆಗೆ ವಿರುದ್ಧವಾಗಿ ಆದಷ್ಟು ಜಾಗ್ರತೆ ಅಲಹಾಬಾದಿಗೆ ಹಿಂದಿರುಗಬೇಕೆಂದು ತಂದೆಯುವರು ನಿಶ್ಚಯಿಸಿದರು. ಅಕ್ಟೋಬರ್ ಹದಿನೆಂಟರಲ್ಲಿ, ನಾವೆಲ್ಲರು ಮುಸ್ಸೋರಿಯುನ್ನು ಬಿಟ್ಟೆವು. ಜವಹರ ಮತ್ತು ಕಮಲ ಇಬ್ಬರೂ ನಮ್ಮನ್ನು ಸಂಧಿಸಲು ನಿಲ್ದಾಣಕ್ಕೆ ಬಂದಿದ್ದರು. ಆದರೆ ಗಾಡಿ ತಡವಾಗಿ ಬಂದುದರಿಂದ ಜವಹರನು ನಮ್ಮ ಜತೆಯಲ್ಲಿ ಇರಲಾಗಲಿಲ್ಲ. ಸಾರ್ವಜನಿಕ ಸಭೆಯೊಂದರಲ್ಲಿ ಭಾಗವಹಿಸಲು ಅವನು ಹೋಗಬೇಕಾಗಿತ್ತು. ಸುತ್ತಮುತ್ತಣ ಹಳ್ಳಿಗಳಿಂದ ಸಾವಿರಾರು ಮಂದಿ ರೈತರು ಸಭೆಗೆ ಬಂದಿದ್ದರು. ಸಭೆ ಮುಗಿದನಂತರ ಕಮಲಳೂ ಜವಹಿರನೂ ಮನೆಗೆ ಹಿಂದಿರುಗುತ್ತಿದ್ದಾಗ ಮನೆಯ ಸಮೀಪದಲ್ಲಿಯೆ ಪೋಲೀಸಿನವರು ಅವರ ವಾಹನವನ್ನು ತಡೆದು, ಜವಹರನನ್ನು ಬಂಧಿಸಿದರು. ರೋಗ

ಗ್ರಸ್ತರಾದ ತಂದೆಯವರು ಮಗನ ಬರವಿಗಾಗಿ ಕಾದುಕೊಂಡಿದ್ದರು. ಅವರ ಆಶೀರ್ವಚನವನ್ನು ಸ್ವೀಕರಿಸಲು ಅವಕಾಶವಿಲ್ಲದೆಯೆ ಜವಹರನು ಮತ್ತೆ ಸೈನಿಸೆರೆಮನೆಯನ್ನು ಸೇರಬೇಕಾಯಿತು.

ಜವಹರನ ಬಂಧನ ನಿರೀಕ್ಷಿತವಾದುದಾದರು ತಂದೆಯವರಿಗೆ ಬಲವಾದ ಪೆಟ್ಟು ಬಡಿದಂತಾಯಿತು. ಕೆಲವು ರಾಜಕೀಯ ಮತ್ತು ಕೌಟುಂಬಿಕ ವಿಷಯಗಳ ಸಂಬಂಧವಾಗಿ ಮಗನೊಡನೆ ಮಾತಾಡಲು ಸ್ವಲ್ಪ ಅವಕಾಶ ದೊರೆಯಬಹುದೆಂದು ಅವರು ನಂಬಿಕೊಂಡಿದ್ದರು; ಆದರೆ ಅವರ ಬಯಕೆ ಈಡೇರಲಿಲ್ಲ. ದುಃಖಾಕ್ರಾಂತರಾಗಿ ತುಸ ಹೊತ್ತು ತಲೆ ಬಗ್ಗಿಸಿಕೊಂಡು ಕುಳಿತಿದ್ದರು. ಆದರೆ ಅವರ ಸಿಂಹ ಹೃದಯವು ಎಂತಹ ದೌರ್ಬಲ್ಯಕ್ಕಾದರು ಬಹಳಕಾಲ ಸಗ್ಗತಕ್ಕುದಲ್ಲ. ಮಂಜುಗುರುಳ ತಲೆಯನ್ನು ಮೇಲೆತ್ತಿ, ಹಿಡಿದ ಕೆಲಸವನ್ನು ಮುಂದುವರಿಸುವುದಾಗಿ ಅವರು ಘೋಷಿಸಿದರು. ಇನ್ನುಮುಂದೆ ದುರ್ಬಲ ವ್ಯಕ್ತಿಯಂತೆ ವೈದ್ಯರಿಂದ ಚಿಕಿತ್ಸೆಹೊಂದುವುದಿಲ್ಲವೆಂದು ಖಂಡಿತವಾಗಿ ಹೇಳಿದರು. ಪ್ರಾಣಹರವ್ಯಾಧಿಯು ಅವರನ್ನು ಜಗ್ಗಿಸಿತ್ತು. ಆದರೂ ಕೇವಲ ಮನಸ್ಥೈರ್ಯದಿಂದ ಅದನ್ನು ತುಳಿಯಲು ಅವರು ಹವಣಿಸುತ್ತಿದ್ದುದು ವಿಸ್ಮಯಕಾರಿಯಾಗಿತ್ತು. ಆ ಪ್ರಯತ್ನ ಕೇವಲ ಕ್ಷಣಿಕವಾಗಿತ್ತು. ತಂದೆಯವರು ಯಾವುದಕ್ಕೂ ಜಗ್ಗದೆ, ಹೊಸಹುರುಪಿನಿಂದ ಕಾರ್ಯರಂಗಕ್ಕೆ ಧುಮುಕಿ, ಅಸಹಕಾರ ಚಳುವಳಿ ಪುನಃ ಉಗ್ರರೂಪವನ್ನು ತಾಳುವಂತೆ ವ್ಯವಸ್ಥೆಗೊಳಿಸಿದರು. ಅವರ ಆರೋಗ್ಯ ದಿನೇದಿನೇ ಹದಗೆಡುತ್ತಿತ್ತು. ವಿಶ್ರಾಂತಿಯನ್ನು ತೆಗೆದುಕೊಳ್ಳುವಂತೆ ಮತ್ತು ಅಲ್ಪದೂರದ ಸಮುದ್ರಯಾನವನ್ನು ಕೈಗೊಳ್ಳುವಂತೆ ಜವಹರನು ತಂದೆಯವರನ್ನು ಒತ್ತಾಯಪಡಿಸಿದನು. ನಾನೂ ಅವರನ್ನೊಡಗೊಂಡೆನು. ಆದರೆ ನಾವು ಕಲ್ಕತ್ತಾನಗರವನ್ನು ತಲುಪುವಷ್ಟರಲ್ಲಿ ಅವರು ತುಂಬ ನಿಶ್ಶಕ್ತರಾದರೆಂದು ಕಂಡುಬಂದುದರಿಂದ ನಮ್ಮ ಪ್ರಯಾಣವನ್ನು ನಿಲ್ಲಿಸಬೇಕಾಯಿತು. ಕೆಲವು ವಾರಗಳು ಕಲ್ಕತ್ತಾ ನಗರದ ಪರಿಸರದಲ್ಲಿಯೆ ತಂದೆಯವರೊಡನೆ ನಿಂತೆನು. ಎಂತಹ ಹೃದಯವಿದ್ರಾವಕವಾದ ದಿನಗಳವು! ತಾವು ಗುಣಮುಖ

ರಾಗುವುದಿಲ್ಲವೆಂಬ ಅರಿವು ತಂದೆಯವರಿಗೆ ಹೊಳೆದಿತ್ತೆಂದು ತೋರುತ್ತದೆ. ಯಾರೂ ಏನನ್ನೂ ಮಾಡುವಂತಿರಲಿಲ್ಲ. ಅವರೆಂದೂ ಜೋಲು ಮೋರೆಹಾಕಿಕೊಂಡವರಲ್ಲ. ಕೇವಲ ಕೆಲವು ತಿಂಗಳುಗಳಲ್ಲಿಯೇ ತಮ್ಮ ಬಾಳು ಕೊನೆಮುಟ್ಟಬಹುದೆಂದು ಅರಿತಿದ್ದರು, ಅವರು ಸದಾ ತಮ್ಮ ರೋಗದೊಡನೆ ಅಣಕವಾಡುತ್ತಿದ್ದರು. ಅವರ ಸ್ಥೈರ್ಯ ಕೊನೆಯ ತನಕ ಅಚಲವಾಗುಳಿಯಿತು.

ಕಮಲಳು ಬಂಧಿತಳಾದ ಸುದ್ದಿಯೊಂದು ದಿನ ನಮ್ಮನ್ನು ಮುಟ್ಟಿತು. ಅವಳ ಆರೋಗ್ಯ ಇಳಿಮುಖವಾಗುತ್ತಿದ್ದುದರಿಂದ ತಂದೆಯವರಿಗೆ ಬಹಳ ವ್ಯಥೆಯಾಯಿತು. ಕೂಡಲೆ ಅಲಹಾಬಾದಿಗೆ ತೆರಳಲು ಇಷ್ಟಪಟ್ಟರು. ಆದರೆ ಅಲ್ಲಿಯೇ ಸ್ವಲ್ಪಕಾಲ ನಿಲ್ಲಬೇಕೆಂದು ವೈದ್ಯರು ಒತ್ತಾಯಪಡಿಸಿದರು. ಒಡನೆಯೇ ನನ್ನನ್ನು ಅಲಹಾಬಾದಿಗೆ ಕಳುಹಿಸಿ, ಕೆಲವು ದಿನಗಳ ನಂತರ ಉಳಿದ ಕುಟುಂಬವರ್ಗದವರೊಡನೆ ಹಿಂದಿರುಗಿದರು. ನಾನು ಕಲ್ಕತ್ತದಿಂದ ಹಿಂದಿರುಗಿದ ಕೂಡಲೆ ವಿಚಿತ್ರವಾದೊಂದು ಘಟನೆ ಜರುಗಿತು. ಪ್ರತಿನಿತ್ಯ ನನ್ನ ಗೆಳೆಯರು ಜತೆಯವರನೇಕರು ಸೆರೆಮನೆಗೆ ಹೋಗುತ್ತಿದ್ದರು. ಅವರ ಮೇಲಣ ಮೊಕದ್ದಮೆಗಳು ಸೆರೆಮನೆಯಲ್ಲಿಯೇ ಜರುಗುತ್ತಿದ್ದುವು. ವಿಚಾರಣೆಯ ಕಾಲದಲ್ಲಿರಲು ಬಯಸುತ್ತಿದ್ದವರು ಜಿಲ್ಲಾ ನ್ಯಾಯಾಧೀಶರಿಂದ ವಿಶೇಷಾನುಮತಿಯನ್ನು ಪಡೆಯಬೇಕಾಗಿತ್ತು. ಆತನಾದರೋ ಸ್ವಾಭಿಮಾನಿಯೂ ಕಠೋರನೂ ಆದ ವ್ಯಕ್ತಿ. ಯುವಕ ತಂಡವೊಂದರ ವಿಚಾರಣಾಕಾಲದಲ್ಲಿ ಹಾಜರಿರಲು ಅಪ್ಪಣೆ ಚೀಟಿ ಪಡೆಯುವ ಉದ್ದೇಶದಿಂದ ಆವನಲ್ಲಿಗೆ ಹೋದೆನು. ನನ್ನನ್ನು ನೋಡಿದುದೆ ತಡ ಆತನ ಕಣ್ಣುಗಳು ಕೆಂಪೇರಿದುವು, ಏನು, ಮತ್ತೆ ನಿಮ್ಮ ಕೆಲಸವನ್ನು ನೀವು ನೋಡಿಕೊಂಡು ನನ್ನ ಪಾಡಿಗೆ ನನ್ನನ್ನು ಬಿಡಲಾರಿರೇನು? ಎಂದವನು, ರೇಗಿದನು. ನಾನು ಯುವಕ ಸಂಘದ ಕಾರ್ಯದರ್ಶಿಯಾಗಿದ್ದುದರಿಂದ ಯುವಕರ ವಿಚಾರಣಾಕಾಲದಲ್ಲಿ ಪ್ರೇಕ್ಷಕಳಾಗಿರುವುದು ನನ್ನ ಕರ್ತವ್ಯವೆಂದು ಶಾಂತರೀತಿಯಿಂದ ಉತ್ತರವಿತ್ತೆನು. ಅಪ್ಪಣೆ ಚೀಟಿ ಕೊಡಲು ಮೊದಲು ನಿರಾಕರಿಸಿದನು. ಒಂದು ದಿನ ವ್ಯಯವಾದರೂ ಸರಿಯೆ, ನನ್ನ

ಉದ್ದೇಶ ನೆರವೇರುವತನಕ ಕಾಯುವುದಾಗಿ ಹೇಳಿದೆನು. ಈ ನನ್ನ ನುಡಿ ಆತನನ್ನು ಮತ್ತಷ್ಟು ರೇಗಿಸಿತು. ಅನಂತರ ಆತನು ಅಪ್ಪಣೆ ಚೀಟಿಯನ್ನು ಬರೆದು, ನನ್ನ ಕೈಯ್ಯಲ್ಲಿಡುತ್ತಾ "ದೇವರಾಣೆಗು ನೀವಿಲ್ಲಿ ಬರಬೇಡಿ; ನೀವು ನನಗೆ ಹುಚ್ಚು ಬರಿಸುತ್ತಿದ್ದೀರಿ" ಎಂದು ಹೇಳಿದನು.

ವಿಚಾರಣೆಗೆ ಹೋದೆನು. ಆ ನನ್ನ ಗೆಳೆಯ, ಜಿಲ್ಲಾ ನ್ಯಾಯಾಧೀಶನು ಹೊಲಸು ಹೂಟವೊಂದನ್ನು ಹೂಡುವನೆಂದು ನಾನೆಂದೂ ಊಹಿಸಿರಲಿಲ್ಲ. ನನ್ನ ಗೆಳೆಯರಿಗೆ ಅಭಿನಂದನೆಗಳನ್ನು ಸಲ್ಲಿಸಿ, ದಾಯಾದಿಯೊಬ್ಬರೊಡನೆ ಹಿಂದಿರುಗತ್ತಿರುವಷ್ಟರಲ್ಲಿ, ಒಂದು ವಾರದ ಹಿಂದೆ ಅಕ್ರಮ ಕೂಟವೊಂದರಲ್ಲಿ ಭಾಗವಹಿಸಿದ್ದೆನೆಂಬ ಆಪಾದನೆಯೇ ಕಾರಣವಾಗಿ, ಬಂಧನಾಜ್ಞೆಯೊಂದು ನನ್ನನ್ನು ಅಟ್ಟಿಕೊಂಡು ಬಂದಿತು. ನಾವಿಬ್ಬರೂ ತಲ್ಲಣಗೊಂಡೆವು. ಬೇರೇನೂ ಮಾಡುವಂತಿರಲಿಲ್ಲ. ನನ್ನ ದಾಯಾದಿ ಶ್ಯಾಮಕುಮಾರಿಯು ರಾಜಕೀಯರಂಗದಲ್ಲಿ ಚುರುಕಾಗಿ ಭಾಗವಹಿಸಿರಲಿಲ್ಲ. ಆಕೆ ವಕೀಲಳು; ವೃತ್ತಿದೃಷ್ಟಿಯಿಂದ ವಿಚಾರಣೆಯನ್ನು ವೀಕ್ಷಿಸಲು ಅಲ್ಲಿಗೆ ಬಂದಿದ್ದಳು. ನಮ್ಮ ಮೇಲೆ ತಪ್ಪು ಹೊರಿಸಲು 'ನೆಹ್ರು' ವಾಗಿದ್ದುದೇ ಸಾಕಾದಷ್ಟು ಕಾರಣವಾಗಿತ್ತು. ಒಂದು ತಿಂಗಳು ಸಜಾ ಇಲ್ಲವೆ ನೂರು ರೂಪಾಯಿಗಳ ದಂಡ ನಮಗೆ ವಿಧಾಯಕವಾಯಿತು.

ನನ್ನ ಪಶ್ಚಾತ್ತಾಪಕ್ಕೆ ಒಂದೇ ಒಂದು ಕಾರಣವಿತ್ತು. ತಂದೆಯವರು ರುಗ್ಣಶಯ್ಯೆಯಲ್ಲೊರಗಿದ್ದರು. ನಾನು ಸೆರೆಮನೆಗೆ ಹೋಗಕೂಡದೆಂದು ಅವರು ಒತ್ತಿ ಒತ್ತಿ ಹೇಳುತ್ತಿದ್ದರು. ಅವರ ಇಷ್ಟಕ್ಕೆ ವಿರುದ್ಧವಾಗಿ ಸೆರೆಮನೆಯ ವಾಸವನ್ನು ಬೇಕಾಗಿಯೇ ಸ್ವಾಗತಿಸಿದೆನೆಂಬ ಅಂಶ ಅವರ ಬಗೆಗೆ ಬಾರದಿರಲೆಂಬುದೇ ನನ್ನ ಆಕಾಂಕ್ಷೆಯಾಗಿತ್ತು. ಆದರೆ ವಿವರಣೆ ಕೊಡುವುದು ಹೇಗೆ? ಆಗ ಚಳಿಗಾಲ. ಸೆರೆಮನೆಯ ಕೋಣೆ ತೇವವಾಗಿಯೂ ಕೊಳಕಾಗಿಯೂ ಇತ್ತು. ನೆಲದ ಮೇಲೆ ಹುಳುಹುಪ್ಪಟೆಗಳು ಹರಿದಾಡುತ್ತಿದ್ದುವು. ಶ್ಯಾಮಕುಮಾರಿ ಮತ್ತು ನಾನು ಸ್ವಲ್ಪ ಕಾಲ ಗೆಲುವಿನಿಂದಿರಲು ಯತ್ನಿಸಿದೆವು. ಅನಂತರ ಮೌನವ್ರತವನ್ನು ಹಿಡಿದೆವು. ನನ್ನ ವಿಷಯ ತಂದೆಯವರಿಗೆ

ಗೊತ್ತಾಗಿರಬಹುದೆಂಬ ಯೋಚನೆ ಮಿಂಚಿದಾಗ ತುಂಬಾ ಭಯವಾಗು ತ್ತಿತ್ತು. ಕೊನೆಗೆ ಗಾಢನಿದ್ರೆಗೊಳಗಾದೆನು. ಕೆಲವು ಗಂಟೆಗಳನಂತರ ಸರಪಳಿಗಳ ಮತ್ತು ಗಂಟೆಗಳ ಶಬ್ದವನ್ನು ಕೇಳಿ ಎಚ್ಚರಗೊಂಡೆನು. ಶಬ್ದವೂ ಬೆಳಕೂ ಸನ್ನಿಹಿತವಾದುವು. ಯಾರೋ ನಮ್ಮೆಡೆಗೆ ಬರುತ್ತಿದ್ದುದು ಕಂಡಿತು. ನಮ್ಮ ಕೋಣೆಯ ಬಾಗಿಲು ತೆರೆಯಿತು. ಕಾರಾಗೃಹದ ಅಧಿಕಾರಿ, ಪರಿಚಾರಿಕೆ ಮತ್ತು ಒಬ್ಬಿಬ್ಬರು ಕಾವಲುಗಾರರು ಒಳಗೆಪ್ರವೇಶಿಸಿದರು. ದಂಡದ ಹಣ ಸಂದಾಯವಾದುದರಿಂದ ನಮ್ಮಬಿಡುಗಡೆಯಾಯಿತೆಂದು ಪರಿಚಾರಿಕೆ ಹೇಳಿದಳು. ನಾನದನ್ನು ನಂಬಲಿಲ್ಲ. ತಂದೆಯವರು ಜುಲ್ಮಾನೆಯನ್ನೆಂದೂ ಕೊಡುವವರಲ್ಲವೆಂಬುದು ನನಗೆ ಗೊತ್ತಿತ್ತು. ಅಂತು ನಮ್ಮ ಬಿಡುಗಡೆಯಾದುದರಿಂದ ಗಂಟು ಮೂಟೆಗಳನ್ನು ತೆಗೆದುಕೊಂಡು ಹೊರಗೆ ಹೊರಟೆವು. ನಮ್ಮನ್ನು ಮನೆಗೆ ಕರೆದುಕೊಂಡು ಹೋಗುವುದಕ್ಕೋಸ್ಕರ ಗೆಳೆಯ ವಕೀಲರೊಬ್ಬರು ಹೊರಗಡೆ ಕಚೇರಿಯಲ್ಲಿ ಕಾದುಕೊಂಡಿದ್ದರು. ತಪ್ಪು ಹಣವನ್ನು ಕೊಟ್ಟವರು ಯಾರೆಂದು ಅವರನ್ನು ಕೇಳಿದೆವು. ಆದರೆ ಅವರು ಉತ್ತರ ಕೊಡಲು ಇಷ್ಟಪಡಲಿಲ್ಲ. ನಮ್ಮ ತಂದೆಯವರಾಗಲಿ, ಶ್ಯಾಮಕುಮಾರಿಯ ತಂದೆಯವರಾಗಲೀ ತಪ್ಪು ಹಣ ಕೊಡಲಿಲ್ಲ. ಆದರೆ ಮಿತ್ರರೊಬ್ಬರು ದುಡ್ಡು ಕೊಟ್ಟು ತಮ್ಮ ಹೆಸರನ್ನು ಬಚ್ಚಿಟ್ಟಿದ್ದರು. ನಮ್ಮನ್ನು ಬಿಟ್ಟಾಗ ನಟ್ಟಿರುಳು ಕಳೆದಿತ್ತು. ಸೆರೆಮನೆಯಲ್ಲಿ ಸುಮಾರು ಹನ್ನೆರಡು ಗಂಟೆಗಳನ್ನು ಕಳೆದಿದ್ದೆವು.

ನಾನು ಮನೆಯನ್ನು ತಲುಪಿದೆನು. ಕಗ್ಗತ್ತಲೆ ಸಂದಿಗೊಂದಿಗಳನ್ನಾವರಿಸಿತ್ತು. ನಾನು ಬಿಡುಗಡೆ ಹೊಂದುವೆನೆಂದು ಯಾರೂ ತಿಳಿದಿರಲಿಲ್ಲ ಅಥವಾ ಎಣಿಸಿರಲಿಲ್ಲ. ತಾಯಿಯವರು ಮಾತ್ರ ರಾಮಾಯಣವನ್ನು ಓದುತ್ತ ಎಚ್ಚರವಾಗಿದ್ದರು. ಮಾರನೆಯ ಬೆಳಗ್ಗೆ ಮುಂಚಿತವಾಗಿ ನಾನು ತಂದೆಯವರ ಕೋಣೆಗೆ ಹೋದೆನು. ನನ್ನನ್ನು ನೋಡಿದಾಗ ತಾಯಿಯವರಿಗಿಂತ ತಂದೆಯವರು ಬಹಳ ಆಶ್ಚರ್ಯಚಕಿತರಾದರು. ನನ್ನನ್ನು ನೋಡಿ ಅವರಿಗೆ ಆನಂದವಾಯಿತು. ಆದರೆ ತಪ್ಪು ಹಣ ತೆತ್ತುದಕ್ಕಾಗಿ ಬೇಸರಗೊಂಡರು. ಹಿಂದಿನ ದಿನ ನನ್ನ ಬಂಧನಾನಂತರ

ಅವರು ವೃತ್ತಪತ್ರಿಕೆಗೆ ಇತ್ತಿದ್ದ ಹೇಳಿಕೆಯನ್ನು ಬೆಳಗ್ಗೆ ಓದಿದೆನು. ಸ್ನೇಹಿತರು ತಂದೆಯವರ ಹತ್ತಿರ ಬಂದು ತಪ್ಪು ಹಣವನ್ನು ಕೊಡುವೆವೆಂದು ಹೇಳಿದ್ದರು. ಸ್ವಾಭಾವಿಕವಾಗಿ ತಂದೆಯವರು ಕೋಪಗೊಂಡಿದ್ದರು. ಯಾರಾದರು ಜುಲ್ಮಾನೆಯ ಹಣವನ್ನು ಕೊಟ್ಟಪಕ್ಷದಲ್ಲಿ ತಮಗೆ ತುಂಬ ನೋವುಂಟಾಗುವುದೆಂದು ಹೇಳಿದ್ದರು. ಹಾಗೆ ಮಾಡುವುದು ತತ್ತ್ವಕ್ಕೆ ವಿರೋಧವೆಂದೂ, ಅದು ಅಸುಹೃದಯವೂ ಅಪ್ರಿಯವೂ ಆದ ಕಾರ್ಯವೆಂದೂ ಅವರು ಭಾವಿಸಿದ್ದರು. ತಂದೆಯವರಿಗೆ ತುಂಬಾ ಖಾಯಿಲೆಯಾದುದರಿಂದ ದೂಷಣೆಯನ್ನು ಹೊರಲು ಯಾರೋ ಸಿದ್ಧವಾಗಿದ್ದರು. ಹಲವು ವರ್ಷಗಳನಂತರ ಅವರು ಯಾರೆಂಬುದು ಗೊತ್ತಾಯಿತು. ಸೆರೆಮನೆಯಿಂದ ಬಂದ ಕೂಡಲೆ ನಾನು ಯುವಜನ ಸಂಘದ ಪರವಾಗಿ ನೆರೆಹೊರೆಯ ಹಳ್ಳಿಗಳನ್ನು ಸುತ್ತಲು ಹೊರಟೆನು. ನಾನು ಹಿಂದಿರುಗಿದಾಗ ತಂದೆಯವರ ಕಾಗದದ ಜತೆಯಲ್ಲಿಯೇ ಜವಹರನ ಕಾಗದವೂ ಬಂದಿತ್ತು. ಅದು ಹೀಗಿತ್ತು : “ ಕರಂಡಕ ಮತ್ತು ಬಿನ್ನವತ್ತಳೆಗಳನ್ನು ನೀನು ತೆಗೆದುಕೊಳ್ಳುತ್ತಿರುವೆಯೆಂದು ಗೊತ್ತಾಗಿದೆ. ಯಾವ ವಿಜಯೋತ್ಸವದ ಸಂಭ್ರಮಕ್ಕಾಗಿ ಅವುಗಳನ್ನು ಸ್ವೀಕರಿಸುತ್ತಿರುವೆ ? ಸೆರೆಮನೆಯಲ್ಲಿ ಕೆಲವು ಗಂಟೆಗಳನ್ನು ಕಳೆದ ಮಾತ್ರಕ್ಕೆ ಅದ್ಭುತ ವ್ಯಕ್ತಿಯಾಗಲಾರೆ. ಹೇಗಾದರು ಸ್ವಪ್ರತಿಷ್ಠೆ ಬೇಡ ; ಆದರೆ ಜ್ಞಾನಶೂನ್ಯಕ್ಕಿಂತ ಸ್ವಪ್ರತಿಷ್ಠೆ ಮೇಲು. ”

ದಿನೇ ದಿನೇ ತಂದೆಯವರ ಆರೋಗ್ಯ ಕ್ಷೀಣವಾಗುತ್ತಿದ್ದರೂ ತಾವು ಉತ್ತಮಗೊಳ್ಳುತ್ತಿರುವುದಾಗಿ ನಂಬಿದ್ದರು. ಆರೋಗ್ಯದೃಢಕಾಯಗಳು ಅವರಿಗೆ ಮೀಸಲೆಂದು ಅಂದುಕೊಂಡಿದ್ದೆವು. ಜೀರ್ಣದೇಹಿಯೂ, ದುರ್ಬಲರೂ, ರೋಗಪೀಡಿತರೂ, ಬಾತುಕೊಂಡ ಮುಖವುಳ್ಳವರೂ ಆದ ಅವರನ್ನು ನೋಡುವುದೆಂದರೆ ದುಃಖ ಮಿತಿಮೀರಿ ಉಕ್ಕಿಬರುತ್ತಿತ್ತು. ಕೊನೆಗೆ ಹಾಸಿಗೆಯನ್ನೇ ಹಿಡಿದರು. ಆಗಲೂ ಅವರು ಸಾವಿನ ದಾಡೆಯಲ್ಲಿದ್ದರೆಂಬ ಅರಿವೇ ನನಗಿರಲಿಲ್ಲ. ಮೃತ್ಯು ಅವರನ್ನು ನಮ್ಮಿಂದ ಎಳೆದೊಯ್ಯುವುದು ಸಾಧ್ಯವೆಂದು ತೋರಿಬರಲಿಲ್ಲ. ಅವರು ಹಲವಾರು ಎಡರುಗಳೊಡನೆ ಹೆಣಗಾಡಿ ಜಯಶೀಲರಾಗಿದ್ದರು. ಅವರು ಆ ವಿಪತ್ತಿ

ನಿಂದ ಮತ್ತೆ ಪಾರಾಗುತ್ತಾರೆಂದೇ ನನ್ನ ನಂಬಿಕೆಯಾಗಿತ್ತು. ಆದರೆ ಅದು ಸಾಧ್ಯವಾಗಲಿಲ್ಲ.

ಮಹಾತ್ಮರು ಉತ್ತುಂಗಧವಳಗಿರಿಶೃಂಗಗಳಂತೆ; ಬಿರುಗಾಳಿ ತರುಬಿ ಅಪ್ಪಳಿಸಲಿ, ಮೋಡಗಳು ಹಾಯ್ದು ಮುಸುಕಲಿ, ಇನ್ನೆಲ್ಲೆಡೆಗಳಿಗಿಂತ ಆ ಇರವು ಸ್ವತಂತ್ರ ಮತ್ತು ಗಹನ.

—ರೊಮೆ ರೋಲಾ

೧೯೩೧ ನೆಯ ಇಸವಿ ಜನವರಿ ೨೬ ನೆಯ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ದಿನ. ತಂದೆಯವರ ರೋಗ ಉಲ್ಬಣಾವಸ್ಥೆಯನ್ನು ಮುಟ್ಟಿದ್ದುದರಿಂದ ಜವಹರನೂ, ಭಾವಂದಿರಾದ ರಣಜಿತ್ತರೂ ಯಾವ ಷರತ್ತುಗಳೂ ಇಲ್ಲದೆ ಬಿಡುಗಡೆ ಹೊಂದಿದರು. ಹನ್ನೆರಡು ವರ್ಷಗಳ ಹಿಂದಿನ ಮಾತು. ಅಂದಿನ ನೆನಪು ಇಂದಿಗೂ ಅಚ್ಚಳಿಯದೆ ಕೊರೆಯುತ್ತಿದೆ. ಆನಂದಭವನಕ್ಕೆ ಬಂದ ಕೂಡಲೆ ಜವಹರನು ನೆಟ್ಟನೆ ತಂದೆಯವರ ಕೊಟಡಿಗೆ ಹೋದನು. ಹೊಸ್ತಿಲಲ್ಲಿಯೇ ಒಂದು ಕ್ಷಣ ಅನುಮಾನಿಸುತ್ತ ನಿಂತನು. ತಂದೆಯವರ ಉತ್ಕಟಾವಸ್ಥೆಯೂ, ಬಾತುಕೊಂಡಿದ್ದ ಮೋರೆಯೂ ಆತನ ದೇಹವನ್ನು ವಿಕಂಪನಗೊಳಿಸಿದುವು. ತಂದೆಯವರನ್ನು ಆಲಂಗಿಸಲು ಮುಂದೆ ನಡೆದನು. ತುಟಿಪಿಟಕ್ಕೆನ್ನದೆ ತಂದೆಮಕ್ಕಳಿಬ್ಬರೂ ಪರಸ್ಪರಾಲಿಂಗನದಲ್ಲಿ ತಲ್ಲೀನರಾದರು. ತಂದೆಯ ತೋಳ್ತೆಕ್ಕೆಯಿಂದ ಬಿಡಿಸಿಕೊಂಡು ಹಾಸಿಗೆಯ ಮೇಲೆ ಕುಳಿತಾಗ, ಜವಹರನ ಕಣ್ಣುಗಳು ನೀರಿನಿಂದ ಮಬ್ಬಾಗಿದ್ದುವು. ಕಣ್ಣೀರನ್ನು ಅದುಮಲು ಸಾಹಸಪಟ್ಟನು ಅಂದು ಮಗನನ್ನು ಆದರಿಸುವಾಗ ತಂದೆಯವರು ಕಣ್ಣುಗಳಲ್ಲಿ ಚಿಮ್ಮಿದ ಬೆಳಕನ್ನೂ, ಉಕ್ಕಿದ ನಲವನ್ನೂ ನಾನೆಂದೂ ಮರೆಯುವಂತಿಲ್ಲ. ಅವರು ನಮಗೆ ತಂದೆ ಮಾತ್ರವೇ ಅಲ್ಲ, ಪರಮಮಿತ್ರರೂ ಆಗಿದ್ದರು. ತನ್ನ ಒಲುಮೆಯ ಚಿಲುಮೆಯಾಗಿದ್ದ ತಂದೆಯವರ ರುಗ್ಣಶಯ್ಯೆಯ ಬಳಿ ನಿಂತಾಗ ಜವಹರನ ಕಣ್ಣುಗಳಲ್ಲಿ ವ್ಯಕ್ತವಾದ ಪರಿತಾಪವನ್ನು ನಾನೆಂದೂ ಮರೆಯಲಾರೆನು.

ತಂದೆಯವರು ರೋಗಗ್ರಸ್ತರಾಗಿದ್ದಾಗ ಕೆಲವು ತಿಂಗಳುಗಳು ನಾವೆಲ್ಲರು ಉದ್ವೇಗ ಕಳವಳಗಳಿಂದ ಕೂಡಿದ್ದೆವು. ನನಗೆ ಅದೇ ಪ್ರಥಮ

ದುಃಖಾನುಭವ. ತಂದೆಯವರು ದಿನೇ ದಿನೇ ಕ್ಷಯಿಸುತ್ತಿದ್ದರು. ಮೃತ್ಯು ಸನ್ನಿಹಿತವಾಗುತ್ತಿದ್ದಿತೆಂದು ನಾನು ಅರಿತಿರಲಿಲ್ಲ. ಅರಿದಿನವರೆಗೆ ಸಾವು ನಮ್ಮ ಚಿಕ್ಕ ಕುಟುಂಬದಿಂದ ದೂರವಿತ್ತು. ನನಗೆ ಸಾವೆಂಬುದೇ ಗೊತ್ತಿರಲಿಲ್ಲ.

ಜವಹರನು ಬಿಡುಗಡೆಹೊಂದಿದ ದಿನವೇ ಭರತಖಂಡದ ಇತರ ಭಾಗಗಳಲ್ಲಿ ಇನ್ನೂ ಹಲವರ ಬಿಡುಗಡೆಯಾಯಿತು. ಹಾಗೆ ಬಂಧನ ಮುಕ್ತರಾದವರಲ್ಲಿ ಗಾಂಧಿಜೀಯವರೊಬ್ಬರು. ತಂದೆಯವರ ವಿಷಮಾವಸ್ಥೆಯ ವಿಷಯವನ್ನು ಕೇಳಿದ ಕೂಡಲೆ ಎರವಾಡಾ ಸೆರೆಮನೆಯಿಂದ ನೆಟ್ಟಗೆ ಅಲಹಾಬಾದಿಗೆ ಬಂದರು. ಅವರನ್ನು ನೋಡಿ ತಂದೆಯವರು ಆನಂದಹೊಂದಿದರು. ಗಾಂಧಿಜೀಯವರ ದರ್ಶನವು ಅವರಿಗೆ ಸ್ವಲ್ಪ ಸಮಾಧಾನವನ್ನುಂಟುಮಾಡುವಹಾಗೆ ಕಂಡುಬಂದಿತು. ಬಂಧನ ಮುಕ್ತರಾದ ಹಲವಾರು ಮಂದಿ ತಂದೆಯವರನ್ನು ನೋಡಲು, ಬಹುಶಃ ತಮ್ಮ ಅಂತ್ಯಗೌರವವನ್ನು ವ್ಯಕ್ತಪಡಿಸಲು ಆನಂದಭವನದಲ್ಲಿ ಗುಂಪು ಕೂಡಿದರು. ನಮ್ಮ ಮನೆಯ ತುಂಬ ಅತಿಥಿಗಳೇ. ಯಾವ ಮನೆಯಲ್ಲಿ ನಗು ತುಂಬಿ ತುಳುಕಾಡುತ್ತಿತ್ತೋ, ಸುಖ ಸರ್ವದಾ ತಾಂಡವವಾಡುತ್ತಿತ್ತೋ, ಅಲ್ಲಿ ಶ್ಮಶಾನಮೌನ ನೆಲೆಗೊಂಡಿತು. ಮನೆಯ ಸುತ್ತಮುತ್ತ ಜನರು ನಿಶ್ಶಬ್ದರಾಗಿ ಸುತ್ತಾಡುತ್ತಿದ್ದರು. ಕೆಲವರು ಕಾರ್ಯನಿರತರಾಗಿದ್ದರು, ಉಳಿದವರು ಗೊತ್ತುಗುರಿಯಿಲ್ಲದೆ ಅಲೆದಾಡುತ್ತಿದ್ದರು. ಸಮಸ್ತ ವಾತಾವರಣ ಕಠೋರತೆ ವ್ಯಾಕುಲತೆಗಳಿಂದ ಕೂಡಿತ್ತು.

ತಾಯಿಯವರು, ಜವಹರ, ಕಮಲ, ಸ್ವರೂಪಳು ಮತ್ತು ನಾನು –ಎಲ್ಲರೂ ಸದಾ ತಂದೆಯವರ ಸುತ್ತ ತಿರುಗಾಡುತ್ತಿದೆವು. ಅವರು ರಾತ್ರಿಯ ವೇಳೆ ತಮ್ಮ ಹತ್ತಿರ ನಮ್ಮ ಇರವನ್ನು ಅಪೇಕ್ಷಿಸಿದಲ್ಲಿ ಸರದಿಯ ಮೇರೆಗೆ ಅವರ ಪಕ್ಕದಲ್ಲಿ ಮಲಗುತ್ತಿದ್ದೆವು. ಅನೇಕ ವೇಳೆ ನಾನು ಅವರ ಹತ್ತಿರವಿದ್ದಾಗ, ನೀರು ಬೇಕಾದರೆ ತಪ್ಪಿತಸ್ಥರಂತೆ ಕೇಳುತ್ತಿದ್ದರು; ಏಕೆಂದರೆ ನನಗೆ ತೊಂದರೆ ಕೊಡಲು ಅವರಿಗೆ ಇಷ್ಟವಿರಲಿಲ್ಲ. ಅವರು ಅಂತಹ ಸಮಯದಲ್ಲಿ ವಿಚಾರಪರರಾಗಿರುತ್ತಿದ್ದುದು ನನ್ನ ಮನಸ್ಸಿಗೆ ಹಿತವೆನಿಸುತ್ತಿರಲಿಲ್ಲ. ಪ್ರಾಣನಾಶಕವಾದ ರೋಗದ ಬೇನೆ

ಯಿಂದ ನರಳುತ್ತಿದ್ದರೂ ತಮ್ಮ ಹಂಬಲವನ್ನೇ ತೊರೆದು ಪರರ ಹಿತವನ್ನು ಕುರಿತು ಆಲೋಚಿಸುತ್ತಿದ್ದರು. ಅವರ ಶಕ್ತಿ ಕುಗ್ಗಿದಂತೆಲ್ಲ ನಮ್ಮ ಕಾತರತೆ ಅಧಿಕವಾಗುತ್ತಿತ್ತು. ಆದರೆ ನಾವು ನಿಸ್ಸಹಾಯಕರಾಗಿದ್ದೆವು. ಕೊನೆಯತನಕ ಅವರ ಹಾಸ್ಯದ ಚಿಲುಮೆ ಬತ್ತಿರಲಿಲ್ಲ. ಹಲವು ಸಾರಿ ಗಾಂಧಿಜೀಯವರೊಡನೆ ಪರಿಹಾಸಗೈಯ್ಯುತ್ತಿದ್ದರು, ಇಲ್ಲವೆ ತಾವು ಮುಂದಾಗಿಯೇ ಪರಲೋಕಕ್ಕೆ ತೆರಳಿ, ಅಲ್ಲಿ ತಮ್ಮನ್ನು ಸಂಧಿಸಲು ಕಾದಿರುವುದಾಗಿ ತಾಯಿಯವರನ್ನು ಕಾಡುತ್ತಿದ್ದರು. ಅಪರಿಹಾರ್ಯಾವಸಾನದ ಅರಿವಾಗಿದ್ದರೂ ಅವರು ಎಂದೂ ಹೆದರಿದವರಂತೆ ಕಾಣುತ್ತಿರಲಿಲ್ಲ. ಅವರ ಜೀವನವೇ ಒಂದು ಸಂಗ್ರಾಮಭೂಮಿಯಾಗಿತ್ತು; ಅನೇಕ ಹೋರಾಟಗಳಲ್ಲಿ ಅವರು ಜಯವನ್ನು ಗಳಿಸಿದ್ದರು. ಹೋರಾಟವಿಲ್ಲದೆ ಸಾವಿಗೂ ದಕ್ಕುವವರಲ್ಲ. ಇನ್ನು ಕೆಲವು ವರ್ಷಗಳು ಬದುಕಬೇಕೆಂಬ ಆಸೆಯಿಂದ ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಿ ಸಾವಿನೊಡನೆ ಹೋರಾಡಿದರು. ಯಾವ ಮಹತ್ಕಾರ್ಯಸಾಧನೆಗಾಗಿ ತಮ್ಮ ಜೀವಿತವನ್ನೆ ಅರ್ಪಿಸಿದ್ದರೋ ಆ ಕಾರ್ಯದ ಸತ್ಪರಿಣಾಮವನ್ನು ನೋಡುವ ಕುತೂಹಲದಿಂದ ಸಾವಿನೊಡನೆ ಹೋರಾಟವೇ ಹೊರತು ಪ್ರಾಪಂಚಿಕ ಸುಖಸಾಧನೆಗಾಗಿ ಅಲ್ಲ. ಆದರೆ ಅವರ ಧೈರ್ಯ ಸಫಲವಾಗಲಿಲ್ಲ. ಕೊನೆಗೆ ಮೃತ್ಯುವಿನ ಕೈ ಮೇಲಾಯಿತು.

ಕಾಂಗ್ರೆಸ್ ಕಾರ್ಯಸಮಿತಿಯ ಸದಸ್ಯರೆಲ್ಲರು ಅಲಹಾಬಾದಿನಲ್ಲಿಯೆ ಇದ್ದುದರಿಂದ, ಕಾರ್ಯಸಮಿತಿ ಸ್ವರಾಜ್ಯಭವನದಲ್ಲಿಯೇ ಕೂಡಬೇಕೆಂಬ ಬಯಕೆಯನ್ನು ತಂದೆಯವರು ಬಾಪುವಿನೊಡನೆ ವ್ಯಕ್ತಪಡಿಸಿದರು. " ಸ್ವರಾಜ್ಯಭವನದಲ್ಲಿ ಭಾರತಮಾತೆಯ ಭವಿತವ್ಯ ನಿರ್ಧಾರವಾಗಲಿ, ನನ್ನೆದುರಿಗೆ ಮಾತೆಯ ಅದೃಷ್ಟ ರೂಪಗೊಳ್ಳಲಿ. ನನ್ನ ತಾಯ್ನಾಡಿನ ಭವ್ಯಭವಿಷತ್ತಿನ ಗೌರವಪೂರ್ವಕವಾದ ಅಂತಿಮ ನಿರ್ಧಾರದ ಸಮಯದಲ್ಲಿ ಭಾಗವಹಿಸುವ ಸುಯೋಗ ನನಗೆ ಲಭಿಸಲಿ. ನಾನು ಸಾಯಬೇಕೆಂಬುದೇ ವಿಧಿಯ ನಿರ್ಧಾರವಾದರೆ ಸ್ವತಂತ್ರ ಭರತಮಾತೆಯ ತೊಡೆಗಳ ಮೇಲೆ ಸಾಯುವ ಸೌಭಾಗ್ಯ ದೊರೆಯಲಿ. ಬಂಧನ ವಿಮುಕ್ತಳಾದ ಮಾತೆಯ ಮಡಿಲಿನಲ್ಲಿ ನನಗೆ ಚಿರಮಚಿರನಿದ್ರೆ ಪ್ರಾರಂಭವಾಗಲಿ " ಇವೇ ಅವರ ಕೊನೆಯ ನುಡಿಗಳು.

ತಂದೆಯವರ ಪರಿಸ್ಥಿತಿ ವಿಷಮಿಸಿತು. ಎಕ್ಸರೇ ಚಿಕಿತ್ಸೆಗೋಸ್ಕರ ಅವರನ್ನು ಲಕ್ನೋ ನಗರಕ್ಕೆ, ಕರೆದೊಯ್ಯುವುದು ಸೂಕ್ತವೆಂದು ವೈದ್ಯರು ಸಲಹೆಯಿತ್ತರು. ಆದರೆ ಆ ಸಲಹೆ ತಂದೆಯವರಿಗೆ ಸರಿಬೀಳಲಿಲ್ಲ. ತನ್ನ ಕಾಲ ಸಮೀಪಿಸಿತೆಂಬ ವಿಷಯವನ್ನು ವೈದ್ಯರಿಗಿಂತ ಚೆನ್ನಾಗಿ ಅರಿತುಕೊಂಡಿದ್ದರು. ತಾವು ಹೆಮ್ಮೆಯಿಂದ ನಿರ್ಮಿಸಿದ್ದ, ಎದೆಯಾರೆ ಪ್ರೀತಿಸಿದ್ದ ಮುಪ್ಪಾದ ಆನಂದಭವನದಲ್ಲಿ ಕಡೆಯುಸಿರನ್ನು ಬಿಡಬೇಕೆಂಬುದೇ ಅವರ ಬಯಕೆಯಾಗಿತ್ತು. ಆದರೆ ವೈದ್ಯರು ಒತ್ತಾಯಪಡಿಸಿದರು. ಗಾಂಧಿಜೀಯವರು ಸಹ ಸಮ್ಮತಿಸಿದರು. ಪ್ರತಿಯಾಗಿ ವಾದಿಸಲು ತಂದೆಯವರಿಗೆ ಶಕ್ತಿಯಿರಲಿಲ್ಲ. ೧೯೩೧ನೆಯ ಇಸವಿ ಫೆಬ್ರವರಿ ನಾಲ್ಕನೆಯ ತಾರೀಖು ಅವರನ್ನು ಕಾರಿನಲ್ಲಿ ಲಕ್ನೋನಗರಕ್ಕೆ ಒಯ್ದರು. ಪ್ರಯಾಣ ದೀರ್ಘವಾದುದಾದರೂ ಮಾರನೆಯ ದಿನ ಅವರು ಸ್ವಲ್ಪ ಉತ್ತಮಗೊಂಡಂತೆ ಕಂಡರು. ಆದರೆ ಸಂಜೆಯ ವೇಳೆಗೆ ಅವರ ರೋಗ ಮತ್ತೆ ಉಲ್ಬಣವಾಯಿತು. ಉಸಿರಾಡಿಸಲು ಶಕ್ತಿಯಿರಲಿಲ್ಲ. ಆಮ್ಲಜನಕವನ್ನು ಕೊಟ್ಟರು. ಸುತ್ತಮುತ್ತಣ ಸನ್ನಿವೇಶಗಳ ಪ್ರಜ್ಞೆ ಇನ್ನೂ ಇತ್ತು. ಡಾ॥ ಬಿಧನ್‌ರಾಯ್, ಡಾ॥ ಅನ್ಸಾರಿ, ಡಾ॥ ಜೀವರಾಜ್ ಮೆಹ್ತಾ ಮತ್ತು ಇತರ ವೈದ್ಯರು ತಂದೆಯವರನ್ನು ನೋಡಿಕೊಳ್ಳುತ್ತಿದ್ದರು. ಸಾಯಂಕಾಲ ಐದುಗಂಟೆಯ ವೇಳೆಗೆ ಡಾ॥ ಬಿಧನ್‌ರಾಯ್‌ರವರು ನನ್ನನ್ನು ತಂದೆಯವರ ಕೋಣೆಗೆ ಕರೆದು, ತಂದೆಯವರಿಗೆ ಊರೆಯಾಗಿ ಅವರ ಹಿಂದೆ ಕುಳಿತುಕೊಳ್ಳುವಂತೆ ಹೇಳಿದರು. ನಾನು ಹಾಗೆಯೇ ಮಾಡಿದೆನು. ವೈದ್ಯರು ಹೊರಗೆ ಹೋದರು. ತಂದೆಯವರು ನನಗಾಗಿ ಹೇಳಿಕಳುಹಿಸಿದ್ದರೋ, ಅಥವಾ ವೈದ್ಯರೇ ನನ್ನನ್ನು ಕರೆದಿದ್ದರೋ ನನಗೆ ಗೊತ್ತಾಗಲಿಲ್ಲ. ಕೆಲವು ನಿಮಿಷಗಳಲ್ಲಿಯೇ ತಂದೆಯವರು ಏನನ್ನೋ ಹುಡುಕುವಂತೆ ಕಂಡರು. ನಾನು ಮುಂದೆ ಬಾಗಿ ಏನು ಬೇಕೆಂದು ವಿಚಾರಿಸಿದೆನು. ಮಾತಾಡಲು ಅವರಿಗೆ ಶಕ್ತಿಯಿರಲಿಲ್ಲ. ಆದರೂ ಪ್ರಯತ್ನಪೂರ್ವಕವಾಗಿ ಬಾತುಕೊಂಡಿದ್ದ ತಮ್ಮ ಕೈಗಳ ನಡುವೆ ನನ್ನ ಮುಖವನ್ನಿರುಕಿಸಿಕೊಂಡರು. ಗುರುತು ಸಿಕ್ಕದಷ್ಟು ಬಾತುಕೊಂಡಿದ್ದ ತಮ್ಮ ತುಟಿಗಳಿಂದ ಕೊನೆಯ ಮುತ್ತೋ

ಎಂಬಂತೆ ನನ್ನ ಮುಖದ ಮೇಲೆಲ್ಲ ಮುತ್ತಿಟ್ಟರು. ಉಕ್ಕಿ ಬರುತ್ತಿದ್ದ ಕಣ್ಣೀರ ಕೋಡಿ ಅವರ ಕೈಗಳ ಮೇಲೆ ಹರಿಯುದ ಹಾಗೆ ಮಾನವಾತೀತ ವಾದ ಪ್ರಯತ್ನದಿಂದ ಬಿಗಿಹಿಡಿಯಲು ಯತ್ನಿಸಿದೆನು. ಶಬ್ದ ಸ್ವಲ್ಪವೂ ಹೊರಹೊಮ್ಮದ ಹಾಗೆ ಹಲ್ಲುಗಳನ್ನು ಬಿಗಿಹಿಡಿದೆನು. ಸಂಯಮಶಕ್ತಿ ಹಿಂಜರಿದಾಗ ಅವರ ತೆಕ್ಕೆಯಿಂದ ಬಿಡಿಸಿಕೊಂಡು ಹೋಗಲು ಪ್ರಯತ್ನಿ ಸಿದೆನು. ಸೂಕ್ಷ್ಮಜ್ಞಾನಿಯೂ, ವಿವೇಕಿಯೂ ಆದ ಅವರು ನನ್ನ ಅವಸ್ಥೆಯನ್ನು ಊಹಿಸಿಕೊಂಡಿರಬೇಕು. ನನ್ನನ್ನು ಹಾಗೆಯೇ ಹಿಡಿ ದುಕೊಂಡು, "ನನ್ನ ಮುದ್ದುಗುವರಿ, ಸದಾ ಧೈರ್ಯದಿಂದಿರಬೇಕು" ಎಂದು ತುಟಿಯಲುಗಿಸದೆಯೇ ಕಷ್ಟದಿಂದ ಗೊಣಗುಟ್ಟಿದರು. ಸಪನೆ ನನ್ನ ಅಳವನ್ನು ಮೀರಿತು. ಕುರುಡಿಯಂತೆ ಅವರ ಕೋಣೆಯ ಹೊರಗೆ ಓಡಿಹೋಗಿ ನನ್ನ ಹೃದಯದಲ್ಲಿ ಗುಪ್ತವಾಗಿದ್ದ ದುಃಖದ ಮಡುವನ್ನು ಒಡೆದು ಹೊರಚೆಲ್ಲಿದೆನು ಸಂಜೆಯ ವೇಳೆಗೆ ಅವರ ಸ್ಥಿತಿ ವಿಷಮಿಸಿತು. ಪುನಃ ಅವರ ಕೋಣೆಯನ್ನು ಪ್ರವೇಶಿಸಲು ಧೈರ್ಯ ಬರಲಿಲ್ಲ. ಕೊಟ ಡಿಯ ಹೊರಗೆ ಇತರರೊಡನೆ ಇರುಳೆಲ್ಲ ಕುಳಿತೆನು. ಚಿಂತೆಯಿಂದಲೂ ಆಯಾಸದಿಂದಲೂ ಬಳಲಿದ್ದ ನಾನು ಬೆಳಗ್ಗಿಯ ಹೊತ್ತಿಗೆ ಗಾಢನಿದ್ರೆ ಗೊಳಗಾದೆನು. ಅಕ್ಕ, ಕಮಲ ಮತ್ತು ಅಲ್ಲಿದ್ದ ಇತರ ನೆಂಟರೆಲ್ಲ ಮಲಗಿ ದರು. ನಾವು ಮಲಗಿ ಒಂದೂವರೆ ಗಂಟೆಯೂ ಸರಿಯಾಗಿ ಆಗಿರ ಲಿಲ್ಲ. ಅಷ್ಟರಲ್ಲಿಯೇ, ತಂದೆಯವರು ಸ್ವರ್ಗಸ್ಥರಾದರೆಂಬ ವಿಷಯ ವನ್ನು ತಿಳಿಸಲು ನಮ್ಮ ಚಿಕ್ಕಮ್ಮನವರು ನಮ್ಮನ್ನು ಎಬ್ಬಿಸಿದರು. ಅವರು ತೀರಿಹೋದಾಗ, ಅವರ ಹತ್ತಿರದಲ್ಲಿ ಜವಹರ, ತಾಯಿ ಮತ್ತು ವೈದ್ಯರು ಮಾತ್ರ ಇದ್ದರು.

ಒಬ್ಬೊಬ್ಬರಾಗಿ ನಾವೆಲ್ಲರು ತಂದೆಯವರ ಕೋಣೆಯನ್ನು ಸೇರಿ ದೆವು. ಅವರು ಗಾಢನಿದ್ರೆಯಲ್ಲಿದ್ದವರಂತೆ ಹಾಸಗೆಯ ಮೇಲೆ ಪವಡಿ ಸಿದ್ದರು. ಅವರ ಮುಖ, ಬದುಕಿದ್ದಾಗ ಇದ್ದುದಕ್ಕಿಂತ ಮಿಗಿಲಾದ ಶಾಂತಿಯಿಂದಲೂ, ಗಾಂಭೀರ್ಯದಿಂದಲೂ ಕೂಡಿತ್ತು. ಪೂಜ್ಯರಾದ ತಂದೆಯವರು ತೀರಿಹೋದರೆಂದು ನಂಬಲು ಹೃದಯ ಸಮ್ಮತಿಸಲಿಲ್ಲ. ಜವಹರನು ತಂದೆಯವರ ಹಿಂದುಗಡೆ ಕುಳಿತು ಅವರ ತಲೆಯ ಮೇಲೆ

ಕೈ ಆಡಿಸುತ್ತಿದ್ದನು. ಅವನ ಕಣ್ಣುಗಳಲ್ಲಿ ನೀರು ಕೋಡಿವರಿಯದೆ ಮಡುಗಟ್ಟಿ ನಿಂತಿತ್ತು. ಆ ದುರಂತಘಟನೆಯನ್ನು ನಾನಿನ್ನು ನಂಬಿರಲಿಲ್ಲವಾದುದರಿಂದ ನನ್ನ ಕಣ್ಣುಗಳಲ್ಲಿ ನೀರು ಚಿಮ್ಮಲಿಲ್ಲ. ಅನಂತರ ಗಾಂಧೀಜಿಯವರು ಒಳಗೆ ಪ್ರವೇಶಿಸಿ ತಂದೆಯವರ ಹಾಸಿಗೆಯ ಹತ್ತಿರ ಹೋಗಿ, ತಲೆಯನ್ನು ಬಾಗಿಸಿಕೊಂಡು ಸ್ವಲ್ಪ ಹೊತ್ತು ನಿಂತರು. ಪ್ರಾರ್ಥನಾಮಗ್ನರಾದಂತೆಯೂ, ಕೊನೆಯ ಸಾರಿ ಬೀಳ್ಕೊಳ್ಳುವಂತೆಯೂ ತಮ್ಮ ಕಣ್ಣುಗಳನ್ನು ಮುಚ್ಚಿದರು. ನಾವೆಲ್ಲರು ಸುತ್ತಲೂ ನಿಂತಿದ್ದೆವು. ಅನಂತರ ಅವರು ತಾಯಿಯವರ ಹತ್ತಿರ ಹೋದರು. ತಾಯಿಯವರು ಮೊದಲು ಚೀರಿದರು; ಅನಂತರ ನಿಶ್ಶಬ್ದರಾಗಿ, ದುಃಖಾಕ್ರಾಂತರಾಗಿ ಮೂಲೆಯಲ್ಲಿ ಕುಳಿತರು. ಗಾಂಧಿಜೀಯವರು ಅವರ ಹತ್ತಿರ ಕುಳಿತು, ಅವರ ಭುಜದ ಮೇಲೆ ತಮ್ಮ ಕೈಯ್ಯಿಟ್ಟು "ಮೋತಿಲಾಲರು ಸತ್ತಿಲ್ಲ; ಅವರು ಚಿರಂಜೀವಿ" ಎಂದು ನುಡಿದರು. ಆಗ ಪೆಟ್ಟು ಬಡಿದಂತಾಗಿ ಅರಿವು ಮೂಡಲು, ಕಣ್ಣೀರು ಹೊನಲಿಟ್ಟಿತು.

ತಂದೆಯವರ ಸಾವಿನ ಸುದ್ದಿ ದೇಶದಲ್ಲೆಲ್ಲ ವಿದ್ಯುದ್ವೇಗದಿಂದ ಹರಡಿತು. ಲಕ್ನೋ ನಗರದಲ್ಲಂತು ಸುದ್ದಿ ಕಾಡುಕಿಚ್ಚಿನಂತೆ ಹಬ್ಬಿತು. ತಮ್ಮ ನಾಯಕನ ಕೊನೆಯ ದರ್ಶನಕ್ಕೋಸ್ಕರ ನೂರಾರು, ಸಾವಿರಾರು ಜನರು ನಾವಿಳಿದುಕೊಂಡಿದ್ದ ಕಳಕಂಕರ್ ಅರಮನೆಯಲ್ಲಿ ಗುಂಪು ಕೂಡಿದರು.

ದೇಹ ಪುಷ್ಪಗಳಿಂದಲಂಕೃತವಾಗಿ ಗಾಂಭೀರ್ಯದಿಂದ ಕೂಡಿತ್ತು. ತಮ್ಮ ಅಂತ್ಯಭಕ್ತಿಯನ್ನು ಸಲ್ಲಿಸುವುದಕ್ಕೋಸ್ಕರ ಮುಂಜಾನೆಗೆ ಮುಂಚೆಯೇ ಆಪ್ತೇಷ್ಟರ ನಿರಂತರ ವಾಹಿನಿ ನೀರವವಾಗಿ ಪ್ರವಹಿಸತೊಡಗಿತು. ಹಾಸಿಗೆಯ ಮಗ್ಗುಲಲ್ಲಿ ಕುಳಿತ ಗಾಂಧಿಜೀಯವರು ಸದ್ದಿಲ್ಲದ ಪ್ರೇಕ್ಷಕರಾದರು. ಬಾಳಿನ ಸುಖದುಃಖ ಗೌರವಗಳಲ್ಲಿ ಸಮಭಾಗಿನಿಯಾಗಿದ್ದ ತಾಯಿಯವರು ಅನಾಥಳಂತೆ, ಅನುಕಂಪಕನಿಕರಗಳು ಮೂರ್ತಿವೆತ್ತಂತೆ ಪಕ್ಕದಲ್ಲಿಯೇ ಕುಳಿತಿದ್ದರು. ಇರುಳು ಕಳೆಯುವುದರೊಳಗಾಗಿ ಮುಪ್ಪು ಅಡಸಿತೋ ಎನ್ನುವಂತೆ ಸೊರಗಿ ತರ

ಗಾಗಿದ್ದ ಜವಹರನು ಬಳಿಯಲ್ಲಿಯೇ ನಿಂತಿದ್ದನು. ಆ ಭೀಕರ ಪರಿಸ್ಥಿತಿಯಲ್ಲಿಯು ಆತನ ವದನ ಗಂಭೀರ ಶಾಂತಭಾವಗಳಿಂದ ಕೂಡಿತ್ತು.

ಮನೆಯ ಹೊರಗಡೆ ಗುಂಪು ಬೃಹದಾಕಾರವಾಗಿ ಬೆಳೆಯುತ್ತಿತ್ತು. ಪ್ರತಿಯೊಂದು ಮುಖದ ಮೇಲೆಯೂ ದುಃಖಚಿಂತೆಗಳು ಮುದ್ರಿತವಾಗಿದ್ದುವು. ಬಿಸಿನೀರು ಮಿಡಿಯುದ ಕಣ್ಣಿರಲಿಲ್ಲ. ಮೌನ ದೇವತೆ ಸರ್ವವ್ಯಾಪಿಯಾಗಿದ್ದಳು. ನಮಗಾದ ನಷ್ಟಾನುಭವ ಶಬ್ದಾತೀತವಾದುದು.

ರಾಷ್ಟ್ರೀಯ ಧ್ವಜದಿಂದ ಸುತ್ತಿದ್ದ ತಂದೆಯವರ ಶವವನ್ನು ಕಾರಿನಲ್ಲಿ ಅಲಹಾಬಾದಿಗೆ ತಂದೆವು. ಜವಹರನು ತಂದೆಯವರ ಮಗ್ಗುಲಲ್ಲಿಯೇ ಇದ್ದನು. ಇತರರಿಗಿಂತ ಮುಂಚೆಯೇ ಮನೆಯನ್ನು ತಲುಪಲು ಕಮಲ, ಸ್ವರೂಪ, ಮತ್ತು ನಾನು ಮೂವರು ಮೊದಲೇ ಕಾರಿನಲ್ಲಿ ಹೊರಟೆದ್ದೆವು. ಲಕ್ನೋನಗರದಲ್ಲಿ ನಮ್ಮ ಮನೆಯ ಹೊರಗೆ ದೊಡ್ಡ ಗುಂಪೇ ನೆರೆದಿತ್ತು. ಅಲಹಾಬಾದಿನ ಹತ್ತಿರ ದಾರಿಯುದ್ದಕ್ಕೂ ಮೈಲಿಗಟ್ಟಳೆ ಸಾವಿರಾರು ಜನರು ಕಿಕ್ಕಿರಿದಿದ್ದರು. ನಮ್ಮ ಮನೆ ಸಮಿಾಪಿಸಿದಂತೆಲ್ಲ ಜನಸಂದಣಿ ಹಿಗ್ಗುತ್ತಲೇ ಇತ್ತು. ಆನಂದಭವನ ನಾಲ್ಕು ಮೈಲಿ ದೂರವಿರುವಾಗಲೇ ಅಸಂಖ್ಯಾತ ಜನಸಂದಣಿ ತೆರೆತೆರೆಯಾಗಿ ಉಬ್ಬುತ್ತಿತ್ತು. ನಮ್ಮ ವಾಹನ ಅವರ ನಡುವೆ ಹಾಯ್ದುಹೋಗುತ್ತಿದ್ದಾಗ ಅವರ ಸಹಾನುಭೂತಿಯ ಮೆಲ್ನುಡಿಗಳು ನಮ್ಮ ಕಿವಿದೆರೆಯನ್ನು ತಾಕುತ್ತಿದ್ದುವು. ತಂದೆಯವರಿಗೆ ಅಂತ್ಯ ಭಕ್ತಿಯನ್ನು ಸಮರ್ಪಿಸಲು ಅನೇಕ ಮೈಲಿಗಳಿಂದ ಬಂದಿದ್ದ ಜನಸಂದಣಿಯನ್ನು ನೋಡಿ ನಮ್ಮ ಧೈರ್ಯವುಡುಗಿತು. ಹಿಂದಿನ ಪರಿಸ್ಥಿತಿ ಮುಂದೆಂದೂ ಮರುಕೊಳಿಸದ, ಆತ್ಮಶ್ರೀವಿಲುಪ್ತವಾದ, ಚೈತನ್ಯ ನಷ್ಟವಾದ ಆ ಮನೆಯನ್ನು ತಲುಪಿದೆವು. ನಮ್ಮ ಅಂಗಳ ಜನರನ್ನು ಮುಕುಳಿಸುತ್ತಿತ್ತು. ಯಾವಾಗಲೂ ಹೆಮ್ಮೆಯಿಂದ ಗಗನಚುಂಬಿಯಾಗಿ ಹಾರಾಡುತ್ತಿದ್ದ ರಾಷ್ಟ್ರೀಯಧ್ವಜ ಅಧೋಮುಖಿಯಾಗಿ ಜೋಲಾಡುತ್ತಿತ್ತು. ಅದೇರೀತಿಯಾಗಿ ಪಟ್ಟಣದಲ್ಲೆಲ್ಲ ಬಾವುಟಗಳು ಶೋಕವನ್ನು ಪ್ರದರ್ಶಿಸುತ್ತಿದ್ದುವು. ನೂರಾರು

ಸಾವಿರಾರು ಬಾಯಿಗಳಿಂದ ಒಟ್ಟಿಗೆ ಆಕ್ರಂದನಧ್ವನಿ ಚೀತ್ಕಾರಗೈದಿತು. ಕೊನೆಯ ಸಾರಿ ತಂದೆಯವರ ವಾಹನ ಕಬ್ಬಿಣದ ಹೆಬ್ಬಾಗಿಲ ಮಾರ್ಗವಾಗಿ ಹೊರಟಿತು.

ಲಕ್ನೋ ನಗರದಿಂದ ಪ್ರತಿಯೊಬ್ಬರೂ ಬಂದಿದ್ದರು. ಚರಮ ಸಂಸ್ಕಾರಗಳಿಗಾಗಿ ಸರ್ವಸಲಕರಣೆಗಳು ಅಣಿಯಾಗಿದ್ದುವು. ಗಾಂಧಿಜೀ ಮತ್ತು ತಾಯಿಯವರು ಕುಳಿತಿದ್ದ ವಾಹನ ಇನ್ನೂ ಬಂದಿರಲಿಲ್ಲವಾದುದರಿಂದ ಎಲ್ಲರಿಗು ಕಾತರತೆ ಮೂಡಿತು. ಏನಾಯಿತೆಂಬುದನ್ನು ತಿಳಿಯಲು ಬೇರೆ ವಾಹನಗಳನ್ನು ಕಳುಹಿಸಲಾಯಿತು. ಸುಮಾರು ಒಂದು ಗಂಟೆ ಕಳೆದನಂತರ ಅವರು ಬಂದರು. ಅವರ ವಾಹನ ಆಕಸ್ಮಿಕವಾದ ದುರ್ಘಟನೆಗೀಡಾಗಿತ್ತೆಂಬುದು ಅನಂತರ ಗೊತ್ತಾಯಿತು. ಲಕ್ನೋನಗರದಿಂದ ಅಲಹಾಬಾದಿಗೆ ಹೋಗುವ ರಸ್ತೆ ಚೆನ್ನಾಗಿರಲಿಲ್ಲ; ಜನಸಂದಣಿಯ ನಡುವೆ ದಾರಿಬಿಡಿಸಲು ನಮ್ಮ ಸಾರಥಿ ಮಗ್ನನಾಗಿದ್ದುದರಿಂದ ದಾರಿಯ ಮಧ್ಯೆ ಇದ್ದ ಕಂದಕ ಆತನ ದೃಷ್ಟಿಗೆ ಗೋಚರಿಸಲಿಲ್ಲ. ಕಾರು ದೊಡ್ಡದಾದುದರಿಂದ ಕಂದಕದಲ್ಲಿ ಧುಮುಕಿದ ಕೂಡಲೆ ತಲೆ ಕೆಳಗಾಯಿತು. ದೈವವಶಾತ್ ಬಾಗಿಲು ತಾನಾಗಿಯೇ ತೆರೆದುಕೊಳ್ಳಲು ತಾಯಿ ಮತ್ತು ಗಾಂಧಿಜೀ ಇಬ್ಬರನ್ನೂ ಕಾರು ಹೊರಗಡೆ ನೂಕಿತ್ತು. ಯಾರಿಗೂ ಅಪಾಯ ಸಂಭವಿಸಲಿಲ್ಲ. ಸಾರಥಿಗೆ ಮಾತ್ರ ಸ್ವಲ್ಪ ಗಾಯವಾಯಿತು. ಆದರೆ ವಾಹನಕ್ಕೇನೂ ಅಪಾಯವಾಗಲಿಲ್ಲ.

ತಾಯಿಯವರು ಬಂದ ಕೂಡಲೇ ಸಂಸ್ಕಾರಗಳೆಲ್ಲ ಮುಗಿದುವು. ವಿವಿಧ ಪುಷ್ಪಗಳಿಂದ ಕಣ್ಣುಕೋರೈಸುವಂತೆ ಅಲಂಕೃತವಾಗಿದ್ದ ಚಟ್ಟದಲ್ಲಿ ತಂದೆಯವರ ಶವವನ್ನು ಇಟ್ಟು, ದೊಡ್ಡ ಮೆರವಣಿಗೆಯಲ್ಲಿ ಗಂಗಾತೀರಕ್ಕೆ ತೆಗೆದುಕೊಂಡು ಹೋದೆವು. ಆ ಅಸಂಖ್ಯಾತ ಜನಸಮುದಾಯದಲ್ಲಿ ಆ ಪುರುಷಸಿಂಹನಿಗೋಸ್ಕರ ಮರುಗದ, ಕೊರಗದ ಕಲ್ಲೆದೆಯಿರಲಿಲ್ಲ; ಬಿಸಿನೀರು ಸೂಸದ ಬಂಜೆಗಣ್ಣಿರಲಿಲ್ಲ. ಅವರ ಹಿರಿಮೆಗರಿಮೆಗಳನ್ನು ಸೂಚಿಸುವ ಕೈಮರ ಬೇರೆ ಬೇಕಿಲ್ಲ. ಆ ದೃಶ್ಯ ನಮ್ಮನೊಂದೆದೆಗಳಿಗೆ ತುಸು ಶಾಂತಿಯನ್ನು ತರುತ್ತಿತ್ತು. ಮುನ್ನೆಂದೂ ನಾವು ನೋಡಲಾರದ, ಮತ್ತೆಂದೂ ಹಿಂದಿರುಗದ ಒಲುಮೆಯ ಸುಗ್ಗಿಯಂ

ತಿದ್ದ ತಂದೆಯವರನ್ನು ಕೊನೆಯದಾಗಿ ಬೀಳ್ಕೊಟ್ಟೆವು. ಅಂದಿನ ಇರುಳು ನಾನೊಬ್ಬಳೇ ಕೈದೊಟದಲ್ಲಿ ತಿರುಗಾಡುತ್ತಿದ್ದಾಗ ಯಾವ ಮಾರ್ಪಾಡೂ ಸಂಭವಿಸಿದಂತೆ ಕಾಣಲಿಲ್ಲ. ಸದ್ದಿಲ್ಲದಿರುಳಿನ ತಿಳಿಯಾದ ಆಕಾಶದಲ್ಲಿ ತಾರೆಗಳು ಎಂದಿನಂತೆ ಸ್ವರ್ಗೀಯ ಹಾಸವನ್ನು ಸೂಸುತ್ತಿದ್ದುವು. ಆದರೂ ನನ್ನ ಕಾಲುಗಳ ಕೆಳಗಡೆ ಇಡೀ ಪ್ರಪಂಚವೇ ಬಿರಿ ಬಿರಿ ಬಿರಿಯುವಂತೆ ನನಗೆ ಭಾಸವಾಯಿತು.

ಅಂತಹ ಪ್ರಭಾವಪೂರ್ಣವೂ, ಬೃಹತ್‌ಗಂಭೀರವೂ ಆದ ಶವ ಸಂಸ್ಕಾರವನ್ನು ಅಲಹಾಬಾದಿನ ಇತಿಹಾಸದಲ್ಲೇ ಹಿಂದೆಂದು ಯಾರೂ ಕಂಡಿರಲಿಲ್ಲ. ಗಂಗಾತಟದ ಸಂಗಮ ಸ್ಥಾನದಲ್ಲಿ ಚರಮಸಂಸ್ಕಾರಗಳನ್ನು ನೆರವೇರಿಸಲು ಆಬಾಲವೃದ್ಧ ಸ್ತ್ರೀಪುರುಷರು ಲಕ್ಷಗಟ್ಟಲೆ ನೆರೆದಿದ್ದರು. ದಿಟ್ಟಿಗೆ ಸಿಲುಕುವವರೆಗೂ ದೊಡ್ಡ ತಲೆಗಡಲನ್ನು ನೋಡಬಹುದಾಗಿತ್ತು. ಮಸ್ತಕಾಚ್ಛಾದನವಿಲ್ಲದೆ ಎಲ್ಲರು ನಿಶ್ಶಬ್ದರಾಗಿ ನಿಂತಿದ್ದರು. ಶವದ ಮೆರವಣಿಗೆಯಲ್ಲಿ ಭಾಗವಹಿಸಲು ನೂರಾರು ಮಂದಿ ರೈತರು ಅಕ್ಕಪಕ್ಕದ ಹಳ್ಳಿಗಳಿಂದ ಬಂದಿದ್ದರು.

ಚರಮಸಂಸ್ಕಾರಗಳು ಮುಕ್ತಾಯಗೊಂಡನಂತರ ಗಾಂಧಿಜೀ ಮತ್ತು ಪಂಡಿತಮದನಮೋಹನಮಾಳವೀಯರು ಜನಸಂದಣಿಯನ್ನುದ್ದೇಶಿಸಿ ಮಾತಾಡಿದರು. ಬಾಪುಜೀಯವರು ಮಾತಾಡಲು ಎದ್ದಾಗ ಸಾವಿರಾರು ಗಂಟಲುಗಳಿಂದ ಚೀತ್ಕಾರ ಹೊರಹೊಮ್ಮಿತು. ಆದರೆ ಕ್ಷಿಪ್ರದಲ್ಲಿಯೇ ಇರುವೆ ಹೆಜ್ಜೆಯ ಸಪ್ಪಳ ಕೇಳಿಸುವಷ್ಟು ನೀರವತೆ ಹರಡಿತು. "ಭರತಖಂಡಕ್ಕೆ ಸ್ವಾತಂತ್ರ್ಯ ಲಭಿಸುವತನಕ ತೃಪ್ತರಾಗುವುದಿಲ್ಲವೆಂದು ಇಲ್ಲಿ, ಈ ಗಂಗಾ ಯಮುನೆಯರ ದಿವ್ಯಸನ್ನಿಧಿಯಲ್ಲಿ, ಈ ನಮ್ಮ ಪುರುಷಸಿಂಹನ ಚರಮಾವಶೇಷಗಳ ಮುಂದೆ ಸ್ತ್ರೀಪುರುಷರಾದಿಯಾಗಿ ಪ್ರತಿಯೊಬ್ಬರೂ ಪಣತೊಡಲಿ. ಭರತಮಾತೆಯ ಸ್ವಾತಂತ್ರ್ಯವೇ ಮೊತಿಲಾಲರ ಆತ್ಮಗೀತೆಯಾಗಿತ್ತು. ಆ ಸ್ವಾತಂತ್ರ್ಯಕ್ಕಾಗಿಯೇ ತಮ್ಮ ಬಾಳನ್ನು ಬಲಿತೆತ್ತರು." ಗಾಂಧಿಜೀಯವರ ಈ ಮಾತುಗಳು ಎಲ್ಲರಲ್ಲಿಯು ಅನುಕಂಪಯನ್ನು ಹುಟ್ಟಿಸಿದುವು. ಎಲ್ಲೆಲ್ಲೂ ಕಣ್ಣೀರಿನ ಕೋಡಿ ಧಾರಾಕಾರವಾಗಿ ಹರಿಯಿತು.

ಪರಸ್ಪರ ವೈಮನಸ್ಯಗಳನ್ನು ಸಮಾಧಿಮಾಡಿ, ಗತಿಸಿದ ನಾಯಕ ಶ್ರೇಷ್ಠರ ಬಲಿದಾನವನ್ನು ಮುಂದಿಟ್ಟುಕೊಂಡು, ಐಕಮತ್ಯವನ್ನು ಪಾಲಿಸುತ್ತ ಭರತಖಂಡದ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಪಂಡಿತ ಮದನಮೋಹನಮಾಳವಿಯಜೀಯವರು ಸ್ಫೂರ್ತಿದಾಯಕ ವಾಗಿ ಮಾತಾಡಿದರು.

ಎರಡು ದಿನಗಳತನಕ ಇಡೀ ರಾಷ್ಟ್ರವೇ ದುಃಖಾಬ್ಧಿಯಲ್ಲಿ ಮುಳುಗಿತ್ತು. ಪ್ರತಿಯೊಂದು ನಗರವೂ, ಪ್ರತಿಯೊಂದು ಹಳ್ಳಿಯೂ ಹರತಾಳಗಳನ್ನು ಆಚರಿಸಿದುವು. ಶಾಲಾಕಾಲೇಜುಗಳೆಲ್ಲ ಮುಚ್ಚಿದ್ದುವು. ವ್ಯಾಪಾರವ್ಯವಹಾರಗಳು ಜರುಗಲಿಲ್ಲ. ಪ್ರಪಂಚದ ನಾನಾ ಭಾಗಗ ಳಿಂದ ನೂರಾರು ಸಹಾನುಭೂತಿಯ ಸಂದೇಶಗಳು ಸುರಿದುವು.

ತಂದೆಯವರ ಮರಣಾನಂತರ ಗಾಂಧಿಜೀಯವರು ಕಳುಹಿಸಿದ ಸಂದೇಶ ಹೀಗಿತ್ತು: "ನನ್ನ ಈಗಿನ ಸ್ಥಿತಿ ವಿಧವೆಯ ಅವಸ್ಥೆಗಿಂತ ಕೀಳಾಗಿದೆ. ಗಂಡನ ಸ್ಥಾನಮಾನಗಳಿಗೆ ತಕ್ಕಂತೆ ಯೋಗ್ಯವೂ ಉತ್ತ ಮವೂ ಆದ ಬಾಳ್ವೆಯನ್ನು ಬಾಳಿ ವಿಧವೆಯಾದವಳು ಗಂಡನ ಆತ್ಮ ವನ್ನು ತೃಪ್ತಿಗೊಳಿಸಬಹುದು. ನನ್ನಿಂದ ಯಾವುದೂ ಸಾಧ್ಯವಿಲ್ಲ. ಮೋತಿಲಾಲರ ಸಾವಂತು ನನಗೆ ಚಿರಹಾನಿಯನ್ನುಂಟುಮಾಡಿದೆ."

ತಂದೆಯವರು ಸಾಧಾರಣವಾದ ಎತ್ತರದ ಒಳ್ಳೆಯ ಆಯಕಟ್ಟಿನ ಆಳು. ಅವರು ಎತ್ತರವಾದ ದೇಹವುಳ್ಳವರೆಂದು ನೋಡಿದವರಿಗೆ ಭಾಸ ವಾಗುತ್ತಿತ್ತು. ಅಪಾರವಾದ ಬುದ್ಧಿಶಕ್ತಿಯನ್ನು ಚಿಮ್ಮುವ ಸುಂದರ ವಾದ ಮುಖ, ಪ್ರತಿಯೊಬ್ಬರ ಮನೋಗರ್ಭದಲ್ಲಿ ಹುದುಗಿರುವ ಆಲೋಚನಾ ತರಂಗಗಳನ್ನು ಗ್ರಹಿಸಬಲ್ಲ ಸೂಕ್ಷ್ಮನೇತ್ರಗಳು, ಉನ್ನತ ವಾದ ಶಿರಸ್ಸು, ಇವುಗಳಿಂದ ಕೂಡಿದ ಮನೋಹರಮೂರ್ತಿಯವರು. ನಾನು ಹುಟ್ಟಿದಾಗಲೇ ಅವರ ತಲೆ ಬೆಳ್ಗುರುಳ ತೇಪೆಯಾಗಿತ್ತು. ನಾನು ಹದಿನೈದುವರ್ಷದವಳಾಗುವ ಹೊತ್ತಿಗೆ ಅವರ ತಲೆ ಸಂಪೂರ್ಣ ವಾಗಿ ಬೆಳ್ಳಗಾಗಿ, ಅವರಿಗೆ ತುಂಬಾ ಒಪ್ಪುತ್ತಿತ್ತು. ಅವರ ಕಠೋರ ದೃಷ್ಟಿಯನ್ನು ಕಂಡ ಜನರು ತುಂಬ ತಲ್ಲಣಗೊಳ್ಳುತ್ತಿದ್ದರು. ಅವರ ಬಾಹ್ಯಕಠೋರತೆಯ ಮುಸುಕಿನಲ್ಲಿ ಮೃದುಮನೋಹರವಾದ ಸುವ

ರ್ಣೋಪಮ ಹೃದಯ ಹುದುಗಿತ್ತೆಂಬುದನ್ನೂ, ಅವರನ್ನು ಸುಲಭವಾಗಿ ಒಲಿಸಿಕೊಳ್ಳಬಹುದಾಗಿತ್ತೆಂಬುದನ್ನೂ, ಅನೇಕರು ಅರಿತಿರಲಿಲ್ಲ. ಸಣ್ಣ ಮಕ್ಕಳನ್ನು ಕಂಡರೆ ಅವರಿಗೆ ತುಂಬಾ ಅಕ್ಕರೆ. ಅವರನ್ನು ಕಂಡರೆ ಮಕ್ಕಳಿಗೆ ಪೂಜ್ಯಭಾವ. ಅವರನ್ನು ಕಂಡಕೂಡಲೆ, ಅವರ ಹತ್ತಿರ ಓಡಿಹೋಗಿ ಸಲುಗೆಸಣ್ಪುಗಳಿಂದ ಹಿಗ್ಗದ ಎಳೆಯರಿರಲಿಲ್ಲ. ತಮ್ಮ ಮಕ್ಕಳಲ್ಲಿ ಅವರಿಗೆ ಅಮಿತವಾದ ಪ್ರೀತಿ, ಆದರೆ ಅದನ್ನೆಂದೂ ಹೊರಗೆ ತೋರಿಸುತ್ತಿರಲಿಲ್ಲ. ನಾನು ಮಗುವಾಗಿದ್ದಾಗ ಅವರನ್ನು ಎದೆಯಾರೆ ಪ್ರೀತಿಸುತ್ತಿದ್ದರೂ, ಅವರನ್ನು ಕಂಡಾಗ ಬೆಚ್ಚುತ್ತಿದ್ದೆ. ನಾನು ದೊಡ್ಡವಳಾದಂತೆಲ್ಲ, ಅವರ ರಹಸ್ಯಗಳನು ಬೇಧಿಸಿ ಅರಿತುಕೊಂಡಂತೆಲ್ಲ, ನನ್ನ ದಿಗಿಲು ಸಂಪೂರ್ಣವಾಗಿ ಮಾಯವಾಯಿತು. ವರ್ಷಗಳುರುಳಿದಂತೆಲ್ಲ ನಮ್ಮಿಬ್ಬರ ಗೆಳೆತನ ವೃದ್ಧಿಯಾಯಿತು. ಅವರಂತಹ ಉದಾತ್ತ ಸ್ನೇಹಿತರು ಬೇರೊಬ್ಬರಿಲ್ಲ. ವೈಭವಪೂರ್ಣವಾದ ಪ್ರಭಾವದಿಂದಲೂ, ರಾಜಗಾಂಭೀರ್ಯದಿಂದಲೂ ಕೂಡಿದ ಅವರ ವ್ಯಕ್ತಿತ್ವವನ್ನು ಅಸಂಖ್ಯಾತ ಜನಸಮುದಾಯದಲ್ಲಿಯಾದರೂ ಗುರುತಿಸಲು ಕಷ್ಟವಾಗುತ್ತಿರಲಿಲ್ಲ. ಅವರ ಮಕ್ಕಳಾದ ನಮಗೂ, ಅವರ ಆಶ್ರಯದಲ್ಲಿ ಜೀವಿಸುತ್ತಿದ್ದ ಇತರರಿಗೂ ಅವರು ಧೈರ್ಯನಿಧಿಯಂತೆ, ಆಪತ್ಕಾಲದ ಗೋವರ್ಧನಗಿರಿಯಂತೆ ಇದ್ದರು ನಾವೂ ಅವರನ್ನು ಬೇಕಾದಹಾಗೆ ಉಪಯೋಗಿಸಿಕೊಂಡೆವು.

ನಮ್ಮ ಕುಟುಂಬದ ನಡುವೆ ಇದ್ದಾಗ ತಂದೆಯವರು ಅತ್ಯಂತ ಸಂತೋಷದಿಂದಿರುತ್ತಿದ್ದರು. ನಾನೆಂದೂ ಒಂಟಿಯಾಗಿರಲಿಲ್ಲ. ಸಂಜೆ ಹೊತ್ತಿನಲ್ಲಿ ನೆಂಟರಿಷ್ಟರು ನಮ್ಮ ಮನೆಯಲ್ಲಿ ನೆರೆಯುತ್ತಿದ್ದರು. ಆಗ ಮಾತ್ರ ಅವರಿಗೆ ಪುರಸತ್ತು; ಹೆಚ್ಚುಕಾಲ ಮಾತಾಡಲು ಸಮಯವಿರುತ್ತಿತ್ತು. ಹಗಲು ಸಾಲದೆ ಒಮ್ಮೊಮ್ಮೆ ನಟ್ಟಿರುಳಿನತನಕ ಅವರು ಕೆಲಸಮಾಡುತ್ತಿದ್ದರು. ಹಗಲೆಲ್ಲ ದುಡಿದು ಆಯಾಸಗೊಂಡು ತಟ್ಟೆಯ ಮುಂದೆ ಊಟಕ್ಕೆ ಕುಳಿತ ತಂದೆಯವರ ಚಿತ್ರ ನನ್ನ ಸ್ಮೃತಿಯಲ್ಲಿ ಸುಸ್ಪಷ್ಟವಾಗುಳಿದಿದೆ. ಭೋಜನಮಂಚದ ಮುಂದೆ ಪ್ರಾಮುಖ್ಯವಾದ ಸ್ಥಳದಲ್ಲಿ ಕುಳಿತು ಪ್ರತಿಯೊಬ್ಬರ ಕಡೆಗೂ ನೋಟವನ್ನು ಬೀರುತ್ತಾ, ಅವರನ್ನು ನಗಿಸಿ ತಾವೂ ನಕ್ಕು ಹಾಸ್ಯಕುಚೋದ್ಯಕಟಕಿಗಳಿಂದ

ಸರ್ವರನ್ನು ಆನಂದಗೊಳಿಸಿ ಪೀಡಿಸುವ ತಂದೆಯೇ ಬೇರೆ, ಹೊರಗಿನವರು ಗಂಟುಮೋರೆಯ ವ್ಯಕ್ತಿಯೆನ್ನುವ ತಂದೆಯವರೇ ಬೇರೆ. ನಮ್ಮ ಉಡಿಗೆತೊಡಿಗೆಗಳ ನವೀನರೀತಿ, ಕುರುಳನ್ನು ಸಿಂಗರಿಸಿಕೊಳ್ಳುವ ನೂತನವಿಧಾನ, ಹೀಗೆ ಪ್ರತಿಯೊಂದು ರೀತಿನೀತಿಗಳ ಕಡೆಗೆ ಅವರ ಸೂಕ್ಷ್ಮದೃಷ್ಟಿ ಹರಿಯುತ್ತಿತ್ತು. ಅನ್ಯಜನರ ಮನೋವ್ಯಾಪಾರಗಳನ್ನು ಊಹಿಸುವ ವಿಶಿಷ್ಟಸ್ವಭಾವವವರದು. ಅವರು ಯಾರನ್ನೂ ಹೊಗಳುವ ಸ್ವಭಾವದವರಲ್ಲ. ನಮ್ಮನ್ನು ಹೊಗಳುತ್ತಿದ್ದುದೇ ಬಹಳ ಅಪರೂಪ. ತಂದೆಯವರು ತಾಯಿಯವರನ್ನು ಶ್ಲಾಘಿಸಿದಾಗ, ತಾಯಿಯವರು ಎಷ್ಟು ಆನಂದದಿಂದ ಹಿಗ್ಗುತ್ತಿದ್ದರೆಂಬುದು ಇನ್ನೂ ನೆನಪಿನಲ್ಲಿದೆ. ತಮ್ಮ ಮಕ್ಕಳ ಪ್ರತ್ಯಕ್ಷತೆಯನ್ನು ಮರೆತು, ಯಾವುದಾದರೂ ಹಳೆಯ ಕಥೆಯನ್ನು ಹೇಳುತ್ತಾ, ತಮ್ಮ ಪತ್ನಿಯೊಡನೆ ಕಳೆದ ದಿನಗಳ ಸುಖವನ್ನು ಸವಿಯುತ್ತಿದ್ದುದು ನಾನು ಎಂದೆಂದೂ ಮರೆಯಲಾಗದ ಚಿತ್ರ; ಆ ನೆನಪುಗಳನ್ನು ಸದಾ ಮೆಲಕುಹಾಕುತ್ತಿರುತ್ತೇನೆ. ಜೀವನ ಸಂಗ್ರಾಮದಲ್ಲಿ ಸಂಗಡಿಗರಾಗಿದ್ದುಕೊಂಡು, ವರ್ಷಗಳುರುಳಿದಂತೆಲ್ಲ ಪ್ರೇಮ ಗಾಢವಾಗಿ ಹೃದಯಗಳು ಒಂದಾಗಿ, ಬಾಳ ಸುಖ ದುಃಖಗಳಲ್ಲಿ ಸಮಭಾಗಿಗಳಾಗಿ ಸುಖಮಯವಾದ ಜೀವನವನ್ನು ಸಾಗಿಸಿ ಕುಳಿತಿದ್ದ ಬೆಳ್ಗುರುಳ ಆ ಸತಿಪತಿಗಳನ್ನು ನೋಡುವ ಆನಂದಕ್ಕೆ ಮಿಗಿಲಾದ ಆನಂದವಿರಲಿಲ್ಲ.

ಹಗಲಿನ ಕೆಲಸ ಮುಗಿದನಂತರ, ಸಾಯಂಕಾಲದ ವೇಳೆಯಲ್ಲಿ ತಂದೆಯವರು ಸಂತೋಷವಾಗಿ ಕಾಲಕಳೆಯುತ್ತಿದ್ದರು. ಊಟಕ್ಕೆ ಮುಂಚಿತವಾಗಿ ಒಂದೆರಡು ಗಂಟೆಗಳ ಕಾಲಾವಕಾಶಮಾತ್ರವಿರುತ್ತಿತ್ತು. ಅನಂತರ ಮತ್ತೆ ಕೆಲಸದಲ್ಲಿ ಮಗ್ನರಾಗುತ್ತಿದ್ದರು. ಸಂಜೆ ೬-೩೦ ಗಂಟೆಯ ಸಮಯಕ್ಕೆ ತಂದೆಯವರ ಹಲವಾರು ಗೆಳೆಯರು ಒಬ್ಬೊಬ್ಬರಾಗಿ ಗುಂಪುಕೂಡುತ್ತಿದ್ದರು. ಹಸರುಹುಲ್ಲಿನ ಮೇಲೆ ಕುರ್ಚಿಮೇಜುಗಳು ಜೋಡಿಸಿರುತ್ತಿದ್ದುವು. ಗೆಳೆಯರು ಮತ್ತು ಹಿತಚಿಂತಕರು ನೆರೆದ ಆ ಓಲಗಶಾಲೆಯಲ್ಲಿ ಕುಳಿತು ತಮ್ಮ ಮೃದುಹಾಸ್ಯ, ಶುಭ್ರಸ್ಮಿತ ಸಂತೋಷಗಳಿಂದ ಅವರನ್ನು ಸಂತೋಷಗೊಳಿಸುತ್ತಿದ್ದರು. ಅಂತಹ ಕೂಟ

ಗಳಲ್ಲಿ ತಂದೆಯವರೇ ಮಾತಿನಲ್ಲಿ ಮುಂದಾಳು. ಯಾವುದಾದರು
ಹಳೆಯ ಪ್ರಸಂಗವನ್ನೋ, ಇತ್ತೀಚೆಗೆ ನಡೆದ ಘಟನೆಯನ್ನೋ ಅವರು
ಪ್ರಸ್ತಾಪಿಸುತ್ತಿದ್ದರೆ ಸಭಿಕರು ಮೂಕರಂತೆ ಕುಳಿತಿರುತ್ತಿದ್ದರು. ಆಗಾಗ್ಗೆ
ಇತರರಿಗೂ ಮಾತಾಡುವ ಅವಕಾಶ ಲಭಿಸುತ್ತಿತ್ತು.

ತಂದೆಯವರನ್ನರಿತಿದ್ದವರು ಕೇವಲ ಕೆಲವು ಮಂದಿ. ಅವರು
ಕಠಿಣಸ್ವಭಾವದ ಸುಲಭವಾಗಿ ಸಗ್ಗದ ಭಯಂಕರವ್ಯಕ್ತಿಯೆಂದು ಮೊಟ್ಟ
ಮೊದಲು ಅವರನ್ನು ಸಂಧಿಸಿದವರ ಭಾವನೆಯಾಗಿತ್ತು. ಅವರು
ಒಮ್ಮೊಮ್ಮೆ ಹಾಗಿರುತ್ತಿದ್ದುದು ನಿಜ; ಆದರೆ ಅವರು ಪ್ರೇಮಮೂರ್ತಿ,
ಕರುಣಾಮೂರ್ತಿ ಎಂಬುದು ಅವರನ್ನು ಅರಿತವರಿಗೆ ಮಾತ್ರ ತಿಳಿದಿತ್ತು.
ರುದ್ರಮನೋಹರವಾದ ವ್ಯಕ್ತಿತ್ವನವರದು. ಅವರು ಯಾವ ಗುಂಪಿನಲ್ಲಿ
ದ್ದರು ಆಕರ್ಷಣಾಕೇಂದ್ರವಾಗಿರುತ್ತಿದ್ದರು. ಸಾಮಾಜಿಕ ವ್ಯವಹಾರ
ಗಳಲ್ಲಿ ಅವರದೇ ಪ್ರಧಾನಪಾತ್ರ. ಅವರನ್ನು ನೋಡಿದ ಪ್ರತಿಯೊಬ್ಬ
ಯುವಕನೂ ಆಶ್ಚರ್ಯಚಕಿತನಾಗುತ್ತಿದ್ದನು. ನಿರಂಕುಶಪ್ರಕೃತಿಯ,
ದರ್ಪಾಭಿಮಾನದ, ಗಾಂಭೀರ್ಯವೈಭವಪೂರ್ಣನಾದ ವ್ಯಕ್ತಿಯನ್ನು
ಗೌರವಿಸದ ಮನುಷ್ಯನಿರಲಿಲ್ಲ. ಅಲ್ಪತೆ ಅಶಕ್ತತೆಗಳು ಅವರಿಂದ ದೂರ
ವಾಗಿದ್ದುವು. ದೃಢದೇಹಿಯೂ, ಚಿತ್ತಸ್ಥೈರ್ಯಸಂಪನ್ನರೂ ಆದ ತಂದೆಯ
ವರು ನನ್ನ ಪಾಲಿಗೆ ಅದ್ವಿತೀಯ ಪುರುಷರಾಗಿದ್ದರು. ನಾನು ಸ್ವಲ್ಪ
ಮಟ್ಟಿಗೆ ದೇಶವಿದೇಶಗಳನ್ನು ಸುತ್ತಿದ್ದೇನೆ. ಅನೇಕ ಮಹದ್ವ್ಯಕ್ತಿ
ಗಳನ್ನು ನೋಡಿದ್ದೇನೆ. ಅವರ ಬಹುಮುಖವಾದ ಮಹತ್ಕಾರ್ಯಗಳನ್ನು
ನೋಡಿ ತುಂಬ ಮೆಚ್ಚಿದ್ದೇನೆ. ಆದರೆ ಉತ್ಕೃಷ್ಟಗುಣಗಳಿಂದ ಶೋಭಿ
ಸುವ ತಂದೆಯಂತಹ ಬೇರೊಬ್ಬ ವ್ಯಕ್ತಿಯನ್ನು ನಾನೆಂದೂ ಸಂಧಿಸಿಲ್ಲ.
ನಾನು ಅವರಲ್ಲಿಟ್ಟಿದ್ದ ಗಾಢಪ್ರೇಮಗೌರವಗಳಿಂದ ಈ ಪಕ್ಷಪಾತ
ಭಾವನೆ ಮೂಡಿದ್ದರೂ ಇರಬಹುದು.

ಸಿಡುಕು ಅವರಲ್ಲಿದ್ದ ಒಂದು ದೋಷ; ಆದರೆ ಅದು ವಂಶಾನು
ಗತವಾಗಿ ಪೂರ್ವಜರಿಂದ ಬೆಳೆದುಬಂದಿದ್ದ ನ್ಯೂನತೆ. ನಮ್ಮಲ್ಲಿ
ಯಾರೂ ಅದರಿಂದ ಪಾರಾಗಿಲ್ಲ. ಅವರು ತಮ್ಮ ಮಕ್ಕಳಲ್ಲಿಟ್ಟಿದ್ದ
ಅಪಾರ ಪ್ರೇಮವೂ ಒಂದು ದುರ್ಬಲತೆಯಿರಬಹುದು. ಅವರು

ಕರುಣಾರಹಿತರಾದ ಕಠಿಣಸ್ವಭಾವದ ತಂದೆಯೆಂದು ಅನೇಕರ ಅಭಿಪ್ರಾಯ. ಅವರ ಬಾಹ್ಯಕಠಿಣತೆಯ ಗರ್ಭಾಂತರಾಳದಲ್ಲಿ ಅಪರಿಮೇಯ ಸಾಂಸಾರಿಕ ಸ್ನೇಹಭರಿತವಾದ ಹೃದಯವಿತ್ತು. ಗೃಹಕೃತ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಜವಹರನು ಆಸಕ್ತಿ ವಹಿಸಿರಲಿಲ್ಲ. ಆದುದರಿಂದ ಸಂಸಾರದ ಭಾರವೆಲ್ಲ ತಂದೆಯವರ ಬಾಹುಬಲವನ್ನವಲಂಬಿಸಿತ್ತು. ಏನೇನು ತೊಂದರೆಗಳು ಅವರನ್ನು ಬಾಧಿಸುತ್ತಿದ್ದುವೆಂಬುದು ನಮಗೆ ಗೊತ್ತಾಗುತ್ತಿರಲಿಲ್ಲ. ಅವರು ನಮ್ಮ ಮೇಲೆ ಯಾವ ಹೊರೆಯನ್ನು ಹೊರಿಸುತ್ತಿರಲಿಲ್ಲ. ಅವರು ಬದುಕಿದ್ದಾಗ ನಮ್ಮ ಪಾಲನೆಪೋಷಣೆಗಳು ನಿರಾತಂಕವಾಗಿ, ಸುಲಲಿತವಾಗಿ ಸಾಗುತ್ತಿದ್ದುವು. ಆದುದರಿಂದ ನಮ್ಮ ಜೀವನ ಸುಖಮಯವಾಗಿದ್ದು ನಿರ್ಲಕ್ಷ್ಯತೆಯಿಂದ ಕೂಡಿತ್ತು. ಅವರ ಪ್ರೇಮದ ವಜ್ರಕವಚವನ್ನು ಧರಿಸಿದ್ದ ನಮಗೆ ಕಷ್ಟಕಾರ್ಪಣ್ಯಕಾತರತೆಗಳೇನೆಂಬುದೇ ಗೊತ್ತಿರಲಿಲ್ಲ. ಅವರನ್ನು ನೆನಸಿಕೊಂಡಾಗ ಸುಖಪ್ರಾಪ್ತಿಯಾಗುತ್ತಿತ್ತು. ಅವರ ಭೀಮಶಕ್ತಿಯ ಮುಂದೆ ಬಾಳ ಕೋಟಲೆಗಳೆಲ್ಲ ಮಾಯವಾಗುತ್ತಿದ್ದುವು; ಅವರ ವರದ ಹಸ್ತದ ಆಶ್ರಯದಲ್ಲಿದ್ದ ಬಾಳಿನಲ್ಲಿ ಅಲ್ಪತೆಯೇ ತಲೆದೋರುತ್ತಿರಲಿಲ್ಲ. ಅವರ ಮರಣಾನಂತರ ನಮಗೆ ದಿಕ್ಕು ತೋಚಲಿಲ್ಲ; ಅವರಿಲ್ಲದ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು.

ಅವರ ಸಾವಿನಿಂದ ದೇಶಕ್ಕೆ ಅಪಾರನಷ್ಟ ಸಂಭವಿಸಿತು. ಇತಿಹಾಸದ ಸಂಧಿಸಮಯದಲ್ಲಿ ಭರತಮಾತೆ ಯೋಧಾಗ್ರಗಣ್ಯನೂ, ರಾಜಕೀಯನಿಪುಣನೂ ಜ್ಯೇಷ್ಠನೂ ಆದ ಪುತ್ರನನ್ನು ಕಳೆದುಕೊಂಡಳು. ತಂದೆಯವರ ಶಕ್ತಿಸಾಮರ್ಥ್ಯಗಳು ಅತ್ಯದ್ಭುತವಾಗಿದ್ದುವು. ಆ ಸಂಧಿಸಮಯದಲ್ಲಿ ಅವರ ಮಾರ್ಗದರ್ಶಿತ್ವ ತುಂಬಾ ಪ್ರಯೋಜನಕಾರಿಯಾಗುತ್ತಿತ್ತು. ನಮ್ಮ ನಾಯಕರೊಬ್ಬರು ತಂದೆಯವರಿಗೆ ತಮ್ಮ ಅಂತ್ಯಕಾಣಿಕೆಯನ್ನು ಸಮರ್ಪಿಸುತ್ತ ಹೇಳಿದಂತೆ “ತಂದೆಯವರ ಆತ್ಮಾರ್ಪಣಾಶಕ್ತಿ ಸಣ್ಣಪುಟ್ಟ ಮಾನವರ ಶಕ್ತಿಗಿಂತ ಮಿಗಿಲಾದುದು, ಉಜ್ವಲವಾದುದು. ಸ್ವಾತಂತ್ರ್ಯದ ಹೋರಾಟದಲ್ಲಿ ಬಲಿದಾನದ ಮೇಲೆ ಬಲಿದಾನವನ್ನು ಮಾಡಲು ಅವರು ಸಂತೋಷಭರಿತರಾಗಿದ್ದರು.

ಅವರ ತ್ಯಾಗಕ್ಕೆ ಮಿತಿಯಿರಲಿಲ್ಲ. ಭರತಮಾತೆಯ ಸಂಕಟವೇ ತಮ್ಮ ಸಂಕಟವೆಂದರಿತಿದ್ದರು. ಭರತಮಾತೆಯ ಬಿಡುಗಡೆಯೊಂದೇ ಅವರ ಜೀವನದ ಗುರಿಯಾಗಿತ್ತು. ಸ್ವತಂತ್ರಭರತಖಂಡವು ದೇಶಭಕ್ತರ ಮತ್ತು ದೇಶೋದ್ಧಾರಕ ಪ್ರತಿಮಾಗಾರವನ್ನು ನಿರ್ಮಿಸುವಾಗ, ಆಧುನಿಕ ಭಾರತದ ನಿರ್ಮಾತೃವಾದ ಮಹಾತ್ಮ ಗಾಂಧೀಜಿಯವರ ಸನ್ನಿಧಿಯಲ್ಲಿಯೇ ಮೋತಿಲಾಲ್‌ಜೀಯವರಿಗೂ ಉನ್ನತವಾದ ಸ್ಥಾನ ಲಭಿಸುತ್ತದೆ."

ಪ್ರೇಮಸೌಂದರ್ಯಗಳ ನೆಲೆವೀಡು ದಲ್‌ಜಗವು,
ಆದರೇನೆಮಗಿಲ್ಲಿ ಸೆರೆಬೇಡಿ ಕೊರಳುರುಳು.

— ಗಾಲಿಬ್

ತಂದೆಯವರ ಮರಣಾನಂತರ ಗಾಂಧಿಜೀಯರೊಡನೆ ಮಂತ್ರಾಲೋಚನೆಗಾಗಿ ಜವಹರನು ದೆಹಲಿಗೆ ಹೋಗಬೇಕಾಗಿತ್ತು. ಆಗ ಗಾಂಧಿಜೀಯವರು ಸಾರ್ವಭೌಮಪ್ರತಿನಿಧಿಯಾದ ಲಾರ್ಡ್ ಇರ್ವಿನ್ರೊಡನೆ ರಾಜಕೀಯ ಸಮಸ್ಯಾಪರಿಹಾರಾರ್ಥವಾಗಿ ಮಾತುಕತೆಗಳನ್ನಾರಂಭಿಸಿದ್ದರು. ಆ ಸಮಯದಲ್ಲಿ ಕೌಟುಂಬಿಕ ಸಮಸ್ಯೆಗಳು ಬೇಕಾದಷ್ಟಿದ್ದುವು; ಆದರೆ ಅವುಗಳ ಪರ್ಯಾಲೋಚನೆಯನ್ನು ಮುಂದೆ ತಳ್ಳಬೇಕಾಯಿತು. ದೆಹಲಿಯ ಕಾರ್ಯಗೌರವದ ಗೊಂದಲದಲ್ಲಿ ತಾನು ಬೇರೊಂದು ಸಂಸಾರದ ಯಜಮಾನನೆಂಬುದನ್ನು ಮರೆತಿರಲಿಲ್ಲ. ಆ ಸಮಯದಲ್ಲಿ ಆವನು ನಮ್ಮ ಹತ್ತಿರವಿರುವುದವಶ್ಯವಾಗಿತ್ತು. ಅತ್ಯಂತ ವ್ಯಾಕುಲಪೀಡಿತರಾಗಿದ್ದ ತಾಯಿಯವರಿಗಂತು ಅವನ ಇರವು ಅನಿವಾರ್ಯನಾಗಿತ್ತು. ಕಾಲ ವಿಳಂಬವಾಗಿ, ತಾನು ಕೂಡಲೆ ಹಿಂದಿರುಗುವುದು ಅಸಾಧ್ಯವೆಂದು ತೋರಿದಾಗ ನನಗೆ ಕಾಗದ ಬರೆದನು :—

“ಬಂಧುಮಿತ್ರರೊಡನೆ ಆಲೋಚಿಸಿ ಗೃಹಕೃತ್ಯಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ನಿರ್ಧರಿಸಲು ಒಂದು ವಾರವಾದರೂ ಅಲಹಾಬಾದಿನಲ್ಲಿ ಇರಬೇಕೆಂದಿದ್ದೆನು. ಆದರೆ ಗೊತ್ತುಗುರಿಯಿಲ್ಲದೆ ನಾನಿಲ್ಲಿ ನಿಲ್ಲಬೇಕಾಗಿದೆ. ಇಲ್ಲಿಯತನಕ ಸಂಸಾರದ ಹೊರೆ ತಂದೆಯವರ ಮೇಲಿತ್ತು. ಅವರ ಸಾದರ ಪರಿಶೀಲನೆ ಮತ್ತು ಕಷ್ಟಪರಂಪರೆಗಳ ಪೂರ್ವಜ್ಞಾನ ದೂರದರ್ಶಿತ್ವಗಳಿಂದ ನಮ್ಮ ಬಾಳು ನಿರಾತಂಕವಾಗಿ ಸಾಗುತ್ತಿತ್ತು. ಅವರ ಅಕ್ಕರೆಯ ತೆಕ್ಕೆಯಲ್ಲಿ, ರಕ್ಷಣೆಯ ವಜ್ರಕವಚದಲ್ಲಿ ನಿರಾತಂಕವೂ ದುಃಖರಹಿತವೂ ಆದ ಆನಂದವನ್ನನುಭವಿಸಿದೆವು. ಅನೇಕ ಜನರ ಜೀವನದಲ್ಲಿ ಪ್ರಾಪ್ತವಾಗುವ ಉದ್ವೇಗಕಳವಳಗಳಿಂದ ನಾವು ದೂರವಾಗಿದ್ದೆವು. ಜೀವನದ ಜಟಿಲ ಸಮಸ್ಯೆಗಳು ನಮ್ಮ ಮೇಲೆ ಧಾಳಿ ನಡೆಯಿಸಿದಾಗ ಅವರ ನೆನವೇ ಮಾರ್ಗದರ್ಶಕವಾಗುತ್ತಿತ್ತು. ಅವ

ರಿಲ್ಲದೆ ನಾವೀಗ ಬಾಳಬೇಕಾಗಿದೆ. ದಿನ ಕಳೆದಂತೆಲ್ಲ ವಿಯೋಗದ ಬೇಗೆ ತೀವ್ರವಾಗುತ್ತಿದೆ. ಜೀವನರಣಾಂಗದಲ್ಲಿ ನಾನೊಬ್ಬ ಏಕಾಕಿ ಯೆಂಬ ಕಳವಳಕ್ಕೆ ಗುರಿಯಾಗಿದ್ದೇನೆ. ಆದರೆ ನಾವು ತಂದೆಯವರ ಅಂಶದಿಂದ ಹುಟ್ಟಿದ ಮಕ್ಕಳು; ಅವರ ಧೈರ್ಯಸ್ಥೈರ್ಯ ಸಾಹಸಗಳಲ್ಲಿ ಕನಿಷ್ಠಾಂಶವಾದರು ನಮ್ಮ ರಕ್ತದಲ್ಲಿ ಬೆರತಿದೆ. ನಮ್ಮ ದಾರಿಯಲ್ಲಿ ಎಡರುಗಳು ಪಟ್ಟೆಡವಿ ಅಡ್ಡ ಬರಲಿ, ವಿಧಿಯು ನಮ್ಮನ್ನು ಘೋರ ಪರೀಕ್ಷೆಗೀಡುಮಾಡಲಿ, ಅವುಗಳನ್ನು ದೃಢತೆಸಿಷ್ಟಲತೆಗಳಿಂದ ಎದು ರಿಸಲು ಸಿದ್ಧರಾಗೋಣ.”

ತಂದೆಯ ಮರಣದಿಂದ ಜವಹರನಿಗುಂಟಾದ ದುಃಖನಿರ್ಭರತೆ ಯನ್ನು ಈ ಪತ್ರ ವಿಶದವಾಗಿ ವ್ಯಕ್ತಪಡಿಸುತ್ತದೆ. ಆ ಸಂತಾಪದಲ್ಲಿ ನಾವೂ ಪಾಲುಗಾರರಾಗಿದ್ದೆವು. ತಂದೆಯವರು ತೀರಿಕೊಂಡಮೇಲೆ ಆಕಾಶ ಕಳಚಿಬಿದ್ದಂತಾಯಿತು. ಅವರ ರಕ್ಷಣಾಶ್ರಯಗಳಿಲ್ಲದೆ ವ್ಯವ ಹಾರಗಳನ್ನು ನಡೆಯಿಸುವುದೇ ಕಷ್ಟವಾಯಿತು. ಸಂಸಾರದ ಭಾರವೆಲ್ಲ ಜವಹರನ ಭುಜಗಳನ್ನವಲಂಬಿಸಿತು. ಧೈರ್ಯಸಾಮರ್ಥ್ಯಗಳಿಂದ ಅದನ್ನು ನಿರ್ವಹಿಸಿದನು. ಅತನು ತಂದೆಯವರ ಸ್ಥಾನವನ್ನು ಕೂಡಲೆ ಆಕ್ರಮಿಸಿದನು. ಪ್ರತಿಯೊಂದು ಸಣ್ಣ ವಿಷಯಕ್ಕೂ ಅತನನ್ನೇ ಆಶ್ರಯಿಸಲಾರಂಭಿಸಿದೆವು. ಇನ್ನೂ ಹಾಗೆಯೆ ನಡೆಯುತ್ತಿದ್ದೇವೆ.

ಜವಹರನಪತ್ರ ನನಗೆ ಸಂಜೀವಿನೀಮಂತ್ರಮಾಲೆಯಾಯಿತು. ಅದು ನನ್ನ ದುಃಖದ ಬೇಗೆಯನ್ನು ಉಪಶಮನಗೊಳಿಸಿತು. ಎಷ್ಟೋ ವೇಳೆ ನನ್ನನ್ನು ನಿರಾಶೆ ಆವರಿಸಿದಾಗ, ಎದೆಯಲ್ಲಿ ಅಧೈರ್ಯಮೂಡಿ ದಾಗ, ಹನ್ನೆರಡು ಸಂವತ್ಸರಗಳ ಹಿಂದೆ ಬರೆದ ಆ ಪತ್ರ ಬಾಳಿನ ಒಗಟೆ ಗಳನ್ನು ಬಿಡಿಸುವ ಎದೆಗಾರಿಕೆಯನ್ನು ಧಾರೆಯೆರೆದಿದೆ. ಜವಹರನಿಗೆ ಈ ವಿಷಯ ಗೊತ್ತಿಲ್ಲ.

ಆ ವರ್ಷ ರಾಷ್ಟ್ರೀಯ ಮಹಾಸಭೆಯ ಅಧಿವೇಶನ ಕರಾಚಿಯಲ್ಲಿ ಜರುಗಿತು. ತಾಯಿಯವರೂ, ನಾನೂ ಜವಹರ ಮತ್ತು ಕಮಲರ ಜತೆ ಯಲ್ಲಿ ಹೋದೆವು. ಜವಹರನ ಆರೋಗ್ಯ ಸರಿಯಾಗಿರಲಿಲ್ಲ. ಸೆರೆಮನೆ ಯಿಂದ ಬಿಡುಗಡೆಹೊಂದುವುದಕ್ಕೆ ಮುಂಚೆಯೇ ಆತನ ಆರೋಗ್ಯ

ಸರಿಯಾಗಿರಲಿಲ್ಲ. ಸೆರೆಮನೆಯಿಂದ ಬಿಡುಗಡೆಹೊಂದುವುದಕ್ಕೆ ಮುಂಚೆಯೇ ಆತನ ಆರೋಗ್ಯ ಕೆಟ್ಟಿತ್ತು. ತಂದೆಯ ರೋಗಮರಣಗಳಿಂದುಂಟಾದ ಪೆಟ್ಟು ಆತನ ಉಕ್ಕಿನಂತಹ ಶರೀರವನ್ನು ಜರ್ಝರಗೊಳಿಸಿತು. ದೀರ್ಘವಿಶ್ರಾಂತಿ ಅತ್ಯಾವಶ್ಯಕವೆಂದು ವೈದ್ಯರು ಸಲಹೆಯಿತ್ತರು. ಜವಹರ, ಕಮಲ ಮತ್ತು ಇಂದಿರಾ, ಮೂವರೂ ಸಿಲೋನಿನಲ್ಲಿ ಮೂರು ವಾರಗಳಿರಬೇಕೆಂದು ಉದ್ದೇಶಿಸಿ ಹೊರಟರು. ಸಿಂಹಳದ್ವೀಪ ಜವಹರನ ಮನಸ್ಸನ್ನು ಸೂರೆಗೊಂಡಿತು. ಅಲ್ಲಿಯ ಜನರು ತೋರಿಸಿದ ಪ್ರೀತ್ಯಾದರಗಳಿಂದ ಎಲ್ಲರು ಸಂತೋಷಭರಿತರಾದರು. ಸ್ವದೇಶಕ್ಕೆ ಹಿಂದಿರುಗಲು ಹಡಗು ಹತ್ತಿದಾಗ ಜವಹರನು ಬರೆದ ಪತ್ರವಿದು:—

"ಎಲ್ಲೆಲ್ಲೂ ನಮಗೆ ವೈಭವಪೂರ್ಣವೂ, ಅದ್ಭುತವೂ ಆದ ಸ್ವಾಗತ ದೊರೆಯಿತು. ಒಂದು ಸಭೆಯಿಂದ ಮತ್ತೊಂದು ಸಭೆಗೆ ಹೋಗುತ್ತಿದ್ದಾಗ ದಾರಿಯುದ್ದಕ್ಕೂ ಅಸಂಖ್ಯಾತಜನರು ಗಂಟೆಗಟ್ಟಲೆ ನನಗಾಗಿ ಕಾದಿರುತ್ತಿದ್ದರು. ಆ ಅದ್ಭುತ ಪ್ರಸಂಗವನ್ನು ನೋಡಿ ಆಶ್ಚರ್ಯಚಕಿತನಾಗಿ, ಅದರ ರಹಸ್ಯವನ್ನು ಭೇದಿಸಲು ಪ್ರಯತ್ನಿಸಿದೆನು. ಈ ಪ್ರದರ್ಶನಕ್ಕೆ ಕಾರಣಭೂತವಾದ, ವ್ಯಕ್ತಿ ಶ್ರೇಷ್ಠತೆಗಿಂತ ಮಿಗಿಲಾದ ಬೇರೊಂದು ಬೃಹತ್‌ಶಕ್ತಿಯಿರಬೇಕೆಂಬ ಭಾವನೆ ಮೂಡಿತು. ಭರತಮಾತೆಯ ಪುರಾತನವೈಭವವನ್ನೂ ಆಕೆಯ ಸ್ವಾತಂತ್ರ್ಯದ ಹೋರಾಟವನ್ನೂ ಅವರು ಗೌರವಿಸುತ್ತಿರುವರೆಂದೂ, ನಾವು ಆ ವೈಭವದ ಅಲ್ಪಚಿಹ್ನೆಗಳೆಂದೂ, ಪ್ರತಿಮಾಮೂರ್ತಿಗಳೆಂದೂ ಕೂಡಲೆ ಭಾವಿಸಿದೆನು. ನಿನ್ನೆಮೊನ್ನೆಯತನಕ ಭಾರತೀಯನಾದವನು ಪರರಾಷ್ಟ್ರಗಳಲ್ಲಿ ಅವಮಾನದ ಭಾರದಿಂದ ತಲೆತಗ್ಗಿಸಬೇಕಾಗಿತ್ತು. ಹೊಸಯುಗವಿಂದು ತಲೆದೋರಿದೆ. ಅಂತಹ ಲಜ್ಜಾಸ್ಪದವಾದ ಪ್ರಸಂಗಗಳು ಭೂತಕಾಲದ ಬೃಹದ್ಗರ್ಭದಲ್ಲಿ ವಿಲೀನವಾಗಿವೆ; ಹೃದಯವಿದ್ರಾವಕವಾದ ಆ ಸ್ವಪ್ನವಿಂದು ಮಾಯವಾಗಿದೆ. ಇಂದು ಭಾರತೀಯನೆನ್ನಿಸಿಕೊಳ್ಳುವುದೇ ಒಂದು ಹೆಮ್ಮೆಯಾಗಿದೆ; ಅದರಲ್ಲಿಯು ಸಂಗ್ರಾಮದ ಜ್ವಾಲೆಯಲ್ಲಿ ಬೆಂದು ಅಸಂಖ್ಯಾತ ಪಾಶವೀಕೃತ್ಯಗಳಿಗೆ ಪಕ್ಕಾಗಿ ಹೋರಾಟದಲ್ಲಿ ಭಾಗವಹಿಸಿದವರ ಹೆಮ್ಮೆ ಮತ್ತಷ್ಟು ಮಿಗಿಲಾದುದು. ನಾವೆಲ್ಲಿಗೆ ಹೋದರು ನವೀನ ಭರತ

ಖಂಡದ ವೈಭವದ ಕಿಂಚಿದಂಶವನ್ನಾದರೂ ಹೊತ್ತುಕೊಂಡು ಹೋಗುತ್ತೇವೆ." ಜನರು ತನಗೆ ತೋರಿಸಿದ ಪ್ರೀತ್ಯಾದರಗಳಿಗೆ ತನ್ನ ವ್ಯಕ್ತಿತ್ವ ಮಾತ್ರ ಕಾರಣವಲ್ಲವೆಂದು ಜವಹರನು ಅರಿತುಕೊಂಡಿದ್ದನು. ಭರತ ಮಾತೆಯ ಬಂಧನ ವಿಮೋಚನಕ್ಕಾಗಿ ಹೋರಾಟ ಹೂಡಿರುವ ಮಕ್ಕಳಲ್ಲೊಬ್ಬನಾಗಿರುವುದರಿಂದಲೂ, ಸ್ವದೇಶಾಭ್ಯುದಯಕ್ಕೋಸ್ಕರ ತನ್ನ ಸರ್ವಸ್ವವನ್ನು ಮಾತ್ರವಲ್ಲದೆ, ದೇಶದ ಕರೆ ಬಂದಾಗ ತನ್ನ ಬಾಳನ್ನೇ ಆಹುತಿಯಾಗಿ ಸಮರ್ಪಿಸಲು ಸಿದ್ಧನಾಗಿರುವುದರಿಂದಲೂ ಜನರು ಗೌರವದ ಕಾಣಿಕೆಯನ್ನು ಸಲ್ಲಿಸುವುದು ಸಹಜವಾಗಿದೆ.

ಗಾಂಧೀ-ಇರ್ವಿನ್ ಒಪ್ಪಂದವಾದರು ದೇಶದ ಪರಿಸ್ಥಿತಿ ಪರಿವರ್ತನಗೊಳ್ಳಲಿಲ್ಲ. ಆ ಒಪ್ಪಂದದ ಅಂತರಾರ್ಥವನ್ನು ಒಪ್ಪಿಕೊಳ್ಳುವ ಅಪೇಕ್ಷೆಯನ್ನು ಸರ್ಕಾರ ವ್ಯಕ್ತಪಡಿಸಲಿಲ್ಲ. ಮೊದಲೇ ಉದ್ರೇಕಗೊಂಡಿದ್ದ ಜನರು ತಮ್ಮ ಹೋರಾಟ ನಿಷ್ಫಲವಾಗಬಾರದೆಂದು ಕಾತರಿಸುತ್ತಿದ್ದರು.

ಸಂಯುಕ್ತ ಪ್ರಾಂತ್ಯದ ರೈತರಲ್ಲಿ ಅಶಾಂತಿ ಅತೃಪ್ತಿಗಳು ವೃದ್ಧಿಗೊಂಡವು. ಭೂ ಸಂಬಂಧವಾದ ತೊಂದರೆಗಳನ್ನು ತಡೆಯಲು ಸರ್ಕಾರ ಕಾನೂನುಗಳನ್ನು ಜಾರಿಗೆ ತಂದರು. ಸಂಯುಕ್ತ ಪ್ರಾಂತ್ಯದಲ್ಲಿ ಪ್ರಾಂತೀಯ ಸಮ್ಮೇಲನ ನಡೆಯಬೇಕಾಗಿತ್ತು. ಭೂವಿಷಯಕ ಸಮಸ್ಯೆಗಳನ್ನು ಚರ್ಚಿಸುವುದಿಲ್ಲವೆಂದು ವಾಗ್ದಾನಮಾಡಿದರೆ ಸಮ್ಮೇಲನ ಜರುಗಲು ಅವಕಾಶವೀಯಲಾಗುವುದೆಂದೂ ಇಲ್ಲವಾದರೆ ಪ್ರತಿಬಂಧಕವನ್ನೊಡ್ಡುವುದಾಗಿಯೂ ಸರ್ಕಾರ ತಿಳಿಸಿತು. ಮೇಲ್ಕಂಡ ಸಮಸ್ಯೆಗಳನ್ನು ಬಿಡಿಸುವುದೇ ಸಮ್ಮೇಲನದ ಮುಖ್ಯೋದ್ದೇಶವಾಗಿತ್ತು. ಈ ಉದ್ದೇಶವನ್ನು ಬಲಿಗೊಡುವುದು ಅವಮಾನವೆಂದು ಕಂಡುಬಂದಿತು. ಇಷ್ಟರಲ್ಲಿಯೇ ಗಾಂಧಿಜೀಯವರು ದುಂಡುಮೇಜಿನ ಪರಿಷತ್ತಿನಿಂದ ಹಿಂದಿರುಗುವುದರಲ್ಲಿದ್ದರು. ಅವರೊಡನೆ ಮಾತಾಡುವತನಕ ಸಮ್ಮೇಲನವನ್ನು ಮುಂದೆ ತಳ್ಳುವುದು ಸೂಕ್ತವೆಂದು ಜವಹರನೂ, ಇತರರೂ ಅಭಿಪ್ರಾಯಪಟ್ಟರು. ಆದರೂ ಅವರು ಗಾಂಧಿಜೀಯವರನ್ನು ನೋಡಲಾಗಲಿಲ್ಲ.

೧೯೩೧ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಜವಹರನು ಅಲಹಾ

ಬಾದಿನಿಂದ ಬೊಂಬಾಯಿಗೆ ತೆರಳಿದನು. ಕೆಲವು ಮೈಲಿಗಳ ದೂರದಲ್ಲಿಯೇ ಚಿಕ್ಕ ನಿಲ್ದಾಣವೊಂದರಲ್ಲಿ ಅವನು ಬಂಧಿತನಾದನು. ಒಂದೆರಡು ದಿನಗಳಲ್ಲಿಯೇ ದುಂಡುಮೇಜಿನ ಪರಿಷತ್ತಿನಿಂದ ಗಾಂಧಿಜೀಯವರು ಬೊಂಬಾಯಿಗೆ ಹಿಂದಿರುಗಿದರು. ಕಡಲಕರೆಯಲ್ಲಿಯೆ ಜವಹರನನ್ನು ಸಂಧಿಸುವುದಾಗಿ ಎಣಿಸಿಕೊಂಡಿದ್ದರು. ಅವರ ಎಣಿಕೆಗೆ ಪ್ರತಿಯಾಗಿ, ಜವಹರನೂ, ಮತ್ತಿತರ ನಾಯಕರೂ ಬಂಧಿತರಾಗಿದ್ದಾರೆಂದೂ, ನಾನಾ ಪ್ರಾಂತ್ಯಗಳಲ್ಲಿ ಅನೇಕ ಕಾನೂನುಗಳು ಜಾರಿಗೆ ಬಂದಿದ್ದುವೆಂದೂ, ಗೊತ್ತಾಯಿತು. ದಾಳಗಳನ್ನು ಎಸೆದಾಯಿತು, ಹೋರಾಟ ಮತ್ತೆ ಆರಂಭವಾಯಿತು. ೧೯೩೨ನೆಯ ಇಸವಿ ಜನವರಿ ನಾಲ್ಕನೆಯ ತಾರೀಖು ಗಾಂಧಿಜೀ ಮತ್ತು ವಲ್ಲಭಾಯಿ ಇಬ್ಬರನ್ನು ಬಂಧಿಸಿ ವಿಚಾರಣೆಯಿಲ್ಲದೆ ಸೆರೆಮನೆಯಲ್ಲಿಟ್ಟರು. ಕೆಲವು ವಾರಗಳಲ್ಲಿಯೆ ಚಳುವಳಿ ಶಿಖರವನ್ನು ಮುಟ್ಟಿತು. ಹಿಂದಿನ ಚಳುವಳಿಗಳಲ್ಲಿ ಭಾಗವಹಿಸಿದ್ದ ನಾವೆಲ್ಲರು ನಮ್ಮ ಉತ್ಸಾಹ ಸಾಮರ್ಥ್ಯಗಳನ್ನು ಚಳುವಳಿಗಾಗಿ ಧಾರೆಯೆರೆಯಲು ಸಿದ್ಧರಾದೆವು. ವೃದ್ಧರೂ, ಸೂಕ್ಷ್ಮದೇಹಿಯೂ ಆದ ತಾಯಿಯವರು ಹಿಂದೆ ಬೀಳಲಿಲ್ಲ. ಪಟ್ಟಣಗಳಲ್ಲಿಯೂ, ಸುತ್ತಮುತ್ತಣಹಳ್ಳಿಗಳಲ್ಲಿಯೂ ಸಭೆಗಳನ್ನು ಕೂಡಿಸಿ ಭಾಷಣಮಾಡುತ್ತಿದ್ದರು. ಅವರು ನಮಗೆ ವಿಸ್ಮಯದ ನಿಧಿಯಾದರು. ನಿರ್ಬಲತೆ ಅವರ ಜೀವಮಾನವನ್ನೆಲ್ಲ ಆವರಿಸಿತ್ತು. ಸಾಧಾರಣವಾದ ಜೀವನವನ್ನು ಜರುಗಿಸುವುದೂ ಕಷ್ಟಸಾಧ್ಯವಾಗಿತ್ತು. ಆದರೆ ಯಾವುದೋ ಮೂಲ ಶಕ್ತಿಯ ಪ್ರಭಾವದಿಂದ ಅನೂನಬಲವನ್ನೂ, ದೃಢನಿಶ್ಚಲತೆಯನ್ನೂ ಪಡೆದಂತೆ ಕಂಡರು. ಒಂದೊಂದು ಸಾರಿ ಅವರು ನಮಗಿಂತ ಹೆಚ್ಚು ಹುರುಪಿನಿಂದ ಕೂಡಿರುತ್ತಿದ್ದರು.

ಒಂದು ತಿಂಗಳ ಕಾಲ ನಾವು ಹರಿತಾಳವನ್ನು ಆಚರಿಸಬಾರದು, ಮೆರವಣಿಗೆ ಕೂಟಗಳಲ್ಲಿ ಭಾಗವಹಿಸಬಾರದೆಂಬ ಮುನ್ನೆಚ್ಚರಿಕೆಯ ಆಜ್ಞೆ ನನ್ನ ಸಹೋದರಿಯ ಮತ್ತು ಇತರ ಗೆಳೆಯರ ಕೈಸೇರಿತು. ಇನ್ನೆರಡು ವಾರಗಳಲ್ಲಿ ಸ್ವಾತಂತ್ರ್ಯದಿನಾಚರಣೆ ನಡೆಯಬೇಕಾಗಿತ್ತು. ಅಲ್ಲಿಯವರೆಗೆ ಮೌನವ್ರತವನ್ನಾಚರಿಸುತ್ತಿರಬೇಕೆಂದು ನಾವು ಉಪಾಯ

ಹೂಡಿದೆವು. ೨೬ನೆಯ ತಾರೀಖಿನ ದಿವಸ ನಮ್ಮ ಗೃಹನಗರದಲ್ಲಿ ಹಿಂದೆಂದೂ ಸೇರದ ದೊಡ್ಡಸಭೆ ನೆರೆದಿತ್ತು. ತಾಯಿಯವರು ಆ ಸಭೆಯ ಅಧ್ಯಕ್ಷತೆವಹಿಸಿ ಉಗ್ರವಾದ ಭಾಷಣವನ್ನು ಮಾಡಿದರು. ಕಾರ್ಯಕಲಾಪಗಳು ಸಾಗುತ್ತಿದ್ದಾಗಲೆ ಲಾಠೀಪ್ರಹಾರ ಪ್ರಾರಂಭವಾಗಿ ಸಭೆ ನಿಂತುಹೋಯಿತು. ಆ ಸ್ಥಳದಲ್ಲಿಯೆ ಅನೇಕರ ದಸ್ತಗಿರಿಯಾ ಯಿತು, ಅನೇಕರು ತುಂಬ ಗಾಯಗೊಂಡರು. ಆಜ್ಞೋಲ್ಲಂಘನೆ ಮಾಡಿದುದರಿಂದ ನಾವೂ ಬಂಧಿತರಾಗಬಹುದೆಂದು ನಿರೀಕ್ಷಿಸಿದ್ದೆವು; ಆದರೆ ನಿರಾಶೆಯಿಂದ ಮನೆಗೆ ಹಿಂದುರುಗಿದೆವು. ಮಾರನೆಯ ದಿನ ಬೆಳಗ್ಗೆ ಒಂಬತ್ತು ಗಂಟೆಗೆ ಸರಿಯಾಗಿ ಪೋಲೀಸು ವಾಹನವೊಂದು ನಮ್ಮ ಮನೆಯ ಮುಂದೆ ನಿಂತಿತು. ನನ್ನ ಸಹೋದರಿಯನ್ನೂ, ನನ್ನನ್ನೂ ದಸ್ತಗಿರಿಮಾಡಲು ಬಂದಿರುವುದಾಗಿ ಪೋಲೀಸ್ ಇನ್ಸ್ಪೆಕ್ಟರು ತಿಳಿಸಿದರು. ನಮ್ಮ ಗಂಟುಮೂಟೆಗಳನ್ನು ಕಟ್ಟಿಕೊಂಡು ನೆಂಟರಿಷ್ಟ ರಿಂದಲೂ, ತಾಯಿಯಿಂದಲೂ ಬೀಳ್ಕೊಂಡು ಸೆರೆಮನೆಗೆ ಹೊರಟೆವು. ಅದೇ ನಮ್ಮ ಪ್ರಥಮಾನುಭವ. ಹಿಂದೊಂದು ಸಾರಿ ನಾನು ಹನ್ನೆರಡು ಗಂಟೆಗಳ ಕಾಲ ಸೆರೆಮನೆಯ ವಾಸವನ್ನನುಭವಿಸಿದ್ದೆನು. ನಮ್ಮ ಸ್ವಂತವಿಷಯದಲ್ಲಾಗಲೀ, ನಮ್ಮ ಭವಿಷ್ಯತ್ತಿನ ಕಡೆಗಾಗಲೀ ಯೋಚನೆ ಹರಿಯಲಿಲ್ಲ. ಸೂಕ್ಷ್ಮದೇಹಿಯೂ, ನಿಶ್ಶಕ್ತರೂ ಆದ ತಾಯಿಯವರಿ ಗೋಸ್ಕರ ಪದೇ ಪದೇ ಹಂಬಲಿಸಿದೆವು. ಸುಖಸಂತೋಷಗಳ ವಾತಾ ವರಣದಲ್ಲಿ ಬಾಳಿದ ಅವರಿಂದು ವ್ಯಾಕುಲತೆ ನಿರ್ಜನತೆಗಳಿಗೆ ಬೀಡಾದ ಆ ದೊಡ್ಡ ಮನೆಯಲ್ಲಿ ಒಬ್ಬಂಟಿಗರಾಗಿ ಇರಬೇಕಾಯಿತು. ಎಲ್ಲರ ಕೆಲಸವನ್ನು ತನ್ನೊಬ್ಬಳ ಮೇಲೆ ಹೊರಿಸಿ ಒಬ್ಬೊಬ್ಬರಾಗಿ ಸೆರೆಮನೆಗೆ ಹೋಗುತ್ತಿದ್ದ ತನ್ನ ಮಕ್ಕಳನ್ನು ನೋಡಿ ಅವರಿಗೆ ತುಂಬಾ ಸಂಕಟ ವಾಗಿರಬೇಕು. ಆಕೆಯ ತೆಳುವಾದ ದೇಹದಲ್ಲಿ ಧೈರ್ಯಸ್ಥೈರ್ಯಪ್ರತಾಪಗಳು ತುಂಬಿದ್ದ ಸಿಂಹಿಣಿಯ ಹೃದಯವಿತ್ತು. ಆ ಭೀಕರ ನೀರವತೆಯಲ್ಲಿ ತಾಯಿಯ ಜತೆಯಲ್ಲಿದ್ದ ಮತ್ತೊಬ್ಬಳು ವ್ಯಕ್ತಿ ಅವರ ಸಹೋದರಿ. ಎದೆಗಾರಿಕೆಯ ಮುದುಕಿಯವಳು. ತಾಯಿಯಂತು ಹೋರಾಟವನ್ನು ಮುಂದುವರಿಸಲು ಹಿಂಜರಿಯಲಿಲ್ಲ.

ಅಂತು ಪ್ರೇಮಾಗಾರದಿಂದ ಜಿಲ್ಲಾ ಜೈಲಿಗೆ ಹೋದೆವು. ನಮ್ಮ ಸಂಗಾತಿಯರನೇಕರು ಆಗಲೇ ಅಲ್ಲಿದ್ದರು. ಅವರೆಲ್ಲರು ಪ್ರಸನ್ನಚಿತ್ತರಾಗಿ ಮಂದಹಾಸದಿಂದಿದ್ದರು. ಏನೇ ಪ್ರಾಪ್ತವಾಗಲಿ, ಎಲ್ಲವನ್ನು ಎದುರಿಸಲು ಸಿದ್ಧರಾಗಿದ್ದರು. ನಾವೆಲ್ಲರು ಒಟ್ಟಿಗಿರಲು ಸಂತೋಷವಾಯಿತು. ತೂಕವೇ ಮೊದಲಾದ ಕೆಲವು ಯಥಾವಿಧಿಗಳು ಜರುಗಿದ ಮೇಲೆ ನಮ್ಮನ್ನು ಒಳಗೊಯ್ದರು. ಸ್ತ್ರೀಯರಿಗೆ ಪ್ರತ್ಯೇಕವಾದ ಬಿಡಾರಗಳಿರಲಿಲ್ಲ. ನಿಯಮಾನುಸಾರವಾಗಿ ಸ್ತ್ರೀ ಖೈದಿಗಳನ್ನು ವಿಚಾರಣೆಗೆ ಮುಂಚೆ ಅಲ್ಲಿಟ್ಟಿದ್ದು ಅನಂತರ ಬೇರೆ ಕಡೆಗೆ ವರ್ಗಾಯಿಸುತ್ತಿದ್ದರು. ಅವರಿಗೋಸ್ಕರ ಒಂದು ಅಂಗಳವಿತ್ತು. ಅನೇಕವಿಧವಾದ ಘೋರ ವ್ಯಾಧಿಗಳಿಂದ ನರಳುತ್ತಿದ್ದ ಹೊಲಸುಹೆಂಗಸರೂ ಅಲ್ಲಿದ್ದರು. ವಿಚಾರಣೆಗೆ ಮುಂಚೆ ಮೂರುವಾರಗಳೂ, ಅನಂತರ ನಾಲ್ಕು ದಿನಗಳೂ ನಾವು ಆ ಗುಂಪಿನಲ್ಲಿರಬೇಕಾಯಿತು. ಆದರೆ ನಾಲ್ವರಿಗೊಂದು ಕೋಣೆಯಂತೆ ನಮಗೆ ಪ್ರತ್ಯೇಕವಾದ ಕೋಣೆಗಳಿದ್ದುವು. ಕಳೆದಯುದ್ಧದಲ್ಲಿ ಬಾಂಬಿನ ಸಿಡಿತದಿಂದ ಗಾಯಗೊಂಡಿದ್ದ ಆಂಗ್ಲೇಯನೊಬ್ಬನು ಸೆರೆಮನೆಯ ಅಧಿಕಾರಿಯಾಗಿದ್ದನು. ಆತನು ಪ್ರತಿದಿನ ಬೆಳಗ್ಗೆ ಬರುತ್ತಿದ್ದನು. ಯಾರೂ ತಪ್ಪಿಸಿಕೊಂಡಿಲ್ಲವೆಂಬುದನ್ನು ತೋರಿಸುವುದಕ್ಕೋಸ್ಕರ ನಾವೆಲ್ಲರು ಆತನೆದುರಿಗೆ ನಿಲ್ಲಬೇಕಾಗಿತ್ತು. ಒಂದು ದಿನ ನಾನು ಮತ್ತು ನನ್ನ ಗೆಳತಿಯಿಬ್ಬರು ಸ್ವಲ್ಪ ತಡವಾಗಿ ಹೊರಗೆ ಬಂದೆವು. ಆತನು ನಮ್ಮನ್ನು ನೋಡಿದಾಕ್ಷಣ "ಜಾಗ್ರತೆ, ಜಾಗ್ರತೆ, ಹಗಲೆಲ್ಲಾ ನಿಮಗೋಸ್ಕರ ಕಾದಿರುವುದಕ್ಕಾಗುವುದಿಲ್ಲ; ಟೆನಿಸ್ ಪಂದ್ಯವನ್ನು ನೋಡಲು ಹೋಗಬೇಕಾಗಿದೆ; ಈ ಅಸಹ್ಯವಾದ ಸ್ಥಳದಲ್ಲಿ ತುಂಬ ತಡವಾಯಿತು." ಎಂದು ಅರಚಿಕೊಂಡನು. ನನಗೂ ದಿಗ್ಭ್ರಮೆಯಾಯಿತು. "ನಿಮಗಿಂತಲು ಮಿಗಿಲಾಗಿ ನಮಗೆ ಜಿಗುಪ್ಸೆಯಾಗಿದೆ. ಇಲ್ಲಿ ಎಲ್ಲಿ ನೋಡಿದರು ಬರಿಯ ಹೊಲಸೇ ಕಣ್ಣಿಗೆ ಬೀಳುತ್ತದೆ. ನಾವು ಪ್ರತಿನಿತ್ಯ ಟೆನ್ನಿಸ್ ಪಂದ್ಯವನ್ನು ಕಳೆದುಕೊಳ್ಳುತ್ತಿರುವಾಗ, ಒಂದು ದಿನ ನಿಮಗೆ ತಪ್ಪಿಹೋದರೆ ಏನು ?" ಎಂದು ಪ್ರತ್ಯುತ್ತರ ಕೊಟ್ಟೆನು. ಆ ಅಧಿಕಾರಿಯ ರಕ್ತ ಹೆಪ್ಪುಗಟ್ಟಿತು; ಆದರೆ ಅದೃಷ್ಟವಶದಿಂದ ಮಾತು ಮುಂದುವರಿಯಲಿಲ್ಲ.

ಮೊದಲ ಕೆಲವು ದಿನಗಳ ಅನುಭವ ನೂತನವಾಗಿತ್ತು; ಅದನ್ನು ನಾವೆಂದೂ ಮರೆಯುವಂತಿಲ್ಲ. ನಮ್ಮ ಕೋಣೆಗಳು ಅನೇಕ ವಿಧವಾದ ಹುಳುಹುಪ್ಪಟೆಗಳ ಉಗ್ರಾಣವಾಗಿತ್ತು. ನೆಲದ ಮೇಲೆಲ್ಲ ಅವು ಹರಿದಾಡುತ್ತಿದ್ದುವು. ಆ ಹೊಲಸು ಹುಳುಗಳು ಹಾಸಿಗೆಯಲ್ಲಿ ಸೇರಿಕೊಂಡಿರಬಹುದೆಂಬ ಅಂಜಿಕೆಯಿಂದ ಅನೇಕ ರಾತ್ರಿಗಳು ನಿದ್ರೆಯೇ ಹತ್ತಲಿಲ್ಲ. ಯಾವ ನಿಮಿಷದಲ್ಲಿ ಆ ವಿಲಕ್ಷಣವಾದ ಅಂಟುಹುಳು ತೋಳು ಕಾಲುಗಳ ಮೇಲೆ ಹರಿದುಬರುವುದೋ ಎಂದು ಭಯಗೊಳ್ಳುತ್ತಿದ್ದೆವು. ಪ್ರತಿಯೊಬ್ಬರಿಗು ಒಂದೆರಡು ಬಾರಿ ಆ ಅನುಭವವಾಗಿತ್ತು. ಮಲಗಿಕೊಳ್ಳುವುದಕ್ಕೆ ಮುಂಚೆ ಕೋಣೆಯನ್ನೆಲ್ಲ ಶೋಧಿಸಲಾರಂಭಿಸಿದೆವು. ಅನಂತರ ನಾವಲ್ಲಿರುವತನಕ ಯಾವ ದುರ್ಘಟನೆಯೂ ಸಂಭವಿಸಲಿಲ್ಲ. ವಿಚಾರಣೆಗೆ ಮುಂಚೆ ನಮ್ಮನ್ನು ನೋಡಲು ಹೊರಗಿನವರಿಗೆ ಅವಕಾಶವಿತ್ತು. ಪ್ರತಿನಿತ್ಯ ನಮ್ಮನ್ನು ನೋಡಲು ತಾಯಿಯವರು ಬರುತ್ತಿದ್ದರು. ಕೊನೆಗೆ ವಿಚಾರಣೆಯ ದಿನವೂ ಸಾರಿಬಂತು. ನಾವೆಲ್ಲರು ಕಾತರತೆಯಿಂದ ನಿಯಮಿತಕಾಲವನ್ನೇ ಎದುರುನೋಡುತ್ತಿದ್ದೆವು. ಪ್ರತಿಯೊಬ್ಬರಿಗೂ ಆರು ತಿಂಗಳ ಶಿಕ್ಷೆ ವಿಧಾಯಕವಾಗಬಹುದೆಂದು ನಿರೀಕ್ಷಿಸಿದ್ದೆವು; ಅಲ್ಲದೆ ಅದನ್ನು ಅನುಭವಿಸಲು ಸಿದ್ಧರಾಗಿದ್ದೆವು. ವಿಚಾರಣೆ ಜೈಲಿನಲ್ಲಿ ನಡೆಯಿತು. ನಾವೆಲ್ಲರು ಸಾಲಾಗಿ ಕುಳಿತೆವು. ಅವರವರ ಮೊಕದ್ದಮೆಯ ಕಾಲದಲ್ಲಿ ಅವರವರ ಹೆಸರು ಕೂಗುತ್ತಿದ್ದರು. ನಾವು ವಿಚಾರಣೆಯಲ್ಲಿ ಭಾಗವಹಿಸಲು ನಿರಾಕರಿಸಿದೆವು. ನನ್ನ ಅಕ್ಕನ ಸರದಿ ಮೊದಲು ಬಂದಿತು. ನ್ಯಾಯಾಧೀಶನು ತಗ್ಗಿದ ದನಿಯಲ್ಲಿ ನಿರೂಪವನ್ನು ಓದಿದನು. ಒಂದು ವರ್ಷ ಕಠಿಣಶಿಕ್ಷೆ, ಜತೆಗೆ ಜುಲ್ಮಾನೆಯೆಂದು ಕೇಳಿ ಎಲ್ಲರು ವಿಸ್ಮಿತರಾದೆವು ಅನಂತರ ನನ್ನ ಸರದಿ ಬಂದಿತು. ಜುಲ್ಮಾನೆರಹಿತವಾದ ಶಿಕ್ಷೆ ನನಗೆ ಲಭಿಸಿತು. ಇನ್ನಿಬ್ಬರಿಗೂ ಒಂದೊಂದು ವರ್ಷದ ಶಿಕ್ಷೆ ದೊರಕಿತು. ಉಳಿದವರಿಗೆ ಮೂರು ತಿಂಗಳಿಂದ ಹಿಡಿದು ಒಂಭತ್ತು ತಿಂಗಳವರೆಗೆ ಭಿನ್ನ ಭಿನ್ನ ದರ್ಜೆಯ ಶಿಕ್ಷೆ ವಿಧಾಯಕವಾಯಿತು. ನಾಲ್ಕು ದಿನಗಳ ನಂತರ ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ನಮ್ಮನ್ನು ಲಕ್ನೋ

ಸೆರೆಮನೆಗೆ ಕರೆದೊಯ್ದರು. ಹನ್ನೊಂದುವರೆ ತಿಂಗಳು ಅಲ್ಲಿಯೇ ಇದ್ದೆವು. ಒಳ್ಳೆಯ ನಡತೆಗಾಗಿ ಹದಿನೈದು ದಿನಗಳ ಕ್ಷಮೆಯೂ ದೊರೆತಿತು!

ನಾವು ಲಕ್ನೋ ನಗರಕ್ಕೆ ಬರುವ ಹೊತ್ತಿಗೆ ಬೆಳಗಾಗಿತ್ತು. ಮಾಗಿಯ ಚಳಿ ಕೊರೆಯುತ್ತಿತ್ತು. ಭಯಂಕರಾಕಾರ ನಿರ್ದಯ ಪ್ರೇತ ಸ್ವರೂಪದ ಸೆರೆಮನೆಯ ಗೋಡೆಗಳು ತುಸು ಅಂಜಿಕೆಯನ್ನುಂಟು ಮಾಡಿದುವು. ಬಾಹ್ಯಪ್ರಪಂಚದ ಸಂಬಂಧವೇ ಇಲ್ಲದ, ಇಡೀ ಒಂದು ವರ್ಷದ ಸೆರೆಮನೆಯ ಜೀವನ ಹೇಗಿರುತ್ತೆಂಬುದನ್ನು ಮೊಟ್ಟಮೊದಲು ಅಂದು ಅರಿತೆವು. ಆ ಕಠಿಣ ಜೀವನ ನಮ್ಮ ಧೈರ್ಯಸ್ಥೈರ್ಯಗಳನ್ನು ಕುಗ್ಗಿಸದಂತೆ ಎಚ್ಚರಿಕೆಯಿಂದಿರಲು ಪಣತೊಟ್ಟೆವು. ಎಷ್ಟೋ ತೊಂದರೆ ಗಳಿದ್ದರೂ, ಚಿತ್ತಗ್ಲಾನಿ ಹವಣು ಮೀರಿದ್ದರೂ, ನಮ್ಮ ನಾಯಕರ ಹಿರಿಮೆಯಲ್ಲಿದ್ದ ಪೂರ್ಣ ವಿಶ್ವಾಸ ಮತ್ತು ಹಿಡಿದ ಧ್ಯೇಯವನ್ನು ಸಾಧಿಸುವ ಕುತೂಹಲಗಳು ಮತ್ತಷ್ಟು ಕಾವೇರಿದವು.

ಸೆರೆಮನೆಯನ್ನು ತಲುಪಿದ ಕೂಡಲೆ ನಮ್ಮ ಸಾಮಾನುಗಳ ತನಿಖೆ ನಡೆಯಿತು. ಅನಂತರ ನಮ್ಮನ್ನು ಸೆರೆಮನೆಯೊಳಕ್ಕೆ ಕರೆದೊಯ್ದರು. ಸೆರೆಮನೆಯ ಮೇಲ್ವಿಚಾರಕಳು ನಮ್ಮ ಕೋಣೆಗಳನ್ನು ತೋರಿಸಿ, ನಾವು ಏನು ಮಾಡಬೇಕು, ಹೇಗೆ ವರ್ತಿಸಬೇಕೆಂಬುದನ್ನೆಲ್ಲ ತಿಳಿಸಿದಳು. ಸಂಜೆ ಒಂದು ಗಂಟೆಯತನಕ ನಮ್ಮ ಅಂಗಳದಲ್ಲಿ ನಾವು ಸ್ವೇಚ್ಛೆಯಾಗಿ ತಿರುಗಾಡುವುದೆಂದೂ, ಅನಂತರ ಕೋಣೆಗೆ ಬೀಗ ಹಾಕಲಾಗುತ್ತದೆಂದೂ ಹೇಳಿ ಆಕೆ ಹೊರಟು ಹೋದಳು. ಕೊನೆಯ ಮಾತುಗಳನ್ನು ಕೇಳಿ ತುಸು ದಿಗಿಲಾಯಿತು. ಅಚ್ಚುಕಟ್ಟಿಲ್ಲದ ಅಹಿತವಾದ ಹಾಸಿಗೆಗಳನ್ನು ಅಣಿಗೊಳಿಸಿ, ಕೈಕಾಲುಗಳನ್ನು ತೊಳೆದುಕೊಂಡೆವು. ನಮ್ಮಲ್ಲಿ ಕೆಲವರು ಸೆರೆಮನೆಯ ಸುತ್ತಮುತ್ತ ನೋಡಿ ಬರೋಣವೆಂದು ನಿರ್ಧರಿಸಿಕೊಂಡೆವು.

ಆಗ ತಾನೆ ಬೆಳಗಾಗಿದ್ದುದರಿಂದ ಖೈದಿಗಳು ತಮ್ಮ ತಮ್ಮ ಕೋಣೆಗಳಿಂದ ಹೊರಗೆ ಬಂದು ಬಟ್ಟೆ ಒಗೆಯುವುದರಲ್ಲಿಯೋ, ಸ್ನಾನ ಮಾಡುವುದರಲ್ಲಿಯೋ ಅಥವ ಇತರ ಕೆಲಸಗಳಲ್ಲಿಯೋ ನಿರತರಾಗಿ

ದ್ದರು. ನಾವು ಪುರುಸತ್ತಾಗಿ ತಿರುಗಾಡುತ್ತಿದ್ದುದನ್ನು ನೋಡಿ ಕೆಲವರಿಗೆ ವಿಸ್ಮಯವಾಯಿತು, ಕೆಲವರು ಸಸ್ನೇಹ ಮಂದಹಾಸವನ್ನು ಬೀರಿದರು. ಕೋಣೆಯ ಕಾವಲುಗಾತಿಯೊಬ್ಬಳು ನಮ್ಮನ್ನು ಮೇಲಿಂದ ಕೆಳಗಿನವರೆಗೆ ತಿರಸ್ಕಾರ ದೃಷ್ಟಿಯಿಂದ ದುರ ದುರನೆ ನೋಡಿದಳು. ಆಕೆ ಹಿಂದೊಮ್ಮೆ ಖೈದಿಯಾಗಿದ್ದ ಮಾತ್ಸರ್ಯ ಪ್ರಕೃತಿಯ ವೃದ್ಧ ಕುಬ್ಜೆಯೆಂದು ಅನಂತರ ನಮಗೆ ಗೊತ್ತಾಯಿತು.

ಸೋಮವಾರ ಸಾಮಾನ್ಯವಾಗಿ ಪ್ರದರ್ಶನದ ದಿನ. ಜೈಲಿನ ಮುಖ್ಯಾಧಿಕಾರಿ ಅಂದು ಮೇಲ್ವಿಚಾರಣೆಗಾಗಿ ಬರುತ್ತಿದ್ದನು. ಕೋಣೆ ಮತ್ತು ಅಂಗಳಗಳನ್ನು ತೊಳೆಯುವ ಗಜಿಬಿಜಿ ಬೆಳಗ್ಗೆ ಐದು ಗಂಟೆಗೆ ಆರಂಭವಾಗುತ್ತಿತ್ತು. ಎಂಟು ಗಂಟೆಯ ವೇಳೆಗೆ ಖೈದಿಗಳಿಗೆಲ್ಲ ಚೊಕ್ಕಟವಾದ ಏಕರೀತಿಯ ಉಡುಪನ್ನು ಉಡಿಸಿ, ಫಳಫಳನೆ ಹೊಳೆಯುತ್ತಿದ್ದ ಕಬ್ಬಿಣದ ತಟ್ಟೆಗಳನ್ನು ಅವರ ಮುಂದಿರಿಸಿ, ಎಲ್ಲರನ್ನು ಸಾಲಾಗಿ ನಿಲ್ಲಿಸುತ್ತಿದ್ದರು.

ಪ್ರಥಮ ಪ್ರದರ್ಶನದ ದಿನ ನಮ್ಮ ಮೇಲ್ವಿಚಾರಕಳು ಬಹಳ ಕಳವಳಗೊಂಡಿದ್ದಳು. ಮುಖ್ಯಾಧಿಕಾರಿ ನಮ್ಮ ಕೋಣೆಗೆ ಬಂದಾಗ ನಾವು ಹೇಗೆ ವರ್ತಿಸಬಹುದೆಂಬ ವಿಚಾರದಲ್ಲಿ ಆಕೆಗೆ ಅಪನಂಬಿಕೆಯಿತ್ತು. ಆತನು ಬಂದ ಕೂಡಲೆ ಎಲ್ಲ ಖೈದಿಗಳು ಎದ್ದು ನಿಲ್ಲಬೇಕಾಗಿತ್ತು. ಆದರೆ ಕೆಲವು ಸೆರೆಮನೆಗಳಲ್ಲಿ ರಾಜಕೀಯ ಖೈದಿಗಳು ನಿಂತುಕೊಳ್ಳಲು ನಿರಾಕರಿಸಿದ್ದರು. ಈ ಕಾರಣದಿಂದ ಆ ಪುರಂಧ್ರಿ ದಿಗಿಲುಗೊಂಡಿದ್ದಳು.

ಅಂತು ಮೊದಲ ದಿನದ ಪರೀಕ್ಷೆ ಚೆನ್ನಾಗಿ ನಡೆಯಿತು. ಮುಖ್ಯಾಧಿಕಾರಿ ತುಂಬಾ ವಿನಯಶಾಲಿ; ನಮ್ಮ ಕುಂದುಕೊರತೆಗಳನ್ನೆಲ್ಲ ವಿಚಾರಿಸಿದನು. ಕೆಲವು ಗೆಳತಿಯರು ಪುಸ್ತಕಗಳನ್ನೋ ಅಥವ ಬೇರೆ ಯಾವುದಾದರು ಸಾಮಾನುಗಳನ್ನೋ ಅಪೇಕ್ಷಿಸಿದರು. ಸೆರೆಮನೆಯಲ್ಲಿದ್ದಾಗ ನನಗೆ ಓದುವ ಹಂಬಲ ಬಹಳವಾಗಿತ್ತು. ಕೆಲವು ಫ್ರೆಂಚ್ ಮತ್ತು ಇಟಾಲಿಯನ್ ಪುಸ್ತಕಗಳು, ಸಂಕ್ಷಿಪ್ತಲಿಪಿಗೆ ಸಂಬಂಧಪಟ್ಟ ಒಂದೆರಡು ಪುಸ್ತಕಗಳು ಮತ್ತು ಮೂರು ಶಬ್ದಕೋಶ

ಗಳು ಬೇಕೆಂದು ಆತನನ್ನು ಕೇಳಿದೆನು. ಇವೆಲ್ಲ ವ್ಯಾಸಂಗ ಪುಸ್ತಕಗಳಾದುದರಿಂದ ಒಂದೆರಡು ಕಾದಂಬರಿಗಳು ಬೇಕೆಂದು ಮುಖ್ಯಾಧಿಕಾರಿಗೆ ತಿಳಿಸಿದೆನು.

ನಾನು ಖೈದಿಯಾಗಿದ್ದೆನೆಂಬ ವಿಷಯುವನ್ನು ಮರೆತು ಮೇಲೆ ಹೇಳಿದ ಗ್ರಂಥಗಳೆಲ್ಲ ಬೇಕೆಂದು ಬಹಳ ಗಂಭೀರವಾಗಿ ಕೇಳಿದೆನು. ಒಂದು ಸಾರಿಗೆ ಶಬ್ದಕೋಶಗಳೂ ಸೇರಿ ಆರು ಪುಸ್ತಕಗಳಿಗಿಂತ ಹೆಚ್ಚಾಗಿ ಖೈದಿಗಳಿಗೆ ಕೊಡುವುದಿಲ್ಲವೆಂಬುದನ್ನು ಮರೆತೆನು.

ಮುಖ್ಯಾಧಿಕಾರಿಯು ಕ್ಷಣಕಾಲ ಮಾತ್ರ ಹಿಂದೆಮುಂದೆ ನೋಡಿದನು. ಅನಂತರ ಗಂಭೀರಧ್ವನಿಯಿಂದ ಈ ರೀತಿ ಉತ್ತರವಿತ್ತನು: "ನಿಮಗೋಸ್ಕರ ಸೆರೆಮನೆಯಲ್ಲಿ ಒಂದು ಚಿಕ್ಕ ಗ್ರಂಥಾಗಾರವನ್ನು ಏರ್ಪಡಿಸಲು ಮೇಲಣ ಅಧಿಕಾರಿಗಳಿಂದ ಅನುಮತಿ ಪಡೆಯುವುದು ಮೇಲಲ್ಲವೆ? ಹಾಗೆ ಮಾಡಿದರೆ ನಿಮಗೆ ಬೇಕಾದ ಗ್ರಂಥಗಳನ್ನು ಆರಿಸಿಕೊಳ್ಳಲು ಸಾಕಾದಷ್ಟು ಅವಕಾಶವಿರುತ್ತದೆ." ನಾನು ಪ್ರತ್ಯುತ್ತರವೀಯಲು ಅನುಮಾನಿಸುವಷ್ಟರಲ್ಲಿ ಆತನ ಕಣ್ಣುಗಳಲ್ಲಿ ಮುಗುಳುನಗೆ ಹುದುಗಿದ್ದುದನ್ನು ನೋಡಿದೆನು. "ನಿಮಗೇನೂ ತೊಂದರೆಯಾಗದಿದ್ದಲ್ಲಿ ಅದೂ ಒಳ್ಳೆಯ ಆಲೋಚನೆಯೇ. ದಾರ ತೆಗೆಯುವುದರಲ್ಲಿಯೇ ನನ್ನ ಕಾಲವನ್ನೆಲ್ಲ ಕಳೆಯಲು ಇಷ್ಟವಿಲ್ಲ. ಅದುದರಿಂದ ನೀವು ಪುಸ್ತಕಗಳನ್ನು ಜಾಗ್ರತೆ ಒದಗಿಸಿಕೊಡುವಿರೆಂದು ನಂಬಿದ್ದೇನೆ." ಎಂದು ಪ್ರತ್ಯುತ್ತರವಿತ್ತೆನು. ಎರಡು ದೀರ್ಘಮಾಸಗಳು ಕಳೆದನಂತರ ಉನ್ನತಾಧಿಕಾರಿಗಳ ವಿಚಾರದ ತಕ್ಕಡಿಯಲ್ಲಿ ತೂಕ ಸರಿಹೋದಮೇಲೆ ನನಗೆ ಬೇಕಾದ ಉತ್ತಮ ಪುಸ್ತಕಗಳು ದೊರೆತುವು.

ಪ್ರತಿಯೊಬ್ಬರೂ ಆರು ಸೀರೆಗಳ ಜತೆಗೆ ಕೆಲವು ಬಟ್ಟೆಗಳನ್ನಿಟ್ಟುಕೊಳ್ಳಬಹುದಾಗಿತ್ತು. ಇವುಗಳನ್ನೆಲ್ಲ ನಾವೇ ಪ್ರತಿದಿನವು ಒಗೆದುಕೊಳ್ಳಬೇಕಾಗಿತ್ತು. ಅದೇನೂ ಸುಲಭದ ಕೆಲಸವಾಗಿರಲಿಲ್ಲ. ಖಾದಿ ವಸ್ತ್ರಗಳು ಒರಟಾದವು. ಎಲ್ಲರಿಗು ಗೊತ್ತು. ನೀರಿನಲ್ಲಿ ನೆನೆಯಿಸಿದ ಮೇಲಂತು ಅವು ಮತ್ತಷ್ಟು ತೂಕವಾಗಿ ಅವುಗಳನ್ನು ಹಿಡಿದುಕೊಳ್ಳುವುದೇ ಕಷ್ಟವಾಗುತ್ತದೆ. ಜೈಲಿನ ಹಲವಾರು ಕಷ್ಟನಿಷ್ಠುರಗಳಿಗೆ

ಒಗ್ಗಿಕೊಳ್ಳುವಂತೆ ಈ ಕೆಲಸಕ್ಕೂ ಒಗ್ಗಿಕೊಂಡೆವು. ನಮಗೆ ಕೊಡುತ್ತಿದ್ದ ಆಹಾರವಂತು ಅಸಹ್ಯವಾಗಿತ್ತು. ; ಪ್ರಯಾಸಯುಕ್ತವಾದ ಪ್ರಯತ್ನಗಳಿಂದಲೂ ತಿನ್ನಲು ಸಾಧ್ಯವಾಗುತ್ತಿರಲಿಲ್ಲ. ನಮಗೆ ಆಹಾರ ಹಿಡಿಸದಿರಲು ಹೊಲಸುತನ ಮಾತ್ರವೇ ಕಾರಣವಲ್ಲ! ಅದನ್ನು ಬಡಿಸುತ್ತಿದ್ದ ಅಸಹ್ಯರೀತಿಯನ್ನು ನೋಡಿದಾಗಲೆ ಜುಗುಪ್ಸೆಮೂಡುತ್ತಿತ್ತು. ಕಡೆಗೆ ನಾವೇ ಅಡಿಗೆ ಮಾಡಿಕೊಳ್ಳಲು ಅಪ್ಪಣೆ ಪಡೆದೆವು. ನಮ್ಮನಮ್ಮಲ್ಲಿಯೆ ನಾಲ್ಕು ಮತ್ತು ಆರು ಮಂದಿಗಳ ತಂಡಗಳನ್ನೇರ್ಪಡಿಸಿಕೊಂಡೆವು. ಒಬ್ಬರು ಅಡಿಗೆ ಮಾಡುವುದು, ಮತ್ತೊಬ್ಬರು ತರಕಾರಿ ಹಚ್ಚುವುದು, ಉಳಿದವರು ತಟ್ಟೆ ಮೊದಲಾದುವುಗಳನ್ನು ತೊಳೆಯುವುದು, ಹೀಗೆ ಕೆಲಸಗಳನ್ನು ಹಂಚಿಕೊಂಡೆವು. ಈ ಕ್ರಮ ನಮಗೆ ಹಿತವಾಗಿ ಕಂಡಿತು.

ಒಂದೊಂದು ಕೋಣೆಯಲ್ಲಿ ಹತ್ತುಹನ್ನೆರಡು ಮಂದಿ ಇರುತ್ತಿದ್ದರು ಹಗಲೆಲ್ಲ ನಮ್ಮ ಅಂಗಳದಲ್ಲಿ ಸುತ್ತಾಡಲು ಅವಕಾಶವಿತ್ತು. ಸಂಜೆ ಐದುಗಂಟೆಗೆ ನಮ್ಮನ್ನು ಕೊಟಡಿಯಲ್ಲಿ ಕೂಡಿ ಬೀಗ ಹಾಕಿದರೆ ಮಾರನೆಯ ಬೆಳಗ್ಗೆ ಆರು ಗಂಟೆಗೆ ಹೊರಗೆ ಬಿಡುತ್ತಿದ್ದರು. ಆ ವೇಳೆಯನ್ನು ಕಳೆಯುವುದೇ ಬಹಳ ಕಷ್ಟವಾಗುತ್ತಿತ್ತು. ಒಬ್ಬೊಬ್ಬರಿಗೆ ಒಂದೊಂದು ವಿಧದಲ್ಲಿ ಕಾಲ ಕಳೆಯಬೇಕೆಂಬ ಆಸಕ್ತಿ; ಕೆಲವರಿಗೆ ಮಾತಾಡುವ ಬಯಕೆ; ಕೆಲವರಿಗೆ ಪ್ರವಚನ ಚರ್ಚೆಗಳಲ್ಲಿ ಕಾಲ ಕಳೆಯಬೇಕೆಂಬ ಇಷ್ಟ, ಇತರರಿಗೆ ಹಾಡಿ ನಲಿಯಬೇಕೆಂಬ ಆಕಾಂಕ್ಷೆ—ಹೀಗೆ ಹಲವು ಹವ್ಯಾಸಗಳ ಮೂಲಕ ತಮ್ಮ ಪ್ರತಿನಿತ್ಯದ ಕಷ್ಟಕಾರ್ಪಣ್ಯಗಳನ್ನು ಮರೆಯಲು ಯತ್ನಿಸುತ್ತಿದ್ದರು. ಒಂದೊಂದು ಸಾರಿ ನಮ್ಮನಮ್ಮಲ್ಲಿ ಬಿಸಿಬಿಸಿ ಮಾತುಗಳು ನಡೆಯುತ್ತಿದ್ದುವು. ಆದರೆ ಒಟ್ಟಿನಲ್ಲಿ ನಾವೆಲ್ಲರು ಗೆಳೆತನದಿಂದಲೂ, ಏಕೀಭಾವದಿಂದಲೂ ಬಾಳುತ್ತಿದ್ದೆವು.

ಹೊರಗಡೆಯಿಂದ ಬರುತ್ತಿದ್ದ ಸುದ್ದಿ ಆಗಾಗ್ಗೆ ಕಳವಳವನ್ನುಂಟುಮಾಡುತ್ತಿತ್ತು. ಅಂತಹ ಸುದ್ದಿಯನ್ನು ಕೇಳಿದಾಗ ನಮ್ಮಲ್ಲಿ ಅಸ್ಥಿರ ಮನೋಭಾವನೆ ಮೂಡಿ ಬಹಳ ದಿನಗಳ ತನಕ ನಿಲ್ಲುತ್ತಿತ್ತು. ಲಾಠೀ ಪ್ರಹಾರದ ಪರಿಣಾಮವಾಗಿ ತಾಯಿಯವರು ತುಂಬಾ ಗಾಯಗೊಂಡಿದ್ದರೆಂಬುದು ಒಮ್ಮೆ ಗೊತ್ತಾಯಿತು. ವಿವರಗಳು ಗೊತ್ತಾಗದಿದ್ದರು,

ಅಕ್ಕನೂ ನಾನೂ ಚಿಂತಾಭ್ರಾಂತರಾದೆವು. ಪಕ್ಷಕ್ಕೊಮ್ಮೆ ಬರೆಯು ತ್ತಿದ್ದ ಪತ್ರವನ್ನು ಕೆಲವು ದಿನಗಳ ಹಿಂದೆಯೇ ಕಳುಹಿಸಿದ್ದುದರಿಂದ, ಪುನಃ ಪತ್ರವನ್ನು ಬರೆಯುವುದಕ್ಕಾಗಲಿ, ತಂತೀವರ್ತಮಾನವನ್ನು ಕಳುಹಿಸುವುದಕ್ಕಾಗಲೀ ಅವಕಾಶವಿರಲಿಲ್ಲ. ನಿಸ್ಸಹಾಯಕತೆ ದುಃಖ ನಿರಾಶೆಗಳು ಮಾನವನನ್ನು ಆವರಿಸುವುದು ಅಂತಹ ಸಮಯದಲ್ಲಿಯೇ!

ಭೇಟಿಯ ದಿನಗಳೇ ನಮಗೆ ಶುಭದಿನಗಳು. ಹೆಚ್ಚುಕಡಿಮೆ ನಮ್ಮ ಕುಟುಂಬವೆಲ್ಲ ಜೈಲಿನಲ್ಲಿದ್ದುದರಿಂದ ಒಂದೊಂದು ಸಾರಿ ಯಾರೂ ಬರುತ್ತಿರಲಿಲ್ಲ. ನಮ್ಮ ತಾಯಿಯವರು ಮಾತ್ರ ಹೊರಗಿದ್ದರು ಅಣ್ಣ, ಭಾವ, ಅಕ್ಕ ಮತ್ತು ನಾನು ಈ ನಾಲ್ವರನ್ನು ಅವರು ನೋಡ ಬೇಕಾಗಿತ್ತು. ಅನೇಕವೇಳೆ ಅವರು ಅಸ್ವಸ್ಥರಾಗಿದ್ದಾಗ, ಇಲ್ಲವೆ ಅವ ರಿಗೆ ಬೇರೆ ಕೆಲಸವಿದ್ದಾಗ ಭೇಟಿಗಳೇ ಆಗುತ್ತಿರಲಿಲ್ಲ. ಅಂತಹ ಸಮ ಯದಲ್ಲಿ ನಮ್ಮ ಜುಗುಪ್ಸೆ ಸಹನೆಯನ್ನು ಮೀರುತ್ತಿತ್ತು.

ಹದಿನೈದು ದಿನಗಳಿಗೊಮ್ಮೆ ನಮ್ಮ ತೂಕವನ್ನು ಅಳೆಯುತ್ತಿದ್ದರು ಅಕಸ್ಮಾತ್ ಯಾರಿಗಾದರು ಒಂದೆರಡು ಪೌಂಡುಗಳು ಹೆಚ್ಚಿದ್ದಲ್ಲಿ ತುಂಬ ಅವಾಂತರವಾಗುತ್ತಿತ್ತು. ತಕ್ಕಡಿಗಳೂ, ಜೈಲಿನ ನೈಚ್ಯಾ ಹಾರವೂ ನಿಂದೆಗೆ ಗುರಿಯಾಗುತ್ತಿದ್ದವು. ನಮ್ಮ ತೂಕವನ್ನು ಅಳೆದ ವೈದ್ಯನಂತು ನಿರಂತರ ನಿಂದೆಗೆ ಗುರಿಯಾಗುತ್ತಿದ್ದನು. ಆ ಬಡಪ್ರಾಣಿ ನಮ್ಮ ಕೋಣೆಗೆ ಬಂದಾಗಲೆಲ್ಲ ಅನೇಕ ಪೌಂಡುಗಳು ತೂಕವನ್ನು ಕಳೆದುಕೊಂಡಿರಬೇಕೆಂಬುದೇ ನನ್ನ ನಂಬಿಕೆ. ಜೈಲಿನ ಮುಖ್ಯಾಧಿ. ಕಾರಿ ಮತ್ತು ವೈದ್ಯರಿಬ್ಬರು ಮಾತ್ರ ಹೆಂಗಸರ ಸೆರೆಮನೆಗೆ ಬರಲು ಅವಕಾಶವಿತ್ತು. ಆಗಾಗ್ಗೆ ಗಂಡಸರನ್ನು ನೋಡುವುದು ಒಳ್ಳೆಯದೆಂಬ ಅಂಶವನ್ನು ಪ್ರಚಂಡ ಸ್ತ್ರೀಸ್ವಾತಂತ್ರ್ಯವಾದಿಗಳು ಸುದೃಢವಾಗಿ ನಿಷೇ ಧಿಸಿದರೂ, ಮುಖ್ಯಾಧಿಕಾರಿ ವೈದ್ಯನೊಡನೆ ಮಾತಾಡುತ್ತ ಸೆರೆಮನೆಯ ನ್ಯೂನತೆಗಳಿಗೆಲ್ಲ ಆತನನ್ನೇ ದೂಷಿಸುತ್ತಾ ಬಹು ವೇಳೆಯನ್ನು ನಮ್ಮ ಅಂಗಳದಲ್ಲಿಯೇ ಕಳೆಯುತ್ತಿದ್ದನು.

ದಿನಗಳುರುಳಿದಂತೆಲ್ಲ ತಿಂಗಳುಗಳು ಸಾಗಿದಂತೆಲ್ಲ ಸೆರೆಮನೆಯ ಬಾಳೂ ಸಾಗಿತು. ನಮಗೆ ಬೇಕಾದವರನ್ನು ಹೊರಗಣ ಪ್ರಪಂಚದಲ್ಲಿ

ಬಿಟ್ಟು ಬಂದುದರಿಂದ ಕೆಲವು ವೇಳೆ ಬೇಸರವಾಗುತ್ತಿತ್ತು. ಓದುತ್ತಾ, ಕೆಲಸಮಾಡುತ್ತಾ ಇಲ್ಲವೆ ಒಬ್ಬರೊಡನೊಬ್ಬರು ಚರ್ಚಿಸುತ್ತಾ, ಕೆಲವು ವೇಳೆ ಸುಖಸಂತೃಪ್ತಿಗಳಿಂದ ಕೂಡಿರುತ್ತಿದ್ದೆವು.

ತರುಣವಯಸ್ಸಿನ ಸ್ತ್ರೀ ಖೈದಿಗಳು ಪರಸ್ಪರ ಸೌಹಾರ್ದದಿಂದಿದ್ದರು. ಅವರಲ್ಲಿ ಕೆಲವರು ವಿನೋದಶೀಲೆಯರು ಮತ್ತು ಚತುರೆಯರು. ಕೆಲವರಿಗೆ ಸಂಗೀತಾಭಿನಯ ಕಲೆಗಳು ಗೊತ್ತಿದ್ದುವು. ಆಂಗ್ಲೋ-ಇಂಡಿಯನ್ ತರುಣಿಯೊಬ್ಬಳು ಈ ಕಲೆಗಳಲ್ಲಿ ತುಂಬ ಪ್ರವೀಣೆಯಾಗಿದ್ದಳು. ಅವಳೊಂದು ವಿಚಿತ್ರವ್ಯಕ್ತಿ. ಬಾಲ್ಯದಲ್ಲಿ ಅವಳು ಬಹಳ ಆಕರ್ಷಣೀಯಳಾಗಿದ್ದಿರಬೇಕು. ಆಕೆಯ ನಿಜವಾದ ಹೆಸರನ್ನು ತಿಳಿಸಲು ನನಗೆ ಇಷ್ಟವಿಲ್ಲದಿರುವುದರಿಂದ ಆಕೆಯನ್ನು ಮೇರಿ ಎಂದು ಕರೆಯುತ್ತೇನೆ. ಆಕೆ ಸದಾ ತಂಟೆಮಾಡುತ್ತಿದ್ದುದರಿಂದ, ಅವಳನ್ನು ಸಾಮಾನ್ಯವಾಗಿ ಏಕಾಂತವಾದ ಕೋಣೆಯಲ್ಲಿಡುತ್ತಿದ್ದರು. ಆಕೆ ಚತುರೆ ಮತ್ತು ಹಟಗಾತಿ. ಒಂದು ದಿನ ಆಕೆ ತುಸುಹೊತ್ತು ತನ್ನ ಕೋಣೆಯ ಹೊರಗಡೆ ಇದ್ದಾಗ ನನ್ನ ಹತ್ತಿರ ಬಂದು "ನಾನು ಪ್ರಖ್ಯಾತಳಾದ ಆಂಗ್ಲೇಯ ನಟಿಯೊಬ್ಬಳ ಸಂಬಂಧಿ ಎಂಬುದು ನಿನಗೆ ಗೊತ್ತಿದೆಯೇನು? ಅಹುದು, ನೀನು ನಂಬು ಅಥವಾ ಬಿಡು, ನನ್ನ ಸಂಬಂಧವಂತು ನಿಜ'' ಎಂದು ಹೇಳಿದಳು. "ಮೇರಿ, ನೀನೇತಕ್ಕೆ ಸೆರೆಮನೆಗೆ ಬಂದೆ. ಕಾರಾಗೃಹವಾಸದ ಅವಧಿಯನ್ನು ಕಡಮೆ ಮಾಡಿಕೊಂಡು ಮನೆಗೆ ಹೋಗಲು ಅನುಕೂಲವಾಗುವಂತೆ ಏತಕ್ಕೆ ವರ್ತಿಸಬಾರದು?" "ಗೆಳತಿ, ನೀನೂ ನನ್ನಂತೆಯೆ ಖೈದಿಯಾಗಿರುವುದರಿಂದ ನಿನಗೆ ಹೇಳಬೇಕಾದ ರಹಸ್ಯವೊಂದಿದೆ. ನಾನು ಅನೇಕಸಾರಿ ಜೈಲಿಗೆ ಬಂದು ಹೋಗಿದ್ದೇನೆಂಬುದು ನಿನಗೆ ಗೊತ್ತಿದೆ. ನಾನು ಹೊರಗೆ ಹೋದ ಕೂಡಲೆ ಗಂಡಸರು ನನ್ನನ್ನು ಹಿಂಬಾಲಿಸುತ್ತಾರೆ. ನಾನು ತುಂಬಾ ಚೆಲುವೆಯೆಂದು ಅವರ ಅಭಿಪ್ರಾಯ. ಅನೇಕವೇಳೆ ಪ್ರಖ್ಯಾತ ನಟಿಯಾದ ನನ್ನ ದಾಯಾದಿಯೇ ನಾನೆಂದು ತಪ್ಪು ತಿಳಿದುಕೊಳ್ಳುವುದುಂಟು. ಅವರ ಕಾಟಗಳನ್ನು ಸಹಿಸಲಾರದೆ ಜೈಲಿಗೆ ಹೋಗಲು ಏನಾದರು ಅಕೃತ್ಯವನ್ನು ಆಚರಿಸೋಣವೆನ್ನಿಸುತ್ತದೆ. ಇಲ್ಲಿದ್ದಾಗ ಅವರ ಗಮನಕ್ಕೆ ಬೀಳದೆ ಸುಖವಾಗಿರುತ್ತೇನೆ" ಎಂದು ಆಕೆ ಪ್ರತ್ಯುತ್ತರವಿತ್ತಳು.

ಒಂದು ರಾತ್ರಿ ಎಲ್ಲೆಲ್ಲಿಯೂ ಸ್ಮಶಾನನೀರವತೆ ಹರಡಿ, ಪ್ರತಿಯೊಬ್ಬರೂ ಗಾಢನಿದ್ರೆಯಲ್ಲಿದ್ದಾಗ ನನ್ನ ಪಕ್ಕದ ಹುಡುಗಿ ನನ್ನನ್ನು ಎಚ್ಚರಿಸಿ, "ನೋಡಿ, ಏನೂ ನಿಮಗೆ ಕೇಳಿಸಲಿಲ್ಲವೆ? ದೂರದ ಅಸ್ಪಷ್ಟ ಘಂಟಾಘೋಷ ಆಗಾಗ್ಗೆ ನಮಗೆ ಕೇಳಿಸುತ್ತಿರುತ್ತದೆ" ಎಂದು ಹೇಳಿದಳು. ಅದೇನೆಂದು ಕೇಳಿದೆನು. "ನನಗೆ ಅದೇನೆಂಬುದು ಗೊತ್ತಿಲ್ಲ; ಆದರೆ ಅದು ನನಗೆ ಭಯವನ್ನುಂಟುಮಾಡುತ್ತಿದೆ. ತರುಣವಯಸ್ಸಿನ ನಟಿಯೊಬ್ಬಳಿಗೆ ಮರಣದಂಡನೆ ವಿಧಿಸಿ ಆಕೆಯನ್ನು ಗಲ್ಲಿಗೇರಿಸಿದ್ದರು. ಬಹುಶಃ ಆಕೆಯ ಪ್ರೇತ ಸೆರೆಮನೆಯಲ್ಲಿ ಸುಳಿದಾಡುತ್ತಿರಬಹುದು." ಎಂದು ಆ ಗೆಳತಿ ಹೇಳಿದಳು.

ನಾನು ನಡುಗಿದೆನು. ಸೆರೆಮನೆಯಲ್ಲಾಗಲಿ, ಅನ್ಯಸ್ಥಳಗಳಲ್ಲಾಗಲಿ ಭೂತಗಳನ್ನು ನೋಡಲು ನನಗೆ ಇಷ್ಟವಿರಲಿಲ್ಲ. ಆದರೆ ಆ ವಿಷಯದಲ್ಲಿ ನಿಶ್ಚಿಂತಳಾಗಿದ್ದಂತೆ ನಟಿಸಿದೆನು. ಅಂತಹ ಭಯಾನಕ ವಿಷಯಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬಾರದೆಂದೂ, ಸೆರೆಮನೆಯಲ್ಲಿ ಪ್ರೇತಗಳು ಸುತ್ತಾಡುವುದು ಸುಳ್ಳೆಂದೂ ನಾನು ಆಕೆಗೆ ತಿಳಿಸಿದೆನು. ಅವುಗಳ ವ್ಯವಹಾರಕ್ಷೇತ್ರದ ಎಲ್ಲೆಗಟ್ಟು ಸೆರೆಮನೆಯ ಆಚೆ ಇರುತ್ತದೆಂಬುದೇ ನನ್ನ ನಂಬಿಕೆ. ಅದೆಲ್ಲ ತಮಾಷೆಯೆಂದು ನನ್ನ ಗೆಳತಿ ಅಂದುಕೊಂಡಿರಲಿಲ್ಲ; ಅಲ್ಲದೆ ನನ್ನ ಬಾಯನ್ನೇ ಕಟ್ಟಿದಳು. ಆ ಧ್ವನಿ ಕ್ರಮೇಣ ದೂರ ಸರಿದು, ಅಸ್ಪಷ್ಟವಾಗಿ, ಮಾಯವಾಯಿತು.

ಮಾರನೆಯ ರಾತ್ರಿಯೂ ಅದೇ ವಿಧವಾದ ಧ್ವನಿಯನ್ನು ಕೇಳಿ ನಾವು ಎಚ್ಚತ್ತೆವು. ಅದರಿಂದ ನಮಗೆ ಸಮಾಧಾನವಾಗಲಿಲ್ಲ. ಅದೇನಿರಬಹುದೆಂದು ರೇಖಿಸಲು ಪ್ರಯತ್ನಿಸಿದೆವು; ಆದರೆ ಜಯ ಲಭಿಸಲಿಲ್ಲ. ಮೂರಿರುಳು ಹಾಗೆಯೇ ಸರಿದುವು. ನಾಲ್ಕನೆಯ ರಾತ್ರಿ ಶಬ್ದ ಸನ್ನಿಹಿತವಾದುದಲ್ಲದೆ ಸ್ಪಷ್ಟವಾಗಿ ಕೇಳತೊಡಗಿತು. ನರಗಳನ್ನು ಬಿಗಿಯಾಗಿ ಅದುಮಿಕೊಂಡು ಕಾದೆವು. ಕೂಡಲೇ ಕಪ್ಪುಹೊದಪನ್ನು ಧರಿಸಿದ್ದ ವ್ಯಕ್ತಿಯೊಂದು ಕೋಣೆಯೊಂದರ ಮೂಲೆಯಲ್ಲಿ ತಿರುಗಿಕೊಳ್ಳುತ್ತಿದ್ದುದು ಕಾಣಿಸಿತು. ಕೆಲವು ಕ್ಷಣಗಳ ಕಾಲ ಅದೇನೆಂದು ಗುರುತಿಸಲಾಗಲಿಲ್ಲ. ಆ ವ್ಯಕ್ತಿ ಕಾವಲುಗಾತಿಯಾಗಿದ್ದಿರಬೇಕೆಂಬ ಅಂಶ ಅನಂತರ ಮಿಂಚಿ

ನಂತೆ ಹೊಳೆಯಿತು. ನಮ್ಮ ಸಂತೋಷಕ್ಕೆ ಪಾರವೇ ಇಲ್ಲದೆ ನಾವೆಲ್ಲರು ಕೂಗಿಕೊಂಡೆವು. ನಿಯಮಾನುಸಾರವಾಗಿ ಕಾಪಿನವಳು ಹೆಂಗಸರ ಸೆರೆಮನೆಯನ್ನೆಲ್ಲ ಸುತ್ತಬೇಕಾಗಿತ್ತು. ಆಕೆ ಸೋಮಾರಿಯಾಗಿದ್ದುದರಿಂದಲೂ, ರಾಜಕೀಯ ಖೈದಿಗಳ ಅಂಗಳಕ್ಕೆ ಹೋಗಬೇಕಾದ ಆವಶ್ಯಕತೆಯಿಲ್ಲವೆಂಬ ಅಭಿಪ್ರಾಯವುಳ್ಳವಳಾಗಿದ್ದುದರಿಂದಲೂ, ಆಕೆ ನಮ್ಮ ಕಡೆ ತಿರುಗದೆ, ಬೇರೆ ಕಡೆ ಮಾತ್ರ ಸುತ್ತುತ್ತಿದ್ದಳು. ಆಕೆಯ ನಡುವಿನಲ್ಲಿ ನೇತಾಡುತ್ತಿದ್ದ ಬೀಗದ ಕೈಗಳ ದೊಡ್ಡ ಗೊಂಚಲಿನಿಂದ ಝಣಝಣಧ್ವನಿ ಹೊರಹೊಮ್ಮುತ್ತಿತ್ತು.

ಮಾರನೆಯ ಬೆಳಗ್ಗೆ ಈ ವಿಷಯವನ್ನು ಇತರರಿಗೆ ತಿಳಿಸಿ, ಅವರನ್ನು ನಗಿಸಿ, ನಾವು ನಗೆಗೀಡಾಗಬೇಕೆಂದು ನಿರ್ಧರಿಸಿಕೊಂಡೆವು. ನಾವು ಕಥೆಯನ್ನಾರಂಭಿಸಿದ ಕೂಡಲೆ ಇತರರು ಒಬ್ಬರ ಮುಖವನ್ನೊಬ್ಬರು ಅರ್ಥಪೂರ್ಣವಾಗಿ ನೋಡಿಕೊಳ್ಳುತ್ತಿದ್ದರು. ಅವರ ಮುಖಭಂಗಿಯನ್ನರಿತು ನಾವು ಅವರನ್ನು ಮತ್ತೆ ಪ್ರಶ್ನಿಸಿದೆವು. ಪ್ರತಿಯೊಬ್ಬರೂ ಗಂಟೆಗಳ ಧ್ವನಿಯನ್ನು ಕೇಳಿಸಿಕೊಂಡಿದ್ದು, ಅದೆಲ್ಲ ಪ್ರೇತದ ಕ್ರಿಯೆಯೆಂದು ನಿರ್ಧರಿಸಿದ್ದುದಾಗಿಯೂ, ಆದರೆ ನಾವು ಭೀತರಾಗಬಹುದೆಂಬ ಅಂಜಿಕೆಯಿಂದ ಆ ಸಮಾಚಾರವನ್ನು ನಮಗೆ ಹೇಳಿರಲಿಲ್ಲವೆಂದೂ, ಅವರು ಹೇಳಿದರು.

ಆದರೆ ಜೈಲಿನಲ್ಲಿ ಸಂಭವಿಸುತ್ತಿದ್ದ ಪ್ರತಿಯೊಂದು ಘಟನೆಯೂ ಹಾಸ್ಯದ ಚಟಾಕಿಯಾಗಿರಲಿಲ್ಲ. ಎಳೆಯ ವಯಸ್ಸಿನ ಸ್ತ್ರೀ ಖೈದಿಗಳು ಅನುಭವಿಸುತ್ತಿದ್ದ ಕಾಟಗಳನ್ನು ನೋಡಿದರೆ ಯಾರಿಗಾದರು ರಕ್ತ ಕುದಿಯದಿರುತ್ತಿರಲಿಲ್ಲ. ಆದರೆ ನಾವು ಅವರಿಗೆ ಉಪಕಾರ ಮಾಡುವ ಸ್ಥಿತಿಯಲ್ಲಿರಲಿಲ್ಲ. ಕಾಪಿನವರಂತು ನೀಚಾಗ್ರಗಣ್ಯೆಯರು; ಒರಟು ಸ್ವಭಾವದವರು; ರಾಜಕೀಯ ಖೈದಿಗಳೆಂದರೆ ಅವರಿಗೆ ಅಣಕ. ಅವರು ನಮ್ಮೊಡನೆ ಒರಟುಒರಟಾಗಿ ಮಾತಾಡಿದಾಗ ಭಾವೋದ್ರಿಕ್ತರಾಗದೆ ಸಂಯಮಿಗಳಾಗಿರುವುದು ಕಷ್ಟವಾಗುತ್ತಿತ್ತು. ಅತ್ಯಲ್ಪಕಾರಣಗಳಿಗಾಗಿ ಬೇರೆ ಖೈದಿಗಳನ್ನವರು ಬಯ್ಯುತ್ತಿದ್ದುದನ್ನು ನೋಡುವುದಕ್ಕಾಗಲೀ ಕೇಳುವುದಕ್ಕಾಗಲೀ ಅಸಹ್ಯವಾಗುತ್ತಿತ್ತು.

ದಿನಗಳು ಮೆಲ್ಲಮೆಲ್ಲಗೆ ತೆವಳಿದುವು. ಹೇಮಂತಋತು ಬಂದು ಸರಿಯಿತು. ಕುಳಿಗಾಳಿಲದ ಹರಿತಕೊರೆತಗಳನ್ನು ಬಡಗಣವರು ಮಾತ್ರ ಬಲ್ಲರು. ಚಳಿಯಾಗಲಿ, ಕೊರೆಯುವ ಗಾಳಿಯಾಗಲಿ, ಕೋಣೆಯೊಳಗೆ ಪ್ರವೇಶಿಸದಂತೆ ತಡೆಯಲು ಬಾಗಿಲುಗಳಿರಲಿಲ್ಲ. ಕುಳಿರ್ಗಾಳಿ ಕಬ್ಬಿಣದ ಸರಳುಗಳಿಗೆ ಹೆದರುವಂತಿರಲಿಲ್ಲ. ಅನಂತರ ಮನೋಹರವಾದ ದಿನಗಳು ಬಂದು ಸರ್‍ರನೆ ಜಾರಿಹೋದುವು. ಗ್ರೀಷ್ಮಋತುವಿನ ಬಿರುಗಾಳಿ ಸುಡುಗಾಳಿಗಳಾರಂಭವಾದುವು. ಚಳಿಗಾಲಕ್ಕಿಂತ ಬೇಸಗೆಯ ಕಾಲ ಸಹಿಸಲು ಕಷ್ಟವಾಯಿತು. ಆದರೆ ಅದೂ ಕಳೆದು ಹೋಯಿತು. ವರ್ಷಋತುವನ್ನು ಸಂತೋಷದಿಂದ ಬರಮಾಡಿಕೊಂಡೆವು. ಚಳಿಗಾಲ ಮತ್ತೆ ಸಾರಿ ಬಂತು. ಡಿಸೆಂಬರ್ ತಿಂಗಳ ಕೊನೆಯಲ್ಲಿ ನಾನೂ, ಅಕ್ಕನೂ ಬಿಡುಗಡೆಹೊಂದಿದೆವು. ಕೆಲವು ಸಂಗಾತಿಯರು ನಮಗಿಂತ ಮೊದಲೇ ಹೊರಟುಹೋಗಿದ್ದರು, ಇನ್ನು ಕೆಲವರು ನಮ್ಮನ್ನು ಹಿಂಬಾಲಿಸಿದರು, ಮತ್ತೆ ಕೆಲವರನ್ನು ಹಿಂದೆಯೇ ಬಿಡಬೇಕಾಯಿತು. ಮನೆಗೆ ಹಿಂದಿರುಗುವ ಕಾತುರತೆ ಮಿಗಿಲಾಗಿದ್ದರೂ, ಅವರನ್ನು ಬಿಟ್ಟುಹೋಗಲು ತುಂಬಾ ವ್ಯಥೆಯಾಯಿತು.

ಜೈಲಿನ ಜೀವನ ಸುಖಮಯವಾಗಿಲ್ಲದಿದ್ದರು ಅದೊಂದು ಅಪೂರ್ವವಾದ ಅನುಭವ. ಸಮಾಜಕಂಟಕರೆಂದು ಪರಿಗಣಿತರಾಗಿದ್ದ ಖೈದಿಗಳ ಗೆಳೆತನವನ್ನು ಗಳಿಸುವ ಸದವಕಾಶ ಲಭಿಸಿದುದಕ್ಕಾಗಿ ನನಗೆ ಮಿತಿಮೀರಿದ ಸಂತೋಷ. ಆದರೆ ಪ್ರತಿನಿತ್ಯದ ವ್ಯಾಪಾರ ವ್ಯವಹಾರಗಳಲ್ಲಿ ನಮ್ಮ ಮುಂದೆ ಸುಳಿದಾಡುವ ಆದರ್ಶಮಾನವರಿಗಿಂತ ಅವರು ಉತ್ತಮರು. ಮನೆಗೆ ಹೋಗುವ ಸಂಭ್ರಮವೊಮ್ಮೆ, ಅನೇಕ ವರ್ಷಗಳ ಕಾಲ ಸೆರೆಮನೆಯಲ್ಲಿಯೇ ನರಳಬೇಕಾಗಿರುವ ಆ ಬಡಪ್ರಾಣಿಗಳ ಮೇಲಣ ಸಂಕಟವಿನ್ನೊಮ್ಮೆ ನನ್ನನ್ನು ಹಿಂಡಿದುವು. ಅವರು ಬಂಧನ ವಿಮುಕ್ತರಾದನಂತರ ಅವರ ಗತಿಯೇನು, ಅವರಿಗೆ ಮನೆಯೆಲ್ಲಿ, ನೆರಳೆಲ್ಲಿ, ಸಹಾಯಕರಾರು, ಹೊಸಬಾಳಿನ ಮಾರ್ಗದರ್ಶಕರಾರು? ಈ ಪ್ರಶ್ನೆಗಳು ನನ್ನನ್ನು ಸರ್ವದಾ ಕೊರೆಯುತ್ತಿದ್ದುವು. ಸೆರೆಮನೆಯಲ್ಲಿ ಕಲಿತಿದ್ದ ಯುಕ್ತಿಯೆ ಹೊಟ್ಟೆ ಹೊರೆದುಕೊಳ್ಳುವ ಸಾಧನವಾಗಿ, ಸಮಾ

ಜದ ಬಹಿಷ್ಕಾರಕ್ಕೆ ಗುರಿಯಾಗಿ, ಕಂಬದಿಂದ ಕಂಬಕ್ಕೆ ನೂಕಿಸಿಕೊಂಡು ಕಡೆಗೆ ನಿರಾಶೆಯ ಮಬ್ಬಿನಲ್ಲಿ ಮತ್ತೊಂದು ಅಕೃತ್ಯಕ್ಕೆ ಅವರು ಕೈಹಾಕುತ್ತಾರೆ. ಕ್ಷುಧಾಗ್ನಿ ದಹಿಸುತ್ತಿರುವಾಗ ದುಷ್ಕೃತ್ಯಾಚರಣೆ ಅನಿವಾರ್ಯವಾಗುತ್ತದೆ. ಅನಂತರ ಅವರು ಮತ್ತೊಮ್ಮೆ ಸೆರೆಮನೆಗೆ ಬಂದರೆ ತಮ್ಮ ಇಡೀ ಜೀವಮಾನವನ್ನು ಅಲ್ಲಿಯೇ ಕಳೆಯಬೇಕಾಗುವುದು.

ಘೋರಾಪರಾಧಕ್ಕಾಗಿ ಕಠಿಣಶಿಕ್ಷೆಗೊಳಗಾಗುತ್ತಿದ್ದ ಚಿಕ್ಕ ಹುಡುಗಿಯರ ಮತ್ತು ಕೊಲೆಪಾತಕಸ್ತ್ರೀಯರ ವಿಷಯವನ್ನೂ, ಪುನಃ ಪುನಃ ಶಿಕ್ಷೆಗೆ ಗುರಿಯಾಗುತ್ತಿದ್ದ ಇತರ ವ್ಯಕ್ತಿಗಳ ಭಯಾನಕ ಕಥೆಗಳನ್ನೂ, ಅನೇಕವೇಳೆ ವರ್ತಮಾನಪತ್ರಿಕೆಗಳಲ್ಲಿ ಓದುತ್ತಿದ್ದೆವು. ಅಂತಹ ಕೃತ್ಯಗಳ ಸಾಧ್ಯಾಸಾಧ್ಯತೆಯನ್ನು ಯೋಚಿಸಿದರೇನೇ ನಡುಕವುಂಟಾಗುತ್ತದೆ. ಹಿರಿಯರ ಅಕ್ಕರೆಯ ಮಡಲಿನಲ್ಲಿ ನಿರಾತಂಕವೂ, ಚಿಂತಾರಹಿತವೂ ಆದ ಬದುಕನ್ನು ಅನುಭವಿಸುವಾಗ ನಮಗೆ ಸೌಭಾಗ್ಯ ವಿಹೀನೆಯರಾದ ಸಹೋದರಿಯರ ಆಶೆನಿರಾಶೆಗಳು ಕಷ್ಟನಿಷ್ಠುರಗಳು ಗೊತ್ತಾಗುವುದಿಲ್ಲ. ಘೋರಾಪರಾಧಗಳ ವಿಷಯವನ್ನು ಕೇಳಿದಾಗ ಇಲ್ಲವೆ ಓದಿದಾಗ ನೈತಿಕಕೋಪವನ್ನು ಪ್ರದರ್ಶಿಸಲು ನಾವು ಸದಾ ಸಿದ್ಧರಾಗಿರುತ್ತೇವೆ. ಅಂತಹ ಕೃತ್ಯಗಳಿಗೆ ಪ್ರೇರಕವಾದ ಸನ್ನಿವೇಶಗಳ ಪ್ರಭಾವಕ್ಕೆ ನಾವೂ ಗುರಿಯಾದಲ್ಲಿ, ನಾವು ಹೇಗೆ ವರ್ತಿಸುತ್ತಿದ್ದೆವೆಂಬುದೇ ವಿಸ್ಮಯಜನಕವಾದ ಸಂಗತಿಯಾಗಿದೆ. ನಾವಿದ್ದುದು ತರುಣಿಯರ ಸೆರೆಮನೆಯಲ್ಲಿ; ಅಲ್ಲಿದ್ದ ಸ್ತ್ರೀ ಖೈದಿಗಳೆಲ್ಲರು ಇಪ್ಪತ್ತೊಂದು ವರ್ಷಗಳ ಕೆಳಗಿನವರು. ಸಮಾಜಕ್ಕೆ ಕಂಟಕಪ್ರಾಯರೆಂದು ಬಹಿಷ್ಕೃತರಾಗಿದ್ದ ಆ ತರುಣಿಯರ ಬುದ್ಧಿಸೂಕ್ಷ್ಮತೆ, ಅವರ ಮಾಧುರ್ಯಪೂರ್ಣವಾದ ಶುದ್ಧಪ್ರೇಮ, ಅವರ ಗ್ರಹಣಶಕ್ತಿಗಳನ್ನು ನೋಡಿದರೆ ಯಾರಿಗಾದರೂ ವಿಸ್ಮಯವಾಗದಿರದು. ಸ್ನೇಹಕರುಣೆಗಳಿಂದ ಅವರೊಡನೆ ವ್ಯವಹರಿಸಿದ್ದರೆ, ಅವರು ನಿಷ್ಕಾಪಟ್ಯಪ್ರಾಮಾಣಿಕತೆಗಳಿಂದ ವರ್ತಿಸುತ್ತಿದ್ದರು. ಕ್ರೋಧಾನ್ವಿತನಾದ ಮಾನವ ಸ್ವಾಭಾವಿಕವಾಗಿ ಹಿಂಸ್ರಜಂತುವಾಗುತ್ತಾನೆ. ಸುಸಂಸ್ಕೃತರಾದವರನ್ನು ಅದು ಜಗ್ಗಿಸದು. ಆ ಮುಗ್ಧೆಯರ ಬಾಳು ಕ್ರೂರವಾಗಿತ್ತು. ಯಾವುದೋ ವಿಷನಿಮಿಷದಲ್ಲಿ ಅವರು ಹಿಂಸಾಬುದ್ಧಿಗೆ

ದಾಸರಾದರು. ಆ ಅಲ್ಪಾಪರಾಧಕ್ಕಾಗಿ ಆ ಬಡಪ್ರಾಣಿಗಳು ದೀರ್ಘ ಕಾಲದ ಕಾರಾಗೃಹವಾಸಕ್ಕೆ ಗುರಿಯಾಗಿದ್ದರು. ಆ ಹೊಸಗೆಳತಿಯರನ್ನು ಬಿಟ್ಟುಹೋಗುವುದು ಕಷ್ಟವಾಯಿತು. ದಾರಿದ್ರ್ಯದ ದವಡೆಯಲ್ಲಿ ಅವರು ನರಳುತ್ತಿದ್ದಾಗ ಸುಖಸೌಲಭ್ಯಗಳ ಮಡಿಲಿನಲ್ಲಿ ನಾವು ಮೆರೆಯುವುದು ಅವಮಾನವೆನಿಸಿತು.

ಬಚೂಲಿಯೆಂಬ ಹುಡುಗಿಯನ್ನು ಕಂಡರೆ ನನಗೆ ತುಂಬಾ ಆಸೆ. ಮಾಂಸಖಂಡಗಳಿಂದ ತುಂಬಿಕೊಂಡಿದ್ದ ಮೈ, ಕಂದುಬಣ್ಣದ ಕಣ್ಣುಗಳುಳ್ಳ, ಸುಮಾರು ಐದು ಅಡಿ ಎತ್ತರದ ಮಟ್ಟತರವಾದ ಆಕೃತಿಯ, ಭುಜದ ಕೆಳಗೆ ಜೋಲುಬಿದ್ದ ಜಡೆಗಟ್ಟಿದ ಒರಟುಗುರುಳಿನ ಸುಲಕ್ಷಣೆಯಾಕೆ. ಒರಟುಬಟ್ಟೆಯನ್ನುಟ್ಟು ಹೊರಗಣ ತೋರಿಕೆಗೆ ಚೊಕ್ಕಟವಾಗಿ ಕಾಣದಿದ್ದರೂ, ಭಯಂಕರಾಕೃತಿಯ ಸೆರೆಮನೆಯ ಗೋಡೆಯನ್ನೊರಗಿ ಹೊಲಿಗೆಯನ್ನು ಕಲಿಯುತ್ತಿದ್ದ ಆಕೆಯನ್ನು ನಾನು ಮೊಟ್ಟ ಮೊದಲು ನೋಡಿದಾಗ ಮುದ್ದುಬಾಲೆಯಂತೆ ಕಂಡಳು. ಆಕೆಯ ಮುಖದ ಮೇಲೆ ಸದಾ ಮುಗ್ಧಭಾವ ತಾಂಡವವಾಡುತ್ತಿತ್ತು. ಆ ಸಣ್ಣ ಮಗು ಎಂತಹ ಮಹಾಪರಾಧವನ್ನೆಸಗಿರಬಹುದು, ಅವಳು ಸೆರೆಮನೆಯಲ್ಲಿ ಏತಕ್ಕಿರಬಹುದೆಂದು ನಾನು ವಿಸ್ಮಯಗೊಂಡೆನು. ನಾನವಳ ಬಳಿ ಹೋದಾಗ ಸಂಗೀತವನ್ನು ಹೇಳಿಕೊಳ್ಳುತ್ತಿದ್ದಳು. ಉತ್ತರ ಭರತ ಖಂಡದ ಬೆಟ್ಟಗುಡ್ಡಗಳಿಂದ ಕೇಳಿಬರುವ ದುಃಖಪೂರ್ಣವಾದ ಸಂಗೀತವದು.

"ನಿನ್ನ ಹೆಸರೇನು" ಎಂದು ನಾನವಳನ್ನು ಕೇಳಿದೆನು. ಸಂಶಯಪೂರ್ವಕವಾಗಿ ನನ್ನ ಕಡೆ ನೋಡುತ್ತಾ "ನೀವು ಯಾರು, ನೀವು ಹೇಗೆ ಇಲ್ಲಿಗೆ ಬಂದಿರಿ" ಎಂದು ವಿನಮ್ರಭಾವದಿಂದ ನನ್ನನ್ನವಳು ಪ್ರಶ್ನಿಸಿದಳು.

"ನಾನೂ ಖೈದಿಯೆ."

ಅವಳು ಫಕ್ಕನೆ ನಕ್ಕಳು. "ನೀವು ಇಲ್ಲಿರುವುದೇಕೆ" ಎಂದು ಮತ್ತೆ ಪ್ರಶ್ನಿಸಿದಳು. ನಾನು ರಾಜಕೀಯ ಖೈದಿಯೆಂದು ಅವಳಿಗೆ ತಿಳಿಸಿದೆನು. ನಾನು ಹೇಳಿದುದರ ಭಾವವನ್ನು ಅರಿತುಕೊಂಡವಳಂತೆ

ತಲೆಯುಲ್ಲಾಡಿಸಿದರೂ, ಅವಳದನ್ನು ಸರಿಯಾಗಿ ಗ್ರಹಿಸಲಿಲ್ಲವೆಂದೇ ನನ್ನ ಭಾವನೆ. ಆದರೆ ನನ್ನ ಸೌಹಾರ್ದಭಾವ ಆಕೆಗೆ ವ್ಯಕ್ತವಾಯಿತು. ನಾನು ಜೈಲಿನ ಅಧಿಕಾರಿಯಲ್ಲವೆಂದರಿತು ತನ್ನ ಹೆಸರನ್ನು ನನಗೆ ಹೇಳಿದಳು. ಸುಂದರ ಮಂದಹಾಸದೊಡಗೂಡಿದ ಲಜ್ಜೆಯಿಂದ ಅವಳು ನನ್ನ ಕಡೆ ನೋಡಿದಳು. ಮತ್ತು ನಿಟ್ಟುಸಿರುಬಿಡುತ್ತಾ ತನ್ನ ಕೆಲಸವನ್ನು ಪುನಃ ಆರಂಭಿಸಿದಳು. " ಬಚೂಲಿ, ನೀನು ಇಲ್ಲಿರುವುದೇಕೆ " ಎಂದು ನಾನು ಪ್ರಶ್ನಿಸಿದೆನು. ಸುವಿಶಾಲ ನಿಷ್ಕಪಟ ನೇತ್ರದ್ವಯಗಳಿಂದ ನನ್ನ ಕಣ್ಣುಗಳನ್ನು ದೃಷ್ಟಿಸುತ್ತಾ " ಹತ್ಯಾಚಾರಕ್ಕಾಗಿ " ಎಂದವಳು ನುಡಿದಳು.

" ವಧೆಗಾಗಿಯೇ '' ಎಂದು ನಾನು ಅಪನಂಬಿಕೆಯಿಂದ ಕೇಳಿದೆನು. ಅದನ್ನು ಪುಷ್ಟೀಕರಿಸಲು ತನ್ನ ತಲೆಯನ್ನಲ್ಲಾಡಿಸಿದಳು. ನನ್ನ ಕಣ್ಣುಕಿವಿಗಳನ್ನು ನಂಬಲಾರದೆ ಹೋದೆನು, ಈ ಹುಡುಗಿ ತನ್ನ ಬಾಲ್ಯದಲ್ಲಿಯೇ ಕೊಲೆಗೆಲಸ ಮಾಡಿರಲಾರಳು, ಅದರಲ್ಲೇನೋ ಮಿಥ್ಯೆಯಿರಬೇಕೆಂದುಕೊಂಡೆನು.

" ಬಚೂಲಿ, ನೀನು ಕೊಲೆಮಾಡಿದುದೇಕೆ ? ನೀನು ತುಂಬಾ ಚಿಕ್ಕವಳು. ಬಹುಶಃ ನೀನು ಏನುಮಾಡುತ್ತಿದ್ದೆಯೆಂಬುದೂ ನಿನಗೆ ಗೊತ್ತಿದ್ದಿರಲಾರದು. ಅದೊಂದು ಆಕಸ್ಮಿಕ ಘಟನೆಯಾಗಿರಬಹುದಲ್ಲವೆ"? ಎಂದು ನಾನು ಕೇಳಿದೆನು. ಆಕೆ ನಿಧಾನವಾಗಿ ತನ್ನ ತಲೆಯನ್ನು ಮೇಲೆತ್ತಿ ನನ್ನ ಕಡೆ ಪುನಃ ನೋಡಿದಳು. ಅವಳ ಕಣ್ಣುಗಳಿಂದ ನಗು ಮಾಯವಾಗಿತ್ತು. ಆಕೆಯ ಮೃದುಸ್ವಭಾವವನ್ನು ಕರ್ಕಶಗೊಳಿಸಿದ್ದ ಭಯಮಾತ್ಸರ್ಯಗಳು ಆ ಸ್ಥಳವನ್ನು ಮತ್ತೆ ಆಕ್ರಮಿಸಿದ್ದುವು.

ಅವಳ ಕಥೆ ಇದು:—" ನಾನು ಕೊಂದ ವ್ಯಕ್ತಿಯೇ ನನ್ನ ಪತಿ. ಅವರು ಬಹಳ ನಿಷ್ಕರುಣಿ; ಆಗಾಗ್ಗೆ ನನ್ನನ್ನು ಹೊಡೆದು ಕೋಣೆಗೆ ಕೂಡಿ ಬೀಗಹಾಕುತ್ತಿದ್ದರು. ಮನೆಯಲ್ಲಿ ತಿನ್ನಲು ಸಾಕಾದಷ್ಟಿತ್ತು. ಆದರೂ ಅವರು ನನ್ನ ಪಾಲನ್ನು ಕಸಿದುಕೊಂಡು ನನಗೆ ಸ್ವಲ್ಪ ಮಾತ್ರ ಬಿಡುತ್ತಿದ್ದರು. ತಾವು ತಿಂದು ಮಿಕ್ಕದನ್ನು ಹೊರಗೆ ಬಿಸಾಡುತ್ತಿದ್ದರು. ನಾನಂತು ಅನೇಕವೇಳೆ ಉಪವಾಸವ್ರತ ಹಿಡಿಯಬೇಕಾಗಿತ್ತು. ನಾನ

ವರನ್ನು ಸಂತೋಷಪಡಿಸಲು ಎಷ್ಟು ಶ್ರಮವಹಿಸಿದರೂ, ನನಗೆ ವೇದನೆಯನ್ನುಂಟುಮಾಡಲು ಆಗಾಗ್ಗೆ ಹೊಸ ಹೊಸ ಹಾದಿಗಳನ್ನು ಹುಡುಕುತ್ತಿದ್ದರು. ಅವರು ನೋಡುವುದಕ್ಕೆ ಚೆನ್ನಾಗಿದ್ದರು. ನಾನವರನ್ನು ಮದುವೆಯಾದಾಗ ನನಗೆ ಹದಿನಾಲ್ಕು ವರ್ಷಗಳು ಮಾತ್ರ. ಅವರನ್ನು ಕಂಡರೆ ನನಗೆ ತುಂಬಾ ಇಷ್ಟವಿತ್ತು. ನನ್ನ ತಾಯಿ ನನಗೆ ಹೇಳಿಕೊಟ್ಟಿದ್ದಂತೆ, ಅವರ ಊಟೋಪಚಾರಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ, ಅನನ್ಯಭಕ್ತಿಯಿಂದ ಅವರನ್ನು ಸೇವಿಸುತ್ತೇನೆ, ಅವರಿಗೆ ಸದಾ ವಿಧೇಯಳಾಗಿರುತ್ತೇನೆ, ಅವರಿಗೆ ಒಳ್ಳೆಯ ಹೆಂಡತಿಯಾಗಿರುತ್ತೇನೆ, ಎಂದು ದೇವ ದೇವತೆಗಳ ಮುಂದೆ ಪ್ರತಿಜ್ಞೆಮಾಡಿದೆನು. ಆದರೆ ವಿವಾಹಾನಂತರ ಕೆಲವು ತಿಂಗಳುಗಳಲ್ಲಿಯೇ ಅವರು ಕ್ರೂರರೀತಿಯಲ್ಲಿ ವರ್ತಿಸಲಾರಂಭಿಸಿದರು. ನಾನು ಅವರನ್ನು ಕಂಡಾಗ ಅಂಜಿಕೊಳ್ಳುವುದಾದರೆ ಅವರಿಗೆ ಮಿತಿಮೀರಿದ ಆನಂದ. ನನ್ನನ್ನು ಪೀಡಿಸುವುದು ತಮಗೆ ಹಿತವೆಂದು ನನಗೆ ತಿಳಿಸಿದರು. ಅದನ್ನು ಕೇಳಿ ಬಹಳ ಭೀತಳಾದೆನು. ಸುಮಾರು ಒಂದುವರ್ಷದವರೆಗೆ ಅವರು ಕೊಡುತ್ತಿದ್ದ ಕಾಟಗಳನ್ನೆಲ್ಲ ಅನುಭವಿಸಿದೆನು. ನನ್ನ ತಾಯಿತಂದೆಯವರ ಬಳಿಗೆ ಹೋಗಲು ಅವಕಾಶಕೊಡುವಂತೆ ಪ್ರಾರ್ಥಿಸಿಕೊಂಡರೂ ಅವರು ನನ್ನನ್ನು ಬಿಡಲಿಲ್ಲ. ದಿನಗಳುರುಳಿದಂತೆಲ್ಲ ದುಃಖ ವೆಗ್ಗಳಿಸಿತು. ಅವರ ಹೃದಯವನ್ನಾಕರ್ಷಿಸಲು ನಾನು ಪಟ್ಟ ಶ್ರಮವೆಲ್ಲ ನಿಷ್ಫಲವಾಯಿತು. ಅವರು ಧರಿಸಿಕೊಳ್ಳಬೇಕೆಂದಿದ್ದ ಅಂಗಿಯೊಂದನ್ನು ಒಗೆಯದಿದ್ದುದಕ್ಕಾಗಿ ಒಂದು ದಿನ ಬೆಳಗ್ಗೆ ನನ್ನನ್ನು ಚೆನ್ನಾಗಿ ಬಾರಿಸಿ, ಕಂಬನಿಯ ಕಡಲಿಗೆ ತಳ್ಳಿ ಮನೆಯಿಂದ ಹೊರಟುಹೋದರು. ಕೆಲವು ಗಂಟೆಗಳನಂತರ ಮಿರುಗುತ್ತಿದ್ದ ರೇಷ್ಮೆಯ ಕೆಂಪು ಕೈಚೌಕವೊಂದನ್ನು ಕೊರಳಿನ ಸುತ್ತ ಸುತ್ತಿಕೊಂಡು, ಹೊಸಬಟ್ಟೆಗಳನ್ನುಟ್ಟುಕೊಂಡು ಹಿಂದಿರುಗಿದರು. ಅವರು ಮನೆಯೊಳಗೆ ಬಂದಾಗ ನಾನು ಬೇರೆ ಕೆಲಸದಲ್ಲಿ ಮಗ್ನಳಾಗಿದ್ದುದರಿಂದ ಅವರ ಕಡೆ ನೋಡಲಿಲ್ಲ. "ಲೇ ದಡ್ಡೀ ಬಾರೇ ಇಲ್ಲಿ" ಎಂದು ನನ್ನನ್ನು ಕೂಗಿ "ನನ್ನ ಹೊಸ ಉಡುಪುಗಳನ್ನು ನೀನು ಮೆಚ್ಚುತ್ತೀಯಲ್ಲವೆ; ಅವು ನನಗೆ ಒಪ್ಪುತ್ತವಲ್ಲವೇ ?" ಎಂದು

ಕೇಳಿದರು. ನಾನು ಮಾರುತ್ತರವೀಯದೆ, ನನ್ನ ಕೊಳಕು ಚಿಂದಿಯ ಅರಿವೆಗಳನ್ನು ನೋಡಿಕೊಂಡೆನು. "ಮಾತಾಡುತ್ತೀಯೋ, ಇಲ್ಲವೊ? ನನ್ನ ಹೊಸಬಟ್ಟೆಗಳನ್ನು ನೋಡಿ ನಿನಗೆ ಹೊಟ್ಟೆಯುರಿಯೇನು?" ಎಂದವರು ಗಟ್ಟಿಯಾಗಿ ಕೂಗಿಕೊಂಡರು. ನಾನಿನ್ನೂ ಸುಮ್ಮನಿದ್ದೆನು. ನನ್ನ ಮುಂಗೈಯನ್ನು ಬಿಗಿಯಾಗಿ ಹಿಡಿದುಕೊಂಡು ನನ್ನ ಕೆನ್ನೆಗೆ ಬಲವಾಗಿ ಎರಡು ಸಾರಿ ಬಿಗಿದರು. ನನಗೆ ದಾರುಣವಾದ ವೇದನೆ ಯುಂಟಾಯಿತು. "ನನ್ನನ್ನೀಗಲೇ ಕಳುಹಿಸಿಬಿಡಿ. ಇಲ್ಲದಿದ್ದರೆ ಎಂದಾದರೊಂದು ದಿನ ನಿಮ್ಮನ್ನು ಕೊಂದುಬಿಡುತ್ತೇನೆ. ನೀವು ದಿನ ವೆಲ್ಲ ತಿಂದುಂಡು ಸುಖವಾಗಿದ್ದು ನಾನು ಹಸಿವಿನಿಂದ ನರಳುತ್ತಿರುವಾಗ ನಿಮ್ಮ ಬಟ್ಟೆಗಳನ್ನು ನೋಡಿ ಮೆಚ್ಚಬೇಕೇ. ಏಕೆ ಮೆಚ್ಚಬೇಕು...... ....?" ಎಂದು ನಾನು ಕಿರಿಚಿಕೊಂಡೆನು. ನಾನು ಮಾತು ಮುಗಿಸುವ ದಕ್ಕೆ ಮುಂಚೆಯೇ ಬೆತ್ತವನ್ನು ತೆಗೆದುಕೊಂಡು, ನನ್ನನ್ನು ಬಾಯಿಗೆ ಬಂದಂತೆ ಬಯ್ಯುತ್ತಾ, ಶಪಿಸುತ್ತಾ, ನಾನು ಮೂರ್ಛೆಹೋಗುವ ತನಕ ಮರಳಿ ಮರಳಿ ಹೊಡೆದು, ಒಂದು ಕಡೆ ನೂಕಿಬಿಟ್ಟರು. "ನಿನಗೆ ಶಕ್ತಿ ಯಿದ್ದರೆ ಈಗ ನನ್ನನ್ನು ಕೊಲ್ಲಲು ನೀನು ಯತ್ನಿಸಬಹುದು" ಎಂದು ಹೇಳಿ, ತಮ್ಮ ಕೈಯಲ್ಲಿದ್ದ ಬೆತ್ತವನ್ನು ಬಿಸಾಡಿ ಸದ್ದಿಲ್ಲದೆ ನೆಲದಮೇಲು ರುಳಿದರು. ಕೂಡಲೆ ನಿದ್ರೆಯೂ ಬಂದಿತು. ಸ್ವಲ್ಪ ಹೊತ್ತಾದನಂತರ ನಾನು ಕೈಕಾಲುಗಳನ್ನಲ್ಲಾಡಿಸಲು ಪ್ರಯತ್ನಪಟ್ಟೆನು. ಮೈಯೆಲ್ಲಾ ನೋಯುತ್ತಿದ್ದುದರಿಂದ ಅಲ್ಲಿಯೇ ಪುನಃ ಹೊರಳಿದೆನು. ಇನ್ನೊಂದು ಮೂಲೆಯಲ್ಲಿ ನನ್ನ ಗಂಡನು ಗಾಢನಿದ್ರಾಸಕ್ತನಾಗಿದ್ದುದು ಕೂಡಲೇ ನನ್ನ ಕಣ್ಣಿಗೆ ಬಿದ್ದಿತು. ಹೊಸ ಉಡುಪುಗಳನ್ನು ಬಿಚ್ಚಿ ಗೂಟಕ್ಕೆ ನೇತುಹಾಕಿದ್ದರು. ಅವರ ಕೊರಳಿನ ಸುತ್ತ ರೇಷ್ಮೆಯ ಕೈಚೌಕ ಮಾತ್ರ ಇನ್ನೂ ಥಳಥಳಿಸುತ್ತಿತ್ತು. ಅವರ ಕಡೆ ನೋಡಿದ ಕೂಡಲೆ ನನ್ನಲ್ಲಿ ದ್ವೇಷ ಹೆಡೆಯೆತ್ತಿತು. ಅವರನ್ನು ಕೊಂದು ಮುಗಿಸಿಬಿಡ ಬೇಕೆಂಬ ಕ್ರೂರಭಾವನೆ ಒಡನೆಯೇ ನನ್ನನ್ನಾವರಿಸಿತು. ಆದರೆ ಕೊಲ್ಲು ವುದು ಹೇಗೆ? ಸುತ್ತಲೂ ನೋಡಿದೆನು. ಅವರನ್ನು ಹೊಡೆಯಲು ಸಾಧನ ಯಾವುದೂ ಸಿಗಲಿಲ್ಲ. ಅಷ್ಟರಲ್ಲಿ ಥಳಥಳನೆ ಹೊಳೆಯುತ್ತಿದ್ದ

ಕೆಂಪು ಚೌಕದ ಕಡೆಗೆ ನನ್ನ ದೃಷ್ಟಿ ಹರಿಯಿತು. ಮುಂದೇನಾಯಿತೋ ನನಗೆ ಅರಿಯದು. ನನ್ನ ಪತಿಯ ಕಂಠದಸುತ್ತ ಕೈಚೌಕವನ್ನು ಬಲವಾಗಿ ಬಿಗಿದೆನು. ಮೊದಲನೆಯ ಬಿಗಿತಕ್ಕೆ ಅವರು ಎಚ್ಚರಗೊಂಡು ಬಿಡಿಸಿಕೊಳ್ಳಲು ಪೇಚಾಡಿದರು, ಕೂಗಿಕೊಳ್ಳಲು ಯತ್ನಿಸಿದರು. ಆದರೆ ಅವರ ಕಣ್ಣಾಲಿ ತೇಲಿಹೋಗಿ ಮೆತ್ತಗಾಗುವ ತನಕ ಚೌಕವನ್ನು ಬಿಗಿಯುತ್ತಿದ್ದೆನು. ಕಡೆಗೆ ನನಗೇ ತಡೆಯಲಾರದಷ್ಟು ದಣಿವಾಗಿ ಬಿಚ್ಚಿಬಿಟ್ಟೆನು. ನನ್ನ ಗಂಡ ಮೇಲೆದ್ದು ನನ್ನನ್ನು ಮತ್ತೆ ಹೊಡೆಯಬಹುದೆಂಬ ಗಾಬರಿಯಿಂದ ಹಿಂದಕ್ಕೆ ಸರಿದೆನು. ಆದರೆ ಅವರು ಏಳಲೇ ಇಲ್ಲ. ಅತ್ತಿತ್ತ ಚಲಿಸಲು ಶಕ್ತಿಯಿಲ್ಲದೆ ನಾನು ಅವರ ಮಗ್ಗುಲಲ್ಲೇ ಹೊರಳಿದೆನು. ಮಾರನೆಯ ಬೆಳಗ್ಗೆ ಯಾವನೋ ಒಬ್ಬನು ನಮ್ಮ ಪರಿಸ್ಥಿತಿಯನ್ನು ನೋಡಿದನು. ನನ್ನ ಗಂಡ ಸತ್ತುಬಿದ್ದಿದ್ದ ಸಮಾಚಾರವನ್ನು ಪೋಲೀಸಿಗೆ ಮುಟ್ಟಿಸಿದನು. ಸುತ್ತಮುತ್ತ ಹರಿದಾಡಿ ನೆರೆಹೊರೆಯವರನ್ನೆಲ್ಲ ಕರೆತಂದನು. ನಾನು ಮತ್ತಷ್ಟು ಗಾಬರಿಗೊಂಡೆನು. ನಾನು ನಿಜವಾಗಿಯೂ ನನ್ನ ಗಂಡನನ್ನು ಕೊಂದಿದ್ದೆನೇ ಎಂದು ನಂಬಲು ಕಷ್ಟವಾಯಿತು.

"ಪೋಲೀಸಿನವನು ಬರುವತನಕ ಯಾರೂ ನನ್ನ ಹತ್ತಿರ ಬರಲಿಲ್ಲ. ಅನಂತರ ನನ್ನನ್ನು ಸೆರೆಮನೆಗೆ ಕರೆದೊಯ್ದರು. ವಿಚಾರಣೆಯಾದನಂತರ ನನ್ನನ್ನು ಇಲ್ಲಿಗೆ ಕಳುಹಿಸಿದರು. ಈಗ ಇಲ್ಲಿದ್ದೇನೆ. ನಾನು ಚಿಕ್ಕವಳಾದುದರಿಂದ ನನ್ನನ್ನು ಗಲ್ಲಿಗೇರಿಸಲಿಲ್ಲ. ಸಾಮಾನ್ಯವಾಗಿ ಹೆಂಗಸರಿಗೆ ಮರಣದಂಡನೆಯಿಲ್ಲ. ನನಗೆ ಜೀವಾವಧಿ ಶಿಕ್ಷೆ ದೊರಕಿತು. ಇದೇ ನನ್ನ ಕಥೆ."

ನಾನು ಬಚೂಲಿಯ ಮುಖವನ್ನೇ ನೋಡುತ್ತಾ, ಮಂತ್ರಮುಗ್ಧಳಾಗಿದ್ದವಳಂತೆ ಈ ವಿಚಿತ್ರಕರವಾದ ಕಥೆಯನ್ನು ಕೇಳಿದೆನು. ಅವಳು ಹೇಳಿದುದನ್ನೆಲ್ಲ ನಂಬುವುದು ಕಷ್ಟವಾಯಿತು. ಆದರೆ ಆಕೆ ಕಾರಾಗೃಹವಾಸವನ್ನನುಭವಿಸುತ್ತಿದ್ದುದರಿಂದ ಅದು ನಿಜವೆನ್ನಿಸಿತು.

ಯಾವುದೋ ಕಥೆ-ಹೇಳಿದವಳಂತೆ ಬಚೂಲಿ ಪುನಃ ತನ್ನ ಕೆಲಸವನ್ನಾರಂಭಿಸಿದಳು. ತನ್ನ ಕಥೆ ನನ್ನ ಮೇಲುಂಟುಮಾಡಿದ ಪರಿ-

ಣಾಮವನ್ನು ಅರಿತುಕೊಳ್ಳಲು ಆಕೆಗೆ ಕುತೂಹಲವಿರಲಿಲ್ಲ. ವಿಧಿ ನಿಯಮಾನುಸಾರವಾಗಿ ಆ ಕ್ರೂರಘಟನೆ ನಡೆದುಹೋಗಿತ್ತೆಂದು ಆ ಮುಗ್ಧೆ ನಂಬಿಕೊಂಡಿದ್ದಳು. ಕಾರಾಗೃಹವಾಸ ತನ್ನ ಪಾಲಿಗೆ ಬಂದ ಭಾಗ್ಯ, ತಮ್ಮ ತಮ್ಮ ಪಾಲಿಗೆ ಬಂದುದನ್ನು ಯಾರೂ ತಪ್ಪಿಸಿಕೊಳ್ಳಲಾರರು, ಅದಕ್ಕಾಗಿ ವ್ಯಥೆಪಡುವುದೇಕೆಂದು ಆಕೆ ಅಂದುಕೊಂಡಿದ್ದಳು.

ಅವಳ ಬಾಡಿದ ಮುಖದ ಕಡೆ ನೋಡಿದಾಗ ನನ್ನ ಹೃದಯ ಅವಳಿಗಾಗಿ ಪರಿತಪಿಸುತ್ತಿತ್ತು. ಅವಳಿನ್ನೂ ಚಿಕ್ಕವಳು, ಅಪರಿಣತ ಮುಗ್ಧೆ, ಅವಳು ಹೇಗೆ ಕಂಡರೂ ಅಪರಾಧಿಯಂತೆ ಮಾತ್ರ ಕಾಣುತ್ತಿರಲಿಲ್ಲ. ವಿಧಿ ಆ ಬಾಲೆಯ ಮೇಲೆ ತನ್ನ ಕ್ರೂರಾಸ್ತ್ರವನ್ನೆಸೆಯಬಹುದೇ? ಅವಳ ಬಾಳು ಮುಂದೇನಾಗಬಹುದು? ಇಂತಹವರನ್ನು ನ್ಯಾಯಾಸ್ಥಾನ ಭಿನ್ನರೀತಿಯಿಂದ ವಿಚಾರಿಸಿ, ಬೇರೆ ಶಿಕ್ಷೆಯನ್ನು ಕೊಡಬಾರದೇ? ಜೀವಾವಧಿ ಶಿಕ್ಷೆಯೆಂದರೆ ತಮಾಷೆಯಲ್ಲ. ಇಪ್ಪತ್ತು ವರ್ಷಗಳು ಕಾರಾಗೃಹದ ಕ್ರೂರಕುಡ್ಯಗಳ ಮಧ್ಯೆ ಇರುವುದೇನು ಸಾಮಾನ್ಯವಲ್ಲ. ಬಾಹ್ಯಪ್ರಪಂಚದ ಅರಿವೇ ಇಲ್ಲದೆ, ತನ್ನ ಸುತ್ತಮುತ್ತಣ ಅಪರಾಧಿಗಳನ್ನುಳಿದು ಬೇರೆ ವ್ಯಕ್ತಿಗಳನ್ನೇ ಕಾಣದೆ, ಅಸಭ್ಯ ಭಾಷೆಯನ್ನಲ್ಲದೆ ನಾಗರಿಕವಾಣಿಯನ್ನೇ ಕೇಳದೆ, ಭಗವತ್ಸೃಷ್ಟಿಯ ನೀಚ-ಪ್ರಾಣಿಗಳನ್ನುಳಿದು ಬೇರೆ ಪ್ರಾಣಿಯನ್ನೇ ನೋಡದೆ, ದ್ವಾದಶ ವರ್ಷಗಳು ಹೊರಗೆ ಕಲಿಯಲಾರದಷ್ಟು ಕುಯುಕ್ತಿಯನ್ನು ಕಲಿತುಕೊಂಡು, ಇಡೀ ಬಾಳನ್ನೇ ಅಲ್ಲಿ ಸವೆಸಬೇಕು. ಬಚೂಲಿಗೆ ಹದಿನೈದು ವರ್ಷವಯಸ್ಸು. ಸೆರೆಮನೆಯನ್ನು ಬಿಡುವಹೊತ್ತಿಗೆ ಆಕೆ ಮೂವತ್ತೈದು ವರ್ಷದವಳಾಗುತ್ತಾಳೆ. ತನ್ನ ಇಡೀ ತಾರುಣ್ಯವನ್ನೆಲ್ಲ ಕಾರಾಗೃಹದಲ್ಲಿ ಕಳೆದ ಮೇಲೆ, ಅವಳ ದೈಹಿಕ ಸೌಂದರ್ಯಸೂಕ್ಷ್ಮತೆಗಳು ಹಾಗೆಯೇ ಅಚ್ಚಳಿಯದೆ ನಿಲ್ಲುವುವೇ? ಅಥವಾ ಸೋದರ ಮಾನವರ ತಿರಸ್ಕಾರಕ್ಕೆ ಪಕ್ಕಾಗದ ಉಗ್ರಾಪರಾಧಿನಿಯಾಗಿ, ಮತ್ತೆ ತನ್ನನ್ನು ಸೆರೆಮನೆಗೆ ತಪ್ಪದೆ ಕರೆದೊಯ್ಯುವಂತಹ ನೀಚವಾದ ಬದುಕನ್ನು ಬಾಳುವಳೇ?

ನಾನು ಆಲೋಚನೆಗಳ ಗೊಂದಲವಲ್ಲಿ ಸಿಕ್ಕಿದೆನು. ಬಚೂಲಿಯ

ತಲೆಯನ್ನು ತಟ್ಟಿ "ನಾವು ಪುನಃ ಭೇಟಿಯಾಗೋಣ, ಬಚೂಲಿ ನೀನು ಚೆನ್ನಾಗಿ ಕೆಲಸಮಾಡಿ ಶಿಕ್ಷೆಯ ಅವಧಿಯನ್ನು ಇಳಿಸಿಕೊಂಡು ಜಾಗ್ರತೆ ಸೆರೆಮನೆಯ ಹೊರಗೆ ಬಂದು ಬಿಡು" ಎಂದು ಹೇಳಿದೆನು. ಮಲ್ಲಿಗೆಯ ಮುಗುಳ್ನಗೆ ಆಕೆಯ ಮುಖದ ಮೇಲೆ ಮಿಂಚಿತು. "ಅಹುದು. ನಿಜ. ನಾನು ತುಂಟಳಾಗದೆ ಕಷ್ಟಪಟ್ಟು ಕೆಲಸಮಾಡಿದರೆ ನಾನು ಬಹಳ ಜಾಗ್ರತೆ ಹೊರಗೆ ಹೋಗಬಹುದೆಂದೂ, ನಿಯಮಿತಾವಧಿ ಪೂರ್ಣವಾಗುವವರೆಗೆ ಇರಬೇಕಿಲ್ಲವೆಂದೂ, ಎಲ್ಲರೂ ಹೇಳುತ್ತಾರೆ. ನನ್ನ ಬಿಡುಗಡೆಯಾದ ಕೂಡಲೇ ನನ್ನ ತಂದೆತಾಯಿಯರ ಹತ್ತಿರ ಹೋಗುತ್ತೇನೆ. ತವರುಮನೆ ಎಷ್ಟು ಮನೋಹರವಾಗಿರುತ್ತದೆ! ನಮ್ಮ ಮನೆ ಬೆಟ್ಟಗಳ ನಡುವೆ ಇದೆ. ಬೆಟ್ಟಗಳೆಂದರೆ ನನಗೆ ತುಂಬ ಇಷ್ಟ ಎಂದವಳು ಹೇಳಿದಳು. ದೀರ್ಘಾವಧಿಯ ಕಾರಾಗೃಹವಾಸ ಆಕೆಯ ಧೈರ್ಯೋತ್ಸಾಹಗಳನ್ನು ಮೊಟಕು ಮಾಡಲಾರದೆಂಬ ನಂಬಿಕೆ ಯಿಂದಲೂ, ವ್ಯಥೆಯಿಂದಲೂ ನಾನು ಸೆರೆಮನೆಯ ಹೊರಗೆ ನಡೆದೆನು. ಆ ಬೆಟ್ಟದ ಹಸುಳೆಗೆ ಹೂಮರತಂಬೆಲರುಗಳೇ ಒಡನಾಡಿಗಳು. ಸೆರೆ ಮನೆಯ ವಾಸವನ್ನನುಭವಿಸಿದವಳಿಗೆ ಹಸುರು ಬಯಲಾಗಲೀ, ಬೇಸ ಗೆಯ ಬಿರುಬೇಗೆಯಾಗಲೀ ಎಚ್ಚರಮುಟ್ಟಗೆ ಹಿಡಿಸುವುವೋಗೊತ್ತಿಲ್ಲ. ಈ ಸಂದೇಹಗಳು ಒಂದಾದಮೇಲೊಂದು ನನ್ನ ಮೇಲೆ ಧಾಳಿ ನಡೆಯಿ ಸಿದುವು. ತನಗೊದಗಿದ್ದ ವಿಪತ್ತಿನಲ್ಲಿಯೂ ಆಕೆ ತೃಪ್ತಳಾಗಿದ್ದಂತೆ ಕಂಡುಬಂದಳು. ಆಕೆಯ ಆತ್ಮಶಕ್ತಿಯನ್ನು ಮೆಚ್ಚದಿರಲಾಗಲಿಲ್ಲ.

ನಾನು ಮತ್ತೊಂದು ಸಾರಿ ಆಕೆಯ ಕಡೆ ತಿರುಗಿನೋಡಿದೆನು. ಆಕೆ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ಪುಟ್ಟ ಬಚೂಲಿಯೊಡನೆ ಆ ಸೆರೆಮನೆಯಲ್ಲಿ ಒಂದು ವರ್ಷ ಕಳೆದಿದ್ದೆನು. ಹೊರಗಣ ಪ್ರಪಂಚಕ್ಕೆ ಹೋಗಲು ಬಹಳ ದಿನಗಳಿಂದ ಕಾದುಕೊಂಡಿದ್ದೆನು. ಆದರೆ ಆ ಸುದಿನ ಸಾರಿಬಂದಾಗ ನಾನು ತುಂಬಾ ಅಸುಖಿಯಾದೆನು. ಅವಳೊಡನೆ ಮಾತುಕತೆಯಾಡುತ್ತಾ, ಬೆಟ್ಟದ ಹಾಡುಗಳನ್ನು ಕೇಳುತ್ತಾ ಕಾಲ ಕಳೆಯುತ್ತಿದ್ದುದೇ ಒಂದು ಸುಯೋಗ. ಆದರೆ ಮಿಂಚುಗಣ್ಣುಗಳ ಬಚೂಲಿ ನನ್ನೊಡನೆ ಬರುವಂತಿರಲಿಲ್ಲ. ಅವಳಿಂದ ಅಗಲಿಹೋಗುವ

ಯೋಚನೆ ಹೃದಯವಿದ್ರಾವಕವಾಗಿತ್ತು. ಕೊನೆಯದಿನ ಗೆಳತಿಯರನ್ನೆಲ್ಲ ಭೇಟಿಮಾಡಿ ಅವರಿಂದ ಬೀಳ್ಕೊಂಡೆನು. ಅಷ್ಟರಲ್ಲಿಯೇ ನಾನು ಬಾಹುದ್ವಯಗಳ ನಡುವೆ ಸೆರೆಯಾಗಿದ್ದೆನು. ತಿರುಗಿ ನೋಡಲು ಅವಳು ಒಲವಿನ ಬಚೂಲಿಯಾಗಿದ್ದಳು. ನನ್ನ ಮಗ್ಗುಲಲ್ಲಿ ಅವಳು ಸದ್ದಿಲ್ಲದೆ ನಿಂತಿದ್ದಳು. ಆಕೆಯ ಅಗಲವಾದ ಕಣ್ಣುಗಳಲ್ಲಿ ನೀರು ಮುಕ್ಕಳಿಸುತ್ತಿತ್ತು. ನಾನು ಆಕೆಯನ್ನು ಬಿಗಿಯಾಗಿ ಅಪ್ಪಿಕೊಂಡೆನು. ಆಕೆಯ ದೃಷ್ಟಿಯನ್ನು ನನ್ನ ಕಡೆಗೆ ತಿರುಗಿಸಿ, " ನೀನು ಧೈರ್ಯದಿಂದಿರಬೇಕು, ಬಚೂಲಿ. ಸದಾ ಸಂತೋಷವಾಗಿರಲು ಯತ್ನಿಸು. ನೀನು ಹೊರಗೆ ಬಂದಾಗ ನನಗೆ ತಿಳಿಸಬೇಕು. ಬೇಕಾದರೆ ನೀನು ನನ್ನ ಬಳಿ ಬರಬಹುದು " ಎಂದು ಹೇಳಿದೆನು. " ವಿಶಾಲವಾದ ಬಾಹ್ಯ ಪ್ರಪಂಚದಲ್ಲಿ ನೀನು ನನ್ನನ್ನು ಮರೆಯುವುದಿಲ್ಲವೆಂದು ನಂಬಿಕೊಂಡಿರಲೇ? ಹೊರಗಣ ಪ್ರಪಂಚಕ್ಕೆ ಹೋದಮೇಲೆ ಯಾರೂ ಖೈದಿಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಇಷ್ಟಪಡುವುದಿಲ್ಲವೆಂದು ಎಲ್ಲರೂ ಹೇಳುತ್ತಾರೆ " ಎಂದು ಅವಳು ದೈನ್ಯದಿಂದ ನುಡಿದಳು. ಅವಳ ತಲೆಯನ್ನು ತಟ್ಟಿ ಎಂದಿಗೂ ಹಾಗಾಗಲಾರದೆಂದು ದೃಢಪಡಿಸಿದೆನು. ಈ ಘಟನೆ ಸಂಭವಿಸಿ ಅನೇಕ ವರ್ಷಗಳಾಗಿದ್ದರೂ ನನ್ನ ನೆನಪು ಇನ್ನೂ ಹಸುರಾಗಿದೆ; ಈ ಹಸುರು ಎಂದೆಂದಿಗೂ ಬಾಡುವಂತಿಲ್ಲ.

ನನ್ನ ಜತೆಯಲ್ಲಿಯೇ ಬಿಡುಗಡೆಹೊಂದಿದ ಕೆಲವು ಗೆಳತಿಯರೊಡನೆ ನಾನು ಸೆರೆಮನೆಯ ಅಂಗಳಗಳನ್ನೂ, ಬಾಗಿಲುಗಳನ್ನೂ ಹಾದು ಹೋಗುತ್ತಿದ್ದಾಗ, ಬಚೂಲಿ ಮತ್ತು ಆಕೆಯ ಸಮವಯಸ್ಸಿನ ಇತರ ತರುಣಿಯರು ಸೆರೆಮನೆಯಲ್ಲಿ ತಮ್ಮ ಜೀವನವನ್ನು ವ್ಯರ್ಥಗೊಳಿಸದಿರಲಿ, ಕರುಣಾಮಯಿಯಾದ ವಿಧಿಯು ಅವರನ್ನು ಅವರ ಮನೆಗಳಿಗೆ ಹಿಂದಿರುಗಿಸಲಿ, ಅವರ ಬದುಕಿನಲ್ಲಿ ಶಾಂತಿಸುಖಗಳು ನೆಲೆಗೊಳ್ಳುವಂತೆ ಕರುಣಿಸಲಿ ಎಂದು ನಾನು ದೇವರಲ್ಲಿ ಮೊರೆಯಿಟ್ಟೆನು.

ನೂರಾರು ಯೌವನವತಿಯರಾದ ಖೈದಿಗಳನ್ನು ತನ್ನ ದವಡೆಯಲ್ಲಿಟ್ಟುಕೊಂಡಿದ್ದ, ಒಂದು ವರ್ಷ ನನ್ನ ಮನೆಯಾಗಿದ್ದ, ಘೋರವೂ ಅಸಹ್ಯವೂ ಆದ ಗೋಡೆಗಳಿಂದ ಸುತ್ತುವರಿದಿದ್ದ ಆ ಸೆರೆಮನೆಯನ್ನು

ಕಟ್ಟ ಕಡೆಯ ಸಾರಿ ನೋಡಲು ಹಿಂದಿರುಗಿದೆನು. ದೊಡ್ಡ ಬಾಗಿಲು ಗಳು ನಿದಾನವಾಗಿ ಮುಚ್ಚಿಕೊಳ್ಳುತ್ತಿದ್ದುವು. ನಮ್ಮನ್ನು ಬೀಳ್ಕೊಳ್ಳಲು ಅಂಗಳದಲ್ಲಿ ನೆರೆದಿದ್ದ ತರುಣಿಯರನ್ನು ಆ ಬಾಗಿಲುಗಳ ಮೂಲಕ ಇನ್ನೂ ನೋಡುತ್ತಿದ್ದೆನು. ನಾನು ಕೈಗಳನ್ನು ಅಲ್ಲಾಡಿಸಿದೆನು. ನನ್ನ ಕಣ್ಣುಗಳಿಂದ ಉಕ್ಕಿಬರುತ್ತಿದ್ದ ಬಿಸಿನೀರನ್ನು ನನ್ನ ಜತೆಗಾತಿಯರು ಕಾಣದಿರಲೆಂದು ಜಾಗ್ರತೆ ನನ್ನ ತಲೆಯನ್ನು ತಿರುಗಿಸಿದೆನು. ಆದರೆ ಅವರು ನನ್ನನ್ನು ನೋಡಿಯೇಬಿಟ್ಟರು. ಸೆರೆಮನೆಯ ಅಗಲಿಕೆಯಿಂದ ಎದೆ ಬಿರಿಯುತ್ತಿದೆಯೇ ಎಂದು ಅವರು ಹಾಸ್ಯಧ್ವನಿಯಲ್ಲಿ ನನ್ನನ್ನು ಪ್ರಶ್ನಿಸಿದರು. ನಾನು ಯಾರಿಗಾಗಿ ಕಣ್ಣೀರು ಸುರಿಸುತ್ತಿದ್ದೆನೆಂಬುದು ಅವರಿಗೆ ಗೊತ್ತಿರಲಿಲ್ಲ. ನಾನೂ, ನನ್ನ ಅಕ್ಕನೂ ಅರಿತಿದ್ದಂತೆ ಆ ತರುಣಿಯರ ವಿಷಯವನ್ನವರು ಅರಿತುಕೆಂಡಿರಲಿಲ್ಲ. ಅವರು ಆ ತರುಣಿಯರಿಂದ ದೂರವಾಗುತ್ತಿದ್ದರು ಮತ್ತು ಅವರ ಭಾವನಾತರಂಗ ಗಳನ್ನರಿತಿರಲಿಲ್ಲ. ಸೆರೆಮನೆಯಿಂದ ಬಿಡುಗಡೆಯಾದುದಕ್ಕಾಗಿ ನಾನು ಕಣ್ಣೀರು ಸುರಿಸುತ್ತಿರಲಿಲ್ಲ. ನಮಗಾರಿಗೂ ಸೆರೆಮನೆ ಗುಲಾಬಿಗಳ ಸುಪ್ಪತ್ತಿಗೆಯಾಗಿರಲಿಲ್ಲ. ಮೌಢ್ಯದ ಪಂಕದಲ್ಲಿ ಮುಳುಗಿದ್ದಾಗ, ದುಃಖ ಸಾಗರದಲ್ಲಿ ತೇಲುತ್ತಿದ್ದಾಗ ಎಸಗಿದ ಅಪರಾಧಗಳಿಗಾಗಿ ದೀರ್ಘಾವಧಿ ಶಿಕ್ಷೆಯನ್ನನುಭವಿಸುತ್ತಿದ್ದ ಮತ್ತು ದಾರಿದ್ರ್ಯನಿರ್ಲಕ್ಷ್ಯಗಳ ಹಿಡಿತಕ್ಕೆ ಸಿಕ್ಕದಿದ್ದರೆ ನೀಚಕೃತ್ಯಗಳ ಕ್ರೂರಮಾಯಾಜಾಲಕ್ಕೆ ಬೀಳದಿರುತ್ತಿದ್ದ, ಆ ಎಳಹರೆಯದ ಅನಾಥತರುಣಿಯರಿಗಾಗಿ ನನ್ನ ಕಂಬನಿಯ ಹೊನಲ ಕಾಣಿಕೆ. ಮಾನವ ಪ್ರೇಮದ ನಿಧಿಯಾಗಿದ್ದ, ಮುದ್ದು ಹಸುಳೆತನದ ನೆಲೆಯಾಗಿದ್ದ ಆ ಬಡ ಪ್ರಾಣಿಗಳಿಗಾಗಿ ನನ್ನ ಎದೆ ಕರಗಿ ನೀರಾಯಿತು, ಬಿಸಿನೆತ್ತರು ಚಿಮ್ಮಿತು. ಅವರಿಂದ ದೂರವಾಗಲು ಮನವೊಪ್ಪಲಿಲ್ಲ. ನನಗೆ ಸುಸ್ವಾಗತವನ್ನು ಬಯಸಲು ಕಾದುಕೊಂಡಿದ್ದ ನನ್ನ ಪ್ರೀತಿ ಪಾತ್ರರಾದ ಬಂಧುಮಿತ್ರರನ್ನು ಸಂಧಿಸಲು ಮನೆಗೆ ಹಿಂತಿರುಗುತ್ತಿದ್ದೆನು. —ಆದರೆ ಅವರ ವಿಷಯವಾಗಿ ಮನಸ್ಸು ತವಕಪಡುತ್ತಿತ್ತು. ಅವರ ಸ್ಮರಣೆಯೇ ಭಯಾನಕವಾಗಿದೆ!

ಮುಂಬಗಲ ಖಗದುಲಿಯು ನಟ್ಟಿರುಳ ಮಿಣ್ಮಿಂಚ
ಕದ್ದೊಯ್ದು ಬೊಂಬೆಗಳ ಕೈಗೆಯ್ವೆ ನಿನಗಾಗಿ;
ಚೈತ್ರವನದೈಸಿರಿಯು ಸಾಗರದ ನೀಲಿಮೆಯು
ತಂದೊಟ್ಟೆಯರಮನೆಯ ನಿರ್ಮಿಪೆನು ನಮಗಾಗಿ.

—ಆರ್. ಎಲ್. ಸ್ಟಿವನ್‌ಸನ್

ನಾವು ಲಕ್ನೋನಗರದಲ್ಲಿ ಬಿಡುಗಡೆಹೊಂದಲಿಲ್ಲ. ಸೆರೆಮನೆಯ ಮೇಲ್ವಿಚಾರಕಳ ಮೆಯ್ಗಾವಲಿನಲ್ಲಿ ಅಲಹಾಬಾದಿಗೆ ಹಿಂದಿರುಗಿದೆವು. ಒಂದು ವರ್ಷಾನಂತರ ಮರುಭೂಮಿಯಂತಿದ್ದ ನಮ್ಮ ಮನೆಗೆ ಹಿಂದಿರು ಗಿದೆವು. ಕಮಲಳು ರೋಗಗ್ರಸ್ತೆಯಾಗಿ ಕಲ್ಕತ್ತೆಯಲ್ಲಿದ್ದಳು. ತಾಯಿ ಅವಳ ಜೊತೆಯಲ್ಲಿದ್ದರು. ನಮ್ಮ ಬಿಡುಗಡೆಯ ವಿಷಯ ಯಾರಿಗೂ ಗೊತ್ತಿರಲಿಲ್ಲ. ಆನಂದಭವನಕ್ಕೆ ಬೀಗಹಾಕಿತ್ತು. ಸುದ್ದಿ ಮಿಂಚಿ ನಂತೆ ಹರಡಿತು. ನಿಲ್ದಾಣದಿಂದ ಬರುತ್ತಿದ್ದಾಗ ಯಾರೋ ನಮ್ಮನ್ನು ಗುರುತಿಸಿ, ನಮ್ಮ ಬಿಡುಗಡೆಯ ಸುದ್ದಿಯನ್ನು ಹರಡಿದರು. ಒಂದೆರಡು ಗಂಟೆಗಳಲ್ಲಿಯೇ ನೆಂಟರಿಷ್ಟರು ನಮ್ಮ ಮನೆಯಲ್ಲಿ ಗುಂಪು ಕೂಡಿದರು. ಕಾರಾಗೃಹವಾಸದ ಅನುಭವದ ವಿಷಯವಾಗಿ ಪ್ರಶ್ನೆಗಳ ಸುರಿಮಳೆ ಯಾಯಿತು. ಶಾಂತಮಯವಾದ ವಾತಾವರಣದಲ್ಲಿದ್ದ ನಮಗೆ ಗಲಿ ಬಿಲಿಯ ಹೊಸ ವಾತಾವರಣ ಕೂಡಲೇ ನಮಗೆ ಹಿಡಿಸಲಿಲ್ಲ. ನಾನಂತು ಅಷ್ಟು ದೊಡ್ಡ ಸಮೂಹವನ್ನು ನೋಡಿ ಗಾಬರಿಗೊಂಡೆನು.

ಸ್ವರೂಪ ಮತ್ತು ನಾನು ಇಬ್ಬರೂ ಅಲಹಾಬಾದಿನಲ್ಲಿ ಕೆಲವು ದಿನಗಳಿದ್ದು ಕಲ್ಕತ್ತಾ ನಗರಕ್ಕೆ ಹೋದೆವು. ಕಮಲಳು ಗುಣಹೊಂದಿ ಮನೆಗೆ ಹಿಂದಿರುಗಲು ಬಯಸಿದಳು. ಅಲ್ಲಿ ಒಂದುವಾರವಿದ್ದು ಎಲ್ಲರೂ ಒಟ್ಟಿಗೆ ಅಲಹಾಬಾದಿಗೆ ಹಿಂದಿರುಗಿದೆವು.

ಸ್ವರೂಪಳು ಸೆರೆಮನೆಗೆ ಹೋಗುವುದಕ್ಕೆ ಮುಂಚೆ ತನ್ನ ಮೂವರು ಚಿಕ್ಕ ಹೆಣ್ಣು ಮಕ್ಕಳನ್ನು ಪೂನಾದ ಬೋರ್ಡಿಂಗ್ ಸ್ಕೂಲಿಗೆ ಸೇರಿಸಿ ದ್ದಳು. ಚಿಕ್ಕವಳು ಮೂರುವರ್ಷದ ಮಗು. ತನ್ನ ಮಕ್ಕಳನ್ನು ನೋಡಿ ಬಹಳ ದಿನಗಳಾಗಿದ್ದುದರಿಂದ ಅವಳು ಅವರನ್ನು ನೋಡಲು

ಹಾತೊರೆಯುತ್ತಿದ್ದಳು. ಶಾಲೆ ಆಕೆಯ ಗೆಳೆಯರದು. ಇಂದಿರಾ ಸಹ ಅಲ್ಲಿ ವಿದ್ಯಾರ್ಥಿನಿಯಾಗಿದ್ದಳು. ನಾನು ಸೆರೆಮನೆಯಲ್ಲಿದ್ದಾಗ ಮಲೇರಿಯಾ ಜ್ವರದ ಕಾಟದಿಂದ ತೇದುಹೋಗಿದ್ದೆನು. ಸ್ಥಳಾಂತರದಿಂದ ನನ್ನ ದೇಹಸ್ಥಿತಿ ಉತ್ತಮಗೊಳ್ಳಬಹುದೆಂದು ತಾಯಿಯವರು ಆಲೋಚಿಸಿ, ನಾನೂ ಸ್ವರೂಪಳ ಜತೆಯಲ್ಲಿ ಬೊಂಬಾಯಿ ಮತ್ತು ಪೂನಾ ನಗರಗಳಿಗೆ ಹೋಗುವುದೊಳ್ಳೆಯದೆಂದು ಸಲಹೆಯಿತ್ತರು. ಆ ಸಲಹೆಯನ್ನು ಅತ್ಯಾನಂದದಿಂದ ಸ್ವಾಗತಿಸಿದೆನು. ನಾವು ನೇರವಾಗಿ ಪೂನಾ ನಗರಕ್ಕೆ ಹೋದೆವು. ಅಲ್ಲಿ ಕೆಲವು ದಿನಗಳಿದ್ದು ಮುಕ್ಕಳೊಡನೆ ಮುಂಬಯಿ ನಗರಕ್ಕೆ ಹೋದೆವು. ನಾವು ಪೂನಾದಲ್ಲಿದ್ದಾಗ ಗಾಂಧಿಜೀಯವರನ್ನು ಅನೇಕ ವೇಳೆ ಯರವಾಡ ಸೆರೆಮನೆಯಲ್ಲಿ ಭೇಟಿಮಾಡುತ್ತಿದ್ದೆನು. ಯಾವಾಗಲೂ ಅವರು ನಮ್ಮನ್ನು ವಿಶೇಷವಾದ ಮಮತೆಯಿಂದ ಆದರಿಸುತ್ತಿದ್ದರು. ಸರ್ಕಾರದ ಅನುಮತಿ ದೊರೆತಾಗಲೆಲ್ಲ ಅವರೊಡನೆ ಕಾಲಕಳೆಯಲು ನಮಗೆ ತುಂಬಾ ಆನಂದವಾಗುತ್ತಿತ್ತು.

ನಾವೆಲ್ಲರೂ ಬೊಂಬಾಯಿಯಲ್ಲಿ ಒಂದು ವಾರವಿದ್ದೆವು. ನಾನು ರಾಜಾರವರನ್ನು ಸಂಧಿಸಿದುದು ಆಗಲೇ. ಔತಣಕೂಟವೊಂದರಲ್ಲಿ ಮೊಟ್ಟಮೊದಲು ಅವರನ್ನು ನೋಡಿದೆನು. ನಾನು ಕೊಠಡಿಯನ್ನು ಪ್ರವೇಶಿಸಿದ ಕೂಡಲೇ ಅವರು ನನ್ನ ಕಣ್ಣಿಗೆ ಬಿದ್ದರು. ಅವರು ಅಲ್ಲಿದ್ದ ವ್ಯಕ್ತಿಗಳಂತಿರದೆ ಭಿನ್ನ ಪ್ರಕೃತಿಯ ವ್ಯಕ್ತಿಯಂತೆ ಕಂಡರು. ಅವರಲ್ಲಿ ಕಂಡುಬಂದ ಸ್ವಾಭಿಮಾನ ದೊಡ್ಡಸ್ತಿಕೆಗಳು ನನಗೆ ಭ್ರಮೆಯನ್ನುಂಟುಮಾಡಿ, ನನ್ನ ಮನಸ್ಸಿನಲ್ಲಿ ಒಳಸಂಚು ನಡೆಯಿಸಿದವು. ಅವರು ಆ ಕೂಟದಲ್ಲಿದ್ದರೂ ಇಲ್ಲದವರಂತೆ ಕಂಡುಬಂದರು. ಸುಂದರವಾದ ಮೀರ್ಸ್‌ಚಾಮ್ (meerschaum) ಬತ್ತಿಯನ್ನು ಸೇದುತ್ತಾ ಒಂಟಿಯಾಗಿ ಸದ್ದಿಲ್ಲದೆ ಕುಳಿತಿದ್ದರು. ನಮ್ಮ ಪರಿಚಯವೇನೋ ಆಯಿತು. ಆದರೆ ಮಾತುಕತೆ ಮುಂದುವರಿಯಲಿಲ್ಲ. ನಾನು ಮೊಟ್ಟಮೊದಲು ಅಪರಿಚಯಸ್ಥರನ್ನು ಸಂಧಿಸಿದಾಗ ಸಾಮಾನ್ಯವಾಗಿ ಅವರ ಕೈಗಳ ಕಡೆಗೆ ನನ್ನ ಗಮನ ಹರಿಯುತ್ತದೆ; ಏಕೆಂದರೆ ಅವು ಆಯಾಯ ವ್ಯಕ್ತಿಯ ಗುಣಸ್ವಭಾವಗಳನ್ನು ವ್ಯಕ್ತಪಡಿಸುತ್ತವೆ. ಆದುದರಿಂದ

ಮೊದಲು ನನ್ನ ಲಕ್ಷ್ಯ ರಾಜಾರವರ ಕೈಗಳ ಕಡೆಗೆ ಹೋಯಿತು. ವಿಷಯಗ್ರಹಣ ಸಾಮರ್ಥ್ಯ ಕಲಾಪರಿಪೂರ್ಣತೆಗಳನ್ನು ವ್ಯಕ್ತಪಡಿಸುತ್ತಿದ್ದ ಆತನ ಕೈಗಳು ಆ ಅಸಾಮಾನ್ಯ ಶಾಂತಮೂರ್ತಿಯ ವಿಷಯವಾಗಿ ಅನೇಕ ಸಂಗತಿಗಳನ್ನು ತಿಳಿಸುವಂತೆ ತೋರಿದುವು. ರಾಜಾ ಮತ್ತು ಅವರ ಮತ್ತೊಬ್ಬ ಗೆಳೆಯ ಇಬ್ಬರೂ ಜುಹುವಿನಲ್ಲಿ ಏರ್ಪಡಿಸಿದ್ದ ಭೋಜನಕೂಟದಲ್ಲಿ ಅವರನ್ನು ಎರಡನೆಯ ಸಾರಿ ನೋಡಿದೆನು. ಈ ಸಾರಿ ರಾಜಾ ಮತ್ತು ನಾನು ಕೆಲವು ಪುಸ್ತಕಗಳ ಸಮುತಾವಾದದ ಸಂಬಂಧವಾಗಿ ವಿಶೇಷ ಮಾತುಕತೆ ನಡಸಿದೆವು. ಅಣ್ಣನ ಪುಸ್ತಕ ಭಂಡಾರದಿಂದ ಕೆಲವು ಪುಸ್ತಕಗಳನ್ನು ಕಳುಹಿಸುವುದಾಗಿ ರಾಜಾರವರಿಗೆ ವಾಗ್ದಾನವಿತ್ತೆನು. ಇದೇ ನಮ್ಮ ಗೆಳೆತನದ ವಸಂತಾರಂಭ. ಅಲ್ಲಿಂದೀಚೆಗೆ ಪರಸ್ಪರ ಪತ್ರವ್ಯವಹಾರಗಳು ಆರಂಭವಾದುವು.

ಮೇ ತಿಂಗಳಲ್ಲಿ ಸ್ವರೂಪಳೊಂದಿಗೆ ಮುಸ್ಸೋರಿಗೆ ಹೋಗಿ ಒಂದೆರಡು ತಿಂಗಳುಗಳಿದ್ದೆನು. ಆಗಸ್ಟ್ ತಿಂಗಳಲ್ಲಿ ಅಲ್ಲಿಂದ ಹಿಂದಿರುಗಿದ ನಂತರ, ಅಹಮ್ಮದಾಬಾದಿಗೆ ಹೋಗಿ ನನ್ನ ಗೆಳತಿ ಭಾರತಿಸರಭಾಯಿಯ ಜತೆಯಲ್ಲಿ ಕೆಲವು ದಿನಗಳಿರಬೇಕೆಂದು ನಿರ್ಧರಿಸಿದೆನು. ಭಾರತಿಯು ಕೂಡಲೇ ಆಕ್ಸ್‌ಫರ್ಡಿಗೆ ಹೊರಡುವವಳಾಗಿದ್ದಳು. ನಾನು ರಾಜಾ ಅವರಿಗೆ ಕಾಗದ ಬರೆದು ನನ್ನ ಕಾರ್ಯಕ್ರಮವನ್ನು ತಿಳಿಸಿ, ಅಹಮ್ಮದಾಬಾದಿನಲ್ಲಾಗಲೀ ಬೊಂಬಾಯಿಯಲ್ಲಾಗಲೀ ನಾವು ಸಂಧಿಸಬಹುದೆಂದು ಸೂಚಿಸಿದೆನು. ನಾನು ಮೊದಲೇ ಉದ್ದೇಶಿಸಿದ್ದಂತೆ ದೆಹಲಿಯ ಮೂಲಕ ಪ್ರಯಾಣಮಾಡದೆ ಬೊಂಬಾಯಿ ಮಾರ್ಗವಾಗಿಯೇ ಹೋಗಬೇಕೆಂದು ಅವರು ನನಗೆ ಕಾಗದ ಬರೆದರು. ಹಾಗೆಯೇ ಮಾಡಲೊಪ್ಪಿದೆನು. ಬೊಂಬಾಯಿಯಲ್ಲಿದ್ದ ನಮ್ಮ ಹಳೆಯ ಗೆಳೆಯರೊಬ್ಬರಿಗೆ ಅಕಸ್ಮಾತ್ತಾಗಿ ನನ್ನ ಕಾರ್ಯಕ್ರಮ ಗೊತ್ತಾಯಿತು. ಅವರು ಮತ್ತು ರಾಜಾ ಇಬ್ಬರೂ ನನ್ನನ್ನು ಸ್ವಾಗತಿಸಲು ನಿಲ್ದಾಣಕ್ಕೆ ಬಂದಿದ್ದರು. ಅವರಿಬ್ಬರಲ್ಲಿ ಯಾರಿಗೂ ಪರಸ್ಪರೋದ್ದೇಶ ಗೊತ್ತಿರಲಿಲ್ಲ. ಅವರಿಬ್ಬರನ್ನೂ ನಾನು ನೋಡಿದೆನು. ನನ್ನ ಗೆಳೆಯರು ರಾಜಾರವರನ್ನು ಆದರಿಸಿದ ರೀತಿ ನನಗೆ ಕಳವಳವನ್ನುಂಟುಮಾಡಿತು. ನಾನು

ಅವರಿಬ್ಬರ ಪರಸ್ಪರ ಪರಿಚಯ ಮಾಡಿಕೊಟ್ಟಾಗ, ನನ್ನ ಗೆಳೆಯರು ರಾಜಾರವರನ್ನು ಸಂಶಯಪೂರ್ವಕವಾಗಿ ನೋಡಿದರು. ಆದರೆ ಅವರು ರಾಜಾರವರನ್ನು ಪ್ರಶ್ನಿಸಲಿಲ್ಲ.

ಅಂದಿನಿಂದ ನಾನು ರಾಜಾರವರೊಡನೆ ಹೆಚ್ಚುಕಾಲ ಕಳೆಯುತ್ತಿದ್ದೆನು. ನಾವು ಆಗಾಗ್ಗೆ ಚಲನಚಿತ್ರ ಮಂದಿರಗಳಿಗೂ, ದೀರ್ಘ ಸಂಚಾರಕ್ಕೂ ಹೋಗುತ್ತಿದ್ದೆವು. ಆದರೆ ರಾಜಾರವರು ಸದಾ ಪ್ರತ್ಯೇಕ ಮನೋಭಾವನೆಯನ್ನು ತಾಳಿದ್ದರು. ಪ್ರತಿನಿತ್ಯವೂ ಅನೇಕ ಗಂಟೆಗಳ ಕಾಲ ನಾನು ಅವರೊಡನಿದ್ದುದು ಅವರಿಗೆ ಹಿತವಾಗಿದ್ದಿರಬೇಕೆಂದು ನಾನರಿತಿದ್ದರೂ, ನನ್ನ ಕಡೆ ಅವರು ಗಮನವಹಿಸುತ್ತಿದ್ದುದು ನನಗೆ ಗೊತ್ತಾಗಲಿಲ್ಲ. ತಮ್ಮ ಮನೋಭಾವಗಳ ಛಾಯೆಯನ್ನೇ ಅವರು ವ್ಯಕ್ತಗೊಳಿಸುತ್ತಿರಲಿಲ್ಲ. ನಾನು ಅವರನ್ನು ಪ್ರೀತಿಸುತ್ತಿದ್ದುದಕ್ಕೆ ಇದೂ ಒಂದು ಕಾರಣವಿರಬಹುದು.

ನಾನು ಮೊದಲಿಂದಲೂ ತುಂಬಾ ಎಚ್ಚರಿಕೆಯುಳ್ಳವಳು. ನನ್ನನ್ನು ಕಂಡರೆ ಜನರಿಗೆ ಇಷ್ಟವಿರಬೇಕೆಂದು ನಂಬಿಕೊಂಡಿದ್ದನು. ಅವರು ನನ್ನನ್ನು ಪ್ರೀತಿಸಲೇಬೇಕೆಂಬ ನಿರ್ಬಂಧವೇನೂ ಇರಲಿಲ್ಲ, ಆದರೆ ಅವರು ನನ್ನನ್ನು ದ್ವೇಷಿಸಲು ಯಾವ ಕಾರಣವೂ ಇರಲಿಲ್ಲ. ರಾಜಾರವರ ಔದಾಸೀನ್ಯ ನನಗೆ ಸಿಟ್ಟನ್ನುಂಟುಮಾಡಿತು. ಅವರು ತಮ್ಮ ಸುತ್ತ ನಿರ್ಮಿಸಿಕೊಂಡಿದ್ದ, ಬಾಹ್ಯವೇಷ್ಟನವನ್ನು ಛೇದಿಸುವ ಅವಸರದಲ್ಲಿ ನಾನು ದಾರಿ ಬಿಟ್ಟು ಹೋಗಿರಬಹುದು. ಪ್ರತಿನಿತ್ಯವೂ ಅನೇಕ ಗಂಟೆಗಳ ಕಾಲ ಜತೆಗೂಡಿರುತ್ತಿದ್ದೆವು; ಕೊನೆಮೊದಲಿಲ್ಲದೆ ಮಾತುಕಥೆ ಮಾಡುತ್ತಿದ್ದೆವು. ಆದರಿಂದ ಎಂದೂ ಬೇಸರವಾಗಲಿಲ್ಲ. ಒಂದು ದಿನ ಸಂಜೆ ನಾನು ಅಹಮ್ಮದಾಬಾದಿಗೆ ಹೊರಡುವ ಮುನ್ನ "ಎನ್ನೆದೆಯೊಲವೇ, ನಾವೆಂದು ಮದುವೆಯಾಗೋಣ" ಎಂದು ರಾಜಾರವರು ಹಠಾತ್ತನೆ ಪ್ರಶ್ನಿಸಿದರು. ಹಸುಳೆಯ ಶುದ್ಧಹೃದಯದ ಮನುಷ್ಯನು ಸರಳ ರೀತಿಯಲ್ಲಿ ಕೇಳಿದ ಸರಳಪ್ರಶ್ನೆಯದು.

ನಾನು ಚಕಿತಳಾದೆನು. ಆದರೂ ನವೀನ ರೀತಿಯ ಸೂಚನೆಯನ್ನು ಕೇಳಿ ಮೈನವಿರೆದ್ದಿತು. ಒಂದು ವಾರದಿಂದ ಒಬ್ಬರನ್ನೊಬ್ಬರು

ಪ್ರತಿನಿತ್ಯವೂ ನೋಡುತ್ತಿದ್ದೆವು. ಯಾರ ಬಾಯಿಂದಲೂ ಪ್ರೇಮಸೂಚಕವಾದ ಒಂದು ಪದವೂ ಬಂದಿರಲಿಲ್ಲ. ನನ್ನನ್ನು ಕಂಡರೆ ರಾಜಾರವರಿಗೆ ತುಂಬಾ ಇಷ್ಟವೆಂದು ನನಗೆ ಗೊತ್ತಿತ್ತು. ಆದರೆ ಅವರು ನನ್ನನ್ನು ಪ್ರೀತಿಸುತ್ತಿದ್ದಾರೆಂದು ನಾನು ಊಹಿಸಿರಲಿಲ್ಲ. ನನಗಂತು ಅವರನ್ನು ಎಷ್ಟೆಷ್ಟು ನೋಡಿದರೂ ಅಷ್ಟಷ್ಟು ಆಸೆ ಹೆಚ್ಚುತ್ತಿತ್ತು. ನನಗೆ ಗೊತ್ತಿದ್ದ ಇತರ ವ್ಯಕ್ತಿಗಳಿಗಿಂತ ತೀರಾ ಭಿನ್ನವಾದ ವ್ಯಕ್ತಿಯವರು. ಆದರೂ ನಾನವರನ್ನು ಪ್ರೀತಿಸುತ್ತಿದ್ದೆನೆಂದು ದೃಢವಾಗಿ ಹೇಳುವಂತಿರಲಿಲ್ಲ. ನನ್ನ ಈ ಭಾವನೆಯನ್ನೇ ಅವರಿಗೂ ತಿಳಿಸಿದೆನು. ನನಗೆ ಅರಿವಿಲ್ಲದೆಯೇ ಅವರನ್ನು ನಾನು ಪ್ರೀತಿಸುತ್ತಿದ್ದುದಾಗಿ ರಾಜಾ ತಮ್ಮ ಸಹಜವಾದ ಶಾಂತರೀತಿಯಲ್ಲಿ ಒತ್ತಿ ಹೇಳಿದರು; ನನ್ನ ಹೃದಯವನ್ನು ಬಿಚ್ಚಿ 'ಅಹುದು' ಎನ್ನಬಾರದೇ ಎಂದು ಕೇಳಿದರು. ನಾನೇನನ್ನೂ ಹೇಳಲಿಲ್ಲ. ಅಹಮ್ಮದಾಬಾದಿನಿಂದ ಹಿಂದಿರುಗಿ ಬರುವಾಗ ತಿಳಿಸುತ್ತೇನೆಂದು ಹೇಳಿದೆನು.

ನಾನು ರಾಜಾರವರಿಂದ ದೂರ ಇದ್ದಾಗ ಪ್ರತಿನಿತ್ಯವೂ ನನಗೆ ಪತ್ರಗಳು ಬರುತ್ತಿದ್ದುವು. ಅವು ಅತ್ಯಂತ ಸುಂದರವಾಗಿದ್ದುವು. ರಾಜಾರವರು ತುಂಬ ಹಟಗಾರರಾಗಿದ್ದರು. ನಾನು ಅವರನ್ನು ಅಗಲಿದ್ದಾಗ, ನನಗೆ ಅವರ ಮೇಲಣ ಮಮತೆಯು ಅನುಭವವಾಯಿತು; ಪುನಃ ಅವರ ಜತೆಯನ್ನು ಸೇರಬೇಕೆಂಬ ಕಾತರ ಹುಟ್ಟಲಾಯಿತು. ಕೂಡಲೇ ಬೊಂಬಾಯಿಗೆ ಹಿಂದಿರುಗಬೇಕೆಂಬ ಇಚ್ಛೆ ಪ್ರಬಲವಾದುದರಿಂದ ಅಹಮ್ಮದಾಬಾದಿನಲ್ಲಿ ಹೆಚ್ಚುದಿನಗಳು ಇರಲಾಗಲಿಲ್ಲ.

ನಾನು ಹಿಂದಿರುಗಿ ಬಂದು ರಾಜಾರವರನ್ನು ಮದುವೆಯಾಗುವೆನೆಂದು ತಿಳಿಸಿದೆನು. ನಾನು ಸ್ವಪ್ನಪ್ರಪಂಚದಲ್ಲಿ ವಿಹರಿಸುತ್ತಿದ್ದೆನು. ಆದರೆ ಒಂದು ದಿನ ಬೆಳಗ್ಗೆ ಪೆಟ್ಟು ತಿಂದವನಂತೆ ವಾಸ್ತವಿಕ ಪ್ರಪಂಚಕ್ಕಿಳಿದೆನು. ತಾಯಿಯವರು ಹಠಾತ್ತನೆ ರೋಗಗ್ರಸ್ತರಾದರೆಂದು ವರ್ತಮಾನ ಪತ್ರಿಕೆಗಳಲ್ಲಿ ಓದಿದೆನು. ರಾಜಾರವರಿಗೆ ಈ ವಿಷಯವನ್ನು ತಿಳಿಸಿ ಅಂದಿನ ರಾತ್ರಿಯೇ ಅಲಹಾಬಾದಿಗೆ ಹೋಗಲು ನಿಶ್ಚಯಿಸಿದೆನು. ಎಂದು, ಎಲ್ಲಿ, ಹೇಗೆ ಪುನಃ ಅವರನ್ನು ಸಂಧಿಸುತ್ತೇನೆಂಬ ಅರಿವೇ ಇಲ್ಲದೆ ಚಿಂತಾಕುಲ ಹೃದಯದಿಂದ ಅವರನ್ನು ಅಗಲಿದೆನು.

ತಾಯಿಯವರನ್ನು ಚಿಕಿತ್ಸೆಗಾಗಿ ಲಕ್ನೋನಗರಕ್ಕೆ ಕರೆದು ಕೊಂಡು ಹೋಗಿದ್ದರೆಂಬ ಸಮಾಚಾರ ನಾನು ಅಲಹಾಬಾದನ್ನು ತಲು ಪಿದ ಕೂಡಲೇ ಗೊತ್ತಾಯಿತು. ಸರಿ, ನಾನೂ ಅಲ್ಲಿಗೆ ಹೊರಟೆನು.

ಅಕ್ಕನನ್ನುಳಿದು ಇನ್ನಾರಿಗೂ ರಾಜಾರವರ ವಿಷಯವನ್ನು ತಿಳಿ ಸಿರಲಿಲ್ಲ. ಅವರನ್ನು ಮದುವೆಯಾಗಲು ವಾಗ್ದಾನಮಾಡಿದ್ದುದಾ ಗಿಯೂ ಆಕೆಗೆ ತಿಳಿಸಿದೆನು. ಜವಹರನು ಸೆರೆಮನೆಯಲ್ಲಿದ್ದುದ ರಿಂದಲೂ, ತಾಯಿಯವರು ಖಾಯಿಲೆಯಿಂದ ನರಳುತ್ತಿದ್ದುದರಿಂದಲೂ ಆ ಪ್ರಸ್ತಾಪವನ್ನೆತ್ತಕೂಡದೆಂದು ನಾನವಳಿಗೆ ಹೇಳಿದೆನು. ಆದುದ ರಿಂದ ಆ ರಹಸ್ಯ ನಮ್ಮಲ್ಲಿಯೇ ಉಳಿಯಿತು.

ತಾಯಿಯವರ ಪರಿಸ್ಥಿತಿ ಬಹಳ ವಿಷಮಿಸಿತು. ಅವರ ಪಕ್ಕದಲ್ಲಿ ಕುಳಿತು ಅನೇಕ ಹೃದಯವಿದ್ರಾವಕವಾದ ಹಗಲಿರುಳುಗಳನ್ನು ಕಳೆ ದೆವು. ಜವಹರನ ಎರಡುವರ್ಷಗಳ ಕಾರಾಗೃಹವಾಸದ ಅವಧಿ ಸನ್ನಿ ಹಿತವಾಗುತ್ತಿತ್ತು. ತಾಯಿಯವರ ಅವಸ್ಥೆ ಕಳವಳಕ್ಕೀಡಾಗಿದ್ದುದ ರಿಂದ ಗಡು ಮುಗಿಯಲು ಎರಡುಮೂರು ದಿನಗಳಿದ್ದಾಗಲೇ ಅವನು ಬಿಡುಗಡೆಹೊಂದಿದನು. ಕೆಲವು ದಿನಗಳನಂತರ ಅವರು ನಿದಾನವಾಗಿ ಗುಣಹೊಂದಿದರು.

ಆಗ ರಾಜಾರವರ ವಿಷಯವನ್ನು ಜವಹರನಿಗೆ ತಿಳಿಸುವಂತೆ ಸ್ವರೂಪಳಿಗೆ ಹೇಳಿದೆನು. ನನ್ನ ಇಷ್ಟದಂತೆ ವರ್ತಿಸಲು ಮೊದಲಿಂದಲೂ ನನಗೆ ಸರ್ವಸ್ವಾತಂತ್ರ್ಯವಿತ್ತು. ಆದುದರಿಂದ ನನ್ನ ಮನೆಯವರೊಡನೆ ಮುಂದಾಗಿ ಆಲೋಚಿಸದೆ ನನ್ನ ಪತಿಯನ್ನು ಆರಿಸಿಕೊಂಡುದು ನನಗೆ ಅಸ್ವಾಭಾವಿಕವಾಗಿ ಕಾಣಲಿಲ್ಲ. ತಾಯಿಯವರ, ಅಣ್ಣನ ಮತ್ತು ಅಕ್ಕನ ಇಷ್ಟಕ್ಕೆ ವಿರುದ್ಧವಾಗಿ ವರ್ತಿಸಲು ಇಲ್ಲವೇ ಅವರೊಡನೆ ಎದು ರಾಡಲು ನಾನು ಸ್ವಪ್ನದಲ್ಲಿಯೂ ಯೋಚಿಸಿರಲಿಲ್ಲ. ಸರಿಯಾದಕಾರಣ ವಿಲ್ಲದೆ ಅವರು ಅನುಚಿತವಾಗಿ ವರ್ತಿಸಲಾರರೆಂಬುದು ನನಗೆ ಗೊತ್ತಿತ್ತು. ಅವರಿಗೆ ರಾಜಾರವರ ವಿಷಯವೇ ಗೊತ್ತಿರಲಿಲ್ಲ. ನಾನು ಸುಖಸಂತೋಷಗಳಿಂದ ನಲಿಯಬೇಕೆಂಬುದೇ ಅವರ ಇಚ್ಛೆಯಾಗಿದ್ದು ದರಿಂದ ನನ್ನ ಒಪ್ಪಿಗೆಯನ್ನು ಅವರು ಅಲ್ಲಗಳೆಯಲಾರರೆಂಬ ಭರವಸೆ

ಯಿಂದಿದ್ದೆನು. ಅವರೆಲ್ಲರೂ ರಾಜಾರವರನ್ನು ಒಪ್ಪಿಕೊಳ್ಳಬಹುದೆಂಬ ವಿಶ್ವಾಸ ನನ್ನಲ್ಲಿ ಸಂಪೂರ್ಣವಾಗಿತ್ತು. ನಮ್ಮಿಬ್ಬರ ಪರಸ್ಪರ ಪರಿಚಯ ಸಾಕಾದಷ್ಟು ದೀರ್ಘಕಾಲವಾಗಿರಲಿಲ್ಲವೆಂಬುದಾಗಿ ಅವರು ಭಾವಿಸ ಬಹುದೆಂದು ಹೆದರಿದ್ದೆನು. ಅದೇನೋ ನಿಜವಾದುದೇ. ಆದರೆ ಪರ ಸ್ಪರ ಹೃದಯವನ್ನರಿತುಕೊಳ್ಳಲು ದೀರ್ಘಕಾಲದ ಪರಿಚಯ ಆವಶ್ಯಕ ವೆಂದು ನಾನು ಯೋಚಿಸಿರಲಿಲ್ಲ.

ಜವಹರನು ನನ್ನೊಡನೆ ರಾಜಾರವರ ಪ್ರಸ್ತಾಪವನ್ನೆತ್ತಿಕೊಂಡು ವಿಶಿಷ್ಟವಾದ ರೀತಿಯಲ್ಲಿ ಮಾತಾಡಿದನು. "ಮುದ್ದು ತಂಗಿ, ನೀನು ನಿನ್ನ ಮದುವೆಯ ವಿಷಯವಾಗಿ ಯೋಚಿಸುತ್ತಿರುವೆಯೆಂದು ಕೇಳಿ ದೆನು. ನೀನು ಮದುವೆಯಾಗಬೇಕೆಂದಿರುವ ತರುಣನ ಗೊತ್ತು ಗುರಿ ಗಳನ್ನು ವಿಶದಪಡಿಸುವೆಯಾ?" ಎಂದು ಮಿಂಚುಗಣ್ಣುಗಳಿಂದ ಕೂಡಿದ ಆತನು ನನ್ನನ್ನು ಪ್ರಶ್ನಿಸಿದನು. ನಾನು ಗಾಬರಿಗೊಂಡೆ ನಾದರೂ ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡಲೊಪ್ಪಿದೆನು. ರಾಜಾರವರ ವೃತ್ತಿಯೇನೆಂದು ಜವಹರನು ಆರಂಭಿಸಿದನು. ಅವರು ವಕೀಲ ರೆಂದೂ ಆಗತಾನೇ ಆ ವೃತ್ತಿಯನ್ನು ಆರಂಭಿಸಿದ್ದರೆಂದೂ ನಾನು ಉತ್ತರವಿತ್ತೆನು. ಅನಂತರ ರಾಜಾರವರ ಮನೆಯವರಾರೆಂದು ಜವ ಹರನು ಕೇಳಿದನು. ಆ ವಿಷಯವಾಗಿ ನನಗೆ ಏನೇನೂ ಗೊತ್ತಿಲ್ಲ ವೆಂದೆನು. ರಾಜಾರವರ ಸಹೋದರ ಸಹೋದರಿಯರೆಷ್ಟುಮಂದಿ ಯೆಂದು ಅವನು ಪ್ರಶ್ನಿಸಿದನು. ನಾನು ಮಿಳ್ಮಿಳನೆ ಕಣ್ಣು ಬಿಡು ವಂತಾಯಿತು. ಜವಹರನು ಭಾವೋದ್ರೇಕಗೊಂಡನು, ನನಗೆ ನಡುಕ ಹುಟ್ಟಿತು. ಇಂತಹ ಸುಸ್ಪಷ್ಟ ವಿಷಯಗಳನ್ನು ರಾಜಾರವರಿಂದ ತಿಳಿದು ಕೊಳ್ಳದಿದ್ದುದಕ್ಕಾಗಿ ನನ್ನನ್ನು ನಾನೇ ಶಪಿಸಿಕೊಂಡೆನು. ಆಕ್ಸ್‌ಫರ್ಡಿ ನಲ್ಲಿ ರಾಜಾರವರು ವ್ಯಾಸಂಗಮಾಡಿದ ಕಾಲೇಜು ಯಾವುದು? ಎಷ್ಟು ವರ್ಷಗಳಕಾಲ ಅವರು ಅಲ್ಲಿದ್ದರು? ಇವೇ ಮೊದಲಾದ ಪ್ರಶ್ನೆಗಳ ಸುರಿಮಳೆಯಾಯಿತು. ನನ್ನ ಬಳಿ ಅವುಗಳಿಗೆ ಉತ್ತರ ಸಿದ್ಧವಾಗಿರ ಲಿಲ್ಲ. ಅವರ ಹೆಸರಿನ ಸಂಕ್ಷಿಪ್ತಾಕ್ಷರಗಳು 'ಜಿ.ಪಿ' ಎಂದಿರುವಾಗ, ನೀನು ಅವರನ್ನು 'ರಾಜಾ' ಎಂದು ಏತಕ್ಕೆ ಸಂಬೋಧಿಸುತ್ತೀಯೆ?

ಆ ಸಂಕ್ಷಿಪ್ತಾಕ್ಷರಗಳ ಮೂಲವೇನು ?" ಎಂದು ಕೊನೆಯದಾಗಿ ಜವಹರನು ಕೇಳಿದನು. ಆಗಂತೂ ನನ್ನಲ್ಲಿ ಭೀತಿ ಅಧಿಕವಾಯಿತು. 'ಜಿ.ಪಿ.' ಎನ್ನುವುದರ ಅರ್ಥವನ್ನು ರಾಜಾರವರು ಹೇಳಿದ್ದುದು ಮುಸಕುಮುಸಕಾಗಿ ನೆನಪಿನಲ್ಲಿತ್ತು; ಆದರೆ ಆ ಸಮಯದಲ್ಲಿ ಸ್ಮರಣೆಗೆ ಬರಲಿಲ್ಲ. ನನಗೆ ಜ್ಞಾಪಕವಿಲ್ಲವೆಂದು ಅಂಜಿಕೆಯಿಂದ ಹೇಳಿದೆನು. ಜವಹರನು ವಿಪರೀತವಾಗಿ ಕೆರಳಿ "ಇದು ತಿಳಿಗೇಡಿತನ" ಎಂದು ಗದರಿಸುತ್ತಾ ಕೋಣೆಯ ಹೊರಗೆ ಧಾವಿಸಿದನು. ಭಗ್ನಮನೋರಥಳಾದ ನಾನು ಚಿಂತೆಯ ಗೆಳತಿಯಾದೆನು.

ನನ್ನ ತಿಳಿಗೇಡಿತನ ನನಗೆ ಮನವರಿಕೆಯಾಯಿತು. ರಾಜಾರವರೊಡನೆ ಇದ್ದಾಗ ನಾನು ಅವರಲ್ಲಿಯೇ ಮಗ್ನಳಾಗಿದ್ದುದರಿಂದ ಅವರ ಕುಟುಂಬದ ಕಡೆಗಾಗಲೀ, ಅವರ ಸ್ವಂತ ವಿಷಯದ ಕಡೆಗಾಗಲೀ ನನ್ನ ಗಮನ ಹೋಗಿರಲಿಲ್ಲ. ನಮ್ಮ ಸ್ವವಿಷಯಗಳನ್ನುಳಿದು ಅನೇಕ ಸಮಸ್ಯೆಗಳನ್ನು ಚರ್ಚಿಸಿದ್ದೆವು. ನನಗೆ ಬೇಕಾಗಿದ್ದವರು ರಾಜಾ; ಉಳಿದ ವಿಷಯ ನನಗೆ ಪ್ರಾಮುಖ್ಯರಲಿಲ್ಲ.

ಆ ರಾತ್ರಿಯೇ ರಾಜಾರವರಿಗೆ ಕಾಗದ ಬರೆದು ಆವಶ್ಯಕವಾದ ವಿವರಗಳನ್ನು ತಿಳಿಸುವಂತೆ ಕೇಳಿಕೊಂಡೆನು. ಅವರಿಗೆ ಸ್ವಲ್ಪ ಕಳವಳವುಂಟಾಗಿರಬೇಕು. ಆದರೆ ಕೆಳಗೆ ಕೊಟ್ಟಿರುವ ವಿವರಗಳನ್ನು ಕಳುಹಿಸಿದರು :—

## ನನ್ನ ಯೋಗ್ಯತಾನಿರ್ಣಯ ಪತ್ರ

ಹೆಸರು: ಗುಣೋತ್ತಮ ಹತೀಸಿಂಗ್.

ಶಾಲೆ: ರಾಷ್ಟ್ರೀಯ ವಿದ್ಯಾಶಾಲೆ ಮತ್ತು ಗುಜರಾತಿನ ವಿದ್ಯಾಪೀಠ.

ವಿಶ್ವವಿದ್ಯಾಪೀಠ: ಆಕ್ಸ್‌ಫರ್ಡಿನ ಸೆಂಟ್ ಕ್ಯಾಥರಿನ್ ಕಾಲೇಜು.

ಇನ್ಸ್ ಆಫ್ ಕೋರ್ಟ್: ಲಿಂಕೋನ್ಸ್.

ಪದವಿ: ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ ಮತ್ತು ವೇದಾಂತ ವಿಷಯಗಳಲ್ಲಿ ಬಿ.ಎ. ಪರೀಕ್ಷೆ ಆಗಿದೆ.

ವಿಹಾರ ಕೇಂದ್ರ (Club): ಯಾವುದೂ ಇಲ್ಲ, ಸೇರಬೇಕೆಂಬ ಉದ್ದೇಶವೂ ಇಲ್ಲ.

ವೃತ್ತಿ : ವಕೀಲಿ. ಅದರಲ್ಲಿ ನನಗೆ ತುಂಬ ಉತ್ಸಾಹ. ನಾನು ಯಾವುದನ್ನು ಕೈಗೊಂಡರೂ ಹಾಗೆಯೇ. ಒಂದೆರಡು ವರ್ಷಗಳಲ್ಲಿ ಈ ವೃತ್ತಿಯನ್ನು ತ್ಯಜಿಸಿ ರಾಜಕೀಯಕ್ಕೆ ಧುಮುಕಿದರೂ ಧುಮುಕಬಹುದು.

ಅಭಿರುಚಿ : ಸುಖಾಸೀನನಾಗಿ ಹೊಗೆಬತ್ತಿಯನ್ನು ಹತ್ತಿಸಿಕೊಂಡು ಕಾಲ ಕಳೆಯುವುದು. ಅನೇಕರಿಗೆ ಅಪ್ರಿಯವಾದ ಅಭ್ಯಾಸದಲ್ಲಿ—ಎಂದರೆ ಆಲೋಚನೆಯಲ್ಲಿ ಮಗ್ನನಾಗಿರುವುದು.

ಕ್ರೀಡೆಗಳು : ಕೆಲವು ವರ್ಷಗಳ ಹಿಂದೆ ಕ್ರಿಕೆಟ್ ಆಟ ಆಡುತ್ತಿದ್ದೆನು. ಈಗ ಯಾವುದೂ ಇಲ್ಲ.

ನಡತೆ : ಸ್ವಾಭಿಮಾನಿಯಾದ ಸ್ವಾರ್ಥಪರನೆಂದು ಜನರ ಭಾವನೆ.

ವೈವಾಹಿಕ ಸಂಬಂಧವಾದ ಅಭಿಪ್ರಾಯಗಳು : ಯಾರು ಯಾರಿಗೆ ಸಂಪೂರ್ಣ ಸ್ವಾತಂತ್ರ್ಯದ ಬಯಕೆ ಇದೆಯೋ ಅವರಿಗೆ ಅದನ್ನು ದೊರಕಿಸಿಕೊಡುವುದು

ರುಜುವಾತು : ಯಾವುದೂ ಇಲ್ಲ.

ಜೀವನದ ಭವ್ಯ ಭವಿಷ್ಯತ್ತು : ಯಾವುದೂ ಗೊತ್ತಿಲ್ಲ.

ಹಣಕಾಸಿನ ಪರಿಸ್ಥಿತಿ : ಸಾಧಾರಣ—ಸಾಮಾನ್ಯದರ್ಜೆಯಲ್ಲಿ ಬಾಳಬಹುದು—ವಿಶೇಷ ಶ್ರೀಮಂತಿಕೆಯಿಂದ ಮೆರೆಯುವಂತಿಲ್ಲ.

ಕೊನೆಯದಾಗಿ : ಇದೊಂದು ಪ್ರಾರ್ಥನಾ ಪತ್ರ—ಸ್ವಾಭಿಮಾನದಿಂದ ಕೂಡಿದ ಪತ್ರವಿರಬಹುದು—೧೯೩೯ ನೆಯ ಇಸವಿ ಅಕ್ಟೋಬರ್ ತಿಂಗಳಲ್ಲಿ ಮೇಲ್ಕಂಡ ವ್ಯಕ್ತಿಯನ್ನು ಮದುವೆಯಾಗಲು ಸಮ್ಮತಿಸುವಂತೆ ಶ್ರೀಮತಿ ಕೃಷ್ಣನೆಹರುವನ್ನು ಕೇಳಿಕೊಂಡ ಅರ್ಜಿ.

ರಾಜಾರವರಿಂದ ಬಂದ ಈ ಪತ್ರ ಬಹಳ ವಿನೋದದಿಂದ ಕೂಡಿತ್ತು. ಅವರ ಸ್ವಂತ ವಿಷಯಕ್ಕೆ ಸಂಬಂಧಿಸಿದ ವಿವರಗಳನ್ನು ಕೇಳಿದಾಗ ಅವರು ಎಷ್ಟು ಸಿಟ್ಟುಗೊಂಡಿರಬಹುದೆಂಬುದನ್ನು ನಾನು ಆ ಕಾಗದದಿಂದ ಊಹಿಸಬಹುದಾಗಿತ್ತು.

ತಾಯಿಯವರ ಖಾಯಿಲೆ ಸ್ವಲ್ಪ ಹಗುರವಾದಾಗ ಜವಹರನು ಬೊಂಬಾಯಿಗೆ ಹೋಗಿ ರಾಜಾರವರನ್ನು ನೋಡಿದನು. ಅನಂತರ

ಗಾಂಧೀಜಿಯವರನ್ನು ನೋಡಿ ಅವರಿಗೆ ನನ್ನ ಮನೋರಥವನ್ನು ತಿಳಿಸಿದನು. ಗಾಂಧಿಜೀಯವರು ರಾಜಾರವರನ್ನೂ ಅವರ ಕುಟುಂಬವನ್ನೂ ತಕ್ಕಮಟ್ಟಿಗೆ ಅರಿತಿದ್ದರು. ತಮ್ಮನ್ನು ನೋಡುವಂತೆ ಅವರು ರಾಜಾರವರಿಗೆ ಹೇಳಿ ಕಳುಹಿಸಿದರು. ರಾಜಾರವರು ಹೋದರು; ಆದರೆ ಗಾಂಧಿಜೀಯವರ ಪ್ರಶ್ನೆ ಪ್ರತಿಪ್ರಶ್ನೆಗಳಿಂದ ಸಂತುಷ್ಟನಾಗಲಿಲ್ಲ. ಆದಾಗ್ಗೂ ರಾಜಾರವರು ಹಿಂಜರಿಯಲಿಲ್ಲ, ಇಲ್ಲವೇ ತೊದಲಲಿಲ್ಲ. (ಗಾಂಧಿಜೀಯವರ ಪ್ರಶ್ನೆಗಳನ್ನು ಎದುರಿಸಲು ಎಂಟೆದೆಯೇ ಬೇಕು!) ತಾಯಿಯವರನ್ನು ಮತ್ತು ಇತರ ಕುಟುಂಬದವರನ್ನು ಸಂಧಿಸಲು ಲಕ್ನೋವಿಗೆ ಬರುವಂತೆ ಜವಹರನು ಅವರಿಗೆ ಆಹ್ವಾನವಿತ್ತನು. ಒಂದು ಪಕ್ಷಾನಂತರ ಅವರು ಬಂದರು. ತಾಯಿಯವರಿನ್ನೂ ಆಸ್ಪತ್ರೆಯಲ್ಲಿದ್ದರು; ದುರ್ಬಲತೆ ಕಡಿಮೆಯಾಗಿರಲಿಲ್ಲ, ಅಪಾಯದಿಂದ ಪಾರಾಗಿರಲಿಲ್ಲ. ರಾಜಾರವರನ್ನು ನೋಡಿದ ಕೂಡಲೇ ತಾಯಿಯರ ಒಲವು ಅವರ ಕಡೆ ಹರಿಯಿತು. ರಾಜಾರವರಿಗೂ ತಾಯಿಯವರ ವಿಷಯದಲ್ಲಿ ಅದೇ ಅನುಭವವಾಯಿತು. ಆದಷ್ಟು ಜಾಗ್ರತೆ ನಮ್ಮ ಮದುವೆ ಆಗಬೇಕೆಂದು ತಾಯಿಯವರು ಇಚ್ಛಿಸಿದರು. ತಾಯಿಯವರು ಸಂಪೂರ್ಣವಾಗಿ ಗುಣಮುಖರಾಗುವ ತನಕ ಮದುವೆಯಾಗಲು ನನಗೆ ಇಷ್ಟವಿರಲಿಲ್ಲ; ಆದರೆ ತಡಮಾಡುವುದು ಅವರಿಗೆ ಸಹಿಸುತ್ತಿರಲಿಲ್ಲ. ತಾವು ಹೆಚ್ಚು ಕಾಲ ಉಳಿಯುವುದಿಲ್ಲವೆಂದು ಅವರು ಭಾವಿಸಿಕೊಂಡಿದ್ದುದರಿಂದ, ತಮ್ಮ ಕಣ್ಣುಮುಂದೆಯೇ ನನ್ನ ಮುಂದಿನ ಗೊತ್ತುಗುರಿಗಳು ನಿರ್ಧರವಾಗಬೇಕೆಂದು ಹಠಹಿಡಿದರು.

೧೯೩೩ನೆಯ ಇಸವಿ ಅಕ್ಟೋಬರ್ ೨೦ನೆಯ ತಾರೀಖು ಕಾನೂನಿಗನುಗುಣವಾಗಿ ನನ್ನ ಮತ್ತು ರಾಜಾರವರ ವಿವಾಹವು ಆನಂದ ಭವನದಲ್ಲಿ ಜರುಗಿತು. ಮದುವೆ ಆಡಂಬರರಹಿತವಾಗಿದ್ದು ಅರ್ಧಘಂಟೆಯಲ್ಲಿಯೇ ಮುಗಿಯಿತು. ಒಂದುವಾರಕ್ಕೆ ಮೇಲ್ಪಟ್ಟು ಅತಿ ವಿಜೃಂಭಣೆಯಿಂದ ಜರುಗಿದ ಸ್ವರೂಪಳ ವಿವಾಹೋತ್ಸವಕ್ಕೂ, ವೈಭವಶೂನ್ಯವಾದ ನನ್ನ ಮದುವೆಗೂ ಅಜಗಜಾಂತರ. ನಮ್ಮ ಬಂಧು ಮಿತ್ರರು ಕೆಲವರು, ರಾಜಾರವರ ಸಹೋದರ ಸಹೋದರಿಯರು ಮತ್ತು ಅವರ ಚಿಕ್ಕಪ್ಪ

ಕಸ್ತೂರಿಭಾಯ್ ಲಾಲಾಭಾಯಿ—ಇವರು ಮಾತ್ರ ಮದುವೆಗೆ ಬಂದಿದ್ದರು. ಇನ್ನೂ ತಾಯಿಯವರು ಹಾಸಿಗೆಯಿಂದ ಎದ್ದಿರಲಿಲ್ಲ. ಅಹಮ್ಮದಾಬಾದಿನಲ್ಲಿ ರಾಜಾರವರ ತಾಯಿಯೂ ರೋಗಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಆದುದರಿಂದಲೇ ನಮ್ಮ ಮದುವೆ ಸದ್ದಿಲ್ಲದೆ ಸರಳವಾಗಿ ನಡೆಯಬೇಕೆಂದು ನಿಶ್ಚಯಿಸಿಕೊಂಡಿದ್ದೆವು.

ಬಾಪು ಅಲಹಾಬಾದಿಗೆ ಬರಲು ಸಾಧ್ಯವಿರಲಿಲ್ಲವಾದುದರಿಂದ ನನ್ನ ಮದುವೆ ವಾರ್ಧದಲ್ಲಿಯೇ ಜರುಗಬೇಕೆಂದು ಸಲಹೆಯಿತ್ತಿದ್ದರು. ಅವರ ಸಮಕ್ಷಮದಲ್ಲಿ ನನ್ನ ಮದುವೆ ನಡೆದು ಅವರ ಆಶೀರ್ವಾದಕ್ಕೆ ನಾನು ಪಾತ್ರಳಾಗಬೇಕೆಂಬ ಬಯಕೆ ಮಿಗಿಲಾಗಿದ್ದರೂ, ನನಗೆ ಅವರ ಸಲಹೆ ಸರಿಬೀಳಲಿಲ್ಲ. ಬಾಲ್ಯ ಜೀವನದ ಸವಿನೆನಪುಗಳ ಮಡಿಲಾಗಿದ್ದ, ಸ್ವರ್ಗಾಧೀನರಾದ ತಂದೆಯವರ ನೆನಪುಗಳನ್ನು ಬಚ್ಚಿಟ್ಟಿದ್ದ, ನನ್ನ ಮನೆಯಲ್ಲಲ್ಲದೆ ಬೇರೆಕಡೆ ಮದುವೆಯಾಗಲು ನನ್ನ ಮನಸ್ಸೊಪ್ಪಲಿಲ್ಲ. ಬಾಪುಜೀಯವರಿಲ್ಲದಿದ್ದುದು ನನ್ನ ಮನಸ್ಸಿಗೆ ವ್ಯಥೆಯನ್ನುಂಟುಮಾಡಿತು; ಅದೊಂದು ಕೊರತೆಯಾಗಿತ್ತು. ರಾಜಾರವರಿಗೂ ನನಗೂ ಮದುವೆಯ ಕಾಣಿಕೆಯಾಗಿ ತಾವೇ ನೂತಿದ್ದ ಎರಡು ದಾರದ ಹಾರಗಳನ್ನೂ, ಹರಕೆಯ ಪತ್ರವೊಂದನ್ನೂ ಅವರು ಕಳುಹಿಸಿದ್ದರು. ಅವರು ಹಿಂದಿಯಲ್ಲಿ ಬರೆದ ಪತ್ರ ಹೀಗಿತ್ತು :—

"ಪ್ರೀತಿಪಾತ್ರಳಾದ ಕೃಷ್ಣೆ, ನೀನೀಗ ಪುನರ್ಜನ್ಮವನ್ನು ತಾಳುತ್ತಿದ್ದೀಯೆ. ಮದುವೆಯೆಂದರೆ ಒಂದು ವಿಧವಾದ ಮರುಹುಟ್ಟು ಅಲ್ಲವೇ? ನಿನ್ನ ಅಕ್ಕ ಸ್ವರೂಪಳು ವಧುವಾಗಿ ಕಾಥಯವಾಡಕ್ಕೆ ಬಂದಳು. ಆದರೆ ತನ್ನ ಹಳೆಯಪ್ರಾಂತ್ಯದಲ್ಲಿಯೇ ಹೋಗಿ ನೆಲಸುವಂತೆ ತನ್ನ ಪತಿಯನ್ನೊಲಿಸಿಕೊಂಡಳು. ನಿನಗೂ ಸ್ವರೂಪಳಿಗೂ ಅಗಾಧವಾದ ವ್ಯತ್ಯಾಸವಿದೆ. ನೀನು ರಾಜನನ್ನು ಕರೆದೊಯ್ಯಲು ಪ್ರಯತ್ನಿಸುವೆಯೆಂದು ನಾನು ಯೋಚಿಸುವುದಿಲ್ಲ. ಅಲ್ಲದೆ ರಾಜ ಗುಜರಾತಿಯವನು, ತನ್ನ ತಾಯ್ನಾಡನ್ನು ಸುಲಭವಾಗಿ ಬಿಟ್ಟು ಚಲಿಸುವುದಿಲ್ಲ. ಆದುದರಿಂದ ನೀನು ಗುಜರಾತಿನಲ್ಲಾಗಲೀ, ಬೊಂಬಾಯಿಯಲ್ಲಾಗಲೀ ಮನೆಮಾಡಿಕೊಂಡಿರುವೆಯೆಂದು ನಂಬಿದ್ದೇನೆ. ನೀನೆಲ್ಲಿದ್ದರೂ ಸುಖವಾಗಿರು;

ಪ್ರಖ್ಯಾತರಾದ ತಂದೆತಾಯಿಗಳ ಕೀರ್ತಿಯನ್ನು ಮತ್ತಷ್ಟೂ ಉಜ್ವಲ ಗೊಳಿಸು—ಇದೇ ನನ್ನ ಹರಕೆ.

"ನಾನು ನಿನ್ನ ಮದುವೆಯಲ್ಲಿ ಭಾಗವಹಿಸಲು ಅವಕಾಶವಿಲ್ಲದುದ ರಿಂದ ತುಂಬಾ ವಿಷಾದಿಸುತ್ತೇನೆ. ನಿನ್ನನ್ನು ಇಲ್ಲಿಂದಲೇ ಹರಸಿ ತೃಪ್ತ ನಾಗಬೇಕಾಗಿದೆ."

ನಿನ್ನ ಬಾಪು"

ನಮ್ಮ ಮದುವೆಯ ಸುದ್ದಿ ತಲುಪಿದಾಗ ವಲ್ಲಭಾಯಿಯವರು ನಾಸಿಕದ ಸೆರೆಮನೆಯಲ್ಲಿದ್ದರು. ಅವರು ಸಹ ತಮ್ಮ ಅಭಿನಂದನ ಆಶೀರ್ವಾದಗಳನ್ನೊಳಗೊಂಡ ಪತ್ರವನ್ನು ಕಳುಹಿಸಿದರು. ನನ್ನ ಭಾವಂದಿರಾದ ರಣಜಿತ್ ಪಂಡಿತರು ತಮ್ಮ ತಾಯ್ನಾಡನ್ನು ಬಿಟ್ಟು, ನಮ್ಮ ತಾಯ್ನಾಡಾದ ಸಂಯುಕ್ತ ಪ್ರಾಂತ್ಯದಲ್ಲಿ ನೆಲಸಿದ್ದರೂ, ಗುಜರಾತಿನ ಜನರು ನನ್ನನ್ನು ತಮ್ಮ ಪ್ರಾಂತ್ಯದಲ್ಲಿಯೇ ಇರಿಸಿಕೊಳ್ಳುವರೆಂದೂ ಉತ್ತರ ದೇಶದಲ್ಲಿ ಹೋಗಿ ನೆಲಸಲು ನನಗಾಗಲೀ ರಾಜಾರವರಿಗಾಗಲೀ ಅವಕಾಶಕೊಡುವುದಿಲ್ಲವೆಂದೂ ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದರು. ನನಗೆ ಅಂತಹ ಉದ್ದೇಶವಿರಲಿಲ್ಲ. ಆದುದರಿಂದ ವಲ್ಲಭಾಯಿಯವರ ಹೆದರಿಕೆಗೆ ಆಧಾರವಿರಲಿಲ್ಲ. ಆದರೆ ನನ್ನ ಹೊಸ ಮನೆಗೆ ನನ್ನನ್ನು ಬರಮಾಡಿಕೊಳ್ಳಲು ಎಷ್ಟು ಜನ ಕುತೂಹಲವುಳ್ಳವರಾಗಿದ್ದರೆಂಬುದನ್ನು ತಿಳಿಯಲು ಸಂತೋಷವಾಗುತ್ತಿತ್ತು.

ನಮ್ಮ ಕುಟುಂಬದ ಹಳೆಯ ಗೆಳತಿಯಾದ ಸರೋಜಿನಿನಾಯ್ಡು ರವರೂ ಅಭಿನಂದನಾ ಪತ್ರವೊಂದನ್ನು ಕಳುಹಿಸಿದರು. ಕಾವ್ಯಸಂಗೀತ ಗಳ ಮಾಧುರ್ಯದಿಂದ ತುಂಬಿದ್ದ ಆ ಪತ್ರ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿತ್ತು. ಅವರು ಹೀಗೆ ಬರೆದರು:—

"ನನ್ನೊಲವಿನ ಮುದ್ದು ಬೇಟಿಯೇ, (ನನ್ನ ಜೀವಮಾನದಲ್ಲೆಲ್ಲ ಅತ್ಯಂತ ಚಿತ್ತಾಕರ್ಷಕವಾದ, ಆದರೆ ಅಮಂಗಳವಾದ ನಾಮಧೇಯ) ನಮ್ಮ ರಾಷ್ಟ್ರೀಯ ಜೀವನದ ಭಯಂಕರ ವಾತಾವರಣದಲ್ಲಿ ಹಠಾತ್ತನೆ ಪೂರ್ಣವಿಕಾಸಗೊಂಡು ಪ್ರಕಾಶವನ್ನು ಬೀರುತ್ತಿರುವ ನಿಷ್ಕಳಂಕವಾದ ಪ್ರೇಮಕುಸುಮವೊಂದನ್ನು ಕಾಣಲು ಎಷ್ಟು ಆನಂದವಾಗುತ್ತಿದೆ. ರಹ

ಸ್ಯವಾಗಿಯೇ ಪ್ರೇಮಲತೆಯನ್ನು ಹಬ್ಬಿಸುತ್ತಿರುವ ನೀವಿಬ್ಬರೂ ಎಂತಹ ದೊಡ್ಡ ಕಳ್ಳರಿರಬಹುದು? ನನ್ನ ಪ್ರೀತಿಯ ಪುಟ್ಟ ಪುತ್ಥಳಿಯೇ, ನಿನಗೆ ಹೊಸದಾಗಿ ಉಂಟಾಗಿರುವ ಆನಂದದಿಂದ ನನಗೂ ಆನಂದವಾಗಿದೆ ತನ್ನ ಮಗು ವಧುವಾಗುವುದನ್ನೂ, ತನ್ನ ಹೃದಯದ ಕೊನೆಯ ಬಯಕೆ ಈಡೇರುವುದನ್ನೂ ನೋಡಲು ರುಗ್ಣಶಯ್ಯೆಯಲ್ಲೊರಗಿರುವ ಚಿಕ್ಕಮಮ್ಮಾಜಿಗೆ (ಶ್ರೀಮತಿ ನಾಯುಡುರವರು ನನ್ನ ತಾಯಿಯವರನ್ನು ಕರೆಯುತ್ತಿದ್ದರೀತಿ) ಎಷ್ಟು ಸಂತೋಷ ಸಮಾಧಾನಗಳು ಮೂಡಿರಬೇಕೆಂಬುದು ನನಗೆ ಅನುಭವವಾಗುತ್ತಿವೆ- ಆದುದರಿಂದ ನನ್ನ ಆನಂದಕ್ಕೆ ಮಿತಿಯೇ ಇಲ್ಲ. ಸಹಜವಾದ ಹಾಸ್ಯಗಳ ಪರದೆಯ ಹಿಂದೆ ಹಿರಿಯ ಹಿಗ್ಗನ್ನೂ ಬಚ್ಚಿಡುತ್ತಾ ಪಾಪಾಜಿಯು (ತಂದೆ) ನಿನ್ನ ಸ್ವಯಂವರವನ್ನು ಹೇಗೆ ಒಪ್ಪಿಕೊಳ್ಳುತ್ತಿದ್ದರೆಂಬುದನ್ನೂ ಮತ್ತು ನಿನ್ನನ್ನು ಯಾವರೀತಿ ಹರಸುತ್ತಿದ್ದರೆಂಬುದನ್ನೂ ನಾನಿಂದು ಊಹಿಸಿಕೊಳ್ಳಬಲ್ಲೆನು. ಪರಿಣತ ವಯಸ್ಸಿನ ಶ್ರೀಮಂತ ಹೃದಯದಲ್ಲಿ ಹುದುಗಿದ್ದ ಆ ಬಯಕೆಯನ್ನೂ ಅವರು ಆಗಾಗ್ಗೆ ಬಿಚ್ಚಿ ಹೇಳುತ್ತಿದ್ದರು.

"ನಿನಗಿಂತಲೂ ಮೊದಲೇ ನಿನ್ನ ರಾಜನನ್ನು ನಾನು ನೋಡಿದ್ದೆನು. ಆತನ ಬಹುಮುಖವಾದ ಜೀವನ ಚಿತ್ರ ನನ್ನ ಉಗುರು ಮೊನೆಯಲ್ಲಿದೆ. ಆಕ್ಸ್‌ಫರ್ಡಿನಲ್ಲಿದ್ದಾಗ ಮೇ ತಿಂಗಳಲ್ಲೊಂದು ದಿನ ನದಿಯ ಮೇಲೆ ದೋಣಿಯಲ್ಲಿ ತೇಲುತ್ತಾ ಪುರೋಹಿತರ ಮತ್ತು ಕಾಲಜ್ಞಾನಿಗಳ ಸಂಬಂಧವಾಗಿ ಚಮತ್ಕಾರಯುತವಾದ ವ್ಯಾಖ್ಯಾನಗಳನ್ನು ಮಾಡುತ್ತಿದ್ದ ಆ ರಾಜ; ಕೊರಳಲ್ಲಿ ಹಾರಾಡುತ್ತಿದ್ದ ಕುತ್ತಿಗೆಪಟ್ಟಿ, ಬಾಯಲ್ಲಿ ಕಚ್ಚಿದ್ದ ಹೊಗೆಬತ್ತಿಯಿಂದಕೂಡಿ, ಲಂಡನ್ನಿನ ರಾಯಲ್ ಹೋಟಲಿನಲ್ಲಿ ಸುಳಿದಾಡುತ್ತಿದ್ದ ಸ್ವತಂತ್ರ ಸಂಪ್ರದಾಯ ಪ್ರಿಯನಾದ ಆರಾಜ–ಅವನು ನಿನಗೆ ಗೊತ್ತಿದೆಯೇ ? ವಿಕ್ಟೋರಿಯದ ನಿಲ್ದಾಣದಲ್ಲೊಮ್ಮೆ ಜವಹರನನ್ನು ಬೀಳ್ಕೊಡಲು ಖಾದಿ ಉಡುಪಿನ ಜನರು ಗುಂಪುಕೂಡಿದ್ದರು. ಆ ಗುಂಪಿನ ಒಂದು ಮೂಲೆಯಲ್ಲಿ ರಾಜ ನಿಸ್ಸಂಗಿಯಂತೆ ನಿಂತಿದ್ದನು. ಅಲ್ಲಿದ್ದವರೆಲ್ಲರೂ ಆತನನ್ನೇ ವಿಸ್ಮಯಚಕಿತರಾಗಿ ನೋಡುತ್ತಿದ್ದರು. ಸ್ವಾಭಿಮಾನಿಯಂತೆ ಕಾಣುತ್ತಿದ್ದ ರಾಜನ ಆ ಕೊನೆಯ ನೆನಪು ಇನ್ನೂ

ಅಚ್ಚ ಹಸುರಾಗಿದೆ. ಆತನ ಅಂದಿನ ವರ್ತನೆ ನನಗೂ ಸ್ವಲ್ಪ ವಿಸ್ಮಯವನ್ನುಂಟುಮಾಡಿತು. ಸಿಲ್ದಾಣದಿಂದ ಹೊರಗೆ ಅವನು ನನ್ನೊಡನೆ ಬರುತ್ತಿದ್ದರೂ, ತನ್ನ ಭಾವೀಸತಿಯ ಸಹೋದರನೊಡನೆ ಮುಂದೆ ಸಂಭವಿಸಬಹುದಾದ ಗಾಢ ಸಂಬಂಧವನ್ನು ಚಂಚಲ ದೃಷ್ಟಿಯಿಂದಲೇ ವ್ಯಕ್ತಪಡಿಸದೆ ಇರಲಿಲ್ಲ.

"ನಿನಗೋಸ್ಕರ ಅವಸರವಸರವಾಗಿ ಉಡುಪುಗಳನ್ನು ಅಣಿಗೊಳಿಸಲು ಕಮಲ ಮತ್ತು ಸ್ವರೂಪ ಇಬ್ಬರೂ ಇಲ್ಲಿದ್ದಾರೆ. ಮದುವೆಯ ಉಡುಪಿಗೆ ಬೇಕಾದ ಶುದ್ಧ ಖಾದಿಯ ಬಟ್ಟೆಗಳೇ ಸರಿಯಾಗಿ ಸಿಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಸ್ವಪ್ನಾನಂದಗಳೇ ಉಡುಪುಗಳಾಗುಳ್ಳ, ಯೌವನ ಪ್ರೇಮ ಸಾಹಸಗಳೇ ಆಭರಣಗಳಾಗುಳ್ಳ ನಿನಗೆ ಬೇರೆ ವಸ್ತ್ರಾಲಂಕಾರಗಳ ಯೋಚನೆ ಏಕೆ?

ಪರಸ್ಪರಾನುರಾಗ ಮತ್ತು ಪರಸ್ಪರ ಭಾವನಾಗ್ರಹಣಶಕ್ತಿಗಳು ನಿಮ್ಮ ವೈವಾಹಿಕ ಜೀವನಕ್ಕೆ ತಳಹದಿಯಾಗಿರಲಿ; ಜೀವನಾನುಕೂಲಗಳಲ್ಲಿ ಸಮಭಾಗಿಗಳಾಗಿರಿ; ಪರಸ್ಪರ ವಿಶ್ವಾಸವಿರಲಿ; ಎಂದೆಂದೂ ಎಡೆಬಿಡದ ಎಣೆವಕ್ಕಿಗಳಂತೆ ನಲಿಯಿರಿ; ನಿಮ್ಮ ಬೀಡು ಸರ್ವದಾ ಸೌಂದರ್ಯಾನಂದಗಳಿಂದ ಕೂಡಿರಲಿ; ದೇವರಲ್ಲಿ ಇದೇ ನನ್ನ ಪ್ರಾರ್ಥನೆ.

"ನಿಮ್ಮ ವಂಶದ ಸತ್ಸಂಪ್ರದಾಯಗಳು, ಭವ್ಯಾದರ್ಶಗಳು ಮತ್ತು ಸಾಹಸಕೃತ್ಯಗಳು ಇಡೀ ರಾಷ್ಟ್ರಕ್ಕೇ ಆದರ್ಶಪ್ರಾಯವಾಗಿವೆ ಮತ್ತು ಪ್ರೇರಕಶಕ್ತಿಗಳಾಗಿವೆ. ಆ ಸತ್ಸಂಪ್ರದಾಯದ ಶ್ರೇಷ್ಠತೆ ಸಮೃದ್ಧತೆಗಳಿಂದ ನಿನ್ನ ವೈಯುಕ್ತಿಕ ಶಕ್ತಿಸಾಮರ್ಥ್ಯಗಳು ಉಜ್ಜ್ವಲಗೊಳ್ಳುವುವಲ್ಲದೆ, ನಿಮ್ಮ ವೈವಾಹಿಕ ಜೀವನ ಅದ್ವಿತಿಯವಾಗುವುದರಲ್ಲಿ ಸಂದೇಹವಿಲ್ಲ. ನಿನ್ನ ವಿವಾಹ ಮಹೋತ್ಸವ ಕೇವಲ ಕೆಲವು ಬಂಧುಮಿತ್ರರಿಗೆ ಸಂಬಂಧಿಸಿದ ಪರಿಮಿತವ್ಯಾಪ್ತಿಯುಳ್ಳ ಖಾಸಗಿ ವ್ಯವಸ್ಥೆಯಲ್ಲ. ನೀನು ಮೋತಿಲಾಲ್ ನೆಹ್ರೂರವರ ಮಗಳಾದುದರಿಂದ, ಭಾರತೀಯರ ಮೆಚ್ಚಿಕೆಗೆ ಪಾತ್ರನಾದ ಜವಹರನ ತಂಗಿಯಾದುದರಿಂದ ಇಡೀರಾಷ್ಟ್ರವೇ ನಿನ್ನ ವಿವಾಹ ಸಂಭ್ರಮದಲ್ಲಿ ಪ್ರಾಮುಖ್ಯವಾದ ಪಾತ್ರವನ್ನು ವಹಿಸಬೇಕಾಗಿದೆ.

"ನೀನು ನನ್ನ ಪುಟ್ಟ ತಂಗಿಯಲ್ಲವೇ? ಅದುದರಿಂದ ಪುಟ್ಟ ಹೆಣ್ಣೇ, ನಿನಗೆ ನನ್ನ ಸರ್ವಸಂಪೂರ್ಣ ಪ್ರೇಮಾಶೀರ್ವಾದಗಳು. ನಿನ್ನ ಯೌವನದ ಒಡೆನಾಡಿಯನ್ನೂ, ಗೆಳೆಯನನ್ನೂ, ಮತ್ತು ಜತೆಗಾರನನ್ನು ಪಡೆದುದಕ್ಕಾಗಿ ನಿನ್ನೊಡನೆ ನಾನೂ ಹರ್ಷಿಸುತ್ತೇನೆ."

ನನಗೆ ಸುಖಸಂಪತ್ತುಗಳು ಲಭಿಸಲೆಂದು ಹರಸಿ ಬರೆದಿದ್ದ ಈ ಪತ್ರ ಮತ್ತು ಇತರ ಅಸಂಖ್ಯಾತ ಪತ್ರಗಳು ನನ್ನ ಹೃದಯವನ್ನು ಕರಗಿಸಿದವು. ಮುಂದಿನ ನೂತನ ಜೀವನದಲ್ಲಿ ನಾನು ಜಯಶೀಲಳಾಗುತ್ತೇನೆಂಬ ನೆಚ್ಚು ಮೂಡುತ್ತಿತ್ತು.

ಮದುವೆಯಾದ ಕೆಲವು ದಿನಗಳನಂತರ ಹಳೆಯ ಮನೆಯನ್ನು ಬಿಟ್ಟು ಹೊಸ ಮನೆಗೆ ಹೊರಟೆನು; ಆಗ ನನಗೆ ನೋವಾಗದೆ ಇರಲಿಲ್ಲ. ಇನ್ನೂ ಹಾಸಿಗೆ ಹಿಡಿದಿದ್ದ ನನ್ನ ತಾಯಿಯವರನ್ನು ಮತ್ತು ಇತರ ಕುಟುಂಬದವರನ್ನು ಬಿಟ್ಟುಹೋಗಲು ಮನಸ್ಸೊಪ್ಪಲಿಲ್ಲ. ನನ್ನೆದುರಿಗಿದ್ದ ನೂತನ ಜೀವನ ಮತ್ತು ಭವಿಷ್ಯತ್ತುಗಳು ಸ್ವಲ್ಪ ಅಧೈರ್ಯತೆಯನ್ನುಂಟುಮಾಡಿದವು. ಆದರೆ ಪ್ರೇಮನಿಷ್ಠರಾದ ರಾಜಾರವರ ಕಡೆ ನೋಡಿದಾಗಲೆಲ್ಲ ಹೊಸನೆಚ್ಚು ಮೂಡುತ್ತಿತ್ತು.

ನಾವು ಅಹಮ್ಮದಾಬಾದಿಗೆ ಹೊರಟದಿನ ಸಂಜೆ ನಮ್ಮ ಗೃಹನಗರದ ಬಂಧುಬಳಗವೆಲ್ಲ ನಮ್ಮನ್ನು ಬೀಳ್ಕೊಡಲು ಹೊರಟರು. ಆಗ ನಾನನುಭವಿಸಿದ ಹೃದಯಯಾತನೆಯನ್ನು ಹಿಂದೆಂದೂ ಅನುಭವಿಸಿರಲಿಲ್ಲ. ಪ್ರತಿಯೊಬ್ಬರೂ ನನ್ನನ್ನು ಅಪ್ಪಿಕೊಂಡರು, ಪ್ರತಿಯೊಬ್ಬರೂ ಕಂಬನಿಗರೆದರು. ಆದರೆ ನನ್ನ ಧೈರ್ಯ ನಷ್ಟವಾಗಿರಲಿಲ್ಲ. ಕಟ್ಟಕಡೆಗೆ ಹೊಗೆಬಂಡಿ ಸಿಳ್ಳುಹಾಕಿದಾಗ ನಾನು ಜವಹರನನ್ನು ಆಲಂಗಿಸಿಕೊಂಡೆನು. "ಮುದ್ದು ತಂಗಿಯೇ, ಸುಖವಾಗಿರು" ಎಂದು ಅವನು ಪಿಸುಗುಟ್ಟಿದನು. ಅಲ್ಲಿಯವರೆಗೆ ನಾನು ಪ್ರಯಾಸದಿಂದ ಬಿಗಿಹಿಡಿದಿದ್ದ ಕಂಬನಿಯನ್ನು ಆ ಮೂರು ಸಣ್ಣಪದಗಳು ಚಿಮ್ಮಿಸಿದವು. ತಾಯಿಯವರಿಂದ ಅಗಲುವುದಂತು ಹೃದಯವಿದ್ರಾವಕವಾಗಿತ್ತು; ಆದರೆ ಅವರಿಗೋಸ್ಕರ ನಾನು ಸಮಾಧಾನ ತಂದುಕೊಳ್ಳಲು ಯತ್ನಿಸಿದೆನು. ಬಂಡಿ ಮೆಲ್ಲಗೆ ಮುಂದುವರಿದಾಗ, ಗಾಡಿಯಿಂದ ಧುಮುಕಿ ಮನೆಗೆ ಓಡಿಹೋಗಿ ನನ್ನ

ವರನ್ನು ಸೇರಿಕೊಳ್ಳಲೇ ಎಂದು ನನಗನ್ನಿಸಿತು. ಪಗಡೆಗಳನ್ನು ಮುಂದಿನ ಮಣೆಗೆ ತಳ್ಳಿ ಆಗಿತ್ತು; ಅವು ಮತ್ತೆ ಹಿಂದಿನ ಮಣೆಗೆ ಬರುವಂತಿರಲಿಲ್ಲ.

ರಾಜಾರವರ ಊರಾದ ಅಹಮ್ಮದಾಬಾದ್ ನಗರ ಸನ್ನಿಹಿತವಾಗುವಷ್ಟರಲ್ಲಿಯೇ ಅವರು ಮೊಟ್ಟಮೊದಲನೆಯ ಸಾರಿ ತಮ್ಮ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ವಿಷಯವನ್ನು ಕೂಲಂಕಷವಾಗಿ ತಿಳಿಸಿದರು. ತಮ್ಮ ಮನೆಯವರ ಚಿತ್ರವನ್ನು ಮತ್ತು ನನ್ನ ಮುಂದಿನ ಜೀವನವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಚಿತ್ರಿಸಿದರು. ನಾನು ಎದುರಿಸಬೇಕಾಗಿದ್ದ ಎಡರುತೊಡರುಗಳನ್ನು ವಿವರಿಸಿದರು. ನಾನು ನನ್ನ ತವರು ಮನೆಯನ್ನು ಬಿಟ್ಟುಬರುತ್ತಿದ್ದುದೂ ತಮಗೆ ಇಷ್ಟವಿಲ್ಲವೆಂದು ತಿಳಿಸಿದರು. ಯಾವುದೋ ಭೂಮಿಯಲ್ಲಿ ಬೆಳೆದು ಅರಳಿದ್ದ ಚಿಕ್ಕ ಗಿಡವನ್ನು ಬೇರುಸಹಿತ ತಾವು ಕೀಳುತ್ತಿದ್ದಂತೆ ಭಾವಿಸಿಕೊಂಡಿದ್ದರು. ಈಗ ಆ ಗಿಡವನ್ನು ಬೇರೆಕಡೆ ನಾಟಿಹಾಕಬೇಕಾಗಿದ್ದುದರಿಂದ, ಅನೇಕ ಸಂಶಯಗಳು ಅವರ ಮೇಲೆ ಧಾಳಿನಡೆಯಿಸಿದವು. ಬುಡಸಹಿತ ಕಿತ್ತು ತಂದ ಗಿಡದಿಂದ ಪ್ರಯೋಜನವುಂಟಾಗುವುದೇ, ಅದು ಸರ್ವಾಂಗ ಸುಂದರವಾಗಿಯೂ ಫಲದಾಯಕವಾಗಿಯೂ ಬೆಳೆಯುವುದೇ, ಅಥವಾ ಒಗ್ಗದ ವಾತಾವರಣದಲ್ಲಿ ಬಾಡಿಹೋಗುವುದೇ? ತಮ್ಮ ಮನೆ ಸನ್ನಿಹಿತವಾದಂತೆಲ್ಲ ಅಂತಹ ಪ್ರಶ್ನೆಗಳು ರಾಜಾರವರನ್ನು ಪೀಡಿಸಿದವು. ನನ್ನನ್ನು ಮದುವೆಯಾದುದಕ್ಕಾಗಿ ಅವರು ಪಶ್ಚಾತ್ತಾಪಡುತ್ತಿದ್ದಂತೆ ಕಂಡು ಬಂದರು.

ಬೆಳಗ್ಗೆ ಹೊತ್ತಿಗೆ ಮುಂಚೆಯೇ ನಾವು ಅಹಮ್ಮದಾಬಾದ್ ನಗರವನ್ನು ತಲುಪಿದೆವು. ಅವರ ಬಂಧುಮಿತ್ರರು ನಮ್ಮನ್ನು ನಿಲ್ದಾಣದಲ್ಲಿ ಸ್ವಾಗತಿಸಿದರು. ಅಹಮ್ಮದಾಬಾದಿನಲ್ಲಿ ಕೆಲವು ದಿನಗಳಿದ್ದು, ಅನಂತರ ಬೊಂಬಾಯಿಯಲ್ಲಿ ಸಂಸಾರಹೂಡಲು ಹೊರಟೆವು. ಹೀಗೆ ಹೊಸ ಬಾಳು ಆರಂಭವಾಯಿತು.

ತಮ್ಮ ತಾರುಣ್ಯದಲ್ಲಿ ರಾಜಾರವರು ಸರ್ಕಾರಿ ಶಾಲೆಗೆ ಬಹಿಷ್ಕಾರ ಹಾಕಿ ರಾಷ್ಟ್ರೀಯ ವಿದ್ಯಾಪೀಠವನ್ನು ಸೇರಿದ್ದರು. ಕೊನೆಗೆ ಇಂಗ್ಲೆಂಡಿ

ನಲ್ಲಿದ್ದಾಗ ಇತರ ವಿದ್ಯಾರ್ಥಿಗಳಂತೆ ರಾಜಕೀಯ ಪ್ರವಾಹದಲ್ಲಿ ಮುಳುಗಿ ಎದ್ದಿದ್ದರು. ಅಲ್ಲಿಂದ ಹಿಂದಿರುಗಿದಾಗ, ತಾವು ಬೊಂಬಾಯಿಯ ನ್ಯಾಯಪೀಠದಲ್ಲಿ ಯೋಗ್ಯವಾದ ಸ್ಥಾನಮಾನಗಳನ್ನು ಗಳಿಸುವತನಕ ರಾಜಕೀಯ ಪ್ರಸಂಗದಲ್ಲಿ ತಲೆಹಾಕುವುದಿಲ್ಲವೆಂದು ನಿರ್ಧರಿಸಿದ್ದರು. ಕೆಲವು ದಿವಸಗಳು ತಮ್ಮ ಕೆಲಸದಲ್ಲಿಯೇ ನಿರತರಾಗಿದ್ದರು. ಆದರೆ ರಾಜಕೀಯಗೀಳು ಹಿಡಿದಿದ್ದ ಅವರು ದೂರದ ಪ್ರೇಕ್ಷಕರಾಗುಳಿಯಲು ತುಂಬಾ ಅಸಾಧ್ಯವಾಯಿತು. ಕ್ರಮೇಣ ರಾಜಕೀಯ ರಂಗಕ್ಕೆ ಧುಮುಕಿದರು. ಸ್ವಕಾರ್ಯ ಸಾಧನೆಯಿಂದ ರಾಜಾರವರು ಅಷ್ಟು ಸುಖಿಯಾಗಿರಲಿಲ್ಲ. ತಮ್ಮ ಮಾತೃಭೂಮಿಗಾಗಿ ತಮ್ಮ ಅಳಿಲು ಸೇವೆಯನ್ನರ್ಪಿಸಲು ಅವರು ಸದಾ ಕಾತರರಾಗಿದ್ದರು. ಸಮಯ ಬಿದ್ದಾಗ, ಸ್ವಾತಂತ್ರ್ಯಸಾಧನೆಗಾಗಿ ತಮ್ಮ ಆಸ್ತಿಪಾಸ್ತಿ ಗಳನ್ನು ಮಾತ್ರವೇ ಅಲ್ಲ, ತಮ್ಮ ಪ್ರೇಮವಸ್ತುಗಳನ್ನು ಧಾರೆಯೆರೆಯಲು ಸಿದ್ಧರಾಗಿದ್ದರು. ಸ್ವಾರ್ಥಾಭಿಲಾಷೆಗಳಾಗಲೀ, ಸ್ವಾರ್ಥಪ್ರಯೋಜನಗಳಾಗಲೀ ರಾಜಾರವರ ರಾಜಕೀಯ ಜೀವನವನ್ನು ಇಲ್ಲಿಯವರೆಗೆ ಹೊಲಸುಗೊಳಿಸಲಿಲ್ಲ. ಇನ್ನು ಮುಂದೆಯೂ ಹೊಲಸುಗೊಳಿಸುವುದಿಲ್ಲವೆಂದು ನಂಬಿದ್ದೇನೆ. ಬೆಳಕಿಗೆ ಬರದೆ, ಹಿನ್ನೆಲೆಯಲ್ಲಿದ್ದು ಸದ್ದಿಲ್ಲದೆ ಕೆಲಸಮಾಡುವುದೇ ಅವರಿಗೆ ತುಂಬಾ ಇಷ್ಟ. ಅನೇಕ ನಿರಾಶೆಗಳು ಧಾಳಿ ನಡೆಯಿಸಿದ್ದರೂ, ಎದೆಗೆಡದೆ ಸ್ಥೈರ್ಯಹೀನರಾಗದೆ ತಮ್ಮ ಸೇವಾಕಾರ್ಯದಲ್ಲಿ ನಿರತರಾಗಿದ್ದಾರೆ.

ರಾಜಾರವರು ಎಷ್ಟೇ ವಯಸ್ಸಿನವರಾದರೂ ತಮ್ಮ ಹಸುಳೆತನದ ಸರಳಶೀಲವನ್ನಾಗಲೀ, ಕೆಲವು ಆದರ್ಶಗಳಲ್ಲಿ ವಿಶ್ವಾಸವನ್ನಾಗಲೀ ಎಂದೂ ಬಿಡದ ವ್ಯಕ್ತಿ. ಅವರ ಪ್ರಾಮಾಣಿಕತೆ ನಿಷ್ಕಾಪಟ್ಯಗಳು ನಿಷ್ಕಳಂಕವಾದುವು. ಸೋದರ ಮಾನವನವರ ಅಂತ್ಯಕ್ಷೇಮದಲ್ಲಿ ಅವರಿಗೆ ಅಚಲವಾದ ನಂಬಿಕೆಯಿದೆ. ನೀತಿನಡತೆಗಳ ವಿಚಾರದಲ್ಲಿ ತಮ್ಮದೇ ಆದ ಧರ್ಮಶಾಸ್ತ್ರವೊಂದಿದೆ ; ಆದರೆ ಭಿನ್ನ ಭಿನ್ನ ಮಾರ್ಗಾನುಯಾಯಿಗಳನ್ನು ಎಂದೂ ದೂಷಿಸುವುದಿಲ್ಲ. ಅಂತಹ ಆದರ್ಶವಾದಿಗಳು ನಿರಾಶೆ ಮುಸುಕಿದಾಗ ಬಹಳ ಸಂಕಟಪಡಬೇಕಾಗುತ್ತದೆ.

ಅವರು ಸ್ವಾಭಿಮಾನಿಯಾದ ಜಂಭಗಾರನೆಂದು ಅನೇಕರು

ಭಾವಿಸಿದ್ದಾರೆ. ಅದು ನಿಜವಲ್ಲ. ಬುದ್ಧಿಸೂಕ್ಷ್ಮತಾವೈಪರೀತ್ಯವನ್ನು ತಪ್ಪೆಂದು ಕರೆಯುಬಹುದಾದರೆ, ಅವರಲ್ಲಿರುವ ತಪ್ಪು ಅದೊಂದೇ. ನಡೆ ನುಡಿಗಳಲ್ಲಿ ಇತರರಿಂದ ಭಿನ್ನವಾಗಿದ್ದುದರಿಂದಲೂ, ಇತರರು ತಮ್ಮನ್ನು ತಪ್ಪಾಗಿ ತಿಳಿದುಕೊಂಡಿದ್ದುದರಿಂದಲೂ ಅವರು ಚಿಕ್ಕಂದಿನಲ್ಲಿಯೇ ದೊಬಿಯಿಂದ ದೂರವಾಗಿರಲು ಕಲಿತರು. ಅವರ ನಿಸ್ಸಂಗತ್ವಾಪೇಕ್ಷೆಯನ್ನು ಇತರರು ಜಂಭವೆಂದು ಭಾವಿಸಿಕೊಂಡಿದ್ದಾರೆ. ಅವರನ್ನು ಬಲ್ಲವರು ಅವರ ಸದ್ಗುಣಗಳಿಗಾಗಿ ಅವರನ್ನು ಮೆಚ್ಚುವುದಿಲ್ಲ—ಸದ್ಗುಣಗಳಾದರೂ ಹೆಚ್ಚಾಗಿಲ್ಲ—ಅವರಲ್ಲಿರುವ ಮಾನವ ಸಹಜವಾದ ಲೋಪದೋಷಗಳಿಂದ ಎಲ್ಲರೂ ಅವರನ್ನು ಮೆಚ್ಚುತ್ತಾರೆ.

ಪಯಣಿಗರೆ, ನಮ್ಮ ಪಥವೆಂತಂತು ನಮ್ಮ ಬಾಳ್
ಕಾಲು ನದಿಯಲಿ ಸೋಗೆಯೊಲು ತೇಲುವೆವು ನಾವು

—ಸಿಸಿಲ್ ಡೆ ಲೂಯಿ

೧೯೨೦ ನೆಯ ಇಸವಿಯಿಂದೀಚೆಗೆ ಬಾಳು ನಿರಂತರ ಬದಲಾವಣೆಗಳ ಮತ್ತು ಅನಿಶ್ಚಯತೆಗಳ ತೊಡಕಾಗಿದೆ. ಮುಂದೆ ಏನಾಗುತ್ತದೆಂಬುದೇ ನನಗೆ ಗೊತ್ತಾಗುತ್ತಿರಲಿಲ್ಲ. ಪ್ರಾರಂಭದಲ್ಲಿ ಬದಲಾವಣೆಗಳಿಂದ ಹುರುಪು ಮೂಡುತ್ತಿತ್ತು; ಆದರೆ ದಿನ ಕಳೆದು ದಿನ ಬಂದ ಹಾಗೆಲ್ಲಾ, ವರ್ಷ ಉರುಳಿ ಹೊಸವರ್ಷ ಉದಯಿಸಿದಂತೆಲ್ಲಾ ನಿರಂತರ ಅನಿಶ್ಚಯತೆ ಮುಂದುವರಿದು ಎದೆ ಬಿರಿಯುವಂತಾಗುತ್ತಿತ್ತು. ನನ್ನ ಮೊದಮೊದಲ ವೈವಾಹಿಕಜೀವನ ಪೂರ್ಣಶಾಂತಿಯಿಂದ ಕೂಡಿತ್ತು. ನಡುನಡುವೆ ಕೆಲವು ಎಡರುಗಳು ಸಂಭವಿಸುತ್ತಿದ್ದರೂ ಆ ಶಾಂತ ಜೀವನ ತಡೆಯಿಲ್ಲದೆ ಮುಂದೆ ಸಾಗುವುದೆಂದುಕೊಂಡಿದ್ದೆನು. ಆದರೆ ನಾನು ದುರ್ಲಭವಾದುದನ್ನು ಪಡೆಯಲು ಆಶಿಸುತ್ತಿದ್ದೆನು.

ಮೊದಲ ಕೆಲವು ತಿಂಗಳುಗಳು ಜೀವನದಲ್ಲಿ ಸಂಪೂರ್ಣ ಸುಖವಿರಲಿಲ್ಲ. ಸನಾತನ ಸಂಪ್ರದಾಯಗಳ ಮೇಲೆ ಕೈಗಾರಿಕಾ ಕ್ರಾಂತಿ ನಡೆಯಿಸಿದ ಧಾಳಿಯ ಪರಿಣಾಮವಾಗಿ ಮೂಡಿದ ವಿಪರೀತ ಪರ್ಯಾಸಗಳ ಸಂತೆಯಾಗಿತ್ತು ಅಹಮ್ಮದಾಬಾದ್ ನಗರ. ಆ ದೊಡ್ಡ ಕೈಗಾರಿಕಾ ಕೇಂದ್ರ ನಾನೆಂದೂ ಕಂಡು ಕೇಳದೆ ಇದ್ದ ಭಿನ್ನಪ್ರಪಂಚವಾಗಿತ್ತು. ಜೀವನದರ್ಶನ, ಸಂಪ್ರದಾಯಗಳು, ರೀತಿನೀತಿಗಳು ಮತ್ತು ಜೀವನ ವಿಧಾನ–ಪ್ರತಿಯೊಂದೂ ನನ್ನ ಜಗತ್ತಿಗಿಂತ ತೀರ ಭಿನ್ನವೆಂದು ಭಾಸವಾವಾಯಿತು. ನನ್ನ ಪತಿಯ ಮನೆಯವರೆಲ್ಲ ದಯಾನಿಧಿಗಳಾಗಿದ್ದರೂ ನಾನು ಒಂದೊಂದು ಸಾರಿ ಒಬ್ಬಂಟಿಗಳೆಂದು ಭಾವಿಸುಕೊಳ್ಳುತ್ತಿದ್ದುದಲ್ಲದೆ ಗಾಬರಿಗೊಳ್ಳುತ್ತಿದ್ದೆನು. ರಾಜಾರವರ ಮೇಲಣ ಪ್ರೇಮ ಗಂಭೀರವಾಗಿಯೂ ತೀವ್ರವಾಗಿಯೂ ಇಲ್ಲದಿದ್ದಲ್ಲಿ ನನ್ನ ಹೊಸಬಾಳು ತುಂಬಾ ಕಠಿಣವಾಗುತ್ತಿತ್ತು. ರಾಜಾರವರ ದಿವ್ಯಪ್ರೇಮ, ನನ್ನ

ನಿರಾಶಾಸಮಯದಲ್ಲಿ ಅವರು ತೆಗೆದುಕೊಳ್ಳುತ್ತಿದ್ದ ಎಚ್ಚರಿಕೆ ಮತ್ತು ಅವರ ಕುಟುಂಬವರ್ಗದವರ ಔದಾರ್ಯ— ಇವು ನನ್ನ ನಿರಾಶೆಯ ಘೋರ ರಾತ್ರಿಯಲ್ಲಿ ಕೈಪಂಜುಗಳಾದುವು; ಇಂದಿಗೂ ಅವು ನನಗೆ ದಾರಿ ತೋರಿಸುತ್ತಿವೆ. ನಾನು ಹಲವುಬಾರಿ ರಾಜಾರವರ ವಿಷಯದಲ್ಲಿ ತಪ್ಪಿ ನಡೆದಿರಬಹುದು, ಆದರೆ ಅವರೆಂದಿಗೂ ನನ್ನ ವಿಷಯದಲ್ಲಿ ತಪ್ಪಿ ನಡೆದಿಲ್ಲ.

ನನ್ನ ಮದುವೆ ಮುಗಿದ ಕೆಲವು ತಿಂಗಳುಗಳನಂತರ ಜವಹರನಿಂದ ನನಗೊಂದು ಪತ್ರ ಬಂತು. ಹೊಸ ವಾತಾವರಣಕ್ಕೆ ಒಗ್ಗಿಕೊಳ್ಳಬೇಕಾದ ಸಮಯದಲ್ಲಿ ಅದರಿಂದ ನನಗೆ ತುಂಬಾ ಸಹಾಯವಾಯಿತು. "ನಿನ್ನ ವೈವಾಹಿಕ ಜೀವನದ ನವೀನಾನುಭವದಲ್ಲಿ ಬಾಳನ್ನು ಬೇರೆ ಬೇರೆ ಮೂಲೆಗಳಿಂದ ದೃಷ್ಟಿಸಿ ತಿಳಿವಳಿಕೆಯನ್ನು ಸಂಪಾದಿಸಬೇಕು. ಆದರೆ ಅನೇಕ ವರ್ಷಗಳು ನಮ್ಮಿಂದ ಜಾರಿ ಹೋದಮೇಲೆ, ಅನೇಕವರ್ಷಗಳನ್ನು ಮತ್ತು ಅನೇಕ ಪ್ರಯತ್ನ ಪ್ರಯಾಸಗಳನ್ನು ಬಲಿತೆತ್ತಮೇಲೆ ತಿಳಿವಳಿಕೆ ಮೂಡುತ್ತದೆ. ಕಾರಾಗೃಹವಾಸವನ್ನು ಅನುಭವಿಸಿದವರಿಗೆ ಸಹನೆಯ ಬೆಲೆಯಾದರೂ ಗೊತ್ತಿರುತ್ತದೆ. ಸಮಯಸನ್ನಿವೇಶಗಳಿಗೆ ತಕ್ಕಂತೆ ಒಗ್ಗಿಕೊಳ್ಳುವ ಶಕ್ತಿಯನ್ನು ಸಂಪಾದಿಸಿರುವುದೇ ಆ ಅನುಭವದ ಪ್ರಯೋಜಕ ಪರಿಣಾಮ. ನನ್ನ ಪುಟ್ಟ ತಂಗಿ, ನೀನು ಕೂಡಲೇ ಹೊಸವಾತಾವರಣಕ್ಕೆ ಒಗ್ಗಿಕೊಂಡು, ಎಂದೆಂದಿಗೂ ಸುಖಶಾಂತಿಗಳಿಂದ ನಲಿಯುತ್ತಿರಬೇಕೆಂಬುದೇ ನನ್ನ ಹೆಬ್ಬಯಕೆ."

ಮೊದಮೊದಲು ಆಹಾರವೇ ನನಗೊಂದು ದೊಡ್ಡ ಸಮಸ್ಯೆಯಾಯಿತು. ಇದೇನೋ ವಿಚಿತ್ರವಾಗಿ ತೋರಬಹುದು. ಊಟ ತಿಂಡಿಗಳ ಕಡೆಗೆ ನಾನು ಯಾವಾಗಲೂ ವಿಶೇಷವಾಗಿ ಗಮನಕೊಡುತ್ತಿರಲಿಲ್ಲ; ಆದರೆ ಕಾಶ್ಮೀರದವರಂತೆ ನನಗೂ ಬಾಡುಮೀನುಗಳ ಮೇಲೆ ತುಂಬ ಇಷ್ಟ. ಅಹಮ್ಮದಾಬಾದಿನಲ್ಲಿ ಪ್ರತಿಯೊಬ್ಬರೂ ಶುದ್ಧ ಶಾಖಾಹಾರಿಗಳು; ಮಾಂಸ, ಮೀನು, ಮೊಟ್ಟೆಗಳಲ್ಲಿ ಯಾವುದನ್ನೂ ಉಪಯೋಗಿಸುತ್ತಿರಲಿಲ್ಲ. ಹೋಟಲುಗಳಲ್ಲಿಯೂ ಅಂತಹ ಪದಾರ್ಥ

ಗಳು ಸಿಗುತ್ತಿರಲಿಲ್ಲ ಗುಜರಾಥಿನ ಆಹಾರವನ್ನು ಕಂಡರೆ ನನಗೆ ಇಷ್ಟ; ಆದರೆ ಬರಿಯ ತರಕಾರಿಗಳಿಂದಲೇ ನಾನು ತೃಪ್ತಳಾಗುತ್ತಿರಲಿಲ್ಲ. ಮೂರು ತಿಂಗಳತನಕ ನಾನು ಶಾಖಾಹಾರಿಯಾಗಿದ್ದೆನು. ಅಷ್ಟರಲ್ಲಿಯೇ ಊಟ ಸೇರದೆ ಬಹಳ ತೇದುಹೋಗಿದ್ದೆನು. ಕಡೆಕಡೆಗೆ ಮಾಂಸದ ಹಂಬಲವಿಲ್ಲದೆ ಇರಲು ರೂಢಿಮಾಡಿಕೊಂಡೆನು. ಈಗ ಅನೇಕ ದಿನಗಳತನಕ ಮಾಂಸವಿಲ್ಲದೆ ಇರಬಲ್ಲೆನು.

ರಾಜಾರವರ ಕುಟುಂಬ ಅಹಮ್ಮದಾಬಾದಿನಲ್ಲಿ ಪುರೋಗಾಮಿಯಾದ ವರ್ತಕ ಕುಟುಂಬಗಳಲ್ಲೊಂದು. ಬಹಳ ವರ್ಷಗಳ ಹಿಂದೆ ಮಕ್ಕಳು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗಲೇ ಅವರ ತಂದೆಯವರು ಸ್ವರ್ಗಸ್ಥರಾಗಿದ್ದರು. ಅನಂತರ ಅವರ ತಾಯಿಯವರು ವ್ಯಾಪಾರದ ಜವಾಬ್ದಾರಿಯನ್ನು ವಹಿಸಿಕೊಂಡು, ಎಷ್ಟೇ ಘೋರ ವಿಘ್ನಗಳೊದಗಿದ್ದರೂ ಜಯಪ್ರದವಾಗಿ ನಡೆಸಿಕೊಂಡು ಬಂದಿದ್ದರು. ತಮ್ಮ ಮಕ್ಕಳು ಆ ಕಾರ್ಯಭಾರಕ್ಕೆ ಹೆಗಲುಕೊಡಲು ಶಕ್ತರಾಗುವತನಕ, ಅದನ್ನೆಲ್ಲ ತಾವೇ ವಹಿಸಿಕೊಂಡಿದ್ದರು. ಅಂತಹ ವಿಷಮಪರಿಸ್ಥಿತಿಯಲ್ಲಿಯೂ ಅವರು ತಮ್ಮ ಮಕ್ಕಳನ್ನು ಉಪೇಕ್ಷಿಸಿರಲಿಲ್ಲ. ತಮ್ಮ ತಾಯ್ತನದೊಲವು ಎಚ್ಚರಿಕೆಗಳನ್ನೆಲ್ಲ ಸೂರೆಗೊಟ್ಟು, ಅವರ ಸಣ್ಣ ಪುಟ್ಟ ಆವಶ್ಯಕತೆಗಳ ಕಡೆಗೂ ಗಮನವಹಿಸುತ್ತಿದ್ದರು. ಇತರ ವರ್ತಕರ ಹಾಗೆ ರಾಜಾರವರ ಮನೆಯವರು ಸಹ ತೆರೆಯ ಮರೆಯಲ್ಲಿರುವವರು, ಡೊಂಬಿಗದ್ದಲಗಳಿಂದ ದೂರವಾಗಿರುವವರು, ಮತ್ತು ತಮ್ಮ ಭಾವಗಳ ಉಬ್ಬರವಿಳಿತಗಳನ್ನು ಬಚ್ಚಿಡುವವರು. ಮೊದಮೊದಲು ಇದು ನನಗೆ ಅರ್ಥವಾಗದೆ, ಅವರಿಗೆ ನನ್ನ ಮೇಲೆ ಪ್ರೀತಿಯಿಲ್ಲವೆಂದು ತಪ್ಪಾಗಿ ಭಾವಿಸಿಕೊಂಡಿದ್ದೆನು.

ರಾಜಾರವರು ಅವಿಭಕ್ತ ಕುಟುಂಬಕ್ಕೆ ಸೇರಿದವರಾದರೂ, ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರವಾಗಿ ತಮ್ಮ ತಮ್ಮ ಬದುಕನ್ನು ಸಾಗಿಸಲು ಅವಕಾಶವುಂಟು. ಯಾರು ಎಲ್ಲಿರಲಿ, ಹೇಗಿರಲಿ, ಎಲ್ಲರೂ ಒಟ್ಟಿಗೆ ಹೆಣೆದುಕೊಂಡ ಒಂದೇ ಕುಟುಂಬದಂತಿದ್ದಾರೆ. ಅವರನ್ನು ಒಂದುಗೂಡಿಸುವ ಸಾಧನಗಳು ವ್ಯಾಪಾರ ವ್ಯವಹಾರಗಳು ಮಾತ್ರವೇ

ಅಲ್ಲ, ಅವರ ಕಟ್ಟೊಲುವೆುಯ ಕಟ್ಟುಗಳು. ಅಹಮ್ಮದಾಬಾದಿನ ವರ್ತಕಮಂಡಲಿ ಸಂಕುಚಿತ ಪ್ರಕೃತಿಯುಳ್ಳದು, ಹಳೆಯ ಕಂದಾಚಾರದ ಅನುಯಾಯಿ, ಮತ್ತು ಸ್ವಾರ್ಥಾವಲಂಬಿ; ಇತರರು ತನ್ನ ಹೆಜ್ಜೆಗನುಗುಣವಾಗಿ ಕಾಲಿಡಬೇಕೆಂಬುದೇ ಪ್ರತಿಯೊಬ್ಬ ವರ್ತಕನ ಹೆಬ್ಬಯಕೆ. ಇಂತಹ ವರ್ತನೆ ವ್ಯಕ್ತಿಯ ಸ್ವಂತಜೀವನದಲ್ಲಿ—ಅದರಲ್ಲಿಯೂ ಅವಿಭಕ್ತಕುಟುಂಬದ ವ್ಯಕ್ತಿಯ ಜೀವನದಲ್ಲಿ ಅನಾವಶ್ಯಕವೂ ಕೋಪಕಾರಕವೂ ಆದ ಸನ್ನಿವೇಶವನ್ನು ತಂದೊಡ್ಡುತ್ತದೆ. ಆದುದರಿಂದ ನಾನು ಒಗ್ಗಿಕೊಳ್ಳುವುದು ಕಷ್ಟವಾಯಿತಲ್ಲದೆ ನಿದಾನವೂ ಆಯಿತು.

ಪುರಾತನಕಾಲದ ಅವಿಭಕ್ತ ಕುಟುಂಬಗಳು ವಾಸ್ತವವಾಗಿ ಪ್ರಯೋಜನಕಾರಿಗಳಾಗಿದ್ದುವಲ್ಲದೆ, ಆ ಕಾಲದ ಸಾಮಾಜಿಕ ಚೌಕಟ್ಟಿಗೆ ಹೊಂದಿಕೊಂಡಿದ್ದುವೆಂದು ನಾನು ನಂಬಿಕೊಂಡಿದ್ದೇನೆ. ಇಂದು ಆ ಚೌಕಟ್ಟು ತೀವ್ರವಾಗಿ ಪುಡಿಪುಡಿಯಾಗುತ್ತಿದೆ. ಅದು ಹಳೆಯ ಆಕಾರದಲ್ಲಿ ಉಳಿಯಲಾರದು. ಭರತಖಂಡದಲ್ಲೆಲ್ಲ ನಿರಂತರವಾದ ಹೋರಾಟ ನಡೆಯುತ್ತಿದ್ದಂತೆ ಕಂಡುಬಂದಿತು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತೋಚಿದ ರೀತಿಯಲ್ಲಿ ತಾನು ಬದುಕಬೇಕೆಂಬ ಹಕ್ಕನ್ನು ಉದ್ಘೋಷಿಸಿದನು. ಏಕರೀತಿಯೆ ಆದರ್ಶ ಅವಿಭಕ್ತಕುಟುಂಬದ ಗುರಿ. ಕಾಲಕ್ರಮೇಣ ಇವೆರಡರಲ್ಲಿ, ಕುಟುಂಬದವ್ಯಾಪ್ತಿ ಸಹಜವಾಗಿಯೇ ಕಡಮೆಯಾಯಿತು. ವ್ಯಕ್ತಿಯ ಬಾಳಿನಲ್ಲಿ ಮಾತ್ರವಲ್ಲದೆ ರಾಷ್ಟ್ರೀಯ ಜೀವನದಲ್ಲಿಯೂ ಅದು ಅಡಚಣೆಯನ್ನು ತಂದೊಡ್ಡಿತು. ಮತ್ತು ಇಂದು ಪ್ರಪಂಚದ ಪ್ರಗತಿಪ್ರಚೋದಕ ಶಕ್ತಿಗಳೊಡನೆ ಹೊಂದಿಕೊಳ್ಳಲಾರದೆ ಹೋಯಿತು. ಅವಿಭಕ್ತಕುಟುಂಬ ಕ್ರಮೇಣ ಮಾಯವಾಗುತ್ತದೆಂದೆ ನನ್ನ ನಂಬಿಕೆ. ಇಂತಹ ಸಂಪ್ರದಾಯಗಳು ಭೂತಕಾಲದ ಗರ್ಭದಲ್ಲಿ ಆಳವಾಗಿ ಬೇರೂರಿರುವುದರಿಂದಲೂ, ಭರತಖಂಡವು ಸುವಿಶಾಲವಾದ ದೇಶವಾದುದರಿಂದಲೂ, ಅದು ಮಾಯವಾಗಲು ಕೆಲವು ದಿನಗಳು ಹಿಡಿಯುತ್ತವೆ.

ಪೂರ್ಣತೆಯ ದೃಷ್ಟಿಯಿಂದ ಕುಟುಂಬ, ಅದರಲ್ಲಿಯೂ ಸಣ್ಣ ಸಣ್ಣ ಕುಟುಂಬಗಳು ಅತಿಪ್ರಾಮುಖ್ಯವಾದುವು. ತಂದೆತಾಯಿಯರು,

ಜವಹರ ಮತ್ತು ಆತನ ಸಂಸಾರ, ಅಕ್ಕ ಮತ್ತು ನಾನು—ಇಷ್ಟು ಜನ ಸೇರಿ ಒಂದು ಕುಟುಂಬವಾಗಿತ್ತು. ಕಠಿಣನಿಯಮಗಳು ಯಾವುವೂ ನಮ್ಮನ್ನು ಬಂಧಿಸಿರಲಿಲ್ಲ. ನಾವು ಒಂದೇ ಚಾವಣಿಯ ಕೆಳಗೆ ವಾಸಿಸುತ್ತಿದ್ದರೂ ವ್ಯಕ್ತಿಸ್ವಾತಂತ್ರ್ಯವಿತ್ತು ; ಒಬ್ಬರು ಮತ್ತೊಬ್ಬರ ವ್ಯವಹಾರಗಳಲ್ಲಿ ಪ್ರವೇಶಿಸುತ್ತಿರಲಿಲ್ಲ. ಪ್ರೇಮಸೂತ್ರಗಳು ಮಾತ್ರ ನಮ್ಮನ್ನು ಪರಸ್ಪರ ಬಂಧಿಸಿದ್ದುವು ; ಅವುಗಳಿಗಿಂತ ಭದ್ರವಾದ ಸೂತ್ರಗಳು ಬೇರೆ ಇರಲಿಲ್ಲ. ಅವಿಭಕ್ತಕುಟುಂಬದಲ್ಲಿ ವ್ಯಕ್ತಿಗಳನ್ನು ಬಂಧಿಸುವ ಆರ್ಥಿಕ ಬಂಧನಗಳು ತೀವ್ರವಾಗಿಯೋ ನಿದಾನವಾಗಿಯೋ ನಿಜವಾದ ಶೃಂಖಲೆಗಳಾಗಿ ಪರಿಣಮಿಸಿ ವ್ಯಕ್ತಿಯನ್ನು ಕೆಳಗೊತ್ತಿ, ಆತನ ಬೆಳೆವಣಿಗೆಯನ್ನು ಮುರುಟಿಸುತ್ತವೆ.

ಈ ನನ್ನ ಅಭಿಪ್ರಾಯಗಳಿಗೂ, ರಾಜಾರವರ ಕುಟುಂಬವರ್ಗದವರ—ಕೆಲವು ವೇಳೆ ರಾಜಾರವರ ಅಭಿಪ್ರಾಯಗಳಿಗೂ ಸ್ವಾಭಾವಿಕವಾಗಿ ತಿಕ್ಕಾಟವಾಗುತ್ತಿತ್ತು. ಅನೇಕ ವಿಷಯಗಳಲ್ಲಿ ನಮ್ಮ ದೃಷ್ಟಿಕೋನ ತೀರ ಭಿನ್ನವಾಗಿದ್ದುದರಿಂದ, ನಮ್ಮ ಅಭಿಪ್ರಾಯಗಳೂ ಕೆಲವು ವೇಳೆ ವಿರೋಧವಾಗಿರುತ್ತಿದ್ದುವು. ಅಂದಿನಿಂದ ಇಂದಿನವರೆಗೆ ರಾಜಾರವರು ತೋರಿಸಿರುವ ಸಹನಶೀಲತೆ ಮತ್ತು ಗ್ರಹಣ ಶಕ್ತಿಗಳು ಅತ್ಯದ್ಭುತವಾದುವು ಮತ್ತು ಅನ್ಯಾದೃಶವಾದುವು. ಮೊದಲು ಕೆಲವು ತಿಂಗಳುಗಳು ನಾನು ಕಷ್ಟದೆಸೆಯಲ್ಲಿದ್ದಾಗ, ಅವು ನನಗೆ ತುಂಬಾ ಸಹಾಯಮಾಡಿದುವು

ನಮ್ಮ ವಿವಾಹಾನಂತರ ಕೆಲವು ತಿಂಗಳುಗಳು ರಾಜಾರವರ ಕುಟುಂಬದ ಜತೆಯಲ್ಲಿಯೇ ಇದ್ದೆವು. ಕೊನೆಗೆ ನಾವಿಬ್ಬರೂ ಒಂದು ಉಪ್ಪರಿಗೆಮನೆಯಲ್ಲಿ ಇರಲಾರಂಭಿಸಿದೆವು. ಆ ಉಪ್ಪರಿಗೆ ಚಿಕ್ಕದಾದರೂ, ತುಂಬಾ ನವೀನವಾಗಿದ್ದು ನನಗೆ ಮೆಚ್ಚಿಕೆಯಾಗಿತ್ತು. ಗೃಹಕೃತ್ಯದಲ್ಲಿ ನಾನು ನುರಿತವಳಲ್ಲವಾದುದರಿಂದ ನನಗೆ ಗಾಬರಿಯಾಗುತ್ತಿತ್ತು. ಒಂದೊಂದು ಸಾರಿ ತೊಂದರೆಯೂ ಸಂಭವಿಸುತ್ತಿತ್ತು. ಒಟ್ಟಿನಲ್ಲಂತು ನನ್ನದೇ ಆದ ಮನೆಯಲ್ಲಿ ಸಂಸಾರ ನಡೆಯಿಸುವುದು ಚೆಂದವೆನಿಸುತ್ತಿತ್ತು. ಭೋಗೋಪಸಿದ್ಧತೆಗಳಿಂದ ಪರಿಪೂರ್ಣವಾಗಿದ್ದ ಭವ್ಯ

ಭವನದಲ್ಲಿ ಜೀವನದ ಬಹುಭಾಗವನ್ನು ಕಳೆದ ನನಗೆ ಉಪ್ಪರಿಗೆಯ ವಾಸ ಮತ್ತು ಸರಳಜೀವನಗಳು ಹೊಸ ಅನುಭವಗಳಾಗಿದ್ದವು.

ನನ್ನ ಪತಿ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದಾಗ, ಒಬ್ಬಂಟಿಗಳಾಗಿ ಕಾಲ ಕಳೆಯಲು ಬೇಸರವಾಗುತ್ತಿತ್ತು. ಬೊಂಬಾಯಿಯಲ್ಲಿ ನನಗೆ ಸಾಕಾದಷ್ಟು ಮಂದಿ ಪರಿಚಯಸ್ಥರಿರಲಿಲ್ಲ. ರಾಜಾರವರ ಗೆಳೆಯರನ್ನು ಬಿಟ್ಟರೆ, ನನಗೆ ಚೆನ್ನಾಗಿ ಗೊತ್ತಿದ್ದವರು ತಂದೆಯವರ ಹಳೆಯ ಗೆಳೆಯರು ಮತ್ತು ಆ ಗೆಳೆಯರ ಕುಟುಂಬವರ್ಗದವರು. ಗೆಳೆಯರನ್ನು ಸಂಪಾದಿಸುವುದರಲ್ಲಿ ಚಟುವಟಿಕೆಯುಳ್ಳ ನನಗೆ ಅನೇಕ ಪರಿಚಯಸ್ಥರನ್ನೂ, ಕೇವಲ ಕೆಲವು ಮಿತ್ರರನ್ನೂ ಸಂಪಾದಿಸಲು ತಡವಾಗಲಿಲ್ಲ ಜೀವನ ಸುಖಸಂತೃಪ್ತಿಗಳಿಂದ ಕೂಡಿತ್ತು.

೧೯೩೩ನೆಯ ಇಸವಿಯ ಚಳಿಗಾಲದಲ್ಲಿ ಜವಹರನು ಪುನಃ ಸೆರೆಯಲ್ಲಿ ಸೇರಿದನು. ಸಾಮಾನ್ಯವಾಗಿ ಅವನು ಪ್ರತಿ ಸಂವತ್ಸರದ ಬಹುಭಾಗವನ್ನು ಸೆರೆಮನೆಯಲ್ಲಿ ಕಳೆಯುತ್ತಾನೆ. ನಾವು ಆತನನ್ನು ನೋಡಿ ಅನೇಕ ತಿಂಗಳುಗಳಾಗಿದ್ದವು. ಜವಹರನನ್ನು ನೋಡಲು ರಾಜಾರವರಿಗು ಮತ್ತು ನನಗು ಇಷ್ಟವಿದೆಯೇ ಎಂದು ಕಮಲಳ ನನಗೆ ಕಾಗದ ಬರೆದಳು. ನಾವು ಅವಳ ಸಲಹೆಯನ್ನು ಕುತೂಹಲದಿಂದ ಒಪ್ಪಿಕೊಂಡೆವು. ಭೇಟಿಯ ಏರ್ಪಾಡಾಯಿತು. ಕಮಲಳ ಜತೆಯಲ್ಲಿ ಡೆಹ್ರಾಡೂನ್ ಸೆರೆಮನೆಗೆ ಹೋಗುವುದೆಂದು ನಾವು ನಿರ್ಧರಿಸಿಕೊಂಡೆವು. ಗೊತ್ತಾದ ದಿನ ನಾವು ಸೆರೆಮನೆಯ ಬಾಗಿಲುಗಳ ಬಳಿ ನಿಂತು ಕಾದೆವು. ಅರ್ಧಘಂಟೆ ಕಾದನಂತರ ಜವಹರನ ಕೋಣೆಗೆ ಹೋಗಲು ಅವಕಾಶ ದೊರೆಯಿತು. ಸೆರೆಮನೆಯ ಕಚೇರಿಯಲ್ಲಿಯೇ ಭೇಟಿಗಳು ನಡೆಯುವುದು ವಾಡಿಕೆ. ಆದರೆ ಜವಹರನ ಕೋಣೆ ಹೊರಗಣ ಅಂಕಣದಲ್ಲಿದ್ದುದರಿಂದ ಅಲ್ಲಿಗೆ ಹೋಗಲು ನಮಗೆ ಅನುಮತಿ ದೊರೆಯಿತು. ರಾಜಾರವರು ಹಿಂದೆಂದೂ ಸೆರೆಮನೆಯ ಅಂಚಿಗೂ ಹೋಗಿರಲಿಲ್ಲ. ಇದೇ ಅವರ ಪ್ರಥಮ ಭೇಟಿ. ಡೆಹ್ರಾಡೂನ್ ಸೆರೆಮನೆ ನಾನು ನೋಡಿರುವ ಕೆಲವು ಸೆರೆಮನೆಗಳಷ್ಟು ಭಯಂಕರವಾಗಿಲ್ಲ. ಆದರೆ ಇಂಡಿಯಾದೇಶದ ಸೆರೆಮನೆಯ ಹತ್ತಿರ ಹಿಂದೆಂದೂ ಸುಳಿಯದವ

ರಿಗೆ ಡೆಹ್ರಾಡೂನ್ ಸೆರೆಮನೆ ಉಗ್ರಸ್ವರೂಪಿಯಾಗಿ ಕಾಣಿಸುತ್ತದೆ. ನಾವು ಜವಹರನ ಕೋಣೆಯಲ್ಲಿ ಕುಳಿತುಕೊಂಡೆವು. ಒಂದು ಕಬ್ಬಿಣದ ಮಂಚ, ಒಂದು ಮೇಜು ಮತ್ತು ಒಂದು ಕುರ್ಚಿ—ಇವಲ್ಲದೆ ಬೇರಾವ ಉಪಕರಣಗಳೂ ಅಲ್ಲಿರಲಿಲ್ಲ. ಅಲ್ಲಿ ಇಲ್ಲಿ ಕೆಲವು ಪುಸ್ತಕಗಳು ಹರಡಿದ್ದುವು. ಒಂದು ಮೂಲೆಯಲ್ಲಿ ದಾರತೆಗೆಯುವ ರಾಟೆಯಿತ್ತು. ಆ ದಿನ ಚಳಿಗಾಳಿಗಳು ಹೆಚ್ಚಿ ಎಲ್ಲೆಲ್ಲಿಯೂ ಮಂಕು ಕವಿದಿತ್ತು. ಆ ಕೋಣೆ ಕಾಂತಿಹೀನವಾಗಿ ಭಯಂಕರವಾಗಿತ್ತು. ಜವಹರನು ಎಂದಿನಂತೆ ನಮ್ಮನ್ನು ತನ್ನ ಮುಗುಳ್ನಗೆ ಮಿಂಚಿನಿಂದ ಸ್ವಾಗತಿಸಿದರೂ, ಆತನು ಬಡವಾಗಿದ್ದಂತೆಯೂ, ಅಸ್ವಸ್ಥನಾಗಿದ್ದಂತೆಯೂ ಕಂಡುಬಂದನು. ನಾನೂ ಕಮಲಳೂ ನಮ್ಮ ಪ್ರೀತಿಯ ಬಂಧುಗಳನ್ನು ಅನೇಕ ಸ್ಥಿತಿಗತಿಗಳಲ್ಲಿ ನೋಡಿ ರೂಢಿಯಾಗಿತ್ತು. ರಾಜಾರವರಿಗೆ ಅದೆಲ್ಲಾ ಹೊಸ ಅನುಭವ. ಅವರ ಮನಸ್ಸಿನ ಹೊಯ್ದಾಟಕ್ಕೆ ಸುತ್ತಮುತ್ತಣ ಸನ್ನಿವೇಶಗಳೇ ಕಾರಣವಾದುವು. ಅಲ್ಲಿರುವತನಕ ಅವರು ಸದ್ದು ಪಿಟಕ್ಕೆನ್ನಲಿಲ್ಲ. ಮಾತೆಲ್ಲಾ ನಮ್ಮದೇ ಆಗಿತ್ತು, ನಾವು ಮನೆಗೆ ಹಿಂದಿರುಗುವಾಗ ಅವರು ಯಾರೊಡನೆಯೂ ಮಾತಾಡದೆ ನೇರವಾಗಿ ತಮ್ಮ ಕೋಣೆಗೆ ಹೋದರು. ಸ್ವಲ್ಪ ಹೊತ್ತು ಅವರು ಈಚೆಗೆ ಬರಲೇಇಲ್ಲ, ಏನಾಯಿತೋ ನೋಡೋಣವೆಂದು ನಾನೇ ಒಳಗೆ ಹೋದೆನು. ದುಃಖ ಪೀಡಿತರಾಗಿ ಅವರು ಹಾಸಿಗೆಯ ಮೇಲೊರಗಿದ್ದರು. ಅಲ್ಲಿಂದೀಚೆಗೆ ರಾಜಾರವರು ಅನೇಕ ಸಾರಿ ಸೆರೆಮನೆಗೆ ಹೋಗಿ ಜವಹರನನ್ನು ನೋಡಿಕೊಂಡು ಬರುತ್ತಿದ್ದರು. ಸೆರೆಮನೆಗೆ ಹೋಗಿಬಂದಂತೆಲ್ಲ ಅವರ ದುಃಖ ನಿರಾಶೆಗಳು ಕಡಿಮೆಯಾಗಲಿಲ್ಲ. ಪ್ರೀತಿಯ ನೆಂಟರಿಷ್ಟರು ವರ್ಷಗಟ್ಟಲೆ ಸೆರೆಮನೆಯಲ್ಲಿ ಕೊಳೆಯುವುದು ಯಾರಿಗೂ ಹಿತಕರವಲ್ಲ. ಇದರಿಂದ ಯಾರಿಗೆ ತಾನೆ ಸಂಕಟವಾಗುವುದಿಲ್ಲ ನಮ್ಮಿಂದ ದೂರವಾಗಿರುವವರ ಸಂಸರ್ಗಕ್ಕಾಗಿ ಮನಸ್ಸು ಹಾತೊರೆಯುತ್ತಿರುತ್ತದೆ. ಆದರೂ ನಾವು ಅಸಹಾಯಕತೆ ಅಧೈರ್ಯಗಳಿಗೆ ತುತ್ತಾಗದೆ ಹೋರಾಟವನ್ನು ಮುಂದುವರಿಸಲು ಬೇಕಾದ ಸ್ಥೈರ್ಯಸಾಹಸಗಳನ್ನು ಗಳಿಸಲು ಶಕ್ತಿಯುಳ್ಳವರಾಗಿದ್ದೇವೆ. ಇಂದು ರಾಜಾರವರು ಸಾವಿರಾರು ಗೆಳೆಯ

ರೊಡನೆ ಸೆರೆಮನೆಯಲ್ಲಿದ್ದಾರೆ. ನಾವು ಒಬ್ಬರನ್ನೊಬ್ಬರು ನೋಡಿ ವರ್ಷದಮೇಲಾಯಿತು. ಒಂದೊಂದು ಸಾರಿ ರಾಜಾರವರ ಮೇಲಣ ಬಯಕೆಯೂ, ಒಂಟಿತನದ ಬೇಸರಿಕೆಯೂ ನನ್ನನ್ನು ಕುಗ್ಗಿಸಿವೆ. ರಾಜಾರವರು ಔತ್ಕಂಠ್ಯವನ್ನು ನನ್ನ ಪತ್ರಗಳ ಧ್ವನಿಯಿಂದಲೇ ಊಹಿಸಿ, ದೌರ್ಬಲ್ಯಪ್ರದರ್ಶನಕ್ಕಾಗಿ ನನ್ನನ್ನು ನಾಚಿಸುವರು.

ಕೆಲವು ವರ್ಷಗಳ ಕಾಲ ರಾಜಾರವರು ರಾಜಕೀಯದಿಂದ ದೂರ ವಾಗಿರಲು ಪ್ರಯತ್ನಿಸಿದರು. ಆದರೆ ಮಹತ್ವಪೂರ್ಣವಾದ ವಿದ್ಯುದ್ವೇಗದ ಘಟನಾವಳಿಗಳ ಬಿರುಸಿಗೆ ದಕ್ಕದೆ ಸಾರ್ವಜನಿಕಕ್ಷೇತ್ರದಿಂದ ದೂರವಾಗಿರಲು ಅವರಿಗೆ ಶ್ರಮಸಾಧ್ಯವಾಯಿತು. ಕೊನೆಗೆ ಆ ಬಿರುಹೊನಲಿನಲ್ಲಿ ಅವರೂ ಧುಮುಕಬೇಕಾಯಿತು. ನನ್ನ ಪ್ರೇರಣೆಯಿಂದ ಅವರು ಈ ಕಾರ್ಯವನ್ನು ಕೈಗೊಂಡರೆಂದೂ ವಕೀಲಿವೃತ್ತಿಯನ್ನು ತ್ಯಜಿಸಲು ನಾನೇ ಕಾರಣಳೆಂದೂ, ಅನೇಕರು ಅಭಿಪ್ರಾಯಪಟ್ಟಿದ್ದಾರೆ ಆದರೆ ಅದು ಬರಿಯ ತಪ್ಪುಭಾವನೆ. ರಾಜಕೀಯದ ಅಂತರಂಗಬಹಿರಂಗವಿಷಯಗಳು ನನಗೆ ಚನ್ನಾಗಿ ತಿಳಿದಿದ್ದುವು. ರಾಜಕೀಯವೆಂದರೆ ಅನಿಶ್ಚಯತೆ, ವಿಪರ್ಯಯ, ಕಾರಾಗೃಹವಾಸ ಮತ್ತು ದೀರ್ಘಾವಧಿಯ ವಿಯೋಗ. ನಾನು ಆಕ್ಷೇತ್ರದಲ್ಲಿ ಹದಿಮೂರು ವರ್ಷಗಳ ದೀರ್ಘಾನುಭವವನ್ನು ಪಡೆದಿದ್ದೆನು. ಆದುದರಿಂದ ನಾನು ಹೊಸದಾಗಿ ಸಂಪಾದಿಸಿದ ಶಾಂತಿ ಸಂತೃಪ್ತಿಗಳಿಗೆ ಎಳ್ಳುನೀರೆರೆಯಲು ಇಷ್ಟಪಡಲಿಲ್ಲ. ನನ್ನ ಗಂಡುಮಕ್ಕಳು ತೀರ ಚಿಕ್ಕವರಾದುದರಿಂದ ರಾಜಕೀಯದಲ್ಲಿ ಚುರುಕಾಗಿ ಭಾಗವಹಿಸಲು ನನಗೆ ಇಷ್ಟವಿರಲಿಲ್ಲ. ಜವಹರನ ಮತ್ತು ಸ್ವರೂಪಳ ಮಕ್ಕಳು ಬಾಲ್ಯಾರಭ್ಯ ಕೌಟುಂಬಿಕಜೀವನವಿದೂರರಾಗಿ, ಮನೆಯಿಲ್ಲದೆ ಗೊತ್ತುಗುರಿಯಿಲ್ಲದೆ ಹೇಗೆ ತೊಂದರೆಗೀಡಾಗಿದ್ದರೆಂಬುದು ನನಗೆ ಗೊತ್ತಿತ್ತು. ಆದರೂ ನನ್ನ ಸುತ್ತಮುತ್ತ ನಡೆಯುತಿದ್ದ ಘಟನೆಗಳು ನನ್ನನ್ನು ತಾಕದೆ ಇರಲಿಲ್ಲ. ನಾನೂ ನನ್ನ ಕೈಲಾದಷ್ಟು ಅಲ್ಪ ಸೇವೆಯನ್ನರ್ಪಿಸಿದೆನು. ರಾಜಾರವರು ಹೃದಯಪೂರ್ವಕವಾಗಿ ಹೋರಾಟದಲ್ಲಿ ಧುಮುಕಲು ಆಶಿಸಿದರು. ಅವರನ್ನು ತಡೆಯುವ ಪ್ರಯತ್ನ ಸಾಧುವಲ್ಲವೆಂದರಿತುಕೊಂಡೆನು. ಅಲ್ಪಾವಧಿಯ ಸ್ವಾತ್ಯ

ಕೊನೆಗೊಂಡು ಬಂಧನ ಮತ್ತು ಕಾರಾಗೃಹವಾಸಗಳಿಂದುಂಟಾದ ವಿಯೋಗವನ್ನು ಸಹಿಸಲು ನಾನು ಮತ್ತೆ ಸಿದ್ಧಳಾದೆನು.

ಬೊಂಬಾಯಿನಗರವನ್ನು ನಾನು ಪ್ರೀತಿಸುತ್ತಿದ್ದೆನು. ಅಲಹಾಬಾದ್ ಪಟ್ಟಣ ನನ್ನ ತವರೂರಾಗಿದ್ದುದರಿಂದ ನನಗೆ ಹೆಚ್ಚು ಪ್ರಿಯವಾಗಿತ್ತೇ ಹೊರತು ಬೇರಾವ ಕಾರಣದಿಂದಲೂ ಅಲ್ಲ. ಬಹುಶಃ ನನ್ನ ಜೀವನದ ಅರ್ಧಭಾಗ ಸಣ್ಣ ಪಟ್ಟಣದಲ್ಲಿ ಸವೆದಿದ್ದುದರಿಂದ, ದೊಡ್ಡ ನಗರಗಳ ಕಡೆಗೆ ನನ್ನ ಮನಸ್ಸು ಒಲಿದಿರಬಹುದು. ಸುಖೋಷ್ಣಪೂರ್ಣವೂ, ಸ್ನೇಹಮಾಧುರ್ಯಮಯವೂ ಆದ ಬೊಂಬಾಯಿನಗರದ ವಾತಾವರಣ ನನಗೆ ಹಿತಕರವಾಗಿತ್ತು. ಪ್ರತಿನಿತ್ಯವೂ ಹೊಸ ಹೊಸ ಆಶೆ ಆಕಾಂಕ್ಷೆಗಳನ್ನು ಪ್ರಚೋದಿಸುವ ವಾತಾವರಣವದು. ಸಮುದ್ರದ ಪರಿಚಯ ನನಗೆ ಹೊಸದೆಂದೇ ಹೇಳಬೇಕು. ಅದರ ಭೀಷಣ ಮನೋಹರತೆಗೆ ನಾನು ಪರವಶಳಾದೆನು. ನಾನು ಹಿಂದೆ ಯೂರೋಪಿಗೆಹೋಗಿದ್ದಾಗ ಸಮುದ್ರಯಾನದ ಅನುಭವ ಲಭಿಸಿತ್ತು. ಕಡಲ ತಡಿಯಲ್ಲಿ ದೀರ್ಘಕಾಲ ವಾಸವಾಗಿರಲಿಲ್ಲ. ಬೊಂಬಾಯಿಯಲ್ಲಿ ಆ ಅನುಭವ ಸಂಪತ್ತು ಸಂಪೂರ್ಣವಾಗಿ ಲಭಿಸಿತು. ಒಂದರಮೇಲೊಂದು ಬಿದ್ದೆದ್ದು ಅಡ್ಡಲಾಗಿ ಸಿಕ್ಕಿದ ದೊಡ್ಡ ಬಂಡೆಗಳನ್ನು ರಪ್ಪನೆ ಬಡಿದು ಮೇಲೆರಗುವ ಭೀಮೋಪಮತರಂಗಮಾಲೆಗಳನ್ನು ನೋಡುತ್ತಾ ಕುಳಿತಿದ್ದರೆ ಹೊತ್ತೇ ಗೊತ್ತಾಗುತ್ತಿರಲಿಲ್ಲ.

ಕೆಲಸವಿಲ್ಲದೆ ದಿನಗಳನ್ನು ಕಳೆಯುವುದು ಕಷ್ಟವಾಯಿತು. ಆದುದರಿಂದ ವಿವಿಧ ಸ್ತ್ರೀಸಮಾಜಗಳನ್ನು ಸೇರಿ ಸಮಾಜ ಸೇವೆಯನ್ನು ಕೈಕೊಂಡೆನು.. ಹೊಲಗೇರಿಗಳು ನಮ್ಮ ಕಾರ್ಯರಂಗಗಳಾದುವು. ಆ ಕೆಲಸ ನನಗೆ ಚೆನ್ನಾಗಿ ಒಗ್ಗಿತು. ಅಲ್ಲಿಯ ದುಃಖದಾರಿದ್ರ್ಯಗಳ ರಾಕ್ಷಸೀ ನರ್ತನವನ್ನು ನೋಡಿ, ಅದನ್ನು ಉಪಶಮನಗೊಳಿಸಲಾರದೆ ಇದ್ದುದಕ್ಕಾಗಿ, ನನ್ನ ಹೃದಯ ದುಃಖದ ಮಡುವಾಗುತ್ತಿತ್ತು.

೧೯೩೫ ನೆಯ ಜನವರಿ ತಿಂಗಳಲ್ಲಿ ತಾಯಿಯವರು ನಮ್ಮನ್ನು ನೋಡಲು ಬಂದರು. ಜವಹರನು ಸೆರೆಮನೆಯಲ್ಲಿದ್ದನು; ಕಮಲ ಕಲ್ಕತ್ತೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಳು. ವಾರ್ಧಾದಲ್ಲಿ ಕೆಲವು ದಿನ

ಗಳು ಇದ್ದುಹೋಗಬಹುದೆಂದು ಬಾಪೂರವರು ತಾಯಿಯವರನ್ನು ಕರೆಯುತ್ತಲೇ ಇದ್ದರು. ಅಲಹಾಬಾದಿನಲ್ಲಿ ಒಬ್ಬಂಟಿಗರಾಗಿದ್ದುದರಿಂದ ಅಲ್ಲಿಗೆ ಹೋಗಲು ನಿಶ್ಚಯಿಸಿದರು. ವಾರ್ಧಾಯಾತ್ರೆಯನ್ನು ಮುಗಿಸಿಕೊಂಡು ಅವರು ಬೊಂಬಾಯಿಗೆ ಬಂದರು. ನನ್ನ ಹೊಸ ಮನೆಗೆ ಅಂದೇ ಅವರ ಪ್ರಥಮ ಭೇಟಿ. ಅವರನ್ನು ಬರಮಾಡಿಕೊಳ್ಳಲು ನನಗೆ ಅತ್ಯಾನಂದ. ನನ್ನೊಡನೆ ಒಂದು ತಿಂಗಳಕಾಲ ಇರುವುದೆಂದು ಉದ್ದೇಶಿಸಿದ್ದರು. ಆದರೆ ದುರದೃಷ್ಟವಶಾತ್ ಮೂರು ವಾರಗಳು ಕಳೆಯುವುದರೊಳಗಾಗಿ ಅವರಿಗೆ ಪಾರ್ಶ್ವವಾಯು ಹಿಡಿದು ಒಂದೆರಡು ತಿಂಗಳುಗಳ ತನಕ ಅಪಾರವಾದ ಬೇನೆಗೊಳಗಾದರು. ನನ್ನ ಅಕ್ಕ ಚಿಕ್ಕಮ್ಮರಿಬ್ಬರೂ ಬೊಂಬಾಯಿಗೆ ಬಂದರು. ತಾಯಿಯವರು ಉಳಿವು ಅಳಿವುಗಳ ನಡುವೆ ತೂಗುಯ್ಯಾಲೆಯಾಗಿದ್ದಾಗ, ಪ್ರತಿಯೊಂದು ಹಗಲೂ, ಇರುಳೂ ನಮಗೆ ಕುತೂಹಲವನ್ನುಂಟುಮಾಡುತ್ತಿತ್ತು.

ತಾಯಿಯವರು ಗುಣಮುಖರಾಗುತ್ತಿದ್ದಾಗಲೇ, ೧೯೩೮ ನೆಯ ಇಸವಿ ಫೆಬ್ರುವರಿ ಒಂದನೆಯ ತಾರೀಖು ನಮ್ಮ ಮಗ ಹರ್ಷ ಹುಟ್ಟಿದನು. ತಾಯಿಯವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಹರ್ಷನೇ ಅವರ ಮೊಟ್ಟ ಮೊದಲನೆಯ ಮೊಮ್ಮಗ; ಏಕೆಂದರೆ ಅಣ್ಣ ಮತ್ತು ಅಕ್ಕ ಇಬ್ಬರಿಗೂ ಇದ್ದವರು ಬರಿಯ ಹೆಣ್ಣು ಮಕ್ಕಳೇ.

ತಾಯಿಯವರ ಖಾಯಿಲೆಯೇನೋ ನಿಧಾನವಾಗಿ ವಾಸಿಯಾಯಿತು; ಆದರೆ ಅವರ ಅಂತ್ಯ ಆರಂಭವಾಗಿತ್ತು. ಅವರು ಮತ್ತೆ ತಮ್ಮ ಹಿಂದಿನ ಸ್ಥಿತಿಗೆ ಹಿಂದಿರುಗಲೇ ಇಲ್ಲ.

೧೯೩೮ ನೆಯ ಇಸವಿಯ ಏಪ್ರಿಲ್ ತಿಂಗಳಲ್ಲಿ ಕಮಲಳ ರೋಗ ಉಲ್ಬಣವಾಯಿತು. ಆದಷ್ಟು ಬೇಗ ಸ್ವಿಟ್ಸರ್‌ಲೆಂಡಿಗೆ ಹೋಗುವುದು ಮೇಲೆಂದು ವೈದ್ಯರು ಅವರಿಗೆ ತಿಳಿಸಿದರು. ಆಗ ಆವಳು ಸಂಯುಕ್ತ ಪ್ರಾಂತ್ಯದ ಪರ್ವತಗ್ರಾಮವಾದ ಬೊವಾಲಿಯ ಆರೋಗ್ಯವಸತಿಯಲ್ಲಿದ್ದಳು. ಅವಳು ವಿದೇಶಕ್ಕೆ ಹೊರಡುವ ಮುನ್ನ ಕೆಲವು ದಿನಗಳು ಅವಳೊಡನೆ ಇರೋಣವೆಂದು ರಾಜಾರವರೂ ನಾನೂ ನಿರ್ಧರಿಸಿದೆವು. ಎರಡು ತಿಂಗಳ ಕೂಸನ್ನೆತ್ತಿಕೊಂಡು ನಾವು ಬೊವಾಲಿಗೆ ಹೋದೆವು.

ತ್ರಲ್ಲಿ, ನಾವು ಒಂದು ತಿಂಗಳಿದ್ದೆವು. ನಾವು ಮುಂದೆ ಎಂದೆಂದಿಗೂ ಅವಳನ್ನು ನೋಡಲಾರೆವೆಂಬ ಅರಿವು ಆಗಲಿಲ್ಲ. ಒಂದು ವರ್ಷ ಮುಗಿಯುವುದರೊಳಗಾಗಿ ಕಮಲ ಸ್ವರ್ಗಸ್ಥಳಾದಳು.

ಅವಳ ಸಾವಿನ ಸುದ್ದಿ ಗೊತ್ತಾದ ನಾಲ್ಕು ದಿನಗಳನಂತರ ನಮ್ಮ ಮಗ ಅಜಿತ ಹುಟ್ಟಿದನು. ಆತನ ಜನನದಿಂದ ನಾವೆಲ್ಲರೂ ನಲಿದ್ಯಾಡ ಬೇಕಾಗಿತ್ತು ; ಆದರೆ ಕಮಲಳ ಸಾವು ನಮ್ಮ ಮೇಲೆ ಮಂಕು ತೆರೆ ಯನ್ನು ಕವಿಚಿತು. ಕಟ್ಟಳಲ ಹೊರೆಯಿಂದ ಭಾರವಾಗಿದ್ದ ನಮ್ಮೆದೆ ಗಳಿಗೆ ಪುತ್ರಜನ್ಮೋತ್ಸವದ ಸವಿ ರುಚಿಸಲಿಲ್ಲ. ಆದರೂ ದುಃಖಾಗ್ನಿ ತಗ್ಗಲು ಪುತ್ರಸಾನ್ನಿಧ್ಯವೇ ಕಾರಣವಾಯಿತು.

ಕಣ್ಣೆರಿಯುವ ಚೆಲುವಿನ ಬಾಳೊಂದೆ ಚಣ ;
ಕಂದಿದಡೇನದು ಕಂಪಳಿಯುವುದೇಂ ?
ಮುದ್ದು ಗುಲಾಬಿಯು ಕಂಪೇ ಕಹಿಯಲ
ಹೇರಕ್ಕರೆಯಿಂದದನೊಲಿಡವಗೆ.

—ಫ್ರಾನ್ಸಿಸ್ ಥಾಂಸನ್

ನಾನು ಮೊದಲು ಕಮಲಳನ್ನು ನೋಡಿದುದು ಆನಂದಭವನದಲ್ಲಿ, ತಂದೆಯವರು ಏರ್ಪಡಿಸಿದ್ದ ಔತಣಕೂಟದಲ್ಲಿ. ನಾನು ಚಿಕ್ಕವಳಾಗಿದ್ದುದರಿಂದ ನನ್ನನ್ನು ಅಲ್ಲಿ ಸೇರಿಸಿಲಿಲ್ಲ. ಆದರೆ ಅಂಗಳದಲ್ಲಿ ನಿಂತು ಅಲ್ಲಿಯ ಆಗುಹೋಗುಗಳನ್ನು ನೋಡುತ್ತಿದ್ದೆನು. ನನ್ನ ಚಿಕ್ಕಮ್ಮ ಕಮಲಳ ಕಡೆ ಕೈತೋರಿಸಿ, “ಆ ಹುಡುಗಿಯನ್ನು ನೋಡಿದೆಯಾ ? ಅವಳನ್ನು ಕಂಡರೆ ನಿನಗೆ ಇಷ್ಟವೇ ? ನಿನಗೆ ಅತ್ತಿಗೆಯಾಗುವವಳು ಅವಳೇ” ಎಂದು ಹೇಳಿದರು. ಚಿಕ್ಕಮ್ಮ ಕೈ ತೋರಿಸಿದ ಕಡೆ ದೃಷ್ಟಿ ತಿರುಗಿಸಿದೆನು. ಕೆಲವು ಜನರ ನಡುವೆ ಮೇಜಿಗೆದುರಾಗಿ ಕುಳಿತಿದ್ದ ಸ್ನಿಗ್ಧಲಾವಣ್ಯವತಿಯೂ, ಕೃಶಾಂಗಿಯೂ, ದೀರ್ಘದೇಹಿಯೂ ಆದ ಸುಂದರಿಯನ್ನು ಕಂಡೆನು. ಅತ್ತಿಗೆಯೆಂದರೆ ಏನೆಂಬುದೇ ನನಗೆ ಅರ್ಥವಾಗಲಿಲ್ಲ ; ಆದರೆ ಅವಳು ನಮ್ಮೊಡನೆ ವಾಸಿಸಲು ಬರುವ ಬೇರೊಬ್ಬಳು ವ್ಯಕ್ತಿಯೆಂದು ಊಹಿಸಿಕೊಂಡೆನು. ಮತ್ತೊಬ್ಬಳು ತಂಗಿಯನ್ನು ಪಡೆಯುವುದು ಚಂದವೆಂದುಕೊಂಡೆನು. ಆದರೆ ಆಕೆ ನನಗಿಂತಲೂ ಚಿಕ್ಕವಳಾಗಿದ್ದು ನನಗೆ ಹತ್ತಿರದ ವಯಸ್ಸಿನವಳಾಗಿರಬೇಕೆಂದು ಬಯಸಿದೆನು. ಹದಿನೇಳು ವರ್ಷದ ಕಮಲಳ ಪ್ರಫುಲ್ಲ ಯೌವನ, ತಾರುಣ್ಯದ ನಾವೀನ್ಯ ಮತ್ತು ಪ್ರಪ್ರಥಮ ಚಿತ್ರ ಇವು ನನ್ನ ನೆನಪಿನಿಂದ ಎಂದೂ ಅಳಿಸಿಹೋಗುವಂತಿಲ್ಲ.

ಕೆಲವು ತಿಂಗಳುಗಳನಂತರ ಜವಹರನ ಮದುವೆ ದೆಹಲಿಯಲ್ಲಿ ನಡೆಯಿತು. ಕಮಲ ನಮ್ಮ ಜತೆಗೆ ಬಂದಳು. ಸೌಂದರ್ಯವತಿಯಾದ ತಮ್ಮ ಸೊಸೆಯ ಲಾವಣ್ಯವನ್ನು ತಮ್ಮ ಕಣ್ಣುಗಳಲ್ಲಿ ತುಂಬಿಕೊಂಡು, ನಮ್ಮ ತಂದೆತಾಯಿಯರು ಎಷ್ಟು ಹೆಮ್ಮೆಪಡುತ್ತಿದ್ದ

ರೆಂಬುದು ಇನ್ನೂ ನನ್ನ ನೆನಪಿನಲ್ಲಿದೆ. ಅವಳು ಲಾವಣ್ಯವತಿ ಮಾತ್ರವೇ ಅಲ್ಲ, ಆರೋಗ್ಯದೃಢಕಾಯಳೂ ಆಗಿದ್ದಳು. ತನ್ನ ಜೀವ ಮಾನದ ಬಹು ಭಾಗವನ್ನು ರುಗ್ಣಶಯ್ಯೆಯ ಮೇಲೆ ಕಳೆಯಬೇಕಾಗು ತ್ತದೆಂದು ಅವಳನ್ನು ನೋಡಿದವರು ಯಾರೂ ಕನಸಿನಲ್ಲಿಯೂ ಊಹಿಸು ವಂತಿರಲಿಲ್ಲ. ವೈವಾಹಿಕ ಜೀವನದ ಮೊದಲ ತಿಂಗಳು ಕಮಲ ಮತ್ತು ಜವಹರರಿಗೆ ಶುಭಸೂಚಕವಾಗಿದ್ದುವು. ಭವಿತವ್ಯ ದೇದೀಪ್ಯಮಾನ ವಾಗಿ ಕಂಡಿತು; ಕಾರ್ಮೋಡದೊಡ್ಡು ದಿಗಂತವನ್ನು ಕತ್ತಲಿಸಲಿಲ್ಲ. ಕೇವಲ ಕೆಲವು ವರ್ಷಗಳ ಸೌಖ್ಯವೂ ಕೊನೆಗೊಂಡಿತು. ಕೂಡಲೇ ಅನೇಕ ಬದಲಾವಣೆಗಳು ಆರಂಭವಾದುವು. ರಾಜಕೀಯ ಪೆಡಂಭೂತ ತಂದೆ ಜವಹರರಿಬ್ಬರನ್ನೂ ನುಂಗಿತು. ರಾಜಕೀಯ ಕ್ಷೇತ್ರದಲ್ಲಿಯೂ ಕ್ರಾಂತಿಕಾರಕವಾದ ಮಾರ್ಪಾಟುಗಳಾದುವು. ಬಡಕಲಾದ ತೆಳ್ಳ ನೆಯ ವ್ಯಕ್ತಿಯೊಬ್ಬರು ನಮ್ಮ ಮತ್ತು ಇನ್ನೂ ಅನೇಕರ ಜೀವಮಾನದ ತಮ್ಮ ಪ್ರಭಾವವನ್ನು ಬೀರಿ, ಘಟನಾಗತಿಯನ್ನೇ ಬೇರೆ ಕಡೆಗೆ ತಿರು ಗಿಸಿದರು. ಆ ಸಣ್ಣ ಮನುಷ್ಯನೇ ಗಾಂಧಿಜೀ. ನಮ್ಮ ಕುಟುಂಬದ ಇತರ ವ್ಯಕ್ತಿಗಳಂತೆ ಕಮಲಳೂ ಭೋಗವಿಲಾಸಗಳನ್ನು ತ್ಯಜಿಸಿ ಅವ ರನ್ನು ದೃಢಭಕ್ತಿನಿಷ್ಠೆಗಳಿಂದ ಅನುಸರಿಸಿದಳು. ಯಾವ ಕಲ್ಯಾಣ ಸಿದ್ಧಿಗಾಗಿ ಅವರು ಹೋರಾಡುತ್ತಿದ್ದರೋ ಅದು ಪವಿತ್ರವಾದುದರಿಂದ ಅವಳಿಗೆ ಅವರಲ್ಲಿ ವಿಶೇಷಗೌರವ ಮೂಡಿತು. ಅವರಿಗೂ ಅವಳನ್ನು ಕಂಡರೆ ವಿಶೇಷ ವಾತ್ಸಲ್ಯ.

ಕಮಲ ದುಃಖಕ್ಲೇಶಗಳನ್ನೆಂದೂ ಅರಿಯದವಳು. ಮದುವೆಗೆ ಮೊದಲು ಮತ್ತು ಆಮೇಲೆ ಅವಳು ನಿರಾತಂಕವೂ, ಸುಖಮಯವೂ ಆದ ಜೀವನವನ್ನು ಸಾಗಿಸಿದ್ದಳು. ನಾಳೆಯು ಒಡಲಿನಲ್ಲಿ ಏನಿ ರುವುದೆಂಬುದರ ಭೀತಿಯ ತೊಡಕೇ ಆಕೆಗೆ ಇರಲಿಲ್ಲ. ಕೂಡಲೇ ಬಾಳಿನ ತಕ್ಕಡಿ ಬದಲಾಯಿಸಿತು; ಅದು ವಿಯೋಗಾನಿಶ್ಚಯತೆ, ಹೃದಯವೇದನೆ ಮತ್ತು ರೋಗಗಳ ಕಣಜವಾಯಿತು; ಕಮಲ ಎಲ್ಲ ಎಡರು ತೊಡರುಗಳನ್ನು ಕುಗ್ಗದ ಮತ್ತು ಕುಂದದ ಧೈರ್ಯ ದಿಂದ, ಸದಾ ಮುಗುಳ್ನಗೆಯನ್ನು ಚೆಲ್ಲುತ್ತ ಎದುರಿಸಿದಳು. ಒಮ್ಮೆ

ಯಾದರೂ ಅವಳ ಬಾಯಿಂದ ನಾನು ಅಸಂತೃಪ್ತಿ ಅಸಮಾಧಾನಗಳ ದೂರನ್ನು ಕೇಳಲಿಲ್ಲ. ಬಯಸಿದ ಗುರಿ ಕೈಗೆ ಎಟುಕದಿದ್ದಾಗ ನಾವು ವಿಧಿಯನ್ನು ದೂರವಂತೆ ಅವಳು ಒಂದು ಸಾರಿಯೂ ದೈವವನ್ನು ನಿಂದಿಸಿ ಗೊಣಗಲಿಲ್ಲ. ಭಾರತಮಾತೆಯ ಪದತಲದಲ್ಲಿ ತನ್ನ ಬಾಳನ್ನೇ ಬಲಿಗೊಡಲು ಜವಹರನು ಸಿದ್ಧನಾದಾಗ, ಆತನನ್ನು ಹಿಂಬಾಲಿಸಲು ಕಮಲ ಒಂದು ಚಣವೂ ಹಿಂಜರಿಯಲಿಲ್ಲ. ಸ್ವಂತ ಕ್ಷೇಮವನ್ನು ಹಿಂಬದಿಗೆ ತಳ್ಳಿ ಪ್ರತಿ ಕ್ಷಣವೂ ದೇಶದ ಹಿತಚಿಂತನೆಯಲ್ಲಿಯೇ ಮಗ್ನ ಳಾಗಿದ್ದ, ಎಂದೂ ನಂದದ ತೇಜಸ್ಸನ್ನೂ ಮಗ್ಗದ ಧೈರ್ಯವನ್ನೂ ಹೊಂದಿದ್ದ ಸುಯೋಧೆಯನ್ನು ಭಾರತಮಾತೆ ಪಡೆದಿದ್ದರೆ, ಆ ಅಪೂರ್ವವ್ಯಕ್ತಿಯೇ ಕಮಲ. ಕಮಲಳ ವಿಷಯ ಹೆಚ್ಚಿಗೆ ಗೊತ್ತಿಲ್ಲ. ಅವಳ ವಿಷಯವಾಗಿ ನನ್ನ ಸಂಗಾತಿ ಬರೆದಿರುವ ಒಂದೆರಡು ನುಡಿಗಳನ್ನು ಇಲ್ಲಿ ಉದ್ಧರಿಸು ತ್ತೇನೆ-“ ಆಕೆಯ ಬಾಳು ಪ್ರಜ್ವಲಿಸುವ ಹೆಜ್ಜೊಡರ ಜ್ವಾಲೆಯಂತಿತ್ತು. ಅದು ಅಲುಗಾಡಿತು ಪ್ರಕಾಶಮಾನವಾಯಿತು, ಕ್ಷಣಕ್ಷಣಕ್ಕೂ ದೇದೀಪ್ಯ ಮಾನವಾಯಿತು. ಕೊನೆಗೆ ಎಣ್ಣೆ ಬತ್ತಲು ಜ್ವಾಲೆ ಕುಗ್ಗಿ ನಂದಿ ಹೋಯಿತು.” “ ಭಗವಂತನ ಪ್ರೇಮಕ್ಕೆ ಪಾತ್ರರಾದವರು ಎಳೆಹರೆಯ ದಲ್ಲಿಯೇ ತೀರಿಹೋಗುತ್ತಾರೆ” ಎಂಬ ನಾಣ್ಣುಡಿ ಕಮಲಳ ವಿಷಯ ದಲ್ಲಿಯೂ ನಿಜವಿರಬಹುದು. ಆಕೆಯನ್ನು ಪ್ರೀತಿಸದವರು, ಅಕೆಯ ಧೈರ್ಯೋತ್ಸಾಹಗಳನ್ನು ಹೊಗಳದವರು ಯಾರೂ ಇರಲಿಲ್ಲ. ಒಂದು ಕಡೆ ದೇಶದ ಮೆಚ್ಚಿಕೆಯನ್ನು ಗಳಿಸಿದ್ದ ಮಾವ, ಮತ್ತೊಂದು ಕಡೆ ಇಡೀ ಪ್ರಪಂಚದ ಗೌರವಕ್ಕೆ ಪಾತ್ರನೂ ಅದ್ವಿತೀಯ ವ್ಯಕ್ತಿಯೂ ಆದ ಪತಿ, ಇವರಿಬ್ಬರ ನೆರಳಿನಲ್ಲಿ ಬೆಳೆದ ಕಮಲ ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನವನ್ನು ಸಂಪಾದಿಸಿದ್ದಳು. ಆಕೆ ಯಮನ ಕ್ರೂರ ದಾಡೆಗೆ ತುತ್ತಾಗದಿದ್ದಲ್ಲಿ ಆಕೆಯ ಯಶಸ್ಸು ಪೂರ್ಣಚಂದ್ರನ ಚಂದ್ರಿಕೆ ಯಂತೆ ಬೆಳಗುತ್ತಿತ್ತು. ಆಕೆಯ ದುರ್ಬಲದೇಹದಲ್ಲಿ ಕಠೋರ ಸಂಯಮ, ದೃಢಪ್ರತಿಜ್ಞೆ ಮತ್ತು ಸತ್ಯನಿಷ್ಠೆಗಳು ಮುಪ್ಪುರಿಗೂಡಿದ್ದುವು. ಆಕೆಯ ಮುಗ್ಧನೇತ್ರಗಳ ಮತ್ತು ಪ್ರಶಾಂತಾಕೃತಿಯ ಹಿಂದೆ ವಜ್ರಶಕ್ತಿ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿತ್ತೆಂಬುದು ಅವಳ ಹತ್ತಿರ ಓಡಾಡಿದ

ಅನೇಕರಿಗೆ ಗೊತ್ತಿರಲಿಲ್ಲ. ಆಕೆ ಸದ್ಗುಣಗಳ ಗಣಿ. ಆದರೆ ಆಕೆಯಲ್ಲಿ ಅನೇಕ ಕುಂದುಕೊರತೆಗಳೂ ಇದ್ದುವು. ವಯಸ್ಸಾಗಿದ್ದರೂ ಆಕೆ ಹುಡುಗುತನದ ಆಟಪಾಟಗಳನ್ನಾಗಲೀ, ರೀತಿನೀತಿಗಳನ್ನಾಗಲೀ ಬಿಟ್ಟಿರಲಿಲ್ಲ. ಕೆಲವುವೇಳೆ ಅವಳು ತನ್ನ ಆರೋಗ್ಯದ ವಿಷಯದಲ್ಲಿ ವಿಪರೀತ ನಿರ್ಲಕ್ಷ್ಯಮನೋಭಾವದಿಂದಿರುತ್ತಿದ್ದಳು. ಇತರರ ಬುದ್ಧಿವಾದಗಳಿಗೆ ಕಿವಿಗೊಡುತ್ತಿರಲಿಲ್ಲ. ಅನೇಕ ಮಾರಾತ್ಮಕವಾದ ರೋಗಗಳಿಗೆ ಗುರಿಯಾಗಿದ್ದರೂ ಅವಳು ವಯಸ್ಸಾದವಳಂತೆ ಕಾಣುತ್ತಿರಲಿಲ್ಲ. ಕೊನೆಯವರೆಗೂ ಅವಳ ಮುಖದ ಮೇಲೆ ಎಳೆತನದ ರೂಪುರೇಖೆಗಳು ಅಳಿಸಿಹೋಗಿರಲಿಲ್ಲ. ಮದುವೆಯಾದಾಗ ಇದ್ದ ವರ್ಚಸ್ಸು ಕೊನೆಯ ತನಕ ಮುಗ್ಗಿರಲಿಲ್ಲ. ಅನಾರೋಗ್ಯ ಆಕೆಯ ಒಳಮೈಯಲ್ಲಿ ದೊಡ್ಡ ಹಾವಳಿಯನ್ನುಂಟುಮಾಡಿತ್ತು. ಆದರೆ ನಾನು ನೋಡಿದಂದಿನಿಂದ ಆಕೆಯ ಹೊರಮೈಯಲ್ಲಿ ಯಾವ ಮಾರ್ಪಾಡುಗಳೂ ಕಂಡುಬಂದಿರಲಿಲ್ಲ.

ಕಮಲಳ ವಿವಾಹಾನಂತರ ಅನೇಕ ವರ್ಷಗಳ ತನಕ ಆಕೆಯ ವಿಷಯವನ್ನು ಹೆಚ್ಚಾಗಿ ತಿಳಿದುಕೊಂಡಿರಲಿಲ್ಲ. ಹೊಸ ಸೊಸೆಯಾಗಿ ಮನೆಗೆ ಬಂದಾಗ ಎಲ್ಲರ ಸತ್ಕಾರಕ್ಕೂ ಪಾತ್ರವಾಗಿದ್ದಳು. ತಂದೆಯವರು ಹಲವುಬಾರಿ ಮಿತ್ರವೃಂದವನ್ನು ಆಹ್ವಾನಿಸುತ್ತಿದ್ದುದರಿಂದ, ಕೊನೆಕೊನೆಗೆ ಅತಿಥಿಗಳ ಸತ್ಕಾರದ ಭಾರ ಆಕೆಯ ಹೆಗಲನ್ನೇರಿತು. ತಾಯಿಯವರು ದುರ್ಬಲರಾಗಿದ್ದುದರಿಂದ ಕಮಲಳೇ ಆತಿಥ್ಯಕಾರಿಣಿಯಾಗಿ ನಿಯೋಜಿತವಾಗುತ್ತಿದ್ದಳು. ೧೯೨೭ ನೆಯ ಇಸವಿಯಲ್ಲಿ ನಾವೆಲ್ಲರೂ ಯೂರೋಪಿನಲ್ಲಿ ಒಟ್ಟಿಗಿದ್ದಾಗ, ಆಕೆಯ ನಿಜವಾದ ವ್ಯಕ್ತಿತ್ವ ಗೋಚರಿಸಿತು. ಅಂದು ನಮ್ಮ ಹೃದಯಗಳು ಒಂದಾದುವು. ನಮ್ಮ ಜೀವನಕ್ಕೆ ಸಂಬಂಧಪಟ್ಟ ಹಲವಾರು ವಿಷಯಗಳಮೇಲೆ, ಮತ್ತು ಸ್ತ್ರೀಯರ ಹಕ್ಕುಬಾಧ್ಯತೆಗಳ ವಿಷಯವಾಗಿ ಓದಿದ ಪುಸ್ತಕಗಳನ್ನೋ, ಕೇಳಿದ ಭಾಷಣಗಳನ್ನೋ ಕುರಿತು, ಹೊತ್ತು ಗೊತ್ತಿಲ್ಲದೆ ಬಿಸಿಬಿಸಿ ಚರ್ಚೆಯನ್ನು ನಡೆಯಿಸುತ್ತಿದ್ದೆವು. ಆದರೆ ಚರ್ಚೆಗಳೆಲ್ಲ ಸಂತೋಷದಲ್ಲಿ ಕೊನೆಗೊಳ್ಳುತ್ತಿದ್ದುವು. ಯೂರೋಪಿನಲ್ಲಿದ್ದಾಗ ಅವಳು ಬಹಳ

ದಿನಗಳತನಕ ಹಾಸಿಗೆ ಹಿಡಿದಿದ್ದಳು. ಪ್ರವಾಸಮಾಡಲು ಸಿದ್ಧಳಾದಾಗ ಕೆಲವು ತಿಂಗಳುಗಳ ಕಾಲ ಅವಳ ಜತೆಯಲ್ಲಿ ಸುತ್ತಾಡುವ ಭಾಗ್ಯ ಲಭಿಸಿತ್ತು. ಆಕೆಯ ಸಹವಾಸ ಸುಮನೋಹರವಾಗಿರುತ್ತಿತ್ತು. ಅವಳು ಯಾವಾಗಲೂ ಹೊಸಹೊಸ ವಸ್ತುಗಳನ್ನು ನೋಡುವುದಕ್ಕೂ, ಹೊಸಹೊಸ ವಿಷಯಗಳನ್ನು ಕಲಿತುಕೊಳ್ಳುವುದಕ್ಕೂ ಕಾತರಳಾಗಿರುತ್ತಿದ್ದಳು. ವನಭೋಜನ ಮತ್ತು ಔತಣಕೂಟಗಳಲ್ಲಿ ಸಂಪೂರ್ಣವಾದ ಪಾತ್ರವನ್ನು ವಹಿಸುತ್ತಿದ್ದಳು; ಬಳಲಿಕೆ ಮಿತಿಮೀರಿದ್ದರೂ, ಅದನ್ನು ಅಂತಹ ಸಂತೋಷಕೂಟಗಳಲ್ಲಿ ತೋರ್ಪಡಿಸುತ್ತಿರಲಿಲ್ಲ. ಎಂತಹ ಗುರುತರವಾದ ಕೋಪಕಾರಕ ಸನ್ನಿವೇಶಗಳಿದ್ದರೂ ಅವುಗಳಿಂದ ಚಲಿತಳಾಗುತ್ತಿರಲಿಲ್ಲ. ಯೂರೋಪಿನಿಂದ ಹಿಂದಿರುಗಿದಮೇಲೆ ಇಬ್ಬರೂ ಒಟ್ಟಿಗೆ ರಾಜಕೀಯರಂಗಕ್ಕೆ ಧುಮುಕಿದೆವು. ಇಬ್ಬರೂ ಒಟ್ಟಿಗೆ ಕೆಲಸ ಮಾಡಿದೆವು; ನಮ್ಮಿಬ್ಬರ ಸಂಬಂಧ ಮತ್ತಷ್ಟು ಗಾಢವಾಯಿತು. ಮತ್ತೆ ಅವಳ ಶಕ್ತಿಸಾಮರ್ಥ್ಯಗಳನ್ನು ನೋಡಿ ವಿಸ್ಮಯಗೊಂಡೆನು. ಅವಳಿಗಿಂತ ಆರೋಗ್ಯಶಾಲಿಯಾಗಿದ್ದ ನಾನು ಅನೇಕವೇಳೆ ಆಲಸಿಕೆ ಬಳಲಿಕೆಗಳ ಹಿಡಿತಕ್ಕೆ ಸಿಕ್ಕಿ ಮನೆಯಲ್ಲಿಯೇ ನಿಂತುಬಿಡುತ್ತಿದ್ದೆನು; ಆದರೆ ಅವಳು ಹಾಗೆ ನಿಲ್ಲುತ್ತಿರಲಿಲ್ಲ. ಮಾಗಿಯಕಾಲದಲ್ಲಿ ಮುಂಜಾನೆ ಐದು ಗಂಟೆಯ ಕೊರೆವ ಚಳಿಯಲ್ಲಿ ಎದ್ದು ಸ್ವಯಂಸೇವಕಿಯರಿಗೆ ಕವಾತು ಕಲಿಸಲು ಸಿದ್ಧಳಾಗುತ್ತಿದ್ದಳು. ಪ್ರತಿದಿನ ಬೆಳಗ್ಗೆ ಎಂಟುಗಂಟೆಯ ನಂತರ ವಿದೇಶೀವಸ್ತ್ರಗಳ ಅಂಗಡಿಗಳ ಮುಂದೆ ಮಾರಾಟತಡೆಯುವ ಕೆಲಸ ಆರಂಭವಾಗುತ್ತಿತ್ತು. ಮಾಗಿಯ ತಿಂಗಳಲ್ಲಿ ಕಮಲ ತನ್ನ ನಿತ್ಯಕರ್ಮವನ್ನು ಬಿಡದೆ, ಹಗಲೆಲ್ಲಾ ಕೆಲಸಮಾಡುತ್ತಿದ್ದಳು. ಬೇಸಿಗೆಯ ಬಿರು ಬಿಸಿಲು ಸುಡುತ್ತಿದ್ದರೂ ಕರ್ತವ್ಯಪರಾಙ್ಮುಖಳಾದವಳಲ್ಲ. ನಮ್ಮಲ್ಲಿ ಅನೇಕರು ಅದೇರೀತಿ ಕೆಲಸಮಾಡುತ್ತಿದ್ದೆವು; ಆದರೆ ನಾವು ಅನೇಕಾವೃತ್ತಿ ಗೊಣಗುಟ್ಟುತ್ತಿದ್ದೆವು, ನಮ್ಮ ಆಯಾಸವನ್ನು ವ್ಯಕ್ತಪಡಿಸುತ್ತಿದ್ದೆವು, ಮತ್ತು ಅಧೈರ್ಯಕ್ಕೆ ಪಕ್ಕಾಗುತ್ತಿದ್ದೆವು. ಕಮಲಳ ಆತ್ಮಪ್ರತ್ಯಯ ಆತ್ಮಶಕ್ತಿಗಳು ಎಂದೆಂದೂ ಕುಂದಲಿಲ್ಲ. ಆದರೆ ಆ ರೀತಿಯ ಬಳಲಿಕೆ ಅವಳ ಅಂತ್ಯವನ್ನು ಶೀಘ್ರಗೊಳಿಸಿತು. ಆಕೆಯ

ಆತ್ಮಶಕ್ತಿ ದುರ್ದಮ್ಯವಾದುದಾದರೂ, ದುರ್ಬಲವಾದ ದೇಹ ವಿಪರೀತ ಪ್ರಯಾಸವನ್ನು ತಡೆಯಲಾರದೆ ಸಾವಿಗೆ ಗುರಿಯಾಯಿತು.

ಕಮಲ ಶಾಂತಸ್ವಭಾವದ ವ್ಯಕ್ತಿಯಾದರೂ ಬಾಳಿನ ವಿಷಯವಾಗಿ ನಿಯತಾಭಿಪ್ರಾಯವುಳ್ಳವಳಾಗಿದ್ದಳು. ಒಂದು ಸಾರಿ ಅವಳು ನಿರ್ಧಾರಕ್ಕೆ ಬಂದುದಾದರೆ, ಯಾವ ಶಕ್ತಿಯೂ ಅವಳನ್ನು ತಡೆಯುವಂತಿರಲಿಲ್ಲ. ಅವಳ ತೇಜಸ್ಸು ಜವಹರನ ತೇಜಸ್ಸಿನ ಮರೆಯಲ್ಲಿ ಸ್ವಲ್ಪ ಮಟ್ಟಿಗೆ ಮಂಕಾಗಿದ್ದಿರಬಹುದು, ಆದರೆ ಅವಳ ವ್ಯಕ್ತಿತ್ವಕ್ಕೆ ಚ್ಯುತಿಯಿರಲಿಲ್ಲ.

ಸ್ತ್ರೀಯರ ಅಭಿವೃದ್ಧಿಯ ವಿಷಯದಲ್ಲಿ ಕಮಲ ಅತ್ಯಂತ ಆಸಕ್ತಿ ವಹಿಸಿದ್ದಳು. ಅವರ ಹಕ್ಕುಬಾಧ್ಯತೆಗಳನ್ನು ಕಾಪಾಡಲು ಅನೇಕ ಹೋರಾಟಗಳನ್ನೇ ಹೂಡಿದಳು. ಅನೇಕ ಗೃಹಿಣಿಯರು ಕಮಲಳ ಮಾತುಕತೆಗಳನ್ನು ಕೇಳಿ ಅವಳ ಅಭಿಪ್ರಾಯಗಳನ್ನು ಅನುಸರಿಸುತ್ತಿದ್ದುದರಿಂದ, ಅವು ಸರಿ ಬೀಳದ ಗಂಡಸರ ಕೋಪಕ್ಕೆ ಅವಳು ಆಗಾಗ್ಗೆ ಪಕ್ಕಾಗುತ್ತಿದ್ದಳು. ಆಕೆ ಯಾರಿಗೂ ಜಗ್ಗಿದವಳಲ್ಲ. ಆಕೆಯ ಆತ್ಮ ಶಕ್ತಿಯ ಮುಂದೆ ಯಾರ ಕತ್ತಿಯೂ ಹಾಯುವಂತಿರಲಿಲ್ಲ. ಮಾತೃಭೂಮಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿಂಚಿತ್ತಾದರೂ ಸೇವೆಯನ್ನು ಸಲ್ಲಿಸುವ ಸೌಭಾಗ್ಯ ದೊರೆತುದಕ್ಕಾಗಿ ಆಕೆಗೆ ಹೆಮ್ಮೆ. ಜವಹರನಂತಹ ಲೋಕ ಪೂಜ್ಯನಾದ ಪತಿದೇವನನ್ನು ಪಡೆದುದಕ್ಕಾಗಿ ಎಲ್ಲೆಗಟ್ಟಿಲ್ಲದ ನಲ್ಮೆ ಅವನ ಕೀರ್ತಿಯ ಹಬ್ಬುಗೆಯನ್ನು ಕಂಡು ಆಕೆ ಕರುಬಲಿಲ್ಲ; ಅವನ ಆರಾಧಕರನ್ನು ದೂಷಿಸಲಿಲ್ಲ.

೧೯೩೫ನೆಯ ಇಸವಿಯಿಂದೀಚೆಗೆ ಕಮಲಳ ಆರೋಗ್ಯ ದಿನೇ ದಿನೇ ಕ್ಷೀಣಿಸಲಾರಂಭಿಸಿತು. ಬೊವಾಲಿಯ ಆರೋಗ್ಯವಸತಿಯಲ್ಲಿ ಅವಳು ಕೆಲವು ತಿಂಗಳುಗಳಿದ್ದಳು. ಅಕೆ ಗುಣಮುಖಳಾಗಲೆನ್ನುವುದೇ ನಮ್ಮ ಅನುದಿನದ ಪ್ರಾರ್ಥನೆಯಾಗಿತ್ತು. ಆದರೆ ಆಕೆಯ ರೋಗ ದಿನೇ ದಿನೇ ವಿಷಮಿಸಿತು. ಜವಹರನು ಮತ್ತೊಮ್ಮೆ ಆಲ್ಮೋರಾ ಸೆರೆಮನೆಯಲ್ಲಿದ್ದನು. ಆಗಾಗ್ಗೆ ಕಮಲಳನ್ನು ನೋಡಲು ಅವನಿಗೆ ಅವಕಾಶ ಲಭಿಸುತ್ತಿತ್ತು. ಪತಿಯ ದರ್ಶನಕ್ಕಾಗಿ ಆಕೆ ಎಷ್ಟು ಕಾತರಳಾ

ಗಿದ್ದಿರಬಹುದು; ಅವರು ಜತೆಯಲ್ಲಿದ್ದಾಗ ಗಂಟೆಗಳು ಎಷ್ಟು ಜಾಗ್ರತೆ ಉರುಳಿಹೋಗಿರಬೇಕು! ಕಮಲ ಸ್ವಿಟ್ಜರ್ಲೆಂಡಿಗೆ ಹೋಗುವುದು ಮೇಲೆಂದು ವೈದ್ಯರು ಕೊನೆಗೆ ಸಲಹೆ ಕೊಟ್ಟರು. ವಿದೇಶಯಾತ್ರೆ ಹೊರಡುವ ಮುನ್ನ ಕೆಲವು ದಿನಗಳು ಆಕೆಯ ಜತೆಯಲ್ಲಿರಲು ರಾಜ ಮತ್ತು ನಾನು ಬೊವಾಲಿಗೆ ಹೊರಟೆವು. ನನ್ನ ಮಗುವಿಗೆ ಆಗ ಕೇವಲ ಎರಡು ತಿಂಗಳುಗಳಾಗಿದ್ದುವು. ಆತನನ್ನು ನೋಡಿದಾಗ ಕಮಲಳ ಆನಂದಕ್ಕೆ ಪಾರವೇ ಇಲ್ಲ. ತಾಯಿಯವರ ಸಂತೋಷಕ್ಕಿಂತಲೂ ಆಕೆಯ ಆನಂದ ಮಿಗಿಲಾಗಿತ್ತು. ನಾನು ಅವನನ್ನು ಸರಿಯಾಗಿ ನೋಡಿಕೊಳ್ಳದಿದ್ದಲ್ಲಿ, ತಾನು ವಿದೇಶದಿಂದ ಹಿಂದಿರುಗಿದನಂತರ, ಆ ಪುಟ್ಟಮಗುವನ್ನು ನನ್ನಿಂದ ಕಸಿದುಕೊಂಡು ತಾನೇ ಸಾಕುವುದಾಗಿ ನನ್ನನ್ನು ಹೆದರಿಸಿದಳು.

ಕಮಲಳ ಪ್ರಯಾಣ ಗೊತ್ತಾದ ದಿನ, ಆಲ್ಮೋರಾ ಸೆರೆಮನೆಯಿಂದ ಬಂದು ತನ್ನ ಸತಿಯನ್ನು ಬೀಳ್ಕೊಡಲು ಜವಹರನಿಗೆ ಅವಕಾಶ ಸಿಕ್ಕಿತು. ದಾರುಣಶೋಕವನ್ನುಕ್ಕಿಸಿ ಮೂಡಿದ ಆ ದಿನ ಆತನ ಮನೋಮಾರ್ಗದಲ್ಲಿ ಎಂತಹ ಚಿಂತೆಗಳು ಸಂಚರಿಸುತ್ತಿದ್ದುವೆಂದು ನಾನು ಹೇಳಲಾರೆನು ಆದರೆ ಆತನ ಮುಖಾವಲೋಕನವೇ ಹೃದಯ ವಿದ್ರಾವಕವಾಗಿತ್ತು. ಬದ್ಧಭ್ರುಕುಟಿಯಾಗಿ ದುಃಖವನ್ನು ನಿರೋಧಿಸಲು ಮಾಡಿದ ಪ್ರಯತ್ನ ವಿಫಲವಾಗಿ, ಆತನ ಕಣ್ಣುಗಳಲ್ಲಿ ಶೋಕ ಸುಪ್ರಕಟವಾಗಿತ್ತು. ಕೊನೆಯ ಗಳಿಗೆಯಲ್ಲಿ ಅವರಿಬ್ಬರೂ ಪರಸ್ಪರ ಮಂದಹಾಸವನ್ನು ವ್ಯಕ್ತಪಡಿಸುತ್ತಾ ಬೀಳ್ಕೊಂಡರು. ಕೂಡಲೇ ಆಕೆಯ ಕಾರು ಬೆಟ್ಟದ ತಪ್ಪಲಿನಲ್ಲಿ ಸರ್ರನೆ ಜಾರಿ, ಬೊಂಬಾಯಿ ಕಡೆಗೆ ಹೋಗುವ ಹೊಗೆ ಬಂಡಿಯನ್ನು ತಲುಪಿತು. ಜವಹರನು ನನ್ನನ್ನೂ ತಾಯಿಯನ್ನೂ ಅಪ್ಪಿಕೊಂಡನು. ಕಣ್ಣುಗಳಲ್ಲಿ ನೀರು ತುಂಬಿದ್ದರೂ ತುಳುಕಲಿಲ್ಲ. ಕೂಡಲೇ ಆಲ್ಮೋರಾ ಸೆರೆಮನೆಗೆ ಕರೆದುಕೊಂಡು ಹೋಗಲು ತನಗಾಗಿ ಕಾದುಕೊಂಡಿದ್ದ ಕಾರಿನೊಳಗೆ ಪ್ರವೇಶಿಸಿದನು. ಅವನು ನಮ್ಮ ಕಡೆಗೆ ಬೆನ್ನು ತಿರುಗಿಸಿ ಮುಂದೆ ನಡೆದಾಗ, ಆತನ ನಡೆಯಲ್ಲಿ ಶಕ್ತಿಯುಡುಗಿ ಹೋದಂತೆ ಕಂಡು ಬಂದಿತು. ಅವನು ತುಂಬಾ ಕುಗ್ಗಿಹೋದವನಂತೆ

ಕಂಡುಬಂದನು. ಕೆಲವು ಗಂಟೆಗಳಲ್ಲಿಯೇ ಆತನನ್ನು ಮುಪ್ಪು ಬಾಚಿ ತಬ್ಬಿಕೊಂಡಿತ್ತು. ಕಮಲಳ ರೋಗ ಉಲ್ಬಣವಾದುದರಿಂದ ಕೆಲವು ತಿಂಗಳುಗಳಲ್ಲಿಯೇ ಜವಹರನು ಬಂಧನವಿಮುಕ್ತನಾಗಿ ಯೂರೋಪಿಗೆ ಹೋದನು. ೧೯೩೬ ನೆಯ ಇಸವಿ ಫೆಬ್ರುವರಿ ೨೮ ನೆಯ ತಾರೀಖು ಸ್ವಿಟ್ಸರ್ಲೆಂಡಿನ ಲೌಸನ್ನೆ ಪಟ್ಟಣದಲ್ಲಿ ಕಮಲ ಕಣ್ಮರೆಯಾದಳು; ಆಕೆಯ ಹಾಸಿಗೆಯ ಪಕ್ಕದಲ್ಲಿ ಜವಹರ ಇಂದಿರರಿಬ್ಬರೂ ಮೌನಮುಗ್ಧರಾಗಿ ಕುಳಿತಿದ್ದರು.

ನೆರಳೊಮ್ಮೆ, ಚಳಕೊಮ್ಮೆ, ಜಯವೊಮ್ಮೆ, ಅಳಲೊಮ್ಮೆ,
ಪರಿಯುತಿಹ ವರ್ಷಗಳ ಬೆನ್ನಡರಿಯೊರಗಿಹುವು.

**ಈಡೆನ್ ಫಿಲ್ಲಿಪಾಟ್**

ಕಮಲಳ ಮರಣಾನಂತರ ೧೯೩೬ನೆಯ ಇಸವಿ ಮಾರ್ಚಿ ತಿಂಗಳಲ್ಲಿ ಜವಹರನು ಸ್ವದೇಶಕ್ಕೆ ಹಿಂತಿರುಗಿದನು. ವ್ಯಾಸಂಗದ ಸಲುವಾಗಿ ಇಂದಿರೆಯು ಸ್ವಿಟ್ಜರ್ಲೆಂಡಿನಲ್ಲಿಯೇ ಉಳಿದುಕೊಂಡಳು. ಅಣ್ಣನನ್ನು ನೋಡಬೇಕೆಂಬ ಕಾತರತೆಯಿದ್ದರೂ, ನನ್ನ ಮಗುವಿಗೆ ಒಂದು ತಿಂಗಳು ತುಂಬುವತನಕ ಹೊರಗಡೆ ಸಾಗಲಿಯುವಂತಿರಲಿಲ್ಲ. ಕೆಲವು ದಿನಗಳ ನಂತರ ನಾವು ಅಲಹಾಬಾದಿಗೆ ದುಃಖಮಯವಾದ ಪ್ರಯಾಣವನ್ನು ಬೆಳೆಯಿಸಿದೆವು. ಕಮಲಳ ದುರಂತ ಮರಣಾನಂತರ ಅಣ್ಣನನ್ನು ನೋಡಲು ಹೆದರಿದೆನು. ಕಮಲಳಲ್ಲಿ ಹುಚ್ಚುವ್ಯಾಮೋಹವಿದ್ದ ಜವಹರನ ಶೋಕವೆಷ್ಟಿತ್ತೆಂಬುದು ತಿಳಿದಿತ್ತು.

ಆನಂದಭವನವನ್ನು ತಲುಪುತ್ತಲೇ ಜವಹರನು ನಮ್ಮನ್ನು ಸ್ವಾಗತಿಸಲು ಹೊರಗೆಬಂದನು. ಕೆಲವು ತಿಂಗಳುಗಳ ಹಿಂದೆ ಯೌವನದ ಹುರುಪಿನಿಂದ ಕೂಡಿದ್ದ ಮುಖ ದುಃಖದಿಂದ ಸುಕ್ಕುಗಟ್ಟಿ ಮುಪ್ಪನ್ನು ಪ್ರಕಟಿಸುತ್ತಿತ್ತು. ಅವನು ನಿರಾಶೆಯಿಂದ ಬಳಲಿದಂತೆಯೂ ಕುಗ್ಗಿಹೋದಂತೆಯೂ ಕಾಣಿಸುತ್ತಿದ್ದನು. ಅವನು ತನ್ನ ಹೃದಯ ವೇದನೆಯನ್ನು ಅದುಮಲು ಪ್ರಯಾಸಪಟ್ಟರೂ, ಹೃದಯ ದುಃಖದ ಮಡುವಾಗಿತ್ತೆಂಬುದನ್ನು ಆತನ ಕಣ್ಣುಗಳೇ ಸ್ಪಷ್ಟವಾಗಿ ಸೂಚಿಸುತ್ತಿದ್ದುವು. ಅವುಗಳನ್ನು ನೋಡಿದ ಆತನ ಒಡನಾಡಿಗಳು ಸಹ ದುಃಖದ ಕೈಸೆರೆಯಾಗುತ್ತಿದ್ದರು. ನಾವು ಅಲಹಾಬಾದಿನಲ್ಲಿ ಒಂದೆರಡು ವಾರಗಳಿದ್ದು, ಉಳಿದ ಕುಟುಂಬದವರೊಡನೆ ಕಾಂಗ್ರೆಸ್ ಅಧಿವೇಶನವನ್ನು ನೋಡಲು ಲಕ್ನೋವಿಗೆ ಹೊರಟೆವು.

ಆ ವರ್ಷ ಜವಹರನೇ ಕಾಂಗ್ರೆಸ್ ಅಧ್ಯಕ್ಷಪೀಠಕ್ಕೆ ಚುನಾಯಿತನಾಗಿದ್ದನು. ಎಂದಿನಂತೆ ರಾಜಕೀಯ ಆತನ ವೇಳೆಯನ್ನೆಲ್ಲ ಆಕ್ರಮಿಸಿತು. ವೈಯುಕ್ತಿಕ ನಷ್ಟದುಃಖಗಳೆಲ್ಲ ಹಿಂಬದಿಗೆ ಸರಿದುವು. ಬೇನೆ

ಒಂಟಿತನಗಳ ಕಿಚ್ಚು ಎದೆಯನ್ನು ದಹಿಸುತ್ತಿದ್ದರೂ ಜವಹರನು ಅನೇಕ ಗೋಷ್ಠಿಗಳಲ್ಲಿ ಮತ್ತು ಇತರ ಕಾರ್ಯಗಳಲ್ಲಿ ಮಗ್ನನಾದನು. ಮೂರನೆಯ ವರ್ಷ ಫೈಜಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಪೀಠಕ್ಕೆ ಮತ್ತೊಮ್ಮೆ ಚುನಾಯಿತನಾದನು.

ಫೈಜಪುರದ ಅಧಿವೇಶನಾನಂತರ ದೇಶದಲ್ಲೆಲ್ಲಾ ಪ್ರಾಂತೀಯ ಶಾಸನ ಸಭೆಗಳಿಗೆ ಸಾರ್ವತ್ರಿಕ ಚುನಾವಣೆಗಳು ನಡೆದುವು. ಕಾಂಗ್ರೆಸ್ ಉಮೇದುವಾರರ ಪರವಾಗಿ ಪ್ರಚಾರಮಾಡಲು ಜವಹರನು ಚುನಾವಣಾರಂಗಕ್ಕೆ ಬಿರುಸಿನಿಂದ ಧುಮುಕಿದನು. ಭರತಖಂಡವನ್ನೆಲ್ಲ ಆಸೇತು ಹಿಮಾಚಲದವರೆಗೆ ಸುತ್ತಿ, ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ನಡೆದ ನೂರಾರು ಸಭೆಗಳಲ್ಲಿ ಭಾಷಣಮಾಡಿ, ಕಳೆದ ಹೋರಾಟದ ಪೆಟ್ಟು ನೋವುಗಳನ್ನು ಕೊಡವಿ ಮೇಲೇಳುತ್ತಿದ್ದ ಜನರ ಧೈರ್ಯೋತ್ಸಾಹ ಸಾಹಸಗಳನ್ನು ಕಿಡಿಗೊಳಿಸಿದನು. ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತ ಲಭಿಸಿತು. ವಿಫುಲ ಚರ್ಚೆಯಾದ ನಂತರ ವೈಸ್‌ರಾಯರಿಗೂ ಕಾಂಗ್ರೆಸ್ಸಿಗೂ ಒಪ್ಪಿಗೆಯಾಗಿ ಕಾಂಗ್ರೆಸ್ಸಿನವರು ಪ್ರಾಂತೀಯ ಮಂತ್ರಿಮಂಡಲಗಳನ್ನು ಪ್ರವೇಶಿಸಿದರು. ಹೆಚ್ಚುಕಡಿಮೆ ಎಲ್ಲ ಕಾಂಗ್ರೆಸ್ ಮಂತ್ರಿಗಳೂ ಅನೇಕ ವರ್ಷಗಳ ಕಾಲ ಸೆರೆಮನೆಯಲ್ಲಿ ನವೆದಿದ್ದರು. ನನ್ನ ಅಕ್ಕ ಸ್ವರೂಪಳೂ ಮಂತ್ರಿಯಾದಳು. ಅವಳೇ ಭರತಖಂಡದ ಪ್ರಪ್ರಥಮ ಸ್ತ್ರೀಮಂತ್ರಿ.

ಸ್ವರೂಪಳು ಚಿಕ್ಕಂದಿನಿಂದ ಚಟುವಟಿಕೆಯಾಗಿದ್ದು ಮಂತ್ರಿಸ್ಥಾನಕ್ಕೆ ಯೋಗ್ಯಳಾದ ವ್ಯಕ್ತಿಯಾಗಿದ್ದಳು. ಎಂತಹ ವಿಷಮ ಸನ್ನಿವೇಶಗಳೊದಗಿದರೂ ಗಾಬರಿಗೊಂಡವಳಲ್ಲ; ಅವುಗಳನ್ನು ಶಾಂತತೆಯಿಂದ ಮತ್ತು ಸಮಾಧಾನದಿಂದ ಎದುರಿಸುತ್ತಾಳೆ. ಮನೋಹರಳೂ, ಸಮಾಧಾನಚಿತ್ತವುಳ್ಳವಳೂ, ಸುಂದರಳೂ ಆದ ಆಕೆ ಜನರನ್ನು ಸುಲಭವಾಗಿ ಆಕರ್ಷಿಸುತ್ತಿದ್ದಳು. ಮಂತ್ರಿಪದವಿಯಲ್ಲಿ ಆಕೆ ಯಶಸ್ವಿಯಾಗಿ ಉತ್ತೀರ್ಣಳಾದಳು. ಅವಳು ಕೈಗೊಂಡ ಕಾರ್ಯ ಅತ್ಯಂತ ಕಠಿಣವಾದುದು; ಆದಕ್ಕೆ ತಕ್ಕ ಶಿಕ್ಷಣ ಮುಂಚೆ ದೊರಕಿರಲಿಲ್ಲ; ಆದರೂ ಆಕೆ ತನ್ನ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿ ಜನರ ಗೌರವಾದರ

ಗಳಿಗೆ ಪಾತ್ರಳಾದಳು. ಸ್ವರೂಪಳು ರಾಜಕೀಯ ಕ್ಷೇತ್ರದಲ್ಲಿ ಚಟು ವಟಿಕೆಯಿಂದ ಭಾಗವಹಿಸಲು ಪ್ರಾರಂಭಿಸಿದಾಗ, ಆಕೆಯ ವಾಗ್ವೈಖರಿ ನಮ್ಮನ್ನು ವಿಸ್ಮಯಗೊಳಿಸಿತು. ಅವಳು ವಾಗ್ಮಿಯಾಗಿಯೇ ಹುಟ್ಟಿರ ಬೇಕೆಂದು ನಮಗೆ ಭಾಸವಾಗುತ್ತಿತ್ತು. ಎಂತಹ ಬೃಹತ್ಸಭೆಯಲ್ಲಿ ಭಾಷಣಮಾಡಬೇಕಾಗಿದ್ದರೂ ಆಕೆಯಲ್ಲಿ ಅಂಜಿಕೆಯ ಕುರುಹುಗಳೇ ಕಾಣುತ್ತಿರಲಿಲ್ಲ. ಆಂಗ್ಲೇಯ ಭಾಷೆಯಾಗಲೀ, ಹಿಂದೂಸ್ಥಾನಿ ಯಾಗಲಿ, ಆಕೆಯ ಬಾಯಿಂದ ಮಾತುಗಳು ಲೀಲಾಜಾಲವಾಗಿಯೂ, ಧಾರಾಕಾರವಾಗಿಯೂ ಪ್ರವಹಿಸುತ್ತವೆ.

ಚಿಕ್ಕಂದಿನಲ್ಲಿಯೇ ಸ್ವರೂಪಳ ಕೂದಲು ಬೆಳ್ಳಗಾಗಲು ಮೊದ ಲಾಯಿತು—ಅದೊಂದು ಆನುವಂಶಿಕ ದೌರ್ಬಲ್ಯ—ಕೂಡಲೇ ಶ್ವೇತ ವರ್ಣ ಆಕೆಯ ತಲೆಯನ್ನೆಲ್ಲ ನುಂಗಿತು. ಈಗ ಅವಳ ತಲೆಗೂದಲು ಬೆಳ್ಳಿಯಂತೆ ಬೆಳ್ಳಗಿವೆ. ಅದು ಅವಳ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಅವಳು ಸಮರ್ಥಳಾದ ತಾಯಿಯೂ ಅಹುದು, ನಿಸ್ಸೀಮಳಾದ ಗೃಹಿಣಿಯೂ ಅಹುದು. ರಾಜಕೀಯ ಆಕೆಯ ಸಮಯವನ್ನೆಲ್ಲ ನುಂಗಿ ಬಿಟ್ಟಿದ್ದರೂ, ತನ್ನ ಮನೆಯನ್ನೂ ಮಕ್ಕಳನ್ನೂ ನೋಡಿಕೊಳ್ಳಲು ವೇಳೆಯನ್ನು ದೊರಕಿಸಿಕೊಳ್ಳುತ್ತಾಳೆ.

ಜವಹರನು ವರ್ಷಕ್ಕೆ ಎರಡು ಮೂರು ಸಾರಿಯಾದರೂ ಬೊಂಬಾ ಯಿಗೆ ಬರುತ್ತಿದ್ದನು. ಆಗ ಅವನು ನಮ್ಮಲ್ಲಿಯೇ ಇಳಿದುಕೊಳ್ಳು ತ್ತಿದ್ದನು. ಆತನನ್ನು ಇರಿಸಿಕೊಳ್ಳಲು ನಮಗೆ ತುಂಬಾ ಆಸೆ. ಆದರೆ ಆತನು ಸದಾ ಅಸಂಖ್ಯಾತ ಕಾರ್ಯಕಲಾಪಗಳಲ್ಲಿ ನಿರತನಾಗಿರುತ್ತಿದ್ದುದ ರಿಂದ, ಅವನೊಡನೆ ಮಾತಾಡಲು ಬಿಡುವು ದೊರೆಯುತ್ತಿರಲಿಲ್ಲ. ಅವನು ನಮ್ಮ ಜತೆಯಲ್ಲಿದ್ದಾಗ, ನಮ್ಮ ಚಿಕ್ಕ ಕುಟುಂಬದ ಸದ್ದಿಲ್ಲದ ಕಾರ್ಯಕ್ರಮ ತಾನಾಗಿಯೇ ಸಂಪೂರ್ಣವಾಗಿ ಮಾರ್ಪಾಡು ಹೊಂದು ತ್ತಿತ್ತು. ಮುಂಜಾನೆಯಿಂದ ಹಿಡಿದು ನಟ್ಟಿರುಳು ಕಳೆದಮೇಲೆಯೂ ಜನರ ಪ್ರವಾಹ ಎಡೆತಡೆಯಿಲ್ಲದೆ ನುಗ್ಗಿಬರುತ್ತಿತ್ತು. ಅವರಲ್ಲಿ ಕೆಲ ವರು ಮೊದಲೇ ಜವಹರನೊಡನೆ ಭೇಟಿಯನ್ನು ನಿಷ್ಕರ್ಷಿಸಿಕೊಂಡು

ಬರುತ್ತಿದ್ದರು; ಹಲವರು ಅವನನ್ನು ನೋಡುವ ಬಯಕೆಯಿಂದ ನುಗ್ಗು ತ್ತಿದ್ದರು. ಧ್ವನಿವಾಹಕ ಯಂತ್ರದ (Telephone) ಗಂಟೆಯೂ, ಮನೆಯ ಬಾಗಿಲ ಗಂಟೆಯೂ ಬಿಡುವಿಲ್ಲದೆ ಧ್ವನಿಮಾಡುತ್ತಿದ್ದುವು. ನನ್ನ ಸಮಯವೆಲ್ಲ ಈ ಎರಡು ಗಂಟೆಗಳ ಹತ್ತಿರ ಕಳೆದುಹೋಗು ತ್ತಿತ್ತು. ಊಟಕ್ಕೆ ಹೊತ್ತು ಗೊತ್ತಿರಲಿಲ್ಲ; ಏಕಾಂತಕ್ಕೆ ಎಡೆಯಿರಲಿಲ್ಲ. ತಿಂಡಿಗಾಗಲೀ, ಊಟಕ್ಕಾಗಲಿ ಬರುತ್ತಿದ್ದ ಜನರ ಸಂಖ್ಯೆಯೇ ನನಗೆ ಪೂರ್ವಭಾವಿಯಾಗಿ ಗೊತ್ತಾಗುತ್ತಿರಲಿಲ್ಲ. ಕ್ಷಣಮಾತ್ರದಲ್ಲಿಯೇ ಹತ್ತಿ ಪ್ಪತ್ತು ಮಂದಿಗಳಿಗೆ ಊಟವನ್ನು ಅಣಿಮಾಡಲನುಕೂಲವಾಗುವಂತೆ ಅಡುಗೆಮನೆಯಲ್ಲಿ ಪರಿಕರಗಳನ್ನು ಹವಣಿಸಿಕೊಂಡಿರಬೇಕಾಗಿತ್ತು.

ಜೀವನ ವಿದ್ಯುದ್ವೇಗದಿಂದ ಸಾಗುತ್ತಿತ್ತು. ಜವಹರನ ಜತೆಯಲ್ಲಿ ಯಾವ ಸಭೆಗೂ ಹೋಗದಿದ್ದಾಗ, ಭೋಜನ ಸಮಯದಲ್ಲಿ ಮಾತ್ರ ಅವನು ಕಾಣಿಸಿಕೊಳ್ಳುತ್ತಿದ್ದನು. ಅಪರೂಪ ಸಂದರ್ಭಗಳಲ್ಲಿ ಮಾತ್ರ ಅವನು ನಮ್ಮೊಡನೆ ಹೆಚ್ಚು ಕಾಲಕಳೆಯುತ್ತಿದ್ದನು. ಆಗ ನಮ್ಮ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ. ಜವಹರನು ಹೇಳುತ್ತಿದ್ದ ಕಥೆ ಗಳಲ್ಲಿಯೇ ತಲ್ಲೀನರಾಗುತ್ತಿದ್ದೆವು. ಸಾರ್ವತ್ರಿಕ ವಿಷಯಗಳಿಂದ ಹಿಡಿದು ಕುಟುಂಬಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುತ್ತಾ, ಮಾತು ಕತೆಯಾಡುತ್ತಾ, ನಗುತ್ತಾ ಇದ್ದರೆ ಹೊತ್ತೇ ಗೊತ್ತಾಗುತ್ತಿರಲಿಲ್ಲ. ಜವಹರನು ಸಂಜೆಯವೇಳೆ ಮನೆಯಲ್ಲಿದ್ದಾಗ, ಕವನಗಳನ್ನು ಮನೋ ಹರವಾಗಿ ಪಠಿಸುತ್ತಿದ್ದನು. ಆತನ ವಾಚನಗಳನ್ನು ಕೇಳಲು ನಮಗೆ ಅಮಿತವಾದ ಆನಂದವಾಗುತ್ತಿತು.

೧೯೩೮ ನೆಯ ಇಸವಿ ಜನವರಿ ತಿಂಗಳಲ್ಲಿ ಪಾರ್ಶ್ವವಾಯುವಿನ ಹೊಡೆತದಿಂದ ತಾಯಿ ಅನಿರೀಕ್ಷಿತವಾಗಿ ದೈವಾಧೀನರಾದರು. ಇಪ್ಪತ್ತು ನಾಲ್ಕು ಗಂಟೆಗಳ ಅಂತರದಲ್ಲಿಯೇ ನಮ್ಮ ದೊಡ್ಡಮ್ಮ ಅಂದರೆ ನಮ್ಮ ತಾಯಿಯ ಅಕ್ಕನವರೂ ಅದೇ ರೋಗಕ್ಕೆ ಬಲಿಯಾದರು. ಈ ದ್ವಿಗುಣ ದುರಂತ ನಮಗೆಲ್ಲ ಅಸಹನೀಯವಾದ ಪೆಟ್ಟಾಯಿತು. ಆ ದುರ್ಘಟನೆ ಸಂಭವಿಸಿದಾಗ ಅದೃಷ್ಟವಶಾತ್ ನಾನು ಅಲಹಾಬಾದಿನಲ್ಲಿದ್ದೆನು. ಗ್ರಹಬಡಿದವಳಂತೆ ದುಃಖಪೀಡಿತಳಾಗಿ ನಾನು ಬೊಂಬಾಯಿಗೆ ಹಿಂದಿರು

ಗಿಡೆನು. ತಾಯಿಯಿಲ್ಲದ ಮನೆ ಮತ್ತೆ ಹಿಂದಿನಂತಿರಲಾರದೆಂದು ನನಗನ್ನಿಸಿತು. ತವರುಮನೆ ಹಿಂದೆ ಎಷ್ಟು ರಮ್ಯವಾಗಿತ್ತು! ಆ ರಮ್ಯತೆ ಮುಂದೆಂದೂ ಮರಳಲಾರದೆಂದು ನನಗೆ ಭಾಸವಾಯಿತು.

ವರ್ಷಾಂತ್ಯದಲ್ಲಿ ಜವಹರನು ಇಂದಿರೆಯನ್ನು ನೋಡುವ ಸಲುವಾಗಿ ಯೂರೋಪಿಗೆ ಹೊರಟಿದ್ದನು. ರಾಜಾ ಮತ್ತು ನಾನು, ಇಬ್ಬರೂ ಹೋಗಲು ಬಯಸಿದೆವು. ಆದರೆ ಕೊನೆಯ ಗಳಿಗೆಯಲ್ಲಿ ತಮ್ಮ ಕೆಲಸವನ್ನು ಬಿಟ್ಟು ರಾಜಾರವರಿಗೆ ಹೊರಡಲು ಸಾಧ್ಯವಾಗಲಿಲ್ಲ. ಜವಹರನ ಜತೆಯಲ್ಲಿ ನಾನು ಹೋಗಬಹುದೆಂದು ಅವರು ನನಗೆ ಸಲಹೆಯಿತ್ತರು. ಆದರೆ ರಾಜಾರವರನ್ನೂ, ನನ್ನ ಇಬ್ಬರು ಸಣ್ಣ ಮಕ್ಕಳನ್ನೂ ಬಿಟ್ಟು ಹೊರಡಲು ನನ್ನ ಮನಸ್ಸು ಸಮ್ಮತಿಸಲಿಲ್ಲ. ರಾಜಾರವರೊಡನೆ ಯೂರೋಪಿಗೆ ಹೋಗಬೇಕೆಂದು ಬಹಳ ದಿನಗಳಿಂದ ಹಾರೈಸಿಕೊಂಡಿದ್ದೆನು. ಅಂತರ್ಯುದ್ಧ ನಡೆಯುತ್ತಿದ್ದಾಗ ಅಣ್ಣ ಸ್ಪೈಯಿನ್‌ಗೆ ಹೋದನು. ಅವನ ಪ್ರಯಾಣ ಆವೇಶೋತ್ಪಾದಕವಾಗಿಯೂ, ಮನೋರಂಜಕವಾಗಿಯೂ ಇತ್ತು. ಅಣ್ಣನೊಡನೆ ಹೋಗದಿದ್ದುದಕ್ಕಾಗಿ ನನಗೆ ಸ್ವಲ್ಪ ವ್ಯಥೆಯೇನೋ ಆಯಿತು. ಅವನು ಹಿಂದಿರುಗಿದಾಗ, ಅಲ್ಪಾವಧಿಯ ರಜಕ್ಕಾಗಿ ಇಂದಿರೆಯನ್ನು ಕರೆತಂದನು.

೧೯೩೭ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ವ್ಯಾಸಂಗವನ್ನು ಮುಂದುವರಿಸುವುದಕ್ಕಾಗಿ ಇಂದಿರೆಯು ಇಂಗ್ಲೆಂಡಿಗೆ ಹಿಂದಿರುಗಲು ನಿರ್ಧರಿಸಿದಳು. ಮತ್ತೊಮ್ಮೆ ರಾಜ ಮತ್ತು ನಾನು ಪ್ರಪಂಚವನ್ನು ಸುತ್ತಿಬರುವ ಉದ್ದೇಶದಿಂದ, ಸ್ವಲ್ಪದೂರ ಇಂದಿರೆಯನ್ನು ಒಡಗೂಡಬಹುದೆಂದು ಆಲೋಚಿಸಿದೆವು. ರಾಷ್ಟ್ರೀಯ ಯೋಜನಾ ಸಮಿತಿಯ ಕಾರ್ಯವನ್ನು ಅರ್ಧಮರ್ಧವಾಗಿ ಬಿಟ್ಟುಹೋಗಲು ರಾಜಾರವರಿಗೆ ಇಷ್ಟವಿಲ್ಲದುದರಿಂದ ನಮ್ಮ ಹೂಟಗಳು ಮುರಿದುಬಿದ್ದುವು. ಕೊನೆಯ ಗಳಿಗೆಯಲ್ಲಿ ನಾವು ಪ್ರಯಾಣವನ್ನು ನಿಲ್ಲಿಸಿದೆವು. ಸಂಗ್ರಾಮ ಸೂಚಕ ಕಾಳಮೇಘಗಳ ಪಂಕ್ತಿ ತೆರೆತೆರೆಯಾಗಿ ದಿಗಂತದಲ್ಲಿ ಕವಿದಿದ್ದರೂ, ನಮ್ಮ ಉದ್ದೇಶವನ್ನು ಕೂಡಲೇ ಈಡೇರಿಸಿಕೊಳ್ಳುತ್ತೇವೆ ಎಂಬ ಭರವಸೆ ಇತ್ತು. ಯುದ್ಧ ಪ್ರಾರಂಭವಾದುದರಿಂದ ನಮಗೆ ಅವಕಾಶವೇ ದೊರೆಯಲಿಲ್ಲ; ಅನಂತರ ಹೋಗಲು ಸಾಧ್ಯವಾಗಲೇ ಇಲ್ಲ.

೧೯೪೦ ನೆಯ ವರ್ಷಾಂತ್ಯದಲ್ಲಿ ಇಂದಿರೆಯು ಸ್ವದೇಶಕ್ಕೆ ಹಿಂದಿರುಗಿದಳು. ಅದೇನೋ ಒಳ್ಳೆಯದೇ ಆಯಿತು. ಕ್ರೂರವಾದ ರೋಗಕ್ಕೆ ಪಕ್ಕಾಗಿ ನವೆದಿದ್ದುದರಿಂದ ವಿಶ್ರಾಂತಿಗಾಗಿ ಕೆಲವು ದಿನಗಳು ಆಕೆ ಸ್ವಿಟ್ಸರ್ಲೆಂಡಿನಲ್ಲಿದ್ದಳು. ಮೊಟ್ಟಮೊದಲು ಸಿಗುವ ವಿಮಾನದಲ್ಲಿ ಹಿಂದಿರುಗುವಳೆಂಬ ಸುದ್ದಿಯನ್ನು ಕೇಳಿ ನನಗೆ ಸಂತೋಷ ಕಳವಳಗಳು ಒಮ್ಮೆಯೇ ಮೂಡಿದುವು. ಡೆಹ್ರಾಡೂನ್ ಸೆರೆಮನೆಯಲ್ಲಿದ್ದ ನನ್ನ ಕುತೂಹಲವನ್ನು ವ್ಯಕ್ತಪಡಿಸಿದೆನು. ಮುದುಕಿಯಂತೆ ವರ್ತಿಸಿ ಅಂಜುಪುರುಕಿಯಾದುದಕ್ಕೆ ನನ್ನನ್ನು ಕೂಡಲೇ ಭಂಗಿಸಿದನು. ಅವನು ನನಗೆ ಕಳುಹಿಸಿದ ಮಾರುತ್ತರವಿದು : "ಇಂದು ಹಿಂದಿರುಗಲು ನಿಶ್ಚಯಿಸಿರುವುದು ಸಂತೋಷದ ಸಂಗತಿ. ನಾನಾವಿಧವಾದ ಎಡರುತೊಡರುಗಳಿರುವುದೇನೋ ನಿಶ್ಚಯ ; ಆದರೆ ದಿಕ್ಕಿಲ್ಲದವಳಂತೆ ದುಃಖಿಸುವುದಕ್ಕಿಂತ ಅವುಗಳನ್ನು ಎದುರಿಸುವುದೊಳ್ಳೆಯದು. ಅವಳು ಹಿಂದಿರುಗಬೇಕೆಂದಿದ್ದರೆ ಮುಂದೆ ಸಂಭವಿಸಬಹುದಾದ ಪರಿಣಾಮಗಳಿಗೂ ತಲೆಕೊಡಲೇಬೇಕು."

ಕುಳಿತೆವು ರೋಗಿಯ ಬಳಿ ಇರುಳೆಲ್ಲಾ
ಉಸಿರಿತ್ತಿನ್ನೂ
ಪ್ರಾಣಸಮೀರಣನೆದೆಗೂಡಿನಲಿ
ಹಿಂದಕು ಮುಂದಕು ಏರಿಳಿಯುವವೊಲು
ಒಯ್ ಒಯ್ಯನೆ ಉಸಿರೆಳೆಯುತಲಿತ್ತು.
ಆಸೆಯು ಮೊಳೆಯಲು ಭಯ ಮರೆಯಾಯಿತು,
ಭಯ ತಲೆದೋರಲು ನಂಬಿಕೆಯುಡಗಿತು.
ಸಾವೊದಗಿತೊ ಎನೆ ನಿದ್ದೆಯುಗೆಯ್ದಳು ;
ಸಾವೈತರೆ ಸಲೆ ಮಲಗಿಹಳೆಂದೆವು
ಮಳೆಗರೆದೆಲ್ಲಿಯು ಕುಳಿರೆಲರಾಡಲು
ದುಗುಡವ ಹರಡುತ ಮುಂಬಗಲೈತರೆ
ಮುಚ್ಚಿದುವಾಕೆಯ ಕಣ್ಣೆವೆಯದರಿಂ
ಮುಂಬಗಲೆಲ್ಲಿಯುದವಳಿಗೆ ಇಲ್ಲಿ.

—ಥಾಮಸ್ ಹುಡ್.

ನಮ್ಮ ತಾಯಿ ತುಂಬಾ ಸುಂದರಳಾದ ಸೂಕ್ಷ್ಮಾಕಾರದ ಕೋಮಲ ವ್ಯಕ್ತಿ; ಎತ್ತರ ಐದು ಅಡಿಯೂ ಇರಲಿಲ್ಲ. ವಿಶಿಷ್ಟವಾದರಿಯ ಕಾಶ್ಮೀರದ ಸುಂದರ ಯುವತಿಯಂತೆ, ಮನರಂಜಕವಾದ ಬೊಂಬೆಯಂತೆ ಆಕೆಯ ರೂಪುರೇಖೆಗಳು ಪರಿಪೂರ್ಣವಾಗಿದ್ದುವು; ಆದರೆ ಬೊಂಬೆಯಂತೆ ಅಚೇತನವಾಗಿರಲಿಲ್ಲ.

ತಮ್ಮ ತಂದೆಯ ಮನೆಯಲ್ಲಿ ಅವರೇ ಚಿಕ್ಕವರು ; ಅತ್ಯಂತ ಸುಂದರಿಯಾಗಿದ್ದುದರಿಂದ, ಅವರ ಮನೆಯವರೆಲ್ಲರೂ ಅವರನ್ನು ವಿಶೇಷವಾಗಿ ಮುದ್ದಿಸಿ ಮುಂಡಾಡುತ್ತಿದ್ದರು. ಚಿಕ್ಕಂದಿನಲ್ಲಿ ಅವರನ್ನು ಅದೇ ವಯಸ್ಸಿನ ಹುಡುಗಿಯರಂತೆ ಆದರಿಸುವುದನ್ನು ಬಿಟ್ಟು ಕೋಮಲವಾದ ಪುತ್ಥಳಿಯೆಂದು ಮೆರೆಯಿಸುತ್ತಿದ್ದರು. ಎಳೆಯತನದಲ್ಲಿಯೇ ಅವರ ಮದುವೆಯಾಯಿತು. ಕೆಲವರು ದಯಾಮಯರೂ, ಹಲವರು ನಿರ್ದಯರೂ ಆದ ಅಪರಿಚಯಸ್ಥರಿಂದ ತುಂಬಿದ್ದ ಗಂಡನ

ಮನೆಗೆ ಅವರು ಹೋದರು. ನನ್ನ ಅಜ್ಜಿಯವರು ಅನೇಕ ರೀತಿನೀತಿಗಳಲ್ಲಿ ಸದ್ಗೃಹಣಿಯಾಗಿದ್ದರೂ, ಇತರ ಅತ್ತೆಯರು ಅನುಸರಿಸುತ್ತಿದ್ದ ಸಂಪ್ರದಾಯದ ಜಾಡನ್ನು ಬಿಡಲಿಲ್ಲ. ಅವಿಭಕ್ತ ಕುಟುಂಬದ ಹಸುಗೆಯಾಗಿ, ಅವರು ತಮ್ಮ ಮನೆಯ ರಾಣಿಯಾಗುವ ತನಕ, ಅವರ ಬಾಳು ಸುಖಮಯವಾಗಿರಲಿಲ್ಲ. ತಮ್ಮ ಮನೆಗೆ ಅವರು ಅತ್ಯಮೂಲ್ಯವಾದ ರತ್ನವಾಗಿದ್ದರು. ಹೆಣ್ಣಿನ ಹೃದಯ ಬಯಸಬಹುದಾದ ಸಮಸ್ತ ಸೌಲಭ್ಯಗಳನ್ನೂ, ಭೋಗೋಪಕರಣಗಳನ್ನೂ ಒದಗಿಸಲು ತಂದೆಯವರು ಹಣವನ್ನು ಧಾರಾಕಾರವಾಗಿ ಸುರಿಯುತ್ತಿದ್ದರು. ಅಮರೇಂದ್ರನ ಭೋಗೈಶ್ವರ್ಯಗಳಿದ್ದರೂ, ಆರೋಗ್ಯಭಾಗ್ಯವಿಲ್ಲದ ಮಾನವಜನ್ಮ ದುಃಖ ಭಾಜನವಾಗುತ್ತದೆ. ಆ ಅಮೂಲ್ಯವಾದ ಭಾಗ್ಯ ತಾಯಿಯವರ ಪಾಲಿಗೆ ಶೂನ್ಯವಾಗಿತ್ತು.

ಜವಹರನು ಹುಟ್ಟಿದಂದಿನಿಂದ ತಾಯಿಯವರ ಆರ್ರೋಗ್ಯ ಕೆಡಲಾರಂಭಿಸಿ, ಅವರು ಆಗಾಗ್ಗೆ ಕ್ರೂರವಿಪತ್ತುಗಳಿಗೆ ಪಕ್ಕಾಗುತ್ತಿದ್ದರು. ರೋಗ ಪ್ರಾಪ್ತವಾದಂತೆಲ್ಲಾ ಅವರು ನಿಶ್ಯಕ್ತರಾಗುತ್ತಿದ್ದರು. ಚಿಕಿತ್ಸೆಯಿಂದ ಗುಣಮುಖರಾಗುವಂತೆ ಕಾಣಲಿಲ್ಲ. ತಂದೆಯವರು ಅವರನ್ನು ಯೂರೋಪಿಗೆ ಕರೆದುಕೊಂಡು ಹೋಗಿ ಅತ್ಯುತ್ತಮ ವೈದ್ಯರಿಂದ ಚಿಕಿತ್ಸೆ ನಡೆಸಿದರು. ಆ ಪ್ರಯತ್ನವೂ ವಿಫಲವಾಯಿತು. ನಮ್ಮಂತೆ ಚೆನ್ನಾಗಿ ತಿಂದು, ಕುಡಿದು, ಓಲಾಡಿಕೊಂಡು ಕ್ರಮವಾದ ಜೀವನವನ್ನು ಸಾಗಿಸುತ್ತಾ ಅವರು ಲವಲವಿಕೆಯಿಂದಿದ್ದ ದಿನಗಳೇ ನನಗೆ ನೆನಪಿಲ್ಲ. ಅವರು ಯಾವಾಗಲೂ ತಮ್ಮ ಆರೋಗ್ಯದ ವಿಷಯದಲ್ಲಿಯೇ ಮಗ್ನರಾಗಿರುತ್ತಿದ್ದುದರಿಂದ ಅವರ ತಾಯ್ತನದ ಆದರೋಪಚಾರಗಳ ಸೌಭಾಗ್ಯ ನನಗೆ ಲಭಿಸಲಿಲ್ಲ.

ಕಾಲನದಿ ನಿರಂತರ ಪ್ರವಹಿಸುತ್ತಿತ್ತು. ತಾಯಿಯವರು ಮೃದುಮಧುರವಾದ ಕೋಮಲವಾದೊಂದು ಅಪೂರ್ವ ಕುಸುಮವೆಂದೂ, ಆ ಕುಸುಮವನ್ನು ಬಾಳಿನ ಕಷ್ಟಸಂಕಷ್ಟಗಳ ಬೇಗೆಯಲ್ಲಿ ಬಾಡಲೀಯದೆ ಪ್ರೀತಿಯಿಂದ ಪೋಷಿಸಿ ರಕ್ಷಿಸಬೇಕೆಂದು ನನಗೆ ತೋಚಿತು. ೧೯೨೦ ನೆಯ ಇಸವಿಯತನಕ ಪ್ರೇಮಭೋಗವಿಲಾಸಭದ್ರತೆಗಳಿಂದಾವೃತ

ವಾಗಿದ್ದ ತಾಯಿಯವರು ಚಿಕ್ಕದೊಂದು ಸಾಮ್ರಾಜ್ಯದ ಸಾಮ್ರಾಜ್ಞಿಯಾಗಿದ್ದಳು. ಪ್ರಖ್ಯಾತರಾದ ಪತಿಯನ್ನೂ, ತೇಜಸ್ವಿಯಾದ ಪುತ್ರರತ್ನವನ್ನೂ, ಮತ್ತು ಭವ್ಯವಾದ ಸ್ವಗೃಹವನ್ನೂ ಕಂಡರೆ ಅವರಿಗ ಹೆಮ್ಮೆ. ಅಸಹಕಾರ ಚಳುವಳಿ ತಲೆಯೆತ್ತುವುದಕ್ಕೆ ಮುಂಚೆ ಅವರನ್ನು ದುಃಖ ತಾಕಿರಲಿಲ್ಲ, ಕಾಟಗಳು ಪೀಡಿಸಿರಲಿಲ್ಲ. ಕೆಲವು ವಾರಗಳಲ್ಲಿಯೇ ಇಡೀ ಜೀವಮಾನದ ಪದ್ಧತಿಗಳೆಲ್ಲ ಮಾಯವಾದುವು. ನಮ್ಮ ಕುಟುಂಬದಲ್ಲಿ ಕಿರಿಯ ಕ್ರಾಂತಿ ಸಂಭವಿಸಿತು.

ನೂತನ ಸನ್ನಿವೇಶಗಳಿಗೆ ಒಗ್ಗಿಕೊಳ್ಳುವುದು ಉಳಿದವರಿಗೆ ಕಷ್ಟವಾಗಲಿಲ್ಲ. ತಂದೆತಾಯಿಯರಾದರೋ ಎಳೆತನದಿಂದ ಬಾಳಗೆ ಅಂಟಿಕೊಂಡು ಬಂದಿದ್ದ ಪದ್ದತಿಗಳನ್ನು ಬಿಟ್ಟು ಜೀವನದ ದೃಷ್ಟಿಯನ್ನೇ ಸಂಪೂರ್ಣವಾಗಿ ಮಾರ್ಪಡಿಸಬೇಕಾಯಿತು. ಐವತ್ತು ಅರವತ್ತು ವರ್ಷ ವಯಸ್ಸಿನ ಮುದುಕರಿಗೆ ಅದು ಸುಲುಭಸಾಧ್ಯವಾದ ಕೆಲಸವಲ್ಲ. ಆದರೂ ಅವರು ಹಳೆಯ ಬಾಳನ್ನುಳಿದು ಹೊಸಬಾಳಿಗೆ ಒಗ್ಗಿಕೊಂಡ ತೀವ್ರತೆ ಪ್ರತಿಯೊಬ್ಬರನ್ನೂ ವಿಸ್ಮಯಗೊಳಿಸಿತು. ನಾಗರಿಕ ಜೀವನದ ಉತ್ತಮ ಸುಖಸಾಧನಗಳ—ನವಿರುಡುಪು ಶುಚಿರುಚಿಯಾದ ಆಹಾರ, ಮತ್ತು ವೈಭವಪೂರ್ಣವಾದ ಜೀವನ—ಎಂದರೆ ತಂದೆಯವರಿಗೆ ವ್ಯಾಮೋಹ. ತಾಯಿಯವರು ಅತ್ಯುತ್ತಮವಾದ ಸೀರೆಯನ್ನುಳಿದು ಬೇರಾವ ಸೀರೆಯನ್ನೂ ಉಟ್ಟಿರಲಿಲ್ಲ. ಅವರು ಅರಕೆಯನ್ನೇ ಅರಿಯರು; ಬಯಕೆ ವ್ಯಕ್ತವಾಗುವುದೇ ತಡ ಹಸ್ತಗತವಾಗುತ್ತಿತ್ತು. ಕಷ್ಟವೆಂಬುದನ್ನೇ ಅರಿಯದವರು. ಆದರೂ ಅವರು ಹಿಂದು ಮುಂದು ನೋಡದೆ ಖಾದಿಯನ್ನೇ ಮೆಚ್ಚಿಕೊಂಡು, ಹೊರಲು ಶಕ್ತಿಯಿಲ್ಲದಿದ್ದರೂ ಅಂದವಿಲ್ಲದ ಒರಟುಸೀರೆಗಳನ್ನುಟ್ಟರು.

ಹೃದಯವೇದನೆ, ಬಲಿದಾನ ಮತ್ತು ಅನಂತಾನಂತ ಕಷ್ಟನಿಷ್ಠುರಗಳು ತಾಯಿಯವರ ಕೊನೆಯ ಬಾಳಿನ ಉಣಿಸಾದುವು. ಕಾರಾಗೃಹದ ಭಯಂಕರಾಕೃತಿಯ ಗೋಡೆಗಳು ತಮ್ಮ ಪ್ರೀತಿಯ ಬಂಧುಗಳನ್ನು ತಮ್ಮಿಂದ ಬೇರ್ಪಡಿಸಿದುವು. ಅವರ ತೆಳ್ಳನೆಯ ನವೆರು ಮೆಯ್ ಯಾವ ಕೆಲಸಕ್ಕೂ ತಡೆಯುವಂತಿರಲಿಲ್ಲ. ಅವರ ದುರ್ಬಲವಾದ ದೇಹ

ದಲ್ಲಿ ದುಃಖಕ್ಕೆ ದಕ್ಕದ ಕಷ್ಟಕ್ಕೆ ಕುಗ್ಗದ ಸ್ಥೈರ್ಯಧೈರ್ಯಗಳು ನೆಲೆಗೊಂಡಿದ್ದುವು.

ಅವರ ಕೊನೆಕೊನೆಯ ದಿನಗಳು ದುಃಖಮಯವಾಗಿದ್ದುವು. ಶಾಂತಿ ಭದ್ರತೆಗಳಿಂದ ಕೂಡಿದ್ದ ಜೀವನವನ್ನು ಅನಿಶ್ಚಿಯತೆ ಕ್ಲೇಶಗಳ ಪ್ರಪಾತಕ್ಕೆ ನೂಕಿದ ನೂತನ ಸನ್ನಿವೇಶಗಳು ಅವರ ಮುಪ್ಪಿನಲ್ಲಿ ತಲೆದೋರಿದರೂ, ಅವರ ಬಾಯಿಂದ ಮಾರುನುಡಿಯಾಗಲೀ, ದುಃಖಶಬ್ದವಾಗಲೀ ಹೊರಹೊಮ್ಮಲಿಲ್ಲ. ಇಷ್ಟೆಲ್ಲ ಚಿಂತೆಗಳಿದ್ದರೂ ಅವರ ಆರೋಗ್ಯ ಬಹಳ ಕೆಟ್ಟಿರಲಿಲ್ಲ ತಂದೆಯವರ ಸಾವು ಸಿಡಿಲಿನಂತೆ ಬಡಿಯಿತು. ಅವರು ಸ್ವಭಾವತಃ ಹಳೆಯ ಸಂಪ್ರದಾಯಕ್ಕೆ ಸೇರಿದವರು. ತಾವು ಬದುಕಿದ್ದಾಗಲೇ ಪತಿಯನು ಕಳೆದುಕೊಂಡ ವಿಧವೆಯಾದುದು ಪೂರ್ವಜನ್ಮದಲ್ಲಿ ಮಾಡಿದ್ದ ಘೋರಪಾಪದ ಪ್ರಾಯಶ್ಚಿತ್ತರೂಪವಾದ ಫಲವೆಂದು ನಂಬಿಕೊಂಡಿದ್ದರು- ತಾವು ದುರ್ಬಲರಾಗಿದ್ದು ಸದಾ ರೋಗಗಳಿಂದ ಹೊರಳುತ್ತಿದ್ದುದರಿಂದ, ಪತಿಗಿಂತ ಮುಂಚಿತವಾಗಿ ತಾವು ಸಾಯುವುದಾಗಿಯೂ, ಅಂತಹ ಸಾವನ್ನು ಪಡೆಯುವ ಭಾರತ ರಮಣಿಯು ಪುಣ್ಯವತಿಯೆಂದೂ, ಕರ್ತವ್ಯನಿಷ್ಠಳೆಂದೂ ಅವರು ಭಾವಿಸಿಕೊಂಡಿದ್ದರು. ತಂದೆಯವರಿಗೆ ರೋಗವೆಂಬುದೇ ಗೊತ್ತಿರಲಿಲ್ಲ. ಕಾರಾಗೃಹವಾಸದ ಕಷ್ಟನಿಷ್ಠುರಗಳು ಅವರನ್ನು ಅಕಾಲಮೃತ್ಯುವಿನ ದಾಡೆಯತ್ತ ನೂಕಿದುವು.

ಸುಮಾರು ಐವತ್ತು ವರ್ಷಗಳ ಕಾಲ ಅವರಿಬ್ಬರೂ ಒಂದುಗೂಡಿ ಬಾಳಿನ ತೇರನ್ನು ಎಳೆದಿದ್ದರು; ಜೀವನದ ಸುಖದುಃಖಗಳಲ್ಲಿ ಸಮಭಾಗಿಗಳಾಗಿದರು. ಮಾನಸಿಕ ಮತ್ತು ದೈಹಿಕ ಬಾಧೆಗಡಸಿದಾಗ ತಾಯಿಯವರು ತಂದೆಯವರ ಶಕ್ತಿ ಸಾಮರ್ಥ್ಯಗಳ ರಕ್ಷಾಕವಚವನ್ನಾಶ್ರಯಿಸುತ್ತಿದ್ದರು. ಕಷ್ಟವೊದಗಿದಾಗ ತಂದೆಯವರು ತಾಯಿಯವರನ್ನು ಸರ್ವದಾ ತಮ್ಮ ಕರುಣೆದೊಟ್ಟಲಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ರಕ್ಷಿಸಿದರು. ಅವರ ಇರವೇ ತಾಯಿಯವರ ಉಳಿವು; ಅವರ ಕೊನೆಯೇ ತಾಯಿಯವರ ಅಳಿವು. ಪತಿಶೂನ್ಯವಾದ ವಾತಾವರಣಕ್ಕೆ ಒಗ್ಗಿಕೊಳ್ಳುವುದು ಅವರಿಗೆ ಪ್ರಯಾಸವಾಯಿತು. ಜವಹರನು ಆ

ಸಮಯದಲ್ಲಿ ಸುಪುತ್ರನಂತೆ ವರ್ತಿಸಿದನು. ತನ್ನನ್ನೇ ಹಿಂಡಿ ಹಿಪ್ಪೆ ಮಾಡುತ್ತಿದ್ದ ಅಳಲ ಹೊರೆಯನ್ನು ತಾಳಿಕೊಂಡು ತಾಯಿಯವರ ನೋವನ್ನು ಹಿಂಗಿಸಲು ತನ್ನ ಶಕ್ತಿಸಾಮರ್ಥ್ಯಗಳನ್ನೆಲ್ಲ ವಿನಿಯೋಗಿಸಿದನು. ಅಂದಿನ ಆತನ ಕೋಮಲ ಸ್ವಭಾವ ಮತ್ತು ಭಕ್ತಿಭಾವಗಳು ವರ್ಣನಾತೀತ; ನುಡಿ ವೈಲಿಗೆಯನ್ನು ಮುಟ್ಟಸಬಾರದಷ್ಟು ಪವಿತ್ರ.

ತಮ್ಮ ಮಕ್ಕಳಿಗಾಗಿ ವಿಶೇಷವಾಗಿ ಜವಹರನಿಗೋಸ್ಕರ ತಾಯಿಯವರು ತಮ್ಮ ಪ್ರಾಣವನ್ನುಳಿಸಿಕೊಂಡಿದ್ದರು. ಕಮಲಳ ಸಾವು ಮತ್ತೊಂದು ಬರಸಿಡಿಲಾಗಿ ಅವರ ಶಕ್ತಿಸಾಮರ್ಥ್ಯಗಳನ್ನು ಬತ್ತಿಸಿತು. ಬಾಳಿನ ಒಗಟಿಗಳನ್ನು ಬಿಡಿಸುವ ಶಕ್ತಿ ಶೂನ್ಯವಾಯಿತು. ದಿನ ಕ್ರಮೇಣ ಅವರ ಬಲ ಕುಸಿಯಲಾರಂಭಿಸಿತು.

೧೯೩೮ನೆಯ ಇಸವಿಯಲ್ಲಿ ನಾನು ನನ್ನ ಮಕ್ಕಳೊಡನೆ ಅಲಹಾಬಾದಿಗೆ ಹೋಗಿ ಒಂದು ತಿಂಗಳಿದ್ದೆನು. ನಾನು ಬೊಂಬಾಯಿಗೆ ಹಿಂದಿರುಗಬೇಕೆಂದಿದ್ದಾಗ, ಅಣ್ಣ, ಅಕ್ಕ, ಅವಳ ಪತಿ ಮತ್ತು ಅವರ ಮಕ್ಕಳು ಮತ್ತು ನಾನು, ಇಷ್ಟು ಜನರೂ ಒಂದು ಸಂಜೆ ಒಟ್ಟಿಗೆ ಕುಳಿತಿದ್ದೆವು. ಕೊನೆಗೆ ಕೆಲವು ದಿನಗಳು ತಾಯಿಯವರ ಶರೀರದಲ್ಲಿ ನೂತನ ಚೈತನ್ಯೋತ್ಸಾಹಗಳು ಸಂಚಾರಮಾಡಿದಂತೆ ಭಾಸವಾಯಿತು; ಅದರಲ್ಲಿಯೂ ಆ ಸಂಜೆ ಅವರು ತುಂಬಾ ಹುರುಪಿನಿಂದ ಕೂಡಿದ್ದಂತೆ ಕಂಡುಬಂದರು.

ನಾವು ಊಟಮಾಡುತ್ತಿದ್ದಾಗ ಅವರೂ ನಮ್ಮ ಜತೆಯಲ್ಲಿಯೇ ಕುಳಿತುಕೊಂಡು ಹಳೆಯ ನೆನಪುಗಳನ್ನು ಸವಿಯುತ್ತಿದ್ದರು. ಎಂದಿಗಿಂತ ಹೆಚ್ಚಾಗಿಯೇ ಅವರು ಮಾತಾಡಿದರು. ಅವರನ್ನು ನೋಡಿ ನಮಗೆ ಆನಂದವಾಯಿತು. ಊಟವಾದಮೇಲೆ ರಾತ್ರಿ ಹತ್ತೂವರೆ ಗಂಟೆಯತನಕ ಹರಟೆ ಹೊಡೆದೆವು. ಅಂದು ಮಧ್ಯರಾತ್ರಿಯ ಸಮಯದಲ್ಲಿ ಸ್ವರೂಪಳು ಲಕ್ನೋ ನಗರಕ್ಕೆ ಹೊರಡಬೇಕಾಗಿತ್ತು. ತಮಗೆ ಇನ್ನೂ ನಿದ್ರೆಹತ್ತಿರಲಿಲ್ಲವಾದುದರಿಂದ, ಸ್ವರೂಪಳು ನಿಲ್ದಾಣಕ್ಕೆ ಹೊರಡುವವರೆಗೂ ತಾವು ಕುಳಿತಿರುವುದಾಗಿ ತಾಯಿಯವರು ತಿಳಿಸಿದರು. ನಾವು ಬೇಡವೆಂದು ಎಷ್ಟು ಬಗೆಯಾಗಿ ಹೇಳಿದರೂ ಅವರು ಕೇಳಲಿಲ್ಲ. ಕುಳಿತು ಮಾತಾಡಿದೆವು. ಕ್ರಮೇಣ ತಾಯಿಯವರು ನಿಶ್ಶೇಷ್ಟರಾದರು.

ಹನ್ನೊಂದು ಗಂಟೆಗೆ ಸ್ವರೂಪಳು ಹೊರಡಲು ಅಣಿಯಾಗಿ ತಾಯಿಯವರಿಂದ ಬೀಳ್ಕೊಳ್ಳಲು ಹೋದಳು. ಸ್ವರೂಪಳನ್ನು ಅಪ್ಪಿಕೊಳ್ಳಲು ಎದ್ದಕೊಡಲೇ ಗರಹೊಡೆದಂತಾದರು. ಜವಹರನೂ ನಾನೂ ಕೂಡಲೇ ಸ್ವರೂಪಳ ಸಹಾಯಕ್ಕೆ ಹೋಗದಿದ್ದರೆ, ಅವರು ನೆಲದಮೇಲೆ ಬಿದ್ದು ಬಿಡುತ್ತಿದ್ದರು. ಅವರನ್ನು ಹಾಸಿಗೆಯಮೇಲೆ ಮಲಗಿಸಿದೆವು. ಅಷ್ಟು ಹೊತ್ತಿಗಾಗಲೇ ಅರಿವು ಮಾಯವಾಗಿತ್ತು. ಪಾರ್ಶ್ವವಾಯು ತಾಯಿಯವರಮೇಲೆ ಮೊದಲೇ ಎರಡುಸಾರಿ ಧಾಳಿ ನಡೆಯಿಸಿತ್ತು. ಇದು ಮೂರನೆಯ ಧಾಳಿ. ವೈದ್ಯರು ಬಂದು ಪರೀಕ್ಷಿಸಿ, ತಲೆ ಅಲ್ಲಾಡಿಸಿ ನಂಬಿಕೆಯಿಲ್ಲವೆಂದರು. ಕೆಲವು ಗಂಟೆಗಳಲ್ಲಿಯೇ ಅವರ ಪ್ರಾಣಪಕ್ಷಿ ಹಾರಿಹೋಗುವುದರಲ್ಲಿತ್ತು.

ಮರಣ ಈ ರೀತಿ ಸಂಭವಿಸುವುದೆಂದು ನಾನು ಅರಿತಿರಲಿಲ್ಲ. ನಾನು ದಿಗ್ಭ್ರಮೆಗೊಂಡೆನು. ಒಂದೇ ಒಂದು ಗಂಟೆಯ ಕಾಲ ನಾವು ಮನೆಬಿಟ್ಟು ಹೊರಗೆ ಹೋಗಬೇಕಾಗಿದ್ದರೂ ಮುತ್ತನ್ನು ಸೆಳೆದುಕೊಳ್ಳದೆಯೇ ಕಳುಹದಿದ್ದ ಆ ನನ್ನ ತಾಯಿ, ಇಷ್ಟು ಶೀಘ್ರವಾಗಿ ಮಾತಿಲ್ಲದೆ, ಕೊನೆಯ ಮುತ್ತನ್ನೂ ಕಸಿದುಕೊಳ್ಳದೆಯೇ ಹೊರಟುಹೋಗುವರೆ? ಎಂದೆನಿಸಿತು. ಅದೆಲ್ಲ ಸಾಧ್ಯವೆಂದು ನನಗೆ ತೋಚಲಿಲ್ಲ. ನಾನು ವೈದ್ಯರ ತೀರ್ಮಾನವನ್ನು ಒಪ್ಪಿಕೊಳ್ಳುವಂತಿರಲಿಲಿಲ್ಲ. ಅವರು ಏನನ್ನೂ ಮಾಡದೆ ಸುಮ್ಮನೆ ನಿಂತಿದ್ದುದಕ್ಕಾಗಿ ನಾನು ಕುಪಿತಳಾದೆನು.

ರಾತ್ರಿಯೆಲ್ಲ ನಾವು–ಜವಹರ, ಸ್ವರೂಪ, ನಾನು ಮತ್ತು ದೊಡ್ಡಮ್ಮ ಬೀಬಿ ಅಮ್ಮ–ತಾಯಿಯವರ ಹಾಸಿಗೆಯ ಪಕ್ಕದಲ್ಲಿ ಕಾವಲು ಕುಳಿತೆವು ಬೆಳಿಗ್ಗೆ ಐದು ಗಂಟೆಯ ಸಮಯದಲ್ಲಿ ತಾಯಿಯವರ ಉಸಿರು ಕಟ್ಟಿತು. ಗಾಢ ನಿದ್ರೆಯಲ್ಲಿದ್ದವರಂತೆ ನಿಶ್ಶಬ್ದರಾಗಿ ಶಾಂತತೆಯಿಂದ ಅವರು ಮಲಗಿದ್ದರು. ಜವವರನು ಅಶ್ರುಲೋಚನನಾಗಿ "ಕಡೆಗೂ ಇವರೂ ಹೋದರು" ಎಂದು ಪಿಸುಗುಟ್ಟಿದನು. ನನ್ನನ್ನು ಕತ್ತಿಯಿಂದ ಇರಿದಂತಾಯಿತು. ಪೂಜ್ಯರಾದ ತಾಯಿಯವರು ಇನ್ನೆಂದೂ ದೀರ್ಘ ನಿದ್ರೆಯಿಂದ ಮೇಲೇಳಲಾರರೆಂಬ ನೋವು ನನ್ನೆದೆಯನ್ನು ಸೀಳಿತು. ವೇದನೆಯನ್ನು ತಗ್ಗಿಸಲು ಮಾಡಿದ ಪ್ರಯತ್ನ ನಿಷ್ಫಲವಾಯಿತು.

ತಾಯಿಯವರ ಹಾಸಿಗೆಯ ಸುತ್ತ ನಿಂತಿದ್ದ ಇತರರೊಡನೆ, ಉಸಿರಾಡಲು ಧೈರ್ಯವಿಲ್ಲದೆ, ಕಣ್ಣಿನಲ್ಲಿ ನೀರು ಸಹ ಇಲ್ಲದೆ ನಿಂತೆನು. ತಾಯಿಯ ಮರಣಕಾಲದಲ್ಲಿ ದೊಡ್ಡಮ್ಮನವರು ಹತ್ತಿರವಿರಲಿಲ್ಲವಾದುದರಿಂದ ಜವ ಹರನೂ ಸ್ವರೂಪಳೂ ಅವರಿಗೆ ಸುದ್ದಿ ತಲುಪಿಸಲು ಹೋದರು. ತಾಯಿ ಯವರ ಬಳಿ ನಾನೊಬ್ಬಳೇ ನಿಂತೆನು. ಕೂಡಲೇ ಅಶ್ರುಜಲ ಧಾರಾ ಕಾರವಾಗಿ ಪ್ರವಹಿಸಿತು. ಅದನ್ನು ತಡೆಯಲು ನನ್ನಿಂದ ಸಾಧ್ಯವಾಗ ಲಿಲ್ಲ. ಮೆಲ್ಲಗೆ ಅವರ ಪಕ್ಕದಲ್ಲಿ ಮೊಣಕಾಲೂರಿ ಕುಳಿತು, ನೀರವ ವಾಗಿ ಚರಮ ವಂದನೆಯನ್ನರ್ಪಿಸಿದೆನು. ನನ್ನ ಬಿಕ್ಕಳದೊಡಗೂಡಿದ ಅಳು ಅವರ ನಿದ್ರೆಯನ್ನು ಭಂಗಪಡಿಸೀತೆಂಬ ಭಯದಿಂದ ಹೊರಗೆ ಓಡಿಹೋದೆನು.

ತಾಯಿಯವರ ದಹನಸಂಸ್ಕಾರವನ್ನು ನೋಡಲು ನೂರಾರು ಮಂದಿ ನೆರೆದಿದ್ದರು. ಬಣ್ಣಬಣ್ಣದ ಹೂವುಗಳಿಂದಲಂಕೃತರಾಗಿದ್ದ ಅವರು ಅತ್ಯಂತರಮಣೀಯವಾಗಿ ಕಾಣಿಸುತ್ತಿದ್ದರು! ಮುಖದಮೇಲಣ ಸುಕ್ಕುಗೆರೆಗಳು ಮಾಯವಾಗಿ, ಜೀವಕಳೆಯಿಂದ ಶೋಭಿಸುತ್ತಿದ್ದರು. ಅವರ ಪ್ರಾಣಪಕ್ಷಿ ಹಾರಿಹೋಗಿತ್ತೆಂದು ಯಾರೂ ನಂಬುವಂತಿರಲಿಲ್ಲ.

ಮತ್ತೊಮ್ಮೆ ದುಃಖಾಂಧಕಾರ ಆನಂದಭವನವನವನ್ನಾವರಿಸಿತು. ತನ್ನ ಒಡತಿಯನ್ನು ಕಳೆದುಕೊಂಡ ಆ ದಿವ್ಯಭವನ ಪಾಳ್ಮನೆಯಂತೆ ಗೋಚರಿಸಿತು.

ಬಿರುದು ಬೆಸರರಿಕೆಯಲಿ ವೆಗ್ಗಳರು ಕೆಲರು
ಬಲ್ಲದರ್ ಮತಿಯುತರ್ ವಿದ್ವಾಂಸರವರು
ಬೆಳ್ಳಕ್ಕರಿಗರನಾಮಿಕರ್ ಮೇಣ್ಕೆಲರು
ದುಃಖದಾರಿದ್ರ್ಯಗಳ ನಿತ್ಯಸಖರವರು

— ವಿಲಿಯಂ ಮಾರಿಸ್

ನಾವು "ಬೀಬಿ ಅಮ್ಮ" ಎಂದು ಕರೆಯುತ್ತಿದ್ದ ನಮ್ಮ ದೊಡ್ಡಮ್ಮ ಬಾಲವಿಧವೆಯಾಗಿದ್ದರು. ಜೀವನದಲ್ಲಿ ಬೇರಾವ ಆಶೆ ಆಕಾಂಕ್ಷೆಗಳೂ ಇಲ್ಲದೆ ಅವರು ನಮ್ಮ ತಾಯಿಯವರ ಆದರೋಪಚಾರಕ್ಕೆ ಬಂದುನಿಂತರು. ಈ ಇಬ್ಬರು ಅಕ್ಕತಂಗಿಯರು ಒಬ್ಬರಿಂದೊಬ್ಬರು ತೀರ ಭಿನ್ನಪ್ರಕೃತಿಯವರು. ಹಿರಿಯವರು ಚಿಕ್ಕಂದಿನಲ್ಲಿಯೇ ಅನೇಕ ತೊಳಲಾಟಗಳಿಗೆ ಸಿಕ್ಕಿ ನೋವು ಅರಿತವರು. ಬಾಳು ಮೆತ್ತನೆಯ ಸುಪ್ಪತ್ತಿಗೆಯಲ್ಲವೆಂದೂ, ಪರಾವಲಂಬಿಯಾಗದೆ ಸ್ವಾವಲಂಬಿಯಾಗಬೇಕೆಂದೂ ಮೊದಲೇ ಅರಿತುಕೊಂಡು ದಕ್ಷಳೂ ನಿರಾಡಂಬರಳೂ ಆದ ಗೃಹಿಣಿಯಾದರು. ಕ್ರೌರ್ಯನಿಷ್ಕಾರುಣ್ಯಗಳ ಗಣಿಯಾದ ಈ ಲೋಕಕ್ಕೆ ಹೆದರಿ ಅದರ ಕೃಪಾವಲೋಕನಕ್ಕೆ ಕಾಯಬಾರದೆಂದು ನಿಶ್ಚಯಿಸಿಕೊಂಡು, ಅದರೊಡನೆ ಹೋರಾಟಹೂಡಲು ಆವಶ್ಯಕವಾದ ಮಾನಸಿಕ ಸಿದ್ಧತೆಗಳನ್ನು ಏರ್ಪಡಿಸಿಕೊಂಡರು. ತಮ್ಮ ಅಸಾಧಾರಣವಾದ ಜಾಣ್ಮೆಯಿಂದಲೂ, ಸೂಕ್ಷ್ಮತಮ ಮೇಧಾವಿತನದಿಂದಲೂ ಜಯಶೀಲರಾದರು. ಆಂಗ್ಲೇಯ ಭಾಷೆಯ ಪ್ರಥಮಾಕ್ಷರವೂ ಅವರಿಗೆ ಗೊತ್ತಿರಲಿಲ್ಲ; ಆದರೆ ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿದ್ದರು. ಅವರ ಗ್ರಹಣಶಕ್ತಿ ಅನನುಕರಣೀಯವಾದುದು; ಎಂತಹ ಕೆಲಸವಾದರೂ ಶೀಘ್ರದಲ್ಲಿಯೇ ಅರಿಯಬಲ್ಲವರಾಗಿದ್ದರು. ಬೀಬಿಅಮ್ಮನಿಗೆ ಆವಶ್ಯಕವಾದ ವಿದ್ಯೆಯನ್ನು ಕಲಿಸಿ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದರೆ ಅವರು ಅತ್ಯುತ್ತಮರಾದ ವಕೀಲರಾಗುತ್ತಿದ್ದರೆಂದು ತಂದೆಯವರು ಸದಾ ಹೇಳುತ್ತಿದ್ದರು. ಅವರ ವಿವೇಕ ಮತ್ತು ಪ್ರತ್ಯುತ್ಪನ್ನಮತಿತ್ವ

ಗಳು ಅಸಾಧಾರಣವಾದುವು; ಅವರ ಹಾಸ್ಯಶೀಲ ಚಿತ್ತಾಕರ್ಷಣೀಯವಾದುದು.

ವಿಧವೆಯಾದುದರಿಂದ ಅವರಿಗೆ ಸ್ವಂತ ಮನೆಮಠಗಳಿರಲಿಲ್ಲ. ತಮ್ಮ ಕಾಲವನ್ನು ನೆಂಟರ ಮನೆಗಳಲ್ಲಿ ಕಳೆಯುತ್ತಿದ್ದರು. ವರ್ಷದ ಬಹುಭಾಗ ಅವರು ನಮ್ಮೊಡನೆ ಇರುತ್ತಿದ್ದರು. ಅವರಲ್ಲಿ ನಮಗೆ ಅತುಲವಾದ ಪ್ರೇಮ. ಅವರು ನಮ್ಮ ಮನೆಯಲ್ಲಿದ್ದಾಗ, ಗೃಹಕೃತ್ಯದಲ್ಲಿ ತಾಯಿಯವರಿಗೆ ಸಹಾಯಕವಾಗುತ್ತಿದ್ದರು. ಇಲ್ಲವೇ ತಾಯಿಯವರು ರೋಗದಿಂದ ನರಳುತ್ತಿದ್ದಾಗ, ತಮ್ಮ ಸುಖವನ್ನೇ ಮರೆತು ಹಗಲಿರುಳು ಅವರ ಶುಶ್ರೂಷೆಯಲ್ಲಿಯೇ ನಿರತರಾಗಿದ್ದರು. ತಮ್ಮ ತಂಗಿ ಮತ್ತು ತಂಗಿಯ ಮಕ್ಕಳೇ ಅವರ ಪ್ರೀತಿಯ ನೆಂಟರು. ತಮ್ಮ ಅಚ್ಚುಮೆಚ್ಚಿನ ಸಹೋದರರು ಅನೇಕ ವರ್ಷಗಳಿಗೆ ಹಿಂದೆಯೇ ತೀರಿಹೋಗಿದ್ದರು. ನನ್ನ ತಾಯಿಯವರೇ ಅವರ ಬಾಳಿಗೆ ಮೇಟಿಯಾಗುಳಿದ್ದವರು. ಬೀಬಿ ಅಮ್ಮನಂತಹ ನಿಷ್ಕಲ್ಮಷಪ್ರೇಮಪೂರ್ಣಳಾದ ಸಹೋದರಿಯನ್ನು ಬೇರೆ ಕಾಣೆನು.

ನನ್ನಲ್ಲಿ ಅವರಿಗೆ ತುಂಬಾ ವ್ಯಾಮೋಹ. ನಾನು ಚಿಕ್ಕ ಹುಡುಗಿಯಾಗಿದ್ದಾಗ ಅವರ ಪಕ್ಕದಲ್ಲಿ ಕುಳಿತುಕೊಂಡು, ಯಕ್ಷಯಕ್ಷಿಣಿಯರ ಕಥೆಗಳನ್ನೂ, ಪುರಾತನ ಭರತಮಾತೆಯ ಹಿರಿಮೆಗರಿಮೆಗಳನ್ನೂ, ಆಕೆಯ ಮಕ್ಕಳ ಸಾಹಸಸಾಮರ್ಥ್ಯಗಳನ್ನೊಳಗೊಂಡ ಕಥೆಗಳನ್ನೂ, ಇನ್ನೂ ಅನೇಕ ವಿಧವಾದ ಆಖ್ಯಾಯಿಕೆಗಳನ್ನೂ ಕೇಳುತ್ತಿದ್ದೆವು. ಚಿರಸ್ಥಾಯಿಯಾದ ಕೀರ್ತಿಯನ್ನು ಪಡೆದಿರುವ ಅನೇಕ ವೀರರಮಣಿಯರ ಸಾಹಸಕಥೆಗಳನ್ನು ನಾನು ಓದಿ ಕೇಳಿ ತಿಳಿದುಕೊಂಡಿದ್ದೆನು. ಬೀಬಿ ಅಮ್ಮನೂ ಅಂತಹ ಕೃತ್ಯಗಳನ್ನು ಎಸಗಬಲ್ಲವರಾಗಿದ್ದರೆಂದು ನಾನು ಊಹಿಸಿಕೊಂಡಿದ್ದೇನೆ. ಕೆಲವು ಮಂದಿ ಸ್ತ್ರೀಯರಿಗೆ ಮಾತ್ರ ಸಹಜವಾದ ಅಸಾಧಾರಣ ನಿರ್ಭಯತೆಯನ್ನು, ಧೈರ್ಯವನ್ನೂ ಅವರು ಹೊಂದಿದ್ದರು. ಅವರು ನನಗೆ ತುಂಬಾ ಅಚ್ಚುಮೆಚ್ಚಿನವರಾಗಿದ್ದರು.

ಅವರು ನಮ್ಮ ತಾಯಿಯವರಿಗಿಂತ ಹತ್ತು ವರ್ಷ ಹಿರಿಯವರಾರಾಗಿದ್ದರೂ ಸಾಂಪ್ರದಾಯಿಕ ಜೀವನವನ್ನು ನಡೆಯಿಸಿಕೊಂಡು ಬಂದಿ

ದ್ದರೂ, ಬೀಬಿ ಅಮ್ಮ ತಾಯಿಯವರಿಗಿಂತ ವಿಶಾಲ ದೃಷ್ಟಿಯುಳ್ಳವರು. ತಾಯಿಯವರ ಹಾಗೆ ಅವರೂ ನಮ್ಮ ಆಧುನಿಕ ರೀತಿನೀತಿಗಳನ್ನು ಕಂಡು ದಿಗ್ಭ್ರಮೆಗೊಂಡರೂ, ನಮ್ಮ ಯಾವ ತೀರ್ಪನ್ನು ಕೊಟ್ಟವರಲ್ಲ ಕತ್ತರಿಸಿದ ಬಿಡುಮುಡಿ ಮತ್ತು ತೋಳಿಲ್ಲದ ಕಿರಿಯ ರವಿಕೆಗಳೆಂದರೆ ಅವರಿಗೆ ಕಣ್ಣುರಿ. ಆಧುನಿಕ ರೀತಿಯ ಉಡುಪು ತೊಡುಪುಗಳ ವಿಷಯವನ್ನು ಎತ್ತಿ ತಮ್ಮ ಅಭಿಪ್ರಾಯವನ್ನು ಸೂಚಿಸುವಂತೆಯೂ ಅಸಮ್ಮತಿಯನ್ನು ವ್ಯಕ್ತಪಡಿಸುವಂತೆಯೂ ನಾವು ಅವರನ್ನು ಕಾಪಾಡಿದಾಗ ಅವರು ನಮ್ಮ ಕಡೆಗೆ ಕಿವಿಡುಗಿವಿಯನ್ನು ತಿರುಗಿಸುತ್ತಿದ್ದರು. ತಾಯಿಯವರಾದರೋ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಲ್ಲಿದೆ, ಆನೇಕ ವಿಧಗಳಲ್ಲಿ ತಮ್ಮ ಅಸಮ್ಮತಿಯನ್ನು ಸೂಚಿಸುತ್ತಿದ್ದರು. ಆದರೆ ಅವರ ವಿರೋಧ ಪರಿಣಾಮಕಾರಿಯಾಗಲಿಲ್ಲ. ನನಗೆ ಇಷ್ಟವಿಲ್ಲದುದನ್ನು ಮಾಡುವಂತೆ ಅವರೆಂದೂ ನಮ್ಮನ್ನು ಒತ್ತಾಯಪಡಿಸುತ್ತಿರಲಿಲ್ಲ. ನಾವು ಅತಿ ಆಧುನಿಕರಾಗದೆ ಪೂರಾತನ ಸಂಪ್ರದಾಯಾನುವರ್ತಿಗಳಾಗಬೇಕೆಂಬುದೇ ಅವರ ಬಯಕೆ.

ಬೀಬಿ ಅಮ್ಮ ನನಗೆ ದೊಡ್ಡಮ್ಮಮಾತ್ರವಾಗಿರಲಿಲ್ಲ: ಅವರು ನನ್ನ ಪ್ರಾಣಾಧಿಕೆಯೂ, ಆಪ್ತಸ್ನೇಹಿತೆಯೂ ಆಗಿದ್ದರು. ಕೆಲವುವೇಳೆ ತಾಯಿಯವರ ಹತ್ತಿರ ಹೋಗಲು ಮನಸ್ಸು ಒಡಂಬಡದಿದ್ದಾಗ ಅವರ ಹತ್ತಿರ ನಿರ್ಭಯವಾಗಿ ಹೋಗುತ್ತಿದ್ದೆನು. ನನ್ನ ಮನೋಭಾವ ಅವರ ಅರಿವಿಗೆ ನಿಲುಕದಿದ್ದರೂ, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡುತ್ತಿದ್ದರು.

ಇತರರ ನೆರವಿಲ್ಲದೆ ತಾಯಿಯವರ ಯಾವ ಕಾರ್ಯವನ್ನೂ ಕೈಗೊಳ್ಳುತ್ತಿರಲಿಲ್ಲ. ಆದುದರಿಂದ ಅವರು ನಮಗೆ ನಿರ್ದಿಷ್ಟವಾದ ಬುದ್ಧಿವಾದವನ್ನು ನೀಡುವಷ್ಟು ಶಕ್ತರಾಗಿರಲಿಲ್ಲ. ತಾಯಿಯವರು ಸುಂದರವಾದ ದುರ್ಬಲವ್ಯಕ್ತಿ. ಅವರ ಪಾಲನೆಪೋಷಣೆಗಳು ನಮ್ಮ ಮೇಲೆ ಬಿದ್ದ ಕರ್ತವ್ಯವೆಂದರಿತಿದ್ದೆವಲ್ಲದೆ, ಅವರು ನಮಗೆ ದಾರಿ ತೋರಿಸಿ, ತಿದ್ದಿ, ನಡೆಯಿಸುವರೆಂದು ನಾವು ನಂಬಿರಲಿಲ್ಲ. ಸಣ್ಣಪುಟ್ಟ ತೊಡಕುತೊಂದರೆಗಳು ನನಗೆ ಅಡ್ಡಬಂದಾಗ ನಾನು ಬೀಬಿ

ಅಮ್ಮನ ಹತ್ತಿರ ಹೋಗುತ್ತಿದ್ದೆನು. ಒಂದು ಸಾರಿಯೂ ಅವರು ನನಗೆ ನಿರಾಶೆಯುಂಟುಮಾಡಲಿಲ್ಲ.

ತಾಯಿಯವರು ಸತ್ತ ಸುದ್ದಿಯನ್ನು ಅವರಿಗೆ ತಲುಪಿಸಿದಾಗ ಅವರು ದಿಙ್ಮೂಢರಾಗಿ ನಂಬಲಾರದೆಹೋದರು. ತಾವು ಜೀವಿಸಿದ್ದಾಗಲೇ ತಮ್ಮ ತಂಗಿ ಕೇವಲ ಕೆಲವು ಗಂಟೆಗಳಲ್ಲಿಯೇ ಮೃತಿ ಹೊಂದಿರುವುದು ಹೇಗೆ ಸಾಧ್ಯ? ಕ್ರಮೇಣ ಅವರಿಗೆ ದುರಂತಘಟನೆಯ ಅರಿವಾಯಿತು. ಅನೇಕಾನೇಕ ದುಃಖಗಳನ್ನು ನುಂಗಿದ್ದ ಅವರ ಧೀರ ಹೃದಯಕ್ಕೆ ಬರಸಿಡಿಲು ಬಡಿದಂತಾಯಿತು. ಯಾವ ಮಾನವಶಕ್ತಿಯೂ ಆ ವೇದನೆಯನ್ನು ಕುಗ್ಗಿಸುವಂತಿರಲಿಲ್ಲ. ಅವರ ಹೃದಯ ರಕ್ತವನ್ನು ಕಾರಿತು; ಅವರ ಇಂದ್ರಿಯಗಳು ಪರಸ್ಪರ ಹೊಯ್ದಾಡಿದುವು; ನೋವಿನ ಕೊರತೆ ಅಸಹನೀಯವಾಗಿತ್ತು. ಆದರೂ ನಮಗೋಸ್ಕರ, ನಮ್ಮ ದುಃಖವನ್ನು ತಗ್ಗಿಸುವುದಕ್ಕೋಸ್ಕರ, ಅವರು ತಮ್ಮ ವ್ಯಥೆಯನ್ನು ಮರೆಮಾಡಿದರು. ದಹನಸಂಸ್ಕಾರಗಳ ಸಿದ್ಧತೆಗಳ ವಿಷಯ ನಮಗೆ ಗೊತ್ತಿಲ್ಲವೆಂದರಿತು, ಬೇಕಾದುದೆಲ್ಲವನ್ನು ಅವರೇ ಅಣಿಮಾಡಿದರು. ಜೀವನಪರ್ಯಂತ ಪೋಷಿಸಿ ಬೆಳೆಸಿದ್ದ ತಮ್ಮ ಚಿಕ್ಕ ತಂಗಿಯ ಚರಮಸಂಸ್ಕಾರಗಳ ಸಿದ್ಧತೆಗಳನ್ನು ಅವರ ಕೈಗಳೇ ಅಣಿಮಾಡಬೇಕಾಯಿತು.

ಶವದ ಮೆರೆವಣಿಗೆ ಮನೆಯನ್ನು ದಾಟಿತು. ಬೀಬಿ ಅಮ್ಮ ಅಂಗಳದಲ್ಲಿ ಪ್ರತಿಮೆಯಂತೆ ನಿಂತರು. ಅವರ ಕಣ್ಣುಗಳಿಂದ ಒಂದು ಬೊಟ್ಟು ನೀರೂ ಬರಲಿಲ್ಲ. ತನ್ನ ಪ್ರೀತಿಯ ತಂಗಿಯನ್ನು ಹೊತ್ತಿದ್ದ ಹೂವಿನ ಚಟ್ಟ ಕಣ್ಮರೆಯಾಗುವ ತನಕ ಅದನ್ನೇ ದೃಷ್ಟಿಸುತ್ತಾ ನಿಂತರು. ಕೊನೆಗೆ ಸರಸರನೆ ತಾಯಿಯವರ ಕೋಣೆಗೆ ಹಿಂದಿರುಗಿದರು. ನಾವು ಅವರನ್ನು ಹಿಂಬಾಲಿಸಿದೆನು. ತಮ್ಮ ತಂಗಿಗೆ ಪ್ರಿಯವಾಗಿದ್ದ ವಸ್ತುಗಳನ್ನೆಲ್ಲ ಕಟ್ಟಕಡೆಯ ಸಾರಿ ನೋಡುವಂತೆ ಕಂಡರು. ನಾನು ಅವರನ್ನು ಅಪ್ಪಿಕೊಂಡು "ಬೀಬಿಅಮ್ಮ, ನೀವು ಸ್ವಲ್ಪ ಒರಗಿಕೊಂಡು ವಿಶ್ರಮಿಸಿಕೊಳ್ಳಬಾರದೇ?" ಎಂದೆನು. ಗತಾಶ್ರುಲೋಚನರಾಗಿ ನನ್ನ ಕಡೆ ನೋಡಿದರು. ನನ್ನ ಮಾತನ್ನು ಲೆಕ್ಕಿಸದೆಯೇ "ಹೋಗಿ

ಸ್ನಾನಮಾಡಿ ಬಾ. ನಿನಗಾಗಿ ಸ್ವಲ್ಪ ಟೀಯನ್ನು ಸಿದ್ಧಗೊಳಿಸುತ್ತೇನೆ ಎಂದರು. ಆಗ ಮಧ್ಯಾಹ್ನ ಕಳೆದು ಎರಡು ಗಂಟೆಯಾಗಿತ್ತು. ನಾನು ಮಾರ್ನುಡಿಯಲಿಲ್ಲ. ಸ್ನಾನಮಾಡಿ ಹಿಂದಿರುಗುವಷ್ಟರಲ್ಲಿಯೇ ಟೀ ಸಿದ್ಧವಾಗಿತ್ತು. ಆದರೆ ಅದು ನನಗೆ ಸೇರಲಿಲ್ಲ. ಬೀಬಿಅಮ್ಮನ ನಿಶ್ಚೇಷ್ಟಪ್ರಕೃತಿ ನನಗೆ ಕಳವಳವನ್ನುಂಟುಮಾಡಿತು. ಆದುದರಿಂದ ಅವರನ್ನು ಹುಡುಕಲು ಹೊರಟೆನು. ತಾಯಿಯವರ ಕೋಣೆಯಲ್ಲಿ ತಾಯಿಯವರು ಮಲಗುತಿದ್ದ ಜಾಗದಲ್ಲಿಯೇ ಅವರು ಬಿದ್ದಿದ್ದರು. ನಾನು ಅವರ ಹತ್ತಿರ ಸರಿದು ಅವರನ್ನು ಕೂಗಿದೆನು. ಅವರು ಕಣ್ಣು ತೆರೆದರು. “ಬೀಬಿಅಮ್ಮ, ಸ್ವಲ್ಪ ಟೀ ತೆಗೆದುಕೊಳ್ಳಿ, ಅನುಕೂಲ ವಾಗುತ್ತೆ” ಎಂದೆನು. ಉತ್ತರ ಬರಲಿಲ್ಲ. ಬೀಬಿಅಮ್ಮ, ನೀವು ಯಾವಾಗಲೂ ನಮಗೆ ತಾಯಿಯಾಗಿದ್ದಿರಿ. ಈಗಂತು ನೀವೇ ನಮಗೆ ತಾಯಿ. ನೀವಲ್ಲದೆ ನಮಗಿನ್ನಾರಿದ್ದಾರೆ. ನಿಮ್ಮನ್ನು ಬಿಟ್ಟು ನಾನಿರಲಾರೆನು” ಎಂದೆನು. ಅವರ ತೋಳುಗಳು ನನ್ನನ್ನು ಬಳಸಿ ದುವು. ಮೊಟ್ಟಮೊದಲು ಅವರ ಕಣ್ಣುಗಳಲ್ಲಿ ನೀರು ಮಡುಗಟ್ಟಿತು. “ಬೀಬಿ, ನೀನು ಯಾವಾಗಲೂ ನನಗೆ ಪ್ರೀತಿಪಾತ್ರಳಾದ ಮಗಳಾಗಿ ದ್ದೀಯೆ. ’ಆದರೆ ಒಬ್ಬಳು ಮಗಳಿಗೆ ಒಬ್ಬಳೇ ತಾಯಿ. ನಿನ್ನವಳು ಹೊರಟುಹೋಗಿದ್ದಾಳೆ. ಅವಳು ಇನ್ನೆಂದೂ ಹಿಂದಿರುಗುವಂತಿಲ್ಲ. ನಾನು ಆಕೆಯ ಸ್ಥಾನವನ್ನಾಕ್ರಮಿಸಲಾರೆ. ಅಲ್ಲದೆ ನಾನು ಅವಳಿ ಗೋಸ್ಕರ ಬದುಕಿದ್ದೆನು. ಈಗ ಯಾವ ಸುಖಕ್ಕೋಸ್ಕರ ಬದುಕ ಬೇಕಾಗಿದೆ? ನನ್ನ ಕೆಲಸ ಮುಗಿಯಿತು. ನಾನು ಹೋಗಲೇಬೇಕು” ಎಂದರವರು. ಉಕ್ಕಿಬರುತ್ತಿದ್ದ ಕಣ್ಣೀರನ್ನು ತಡೆಯಲು ಯತ್ನಿಸಿ ದೆನು. ಉಸುರುಗಟ್ಟಿತು; ಮಾತು ಹೊರಡಲಿಲ್ಲ. ಅವರ ತಲೆಯನ್ನು ಸವರುತ್ತಾ ಸ್ವಲ್ಪಹೊತ್ತು ಪಕ್ಕದಲ್ಲಿಯೇ ಕುಳಿತೆನು. ಅವರಿಗೆ ನಿದ್ರೆ ಬಂದಂತೆ ಕಂಡುಬಂದುದರಿಂದ ನಾನು ಸದ್ದಿಲ್ಲದೆ ಹೊರಗೆಹೋದೆನು. ಅನೇಕಸಾರಿ ಅವರನ್ನು ನೋಡಲು ಹೋದೆನು. ಅವರು ಗಾಢನಿದ್ರಾ ಸಕ್ತರಾಗಿದ್ದಂತೆ ತೋರಿತು. ಕೊನೆಗೆ ನಾನು ತುಸು ಗಾಬರಿಗೊಂಡೆನು. ಹತ್ತಿರ ಹೋಗಿ ಅವರನ್ನು ಅವರನ್ನು ಅಲ್ಲಾಡಿಸಿದೆನು. ಅವರು

ಎಚ್ಚರಗೊಳ್ಳಲಿಲ್ಲ. ಪುನಃಪುನಃ ಅವರನ್ನು ಕೂಗಿದೆನು. ಚಲನೆಯ ಕುರುಹೇ ಕಾಣಲಿಲ್ಲ. ಅಣ್ಣ ನಿನ್ನೂ ಸುಡುಗಾಡಿನಿಂದ ಹಿಂದಿರುಗಿರಲಿಲ್ಲ. ಅಕ್ಕನಿಗೆ ಈ ವಿಷಯವನ್ನು ತಿಳಿಸಿದೆನು. ಅವಳೂ ಗಾಬರಿಗೊಂಡಳು. ವೈದ್ಯರಿಗೆ ಹೇಳಿಕಳುಹಿಸಿದೆವು. ಸುಮಾರು ಏಳುಗಂಟೆಯ ಹೊತ್ತಿಗೆ ಜವಹರನು ಬಂದನು. ಅಷ್ಟರಲ್ಲಿಯೇ ವೈದ್ಯರೂ ಬಂದರು. ಅವರು ಬೀಬಿ ಅಮ್ಮನನ್ನು ಪರೀಕ್ಷಿಸಿ ತಾಯಿಯವರನ್ನು ಕಬಳಿಸಿದ್ದ ಪಾರ್ಶ್ವವಾಯುವೇ ಅವರನ್ನು ಕೊಂದಿತೆಂದೂ ತಿಳಿಸಿದರು. ತಮ್ಮ ಜೀವಮಾನದಲ್ಲಿ ಹಿಂದೆಂದೂ ಅವರು ಅಂತಹ ಪೆಟ್ಟಿಗೆ ತುತ್ತಾಗಿರಲಿಲ್ಲ, ಅಥವಾ ರುಗ್ಣಶಯ್ಯೆಯಲ್ಲಿ ಮಲಗಿ ನರಳಿರಲಿಲ್ಲ. ಆದುದರಿಂದ ವೈದರ ಮಾತನ್ನು ನಂಬುವುದು ಕಷ್ಟವಾಯಿತು. ಅವರು ಯಾವಾಗಲೂ ದೃಢಕಾಯರಾಗಿದ್ದರು. ಆದರೂ ಅವರು ಪ್ರಜ್ಞೆತಪ್ಪಿಬಿದ್ದಿದ್ದರು. ಅವರನ್ನುಳಿಸುವ ವಿಧಾನ ಯಾರಿಗೂ ಗೊತ್ತಿರಲಿಲ್ಲ. ಪ್ರತಿಯೊಬ್ಬರೂ ತಳಮಳಗೊಂಡರು. ನನ್ನ ಅವಸ್ಥೆಯಂತು ಅಸಹನೀಯವಾಯಿತು. ಅವರ ಅನಂತಾನಂತ ಪ್ರೇಮಸ್ನೇಹಗಳಿಗೆ ನನ್ನಂತೆ ಇನ್ನಾರೂ ಪಾತ್ರ ರಾಗಿರಲಿಲ್ಲ. ಹಿಂದಿನಿರುಳಿನಂತೆಯೇ ಮತ್ತೊಂದಿರುಳು ನಾವು ಅವ ರನ್ನು ಕಾದುಕೊಂಡಿರಬಹುದಾಗಿತ್ತೇ ಹೊರತು ಮತ್ತೇನೂ ನಮ್ಮಿಂದ ಸಾಧ್ಯವಾಗುತ್ತಿರಲಿಲ್ಲ. ಕೈಕಾಲುಗಳನ್ನೇ ಅಲ್ಲಾಡಿಸಲು ಶಕ್ತಿಯಿಲ್ಲದೆ ಅವರ ಪಕ್ಕದಲ್ಲಿ ಕುಳಿತೆನು. ಅವರು ನಮ್ಮೊಡನೆ ಕಳೆದ ಹಿಂದಿನ ದಿನಗಳ ಸವಿನೆನಪುಗಳು, ನನ್ನ ಮೇಲೆ ಕರೆಯುತ್ತಿದ್ದ ಪ್ರೇಮಾಮೃತ ಧಾರೆ, ತಾಯಿಯವರ ಮತ್ತು ನಮ್ಮ ಕುಟುಂಬದ ಮೇಲೆ ಇಟ್ಟಿದ್ದ ನಿಶ್ಚಲಭಕ್ತಿ, ಇವೆಲ್ಲ ನನ್ನ ಚಿತ್ತವನ್ನು ಕಲಕಿದುವು. ನನ್ನ ಹೃದ ಯವೇ ಸಾವಿರಾರು ದುಃಖಾಣುಗಳಾಗಿ ನುಚ್ಚುನುರಿಯಾಗಬಹು ದೆಂದು ಭಾವಿಸಿದೆನು. ಆ ರೀತಿಯಲ್ಲಾದರೂ ನನ್ನ ದುಃಖ ಉಪ ಶಮನವಾಗಲಿಲ್ಲ. ಶಾಂತಮುದ್ರಿತವಾದ ಅವರ ಮುಖವನ್ನು ಮತ್ತೆ ಮತ್ತೆ ದೃಷ್ಟಿಸಿನೋಡಿದೆನು. ಇಂತಹ ಹೃದಯವಿಧ್ರಾವಕವಾದ ದುರ್ಘಟನೆಗಳು ಸಂಭವಿಸುವುದೆಂದು ನನಗೇ ಆಶ್ಚರ್ಯವಾಯಿತು.

ರಾತ್ರಿಯೆಲ್ಲಾ ನಾವು ಎಚ್ಚರವಾಗಿದ್ದೆವು. ಮಾರನೆಯ ಬೆಳಗ್ಗೆ

ಐದು ಗಂಟೆಗೆ, ತಾಯಿಯವರು ಸತ್ತ ಇಪ್ಪತ್ತುನಾಲ್ಕು ಗಂಟೆಗಳಿಗೆ ಸರಿಯಾಗಿ, ಬೀಬಿಅಮ್ಮನೂ ವೈಕುಂಠವಾಸಿಯಾದರು. ನಮ್ಮನ್ನು ನಿರಾಶೆಯ ಹೊಂಡಕ್ಕೆ ತಳ್ಳಿ ತಬ್ಬಲಿಗಳನ್ನಾಗಿ ಮಾಡಿ ತಾಯಿ ಮತ್ತು ದೊಡ್ಡಮ್ಮ ಇಬ್ಬರೂ ಇಪ್ಪತ್ತುನಾಲ್ಕು ಗಂಟೆಗಳ ಅಂತರದಲ್ಲಿಯೇ ನಮ್ಮನ್ನು ಅಗಲಿದರೆಂದು ನಂಬುವುದು ಅಸಾಧ್ಯವಾಗಿತ್ತು.

ಮತ್ತೊಮ್ಮೆ ದಹನಸಂಸ್ಕಾರ ನಡೆಯಿತು. ಆದರೆ ಅದು ಹಿಂದಿನ ದಿನ ನಡೆದಂತೆ ಇರಲಿಲ್ಲ. ಬೀಬಿಅಮ್ಮ ಸಂನ್ಯಾಸವನ್ನು ಸ್ವೀಕರಿಸಿದ್ದರು. ದಹನಸಂಸ್ಕಾರಗಳೇ ನಡೆಯಲಿಲ್ಲ. ಅವರಿಗೆ ಕೇಸರಿವರ್ಣದ ಸೀರೆಯನ್ನು ಉಡಿಸಿದೆವು. ಅವರ ಸೌಂದರ್ಯವೇ ಆಭರಣಗಳು. ಮುಪ್ಪನ್ನು ತೋರಿಸುತ್ತಿದ್ದ ಸುಕ್ಕುಗಳ ಮುಖದಲ್ಲಿ ಯೌವನ ಸಂಚಾರವಾದಂತಾಗಿ ಗೆರೆಗಳೆಲ್ಲ ಮಾಯವಾದುವು. ಅವರ ಮುಖದಲ್ಲಿ ತಾಂಡವವಾಡುತ್ತಿದ್ದ ಶಾಂತಭಾವವನ್ನು ನೋಡಿದರೆ ಅವರು ಸುಖವಾಗಿ ವಿಶ್ರಮಿಸಿಕೊಳ್ಳುತ್ತಿದ್ದಂತೆ ಭಾಸವಾಗುತ್ತಿತ್ತು. ಅಕ್ಕ ತಂಗಿಯರನ್ನು ಬೇರ್ಪಡಿಸಲು ಮೃತ್ಯುವಿಗೂ ಸಾಧ್ಯವಿಲ್ಲವೆಂದು ತೋರುತ್ತಿತ್ತು.

ತಾಯಿಯವರ ದಹನ ಸಂಸ್ಕಾರವನ್ನು ನೋಡಲು ಸಾವಿರಾರು ಜನರು ನೆರೆದಿದ್ದರು. ಅವರನ್ನು ಸುಡುಗಾಡಿಗೊಯ್ಯುವಾಗ ರಾಣಿಯ ವೈಭವಾಡಂಬರಗಳ ಮೆರೆವಣಿಗೆಯಾಗಿತ್ತು. ಬೀಬಿ ಅಮ್ಮನ ದಹನ ಸಂಸ್ಕಾರಕ್ಕೂ ' ಅಸಂಖ್ಯಾತ ಜನರು ಗುಂಪುಕೂಡಿದ್ದರು. ಲೆಕ್ಕವಿಲ್ಲ ದಷ್ಟು ಬಡವರು, ಹರಕುಬಟ್ಟೆಯವರು, ಮುದುಕರು ಮತ್ತು ಅಂಗವಿ ಹೀನರು ಅವರಿಗೆ ತಮ್ಮ ಅಂತಿಮಗೌರವದ ಕಾಣಿಕೆಯನ್ನು ಸಲ್ಲಿಸಲು ತಂಡೋಪತಂಡವಾಗಿ ನುಗ್ಗಿದರು. ಅವರು ಬೀಬಿ ಅಮ್ಮನನ್ನು "ದೇವಿ" ಎಂದು ಭಾವಿಸಿದ್ದರು. ಪ್ರತಿಯೊಬ್ಬರೂ ಅವರಲ್ಲಿ ಪೂಜ್ಯ ಭಾವವನ್ನಿಟ್ಟಿದ್ದರು. ಕಡುಬಡವನಾಗಲೀ, ಅತ್ಯಂತ ನೀಚನಾಗಲೀ, ಹೆಂಗಸಾಗಲೀ ಗಂಡಸಾಗಲೀ, ಬುದ್ಧಿವಾದವನ್ನು ಪಡೆಯಲು ಇಲ್ಲವೇ ಸಹಾಯವನ್ನು ಯಾಚಿಸಲು ಬೀಬಿ ಅಮ್ಮನ ಹತ್ತಿರ ನಿಸ್ಸಂಕೋಚವಾಗಿ ಹೋಗುತ್ತಿದ್ದರು. ಅವರೆಂದೂ ನಿರಾಶರಾಗಿ ಹಿಂದಿರುಗುತ್ತಿರಲಿಲ್ಲ.

ಬೀಬಿ ಅಮ್ಮನ ಬದುಕು ತುಂಬಾ ಸರಳವಾಗಿತ್ತು. ತಾವು ಯಾರನ್ನು ಒಲಿದಿದ್ದರೋ ಅವರ ಸುಖದುಃಖಗಳಲ್ಲಿ ಸಮಭಾಗಿನಿಯರಾಗುತ್ತಿದ್ದರು. ಬಡಬಗ್ಗರಿಗೆ ತುಂಬಿದ ಹೃದಯದಿಂದ ಧಾರಾಳವಾಗಿ ನೀಡುತ್ತಿದ್ದರು. ಅವರ ಸಾವಿನಿಂದ ಯಾಚಕರಿಗೆ ಸಂಭವಿಸಿದ ನಷ್ಟ ಅಷ್ಟಿಷ್ಟಲ್ಲ. ಆರೋಗ್ಯದೃಢಕಾಯರಾಗಿದ್ದರೂ ತಾಯಿಯವರು ತೀರಿಕೊಂಡ ಮೂರನೆಯ ದಿನವೇ ಅವರು ಸತ್ತುದನ್ನು ನೋಡಿ, ಜನರು ಅವರನ್ನು ತಪಸ್ವಿನಿಯೆಂದು ಭಾವಿಸಿದ್ದರು; ಹಾಗಿಲ್ಲದಿದ್ದರೆ ಅಂತಹ ಆತ್ಮತ್ಯಾಗ ಅಸಾಧ್ಯವಾಗುತ್ತಿತ್ತು.

ತಮ್ಮ ಆರಾಧ್ಯದೇವತೆಯ ಚರಮದರ್ಶನಕ್ಕಾಗಿ ಒಬ್ಬರಮೇಲೊಬ್ಬರು ಬಿದ್ದು ನುಗ್ಗಿಬರುತ್ತಿದ್ದ ಬಡಬಗ್ಗರಿಂದ ಕಿಕ್ಕಿರಿದಿದ್ದ ನಮ್ಮ ಮನೆಯ ಮುಂದಣ ಬಯಲನ್ನು ನೋಡಿ ನಾನು ಆಶ್ಚರ್ಯಚಕಿತಳಾದೆನು. ಅನಲಂಕೃತವಾದ, ನಿರಾಡಂಬರದ ಶವದ ಸದ್ದಿಲ್ಲದ ಮೆರೆವಣಿಗೆ ಸಾಗುತ್ತಿದ್ದಾಗ ನೀರಿಣುಕದ ಕಣ್ಣಿರಲಿಲ್ಲ, ಮರುಗದ ಹೃದಯವಿರಲಿಲ್ಲ.

ನಾನೂ ನನ್ನ ಪ್ರೀತಿಯ ದೊಡ್ಡಮ್ಮನನ್ನು ಮೌನದಿಂದ ಬೀಳ್ಕೊಂಡೆನು. ತಂಗಿಯಿಲ್ಲದ ಅವರ ಬದುಕು ಅಸಹನೀಯವಾಗುತ್ತಿತ್ತು. ಆದುದರಿಂದ ಅವರಿಗೆ ಸಾವೇ ಲೇಸೆಂದು ನಾನು ಭಾವಿಸಿಕೊಂಡೆನು. ಆದರೂ ಅಷ್ಟು ಜಾಗ್ರತೆ ಅವರು ನಮ್ಮನ್ನು ತ್ಯಜಿಸಬಾರದಾಗಿತ್ತೆಂಬುದೇ ನನ್ನ ಬಯಕೆ. ಈ ಇಬ್ಬರ ಮರಣದಿಂದಾದ ಶೂನ್ಯತೆಯನ್ನು ಕಾಲರಾಯನೂ ನೀಗಲಾರನು.

ಓ ನಿಲ್ಲು! ಮತ್ತೆಯುಂ ಹಗೆಕೊಲೆಗಳಿಗೆ ಗೆಲವೆ?
ನಿಲ್ ನಿಲ್ಲು! ನರನರರ ಕಡಿದೊಟ್ಟುವುದು ತರವೆ?
ನಿಲ್ ನಿಲ್ಲು! ನಾಳೆಯೊಡಲೊಳಗಿರುವ ಕಹಿನಂಜ
ನೀಂಟದಿರು ಗಸಿಸಹಿತ!
ಗತಯುಗದ ಬಹುಭಾರದಿಂ ಕುಗ್ಗಿಹುದು ಧಾತ್ರಿ;
ಓ! ಸಾವೆ ಶರಣದಕೆಯಲ್ಲದೊಡೆ ವಿಶ್ರಾಂತಿ!

—ಷೆಲ್ಲಿ

೧೯೩೯ನೆಯ ಇಸವಿಯ ಜುಲೈ ತಿಂಗಳಲ್ಲಿ ಜವಹರನು ಸಿಂಹಳ ದ್ವೀಪಕ್ಕೆ ಹೋಗಲು ನಿಶ್ಚಯಿಸಿ, ಜತೆಗೆ ನನ್ನನ್ನು ಆಹ್ವಾನಿಸಿದನು. ನಾನು ಉತ್ಸುಕತೆಯಿಂದ ಸಮ್ಮತಿಸಿದೆನು. ಸಿಂಹಳದ್ವೀಪಕ್ಕೆ ಹೋಗ ಬೇಕೆಂಬ ಬಯಕೆ ನನ್ನಲ್ಲಿ ಮೊದಲಿಂದಲೂ ಹುದುಗಿತ್ತು. ಆ ಬಯಕೆ ಕೈಗೂಡಲು ಅವಕಾಶ ದೊರೆತಿರಲಿಲ್ಲ.

ಜವಹರನು ಅಲ್ಲಿಗೆ ನಿಯೋಗದ ಮೇಲೆ ಹೋಗುತ್ತಿದ್ದನು. ಭಾರತೀಯರಿಗೂ, ಸಿಂಹಳೀಯರಿಗೂ ಸಂಭವಿಸಿದ್ದ ಉಗ್ರವಾದ ಭಿನ್ನಾಭಿಪ್ರಾಯಗಳು ಇಲ್ಲಿ ಕಹಿಯಾದ ವಾತಾವರಣವನ್ನು ಕಲ್ಪಿಸಿದ್ದುವು. ಆದುದರಿಂದ ಜವಹರನೇ ಅಲ್ಲಿಗೆ ಹೋಗಿ, ಸ್ವತಃ ವಾಸ್ತವಿಕ ಪರಿಸ್ಥಿತಿಯನ್ನು ಪರಿಶೀಲಿಸಿ, ಸಾಧ್ಯವಾದರೆ ಎರಡು ಜನಾಂಗಗಳಿಗೂ ಸಾಮರಸ್ಯವನ್ನುಂಟುಮಾಡಬೇಕೆಂದು ನಿರ್ಧರವಾಗಿತ್ತು.

ಮಂಜಿನಿಂದ ಮುಬ್ಬುಕವಿದಿದ್ದ ಒಂದು ಬೆಳಗ್ಗೆ ಜವಹರನೂ ನಾನೂ ಪೂನಾನಗರದ ವಿಮಾನ ನಿಲ್ದಾಣದಲ್ಲಿ ಸಣ್ಣದೊಂದು ವಿಮಾನವನ್ನೇರಿದೆವು. ಇನ್ನೂ ಬೆಳಕು ಹರಿಯದಿದ್ದರೂ ನಮ್ಮನ್ನು ಬೀಳ್ಕೊಡಲು ಕಾಂಗ್ರೆಸ್ಸಿನ ಅಧಿಕಾರಿಗಳು, ಜವಹರನ ಮಿತ್ರರೂ ಅಭಿಮಾನಿಗಳೂ ಗುಂಪುಕೂಡಿದ್ದರು. ನಾವು ಹೈದರಾಬಾದಿನ ಮೂಲಕ ಹಾದು ಹೋದೆವು. ಅಲ್ಲಿ ಶ್ರೀಮತಿ ಸರೋಜಿನಿ ನಾಯ್ಡುರವರೂ ಅವರ ಕುಟುಂಬದವರೂ ಏರ್ಪಡಿಸಿದ್ದ ಔತಣ ಮನೋಹರವಾಗಿತ್ತು. ಅನಂತರ ಮದ್ರಾಸು ಮತ್ತು ತಿರುಚನಾಪಳ್ಳಿಗಳ ಮೂಲಕ ಹೊರಟು

ಮಾರನೆಯದಿನ ಕೊಲೊಂಬೋವನ್ನು ಸೇರಿದೆವು. ಲವಿನಿಯ ಬೆಟ್ಟದ ತಪ್ಪಲಿನ ನಿಲ್ದಾಣದ ಬಳಿ ಬಂದಾಗ ಕೆಳಗೆ ಅಸಂಖ್ಯಾತ ಜನಸಂದಣಿಯನ್ನು ನೋಡಿದೆವು. ಚತುರನೂ ಸೊಗಸುಗಾರನೂ ಆದ ನಮ್ಮ ವೈಮಾನಿಕ ಕೂಡಲೇ ವಿಮಾನವನ್ನು ಕೆಳಗಿಳಿಸಲಿಲ್ಲ. ಕೆಳಗೆ ಬರ ಬರುತ್ತಾ ವಿಮಾನವನ್ನು ಗುಂಪಿನ ಸುತ್ತ ಸುತ್ತಿಸಿದನು. ಅನಂತರ ವಿಮಾನವನ್ನು ಮೇಲೇರಿಸಿ ಕಾದುಕೊಂಡಿದ್ದ ಜನಸಮೂಹಕ್ಕೆ ವಂದನೆಯನ್ನರ್ಪಿಸುವಂತೆ ಪುನಃ ಅದನ್ನು ನಸುಬಾಗಿಸಿದನು. ನಾವು ನೆಲಕ್ಕಿಳಿಯುವುದೇತಡ ವಿಮಾನದ ಸುತ್ತ ಗುಂಪಿನ ಒತ್ತಡ ಅಧಿಕವಾಯಿತು. ಬಹಳ ಕಷ್ಟದಿಂದ ಗುಂಪನ್ನು ಹತೋಟಿಗೆ ತಂದುದಾಯಿತು. ಜವಹರನನ್ನು ಸ್ವಾಗತಿಸಲು ಜನರು ಮುಂದೆ ನುಗ್ಗಿದರು. ಅನೇಕರು ಹಸ್ತಲಾಘವವನ್ನಿತ್ತರು. ಆದರಪೂರ್ವಕವಾದ ಸ್ವಾಗತ ಮತ್ತು ಮಂದಹಾಸಗಳಿಂದ ಕೂಡಿದ ನಮಸ್ಕಾರ ಪ್ರತಿನಮಸ್ಕಾರಗಳು ಮಾತೃಭೂಮಿಯ ನೆನಪನ್ನು ತರುತ್ತಿದ್ದುವು. ಎಲ್ಲಿನೋಡಿದರೂ ಗೆಳೆಯರ ಗುಂಪೇ ಕಾಣಿಸುತ್ತಿತ್ತು.

ಸಿಂಹಳೀಯರೂ ಭಾರತೀಯರೂ ಒಟ್ಟಿಗೆ ಕಲೆತು ತೋರಿಸಿದ ವಾತ್ಸಲ್ಯ ಜವಹರನ ನಿಯೋಗವಿಜಯದ ಶುಭಸೂಚನೆಯಂತಿತ್ತು. ಜವಹರನು ತನ್ನ ಕಾರ್ಯದಲ್ಲಿ ವಿಜಯಿಯಾದನೆಂದೂ, ದಾವಾನಲ ವಂತೆ ಹರಡುತ್ತಿದ್ದ ದ್ವೇಷಾಸೂಯೆಗಳನ್ನು ಸ್ವಲ್ಪಮಟ್ಟಿಗಾದರೂ ತಡೆಗಟ್ಟಿದನೆಂದೂ ನಾವು ಆ ಸಮಯದಲ್ಲಿ ಆಲೋಚಿಸಿದ್ದರೂ, ಭವಿಷ್ಯತ್ತು ಆಶಾದಾಯಕವಾಗಿ ಪರಿಣಮಿಸಲಿಲ್ಲ. ನಾವು ಹಿಂದಿರುಗಿದ ಒಂದು ತಿಂಗಳಲ್ಲಿಯೇ ಸಿಂಹಳದ್ವೀಪದ ಸರ್ಕಾರವು ಎಂಟುನೂರು ಭಾರತೀಯ ಕೂಲಿಕಾರರನ್ನು ಕೆಲಸದಿಂದ ತೆಗೆದುಹಾಕಿ ಭರತಖಂಡಕ್ಕೆ ಅಟ್ಟಿತು.

ಸಿಂಹಳದ್ವೀಪವು ನನಗೆ ಮೆಚ್ಚಿಕೆಯಾಯಿತು. ಅಲ್ಲಿ ನೋಡಬೇಕಾದುದನ್ನೆಲ್ಲ ನೋಡಿದೆನು. ದಟ್ಟವಾದ ಕಾರ್ಯಕ್ರಮದಿಂದ ಪುರಸತ್ತಿಲ್ಲದಿದ್ದರೂ ಜವಹರನು ರಮ್ಯವಾದ ದೃಶ್ಯಗಳನ್ನು ನೋಡಲು ಅವಕಾಶವನ್ನು ಕಲ್ಪಿಸಿಕೊಳ್ಳುತ್ತಿದ್ದನು. ಕೆಲವು ಸುಂದರವಾದ ದೇವಾಲಯಗಳನ್ನು ಮತ್ತು ಚೆಲುವು ಚೆಲ್ಲುತ್ತಿದ್ದ ತೋಟಗಳನ್ನು

ನೋಡಿದೆವು. ಎಲ್ಲಿ ಹೋದರೂ ಜನರ ಆದರಾತಿಥ್ಯಗಳು ನಮ್ಮನ್ನು ಬೆರಗುಗೊಳಿಸುತ್ತಿದ್ದುವು. ಸಿಂಹಳೀಯರ ಮತ್ತು ಭಾರತೀಯರ ಸ್ಪರ್ಧಾಪೂರ್ವಕವಾದ ದಯಾವಾತ್ಸಲ್ಯಗಳ ಹುಚ್ಚುಹೊನಲಿನಿಂದ ಪಾರಾಗುವ ಪ್ರಯತ್ನದಲ್ಲಿ ಪ್ರಾಣ ಹಾರಿ ಪ್ರಾಣಬರುತ್ತಿತ್ತು. ಅಂತಹ ಸತ್ತ್ವಗುಣಸಂಪನ್ನರಾದ ಜನರಲ್ಲಿ ಹಾನಿಕಾರಕವಾದ ಭಿನ್ನತೆಗಳು ಹೇಗೆ ಮೂಡಬಹುದೆಂದು ಆಶ್ಚರ್ಯಗೊಂಡೆನು.

ಸಿಂಹಳದ್ವೀಪದಲ್ಲಿ ಗೋಷಾಪದ್ಧತಿಯಿರಲಿಲ್ಲ. ಸ್ತ್ರೀಯರನ್ನು ಸಾಮಾಜಿಕಜೀವನದಿಂದ ಹೊರಗೆದೂಡಿರಲಿಲ್ಲ, ಅನೇಕ ಸಮಾರಂಭಗಳಲ್ಲಿ ನಾವು ಭಾಗವಹಿಸಲು ಹೋದಾಗ, ಹೂವಿನ ಸರವನ್ನು ನಮ್ಮ ಕೊರಳಿಗೆ ತೊಡಿಸಿದಕೂಡಲೇ, ಗೃಹಸ್ಥ ಮುಂದೆ ಬಂದು ಜವಹರನನ್ನು ಗಂಡಸರ ಗುಂಪಿಗೆ ಕರೆದೊಯ್ಯುತ್ತಿದ್ದನು; ಗೃಹಸ್ಥೆ ನಮ್ಮನ್ನು ಸ್ತ್ರೀಯರ ಸಂದಣಿಗೆ ಒಯ್ಯುತ್ತಿದ್ದರು. ಊಟದ ಸಮಯದಲ್ಲಿ ಮಾತ್ರ ಸ್ವಲ್ಪ ಹೊತ್ತು ಎಲ್ಲರೂ ಬೆರಕೆಯಾಗಿದ್ದು ಮತ್ತೆ ಅಗಲುತ್ತಿದ್ದರು.

ಭರತಖಂಡದಲ್ಲಿ ಸ್ತ್ರೀಯರು ಮತದಾನಾಧಿಕಾರಸಂಪಾದನೆಗೆ ಚಳುವಳಿ ಹೂಡಿಲ್ಲ. ಕೆಲವು ಮಹಿಳಾಸಂಸ್ಥೆಗಳು ಸಾಮಾಜಿಕಸುಧಾರಣೆಗಳಲ್ಲಿ ನಿರತವಾಗಿವೆ. ಗಂಡಸರಿಗೆ ಸರಿಸಮಾನವಾದ ಸ್ಥಾನಮಾನ ಸ್ವಾತಂತ್ರ್ಯಗಳನ್ನು ಗಳಿಸಬೇಕೆಂಬ ಸ್ಫೂರ್ತಿ ರಾಷ್ಟ್ರೀಯ ಚಳುವಳಿಯಿಂದ ಉತ್ಪನ್ನವಾಯಿತು. ಹೆಂಗಸರೂ ಗಂಡಸರಿಗೆ ಹೆಗಲೆಣೆಯಾಗಿ ಭಾಗವಹಿಸಬಹುದೆಂಬುದೇ ಅಹಿಂಸಾತ್ಮಕ ಚಳುವಳಿಯ ವೈಶಿಷ್ಟ್ಯವಾಗಿತ್ತು. ಗಾಂಧಿಜೀಯವರ ತತ್ತ್ವ ಅವರನ್ನು ಆಕರ್ಷಿಸಿತು ಮತ್ತು ಪ್ರಗತಿವಿರುದ್ಧವಾದ ಪುರಾತನ ಸಂಪ್ರದಾಯಗಳ ಪ್ರತಿಬಂಧಕವನ್ನು ಮುರಿದು ತಾಯ್ನಾಡಿನ ಶ್ರೇಯಸ್ಸಿಗಾಗಿ ದುಡಿಯುವ ಜಾಡನ್ನು ತೋರಿಸಿಕೊಟ್ಟಿತು. ಸಾವಿರಾರು ಮಂದಿ ಸ್ತ್ರೀಯರು ತೆರೆಮರೆಯ ಬಾಳಿನ ಪರದೆಯನ್ನು ಹರಿದು ಹೊರಗೆ ಬಂದು ಅಸಂಖ್ಯಾತಸಂಕ್ಲೇಶ, ಕಾರಾಗೃಹವಾಸ ಮತ್ತು ಮರಣಗಳೇ ಮೊದಲಾದ ಅಪಾಯಗಳ ಕೂರಲಗಿಗೆ ಮೆಯ್ಯೊಡ್ಡಿ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಸಂಪಾದಿಸಿದ್ದಾರೆ.

ಸಿಂಹಳದ್ವೀಪದಲ್ಲಿ ಎಲ್ಲಿ ಹೋದರೂ ಅಲ್ಲಿ ಸಾವಿರಾರು ಜನರು ಜವಹರನನ್ನು ನೋಡಲು ಮತ್ತು ಆತನ ವಾಣಿಯನ್ನು ಕೇಳಲು ಗುಂಪುಕೂಡುತ್ತಿದ್ದರು. ಅವರಲ್ಲಿ ಹಲವರು ತಮಿಳುದೇಶದ ಕೂಲಿಕಾರರು, ಹೆಂಗಸರು ಮತ್ತು ಗಂಡಸರು. ಅವರೆಲ್ಲರೂ ಟೀ ಮತ್ತು ರಬ್ಬರ್ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದವರು. ಜವಹರನನ್ನು ಅರೆಕ್ಷಣವಾದರು ನೋಡುವ ಕುತೂಹಲದಿಂದ ದಾರಿಯುದ್ದಕ್ಕೂ ಗಂಟೆಗಟ್ಟಲೆ ತಾಳ್ಮೆಯಿಂದ ಕಾದಿರುತ್ತಿದ್ದರು. ನಾನು ಕಾರಿನಲ್ಲಿ ಕುಳಿತಿದ್ದಾಗ, ಕೆಳಗಿಳಿದು ಅಣ್ಣನ ಪಕ್ಕದಲ್ಲಿ ನಿಂತುಕೊಂಡಾಗ, ಸುತ್ತಮುತ್ತ ಬಳಸಿಕೊಳ್ಳುತ್ತಿದ್ದ ಮುಖಗಳ ಕಡೆಗೆ ನನ್ನ ಗಮನ ಹರಿಯುತ್ತಿತ್ತು. ತಾಯ್ನಾಡಿನಿಂದ ಸಂತೋಷ ಭರವಸೆಗಳ ಸಂದೇಶವನ್ನು ತಂದಿದ್ದ ವ್ಯಕ್ತಿಯ ಮೇಲೆ ಚೆಲ್ಲಿದ ಪ್ರೇಮಗೌರವಗಳಿಂದ ಅವರ ಮುಖಗಳು ತೊಳಗುತ್ತಿದ್ದುವು. ತಾಯ್ನಾಡಿನಿಂದ ದೂರವಾಗಿದ್ದ ತಮ್ಮನ್ನು ತಮ್ಮ ಸಹೋದರರು ವಿಸ್ಮೃತಿಯ ಘೋರಾಂಧಕಾರಕ್ಕೆ ನೂಕಲಿಲ್ಲವೆಂದು ಜವಹರನ ಸಾನ್ನಿಧ್ಯವೇ ಅವರಿಗೆ ಭರವಸೆಯನ್ನು ನೀಡುತ್ತಿತ್ತು.

ಹಗಲಿನ ದುಡಿಮೆಯಿಂದ ಬಳಲಿದ ಜವಹರನನ್ನು ನಾನು ನೋಡಿದಾಗ ಅಷ್ಟು ಪ್ರಯಾಸದ ಪ್ರಯೋಜನವಾದರೂ ಏನು ಎಂದು ವಿಸ್ಮಯಪಡುತ್ತಿದ್ದೆನು. ಆದರೆ ನನ್ನ ಸುತ್ತಮುತ್ತಣ ಮುಖಗಳನ್ನು ನೋಡಿದಾಗ ನನ್ನ ವಿಸ್ಮಯ ಮಾಯವಾಗುತ್ತಿತ್ತು. ಸಾವಿರಾರು ಜನರ ಪ್ರೀತಿವಿಶ್ವಾಸಗಳನ್ನು ಗಳಿಸಿಕೊಡುವ ಪ್ರತಿಯೊಂದು ಪ್ರಯಾಸವೂ ವ್ಯರ್ಥವಲ್ಲ.

ಅನೇಕ ಸಭೆಗಳು, ಔತಣಕೂಟಗಳು ಮತ್ತು ರಮ್ಯದೃಶ್ಯಗಳ ದರ್ಶನಗಳಾದನಂತರ ನಮ್ಮ ಹತ್ತುದಿನಗಳ ಅವಿಚ್ಛಿನ್ನವಾದ ಕಾರ್ಯಕ್ರಮ ಕೊನೆಗೊಂಡಿತು. ಜವಹರನು ನನಗಿಂತ ಮುಂಚೆಯೇ ಹೊರಟನು. ನಾನು ಮತ್ತೊಂದುವಾರವಿದ್ದು ಬೊಂಬಾಯಿಗೆ ಹಿಂದಿರುಗಿದೆನು.

ಜವಹರನು ಸ್ವದೇಶಕ್ಕೆ ಹಿಂದಿರುಗಿದ ಕೂಡಲೇ ಚೀಣಾದೇಶಕ್ಕೆ ಹೋಗಲು ನಿರ್ಧರಿಸಿದನು. ರಾಜಾ, ಮಕ್ಕಳು ಮತ್ತು ನಾನು ಅವ

ರನ್ನು ಬೀಳ್ಕೊಳ್ಳಲು ಅಲಹಾಬಾದಿಗೆ ಹೋದೆವು. ಚೀಣಾದೇಶಕ್ಕೆ ಹೋಗಬೇಕೆಂಬುದು ಜವಹರನ ಸವಿಗನಸಾಗಿತ್ತು. ಪುರಾತನ ದೇಶಗಳು ಆತನನ್ನು ಮರುಳ್ಗೊಳಿಸಿದ್ದುವು. ಕೊನೆಗೆ ತನ್ನ ಹೆಬ್ಬಯಕೆಯನ್ನು ಈಡೇರಿಸಿಕೊಳ್ಳುವ ಕಾಲ ಒದಗಿತೆಂದು ನಾನು ಸಂತೋಷಪಟ್ಟೆನು. ಯುದ್ಧವಾರಂಭವಾದುದರಿಂದ ಅವನು ಕೂಡಲೇ ಹಿಂದಿರುಗಬೇಕಾಯಿತು. ಸ್ವದೇಶ ಸ್ವಾತಂತ್ರ್ಯರಕ್ಷಣೆಗಾಗಿ ಚೀಣೀಯರು ಮತ್ತು ಅವರ ಅಪ್ರತಿಮನಾಯಕ ಚಿಯಾಂಗ್ ಕೈಷೆಕನು ತಮ್ಮ ಸರ್ವಸ್ವವನ್ನು ಬಲಿದಾನಮಾಡಲು ಸಿದ್ಧರಾಗಿದ್ದುದನ್ನೂ, ಅವರ ಧೈರ್ಯಸ್ಥೈರ್ಯಗಳನ್ನೂ ನೋಡಿ ಜವಹರನು ಮನಸಾರೆ ಹೊಗಳಿದನು.

೧೯೩೯ ನೆಯ ಸೆಪ್ಟೆಂಬರ್ ತಿಂಗಳಲ್ಲಿ ಇಂಗ್ಲೆಂಡ್ ಮತ್ತು ಜರ್ಮನಿ ದೇಶಗಳು ಯುದ್ಧವನ್ನು ಘೋಷಿಸಿದುವು. ಭಾರತೀಯರ ಸಮ್ಮತಿಯಿಲ್ಲದೆಯೇ ಭರತಖಂಡದ ಸರ್ಕಾರವೂ ಜರ್ಮನಿಯೊಡನೆ ಯುದ್ಧವನ್ನು ಉದ್ಘೋಷಿಸಿತು. ಕಡೆಗಾದರೂ ಸಾಮ್ರಾಜ್ಯಷಾಹಿಯ ಅಂತ್ಯಕಾಲ ಸಮಿಾಪಿಸಿತೆಂಬ ನಂಬಿಕೆಯಿಂದಲೂ ಕುತೂಹಲದಿಂದಲೂ ಪರಿಸ್ಥಿತಿಯನ್ನು ಪರೀಕ್ಷಿಸ ತೊಡಗಿದೆವು. ಗಲಿಬಿಲಿಯ ಬಸಿರಿನಿಂದ ನೂತನ ಸ್ವತಂತ್ರ ಭರತಖಂಡ ಹೊರಹೊಮ್ಮಬಹುದೆಂದು ನಂಬಿದೆವು. ಗಾಂಧೀಜಿ ಮತ್ತು ರಾಷ್ಟ್ರೀಯ ಮಹಾಸಭೆಗಳು ಆಂಗ್ಲೇಯರಿಗೆ ತಮ್ಮ ಸರ್ವಸಂಪೂರ್ಣವಾದ ಸಹಾನುಭೂತಿಯನ್ನು ಪ್ರಕಟಪಡಿಸಿದರು. ಅವರ ನೆರವುಗೆಳೆತನಗಳು ನಿಷ್ಕಳಂಕವಾಗಿದ್ದುವು. ಯುದ್ಧೋದ್ಯಮೋದ್ದೇಶಗಳ ಘೋಷಣೆಯಾಗಬೇಕೆಂದು ನಾವು ಕೇಳಿದೆವು. ನಮ್ಮಕೇಳಿಕೆಗೆ ಮನ್ನಣೆ ದೊರೆಯಲಿಲ್ಲ. ಇಂಗ್ಲೆಂಡ್ ದೇಶವು ತನ್ನ ಇತಿಹಾಸದ ವಿಷಮ ಸಮಯದಲ್ಲಿ ತನ್ನ ಮನೋಭಾವವನ್ನು ಮಾರ್ಪಡಿಸಬಹುದೆಂದು ನಂಬಿಕೊಂಡಿದ್ದ ಸಾವಿರಾರು ಜನರ ಹೃದಯಗಳಲ್ಲಿ ನಿರಾಶೆ ಅತೃಪ್ತಿ ಅಪನಂಬಿಕೆಗಳು ಬೇರೂರಿದುವು.

೧೯೪೦ನೆಯ ಇಸವಿಯಲ್ಲಿ ವ್ಯಕ್ತಿಸತ್ಯಾಗ್ರಹವನ್ನಾರಂಭಿಸುವುದೊಂದೇ ಗಾಂಧೀಜಿಯವರಿಗೆ ಉಳಿದ ಮಾರ್ಗವಾಗಿತ್ತು. ಇಡೀ ದೇಶವೇ ಆ ನೈತಿಕ ಚಳುವಳಿಯಲ್ಲಿ ಭಾಗವಹಿಸಿತು. ಗಾಂಧೀಜೀ

ಯವರು ಮೊಟ್ಟಮೊದಲು ಆರಿಸಿಕೊಂಡ ಸ್ವಯಂಸೇವಕ ವಿನೋಬಾ ಭಾವೆ. ನ್ಯೂನತೆ ಲವಲೇಶವಿಲ್ಲದ ಹದಿನಾರಾಣೆ ಸತ್ಯಾಗ್ರಹಿ ಅವರು. ಜವಹರನೇ ಎರಡನೆಯ ಸತ್ಯಾಗ್ರಹಿ. ಸತ್ಯಾಗ್ರಹವನ್ನು ಆರಂಭಿಸುವುದಕ್ಕೆ ಮುಂಚೆಯೇ ವರ್ಧದಿಂದ ಅಲಹಾಬಾದಿಗೆ ಹಿಂದಿರುಗುವಾಗ ದಾರಿಯಲ್ಲಿಯೇ ಜವಹರನು ಬಂಧಿತನಾದನು. ಗೊರಕ್‌ಪುರದಲ್ಲಿ ಆತನ ವಿಚಾರಣೆಯಾಗಿ ನಾಲ್ಕುವರ್ಷಗಳ ಕಠಿಣಶಿಕ್ಷೆ ವಿಧಾಯಕವಾಯಿತು. ಈ ಕ್ರೂರಪ್ರಸಂಗವು ಭಾರತೀಯರನ್ನೆಲ್ಲ ಗಾಬರಿಗೊಳಿಸಿದರೂ, ಅದು ಅವರಲ್ಲಿ ಹೊಸ ಹುರುಪನ್ನೂ, ಹುಮ್ಮಸ್ಸನ್ನೂ ಪ್ರಚೋದಿಸಿ ರಣೋನ್ಮುಖರನ್ನಾಗಿಮಾಡಿತು.

ರಾಜಾರವರು ಸ್ವಯಂಸೇವಕರಲ್ಲಿ ಮೊಟ್ಟಮೊದಲಿಗರಾಗಲು ಮುಂದೆ ಬಂದರು. ಆದರೆ ಅವರು ಗಾಂಧಿಜೀಯವರ ಆಣತಿಯನ್ನು ಕೇಳಿದಾಗ, ಗಾಂಧಿಜೀಯವರು ನನ್ನ ಅಭಿಪ್ರಾಯವನ್ನು ಕೇಳಿದರು. ನಾನು ಇಷ್ಟಪಡದೆ ರಾಜಾರವರನ್ನು ಸೆರೆಮನೆಗೆ ಕಳುಹಿಸುವುದಿಲ್ಲವೆಂದು ಅವರು ಹೇಳಿದರು. ನಮ್ಮ ಸುತ್ತಮುತ್ತ ದಿನೇದಿನೇ ವೃದ್ಧಿಹೊಂದುತ್ತಿದ್ದ ಗೊಂದಲ ಮತ್ತು ಒಡಕುತೊಡಕುಗಳನ್ನು ನೋಡುತ್ತಾ ತನ್ನ ಕರ್ತವ್ಯವನ್ನು ಪಾಲಿಸದೆಯೇ ಸುಮ್ಮನೆ ಕುಳಿತಿದ್ದುದು ರಾಜಾರವರಿಗೆ ಸರಿದೋರಲಿಲ್ಲ. ಆದುದರಿಂದ ನಾನು ಒಪ್ಪಬೇಕಾಯಿತು. ರಾಜಾರವರು ಸೆರೆಮನೆಗೆ ಹೋದ ಒಂದು ತಿಂಗಳನಂತರ ಸತ್ಯಾಗ್ರಹ ಚಳುವಳಿಯಲ್ಲಿ ನಾನೂ ಭಾಗವಹಿಸಲು ಅವಕಾಶಕೊಡುವಂತೆ ಬಾಪುರವರಿಗೆ ಕಾಗದ ಬರೆದೆನು. ರಣರಂಗಕ್ಕೆ ಧುಮುಕದಿರುವುದು ಅಸಾಧ್ಯವಾಯಿತು. ಆದರೆ ನನ್ನ ಮಕ್ಕಳು ಚಿಕ್ಕವರಾದುದರಿಂದಲೂ, ಅವರ ಪೋಷಣೆ ಅತ್ಯಾವಶ್ಯಕವಾದುದರಿಂದಲೂ ಅವರು ನನಗೆ ಅವಕಾಶ ಕೊಡಲೊಪ್ಪಲಿಲ್ಲ. ನಾನು ಅವರ ತೀರ್ಪಿಗೆ ತಲೆತಗ್ಗಿಸಬೇಕಾಯಿತು.

ಅಂದಿನ ತನಕ ರಾಜಾರವರೂ ನಾನೂ ಹದಿನೈದು ದಿನಗಳು ಅಥವಾ ಮೂರು ವಾರಗಳಿಗಿಂತ ಹೆಚ್ಚಾಗಿ ಎಂದೂ ಬೇರ್ಪಟ್ಟವರಲ್ಲ. ಅವರ ವಿಯೋಗದಿಂದ ನನಗೆ ತುಂಬಾ ಸಂಕಟವಾಯಿತು. ಪಕ್ಷಕ್ಕೊಮ್ಮೆ ನಾವು ಪರಸ್ಪರ ಸಂಧಿಸಲು ಅವಕಾಶವಿತ್ತು. ನಿರ್ದಿಷ್ಟವಾದ

ಅವಧಿಯಲ್ಲಿ ಪರಸ್ಪರ ಪತ್ರವ್ಯವಹಾರವನ್ನು ನಡೆಯಿಸಬಹುದಾಗಿತ್ತು. ನನ್ನ ಸುತ್ತಮುತ್ತ ಅನೇಕಮಂದಿ ಗೆಳೆಯರಿದ್ದರೂ, ನಾನು ಒಂಟಿತನದ ಬೇಸರಿಕೆಗೆ ಗುರಿಯಾದೆನು. ರಾಜಾರವರ ವಿಯೋಗದಿಂದ ನನ್ನ ಮಕ್ಕಳು ಖೇದಗೊಂಡರು. ಆದರೆ ಅವರಿನ್ನೂ ಚಿಕ್ಕವರಾಗಿದ್ದುದರಿಂದ ತಮ್ಮ ತಂದೆಯ ತ್ಯಾಗವನ್ನು ನೋಡಿ ಹೆಮ್ಮೆಪಡುತ್ತಿದ್ದರು. ಒಂದೊಂದು ಸಾರಿ ನಾವು ರಾಜಾರವರನ್ನು ಭೇಟಿಮಾಡಿದಾಗ, ಅವರ ಹೃದಯಗಳು ದುಃಖದಿಂದ ಕುದಿಯುತ್ತಿದ್ದುವು. ಕೆನ್ನೆಗಳ ಮೇಲೆ ಹರಿಯುತ್ತಿದ್ದ ಕಣ್ಣೀರ ಕಾಲುವೆಯನ್ನು ಹಿಂಗಿಸುವುದು ಕಷ್ಟವಾಗುತ್ತಿತ್ತು. ಈಸಾರಿಯಾದರೋ ಭೇಟಿಗಳಿಗೆ ಅವಕಾಶವೇ ಇರಲಿಲ್ಲ. ಇಂತಹ ಅವಿವೇಕ ಪ್ರಸಂಗಗಳು ಸಣ್ಣಮಕ್ಕಳ ಹೃದಯಗಳಲ್ಲಿಯೂ ಕ್ರೋಧ ಕಾಠಿನ್ಯಗಳನ್ನು ಮೂಡಿಸಿವೆ.

ಪೃಥ್ವಿಯ ಸಕಲ ಸಾಮ್ರಾಜ್ಯಗಳ ಸೈನ್ಯಸಮೂಹಗಳು
ಮಹಾತ್ಮನೊಬ್ಬನ ಆತ್ಮಶಕ್ತಿಯನ್ನು ನುಗ್ಗುನುರಿಮಾಡಲಾರವು
ಆ ಮಹಾತ್ಮ ಅವನ್ನೆಲ್ಲ ಮೆಟ್ಟಿ ನಿಲ್ಲುತ್ತಾನೆ.

—ಟೆರೆನ್ಸ್ ಮ್ಯಾಕ್ಸ್ವಿನಿ

ಸುಮಾರು ಹನ್ನೊಂದು ವರ್ಷಗಳ ತನಕ ಜವಹರನು ನಮ್ಮ ತಂದೆತಾಯಿಯರ ಏಕಮಾತ್ರ ಪುತ್ರನಾಗಿದ್ದನು. ಸಹೋದರ ಸಹೋದರಿಯರು ಯಾರೂ ಇರಲಿಲ್ಲ. ಹೀಗಾಗಿ ಅವನು ತಂದೆತಾಯಿಯರ, ಅದರಲ್ಲಿಯೂ ತಾಯಿಯವರ ಅತಿವ್ಯಾಮೋಹಕ್ಕೆ ಪಾತ್ರನಾಗಿದ್ದನು. ಅವನು ಶಾಲೆಗೆ ಹೋಗಲಿಲ್ಲ. ಮನೆಯಲ್ಲಿಯೇ ಉಪಾಧ್ಯಾಯರನ್ನಿಟ್ಟು ಪಾಠಹೇಳಿಸುತ್ತಿದ್ದರು. ತಂದೆಯವರಿಗೂ ಮಗನ ಮೇಲೆ ವಿಶೇಷ ವ್ಯಾಮೋಹವಿದ್ದಿತಾದರೂ, ಅದೃಷ್ಟವಶಾತ್ ಅವರು ಕಠಿಣ ಶಿಕ್ಷಕರಾದುದರಿಂದ ಜವಹರನು ಸ್ವಾಭಿಮಾನಿಯಾಗಲು ಅವಕಾಶವಾಗಲಿಲ್ಲ.

ಚಿಕ್ಕಂದಿನಿಂದ ಜವಹರನು ತಂದೆಯಲ್ಲಿ ಅಪರಿಮಿತ ಪೂಜ್ಯಭಾವವನ್ನಿಟ್ಟಿದ್ದನು. ಅವನ ದೃಷ್ಟಿಯಲ್ಲಿ ತಂದೆಯವರು ಧೈರ್ಯಸ್ಥೈರ್ಯ ಸಾಹಸಸಂಸ್ಕೃತಿಗಳೇ ಮೂರ್ತಿವೆತ್ತಂತಿದ್ದರು. ತಂದೆಯಂತಾಗಬೇಕೆಂಬುದೇ ಆತನ ಹೆಬ್ಬಯಕೆ. ಅವನು ತಂದೆಯನ್ನು ಗೌರವಿಸುತ್ತಿದ್ದಂತೆಯೇ, ಗಂಭೀರವಾಗಿ ಪ್ರೀತಿಸುತ್ತಿದಂತೆಯೇ, ಅವರನ್ನು ಕಂಡರೆ ಹೆದರುತ್ತಲೂ ಇದ್ದನು. ತಂದೆಯವರು ಕೋಪಿಸಿರೊಂಡಾಗ ಜವಹರನು ತರತರನೆ ನಡುಗುತ್ತಿದ್ದನು. ಒಮ್ಮೆ ಅವರ ಕೋಪೋಗ್ರತೆಗೆ ತುತ್ತಾಗಿಯೂ ಇದ್ದನು. ಆ ನೆನಪು ಸುಲಭವಾಗಿ ಅಳಿಸಿರಲಿಲ್ಲ. ತಂದೆಯವರು ನಮ್ಮನ್ನು ಅನ್ಯಾಯವಾಗಿ ಶಿಕ್ಷಿಸುತ್ತಿರಲಿಲ್ಲವೆಂಬುದು ನಮಗೆಲ್ಲರಿಗೂ ಗೊತ್ತಿತ್ತು. ಸಂವತ್ಸರಗಳು ಸರಿದಂತೆಲ್ಲಾ ತಮ್ಮ ಕೋಪದ ಕುದುರೆಯನ್ನು ಕಡಿವಾಣದ ಅಂಕೆಯಲ್ಲಿಟ್ಟುಕೊಳ್ಳಲು ಯತ್ನಿಸಿ, ಸಂಪೂರ್ಣ ಸಂಯಮಿಗಳಾಗಿದ್ದರು.

ಹೀಗೆ ಜವಹರನು ಲಜ್ಜಾಸ್ವಭಾವದ, ಸೂಕ್ಷ್ಮಗ್ರಹಣಶಕ್ತಿಯ

ಬಾಲಕನಾಗಿ ಬೆಳೆದನು. ತನ್ನ ವಯಸ್ಸಿನ ಗೆಳೆಯರಿಲ್ಲದಿದ್ದುದರಿಂದ ವಿಶೇಷವಾಗಿ ಹಿರಿಯರ ಜತೆಯಲ್ಲಿಯೇ ಇರುತ್ತಿದ್ದನು. ಹದಿನಾಲ್ಕನೆಯ ವಯಸ್ಸಿನಲ್ಲಿ ಹ್ಯಾರೋವಿಗೆ ಹೋಗಿ, ೧೯೧೨ ನೆಯ ಇಸವಿಯಲ್ಲಿ ತನ್ನ ವ್ಯಾಸಂಗ ಮುಗಿದನಂತರ ಭರತಖಂಡಕ್ಕೆ ಹಿಂದಿರುಗಿದನು. ಹಿಂದೊಮ್ಮೆ ೧೯೦೮ ನೆಯ ಇಸವಿಯ ರಜಾದಿನಗಳಲ್ಲಿ ಮನೆಗೆ ಬಂದಿದ್ದಾಗ ಆತನು ನನ್ನನ್ನು ನೋಡಿದ್ದರೂ, ನಾನು ಆತನನ್ನು ಮೊದಲು ನೋಡಿದುದು ಆಗಲೇ.

ಅನೇಕವರ್ಷಗಳ ತನಕ ಅಣ್ಣ ನನಗೆ ಅಪರಿಚಿತ ವ್ಯಕ್ತಿಯಾಗಿಯೇ ಉಳಿದನು. ಒಮ್ಮೆ ಆತನನ್ನು ಪ್ರೀತಿಸಿ ಗೌರವಿಸಿದರೆ, ಮತ್ತೊಮ್ಮೆ ದೂಷಿಸುತ್ತಿದ್ದೆನು. ಸ್ವಲ್ಪ ಕಾಲಾನಂತರ ಸತ್ಯಾಗ್ರಹ ಚಳುವಳಿ ಆರಂಭವಾಗಿ ಅವನು ರಾಜಕೀಯರಂಗಕ್ಕೆ ಧುಮುಕಿದಾಗ, ಅವನ ಶಕ್ತಿ ಸಾಮರ್ಥ್ಯಸ್ವಭಾವಗಳನ್ನರಿತೆನು. ಯಾವ ಅಣ್ಣನನ್ನು ಸ್ವಾಭಿಮಾನಿಯೆಂದು ತಪ್ಪಾಗಿ ಭಾವಿಸಿದ್ದೆನೋ ಆತನನ್ನು ಹೆಚ್ಚು ಹೆಚ್ಚು ಅರಿತಂತೆಲ್ಲಾ, ಪೂಜ್ಯಭಾವವೂ ಅಧಿಕವಾಯಿತು.

ಜವಹರನಲ್ಲಿ ಹಿರಿಯಣ್ಣನ ಉತ್ತಮಗುಣಗಳೆಲ್ಲವೂ ಇದ್ದುವು. ಅಕ್ಕನ ಮತ್ತು ನನ್ನ ವಯಸ್ಸಿಗೂ ಅವನ ವಯಸ್ಸಿಗೂ ವಿಶೇಷ ಅಂತರವಿದ್ದರೂ, ಇತರ ಅಣ್ಣಂದಿರಂತೆ ಅವನು ಯಾವ ನಿಯಮಗಳನ್ನೂ ನಮ್ಮ ಮೇಲೆ ವಿಧಿಸಲಿಲ್ಲ. ನಾವು ಮಾಡಿದ ಕಾರ್ಯಗಳಲ್ಲಿ ಅವನಿಗೆ ಒಪ್ಪಿಗೆಯಿಲ್ಲದಿದ್ದಲ್ಲಿ, ನಯನೀತಿ ಔಚಿತ್ಯಾನೌಚಿತ್ಯಗಳನ್ನರಿತು ನಮ್ಮೊಡನೆ ಪರ್ಯಾಲೋಚಿಸಿ ನಮ್ಮ ತಪ್ಪು ನಮಗೇ ಮನದಟ್ಟುವಂತೆ ಮಾಡುತ್ತಿದ್ದನು. ನಾವು ಅವನ ವಾದವನ್ನು ಒಪ್ಪಿಕೊಳ್ಳದಿದ್ದಾಗ, ಆತನ ಮನಸ್ಸಿಗೆ ನೋವಾದರೂ ಅದನ್ನು ವ್ಯಕ್ತಪಡಿಸುತ್ತಿರಲಿಲ್ಲ. ತನ್ನ ಅಧಿಕಾರವನ್ನೆಂದೂ ನಮ್ಮ ಮೇಲೆ ಚಲಾಯಿಸಿದವನಲ್ಲ. ಸ್ವರೂಪಳಿಗೂ ನನಗೂ ಅವನು ಪೂಜ್ಯನಾದ ಹಿರಿಯಣ್ಣ ಮಾತ್ರವೇ ಅಲ್ಲ, ಅತ್ಯುತ್ತಮನಾದ ಗೆಳೆಯನೂ ಅಹುದು, ಒಡನಾಡಿಯೂ ಅಹುದು. ತನ್ನ ವಾತ್ಸಲ್ಯ ಮೃದುಸ್ವಭಾವಗಳಿಂದ ಅವನು ನಮ್ಮ ಅಚ್ಚುಮೆಚ್ಚಿಕೆಗೆ ಪಾತ್ರನಾಗಿದ್ದಾನೆ. ತಂದೆಯಂತೆಯೆ ಆತನೂ ನಮಗೆ ಸದಾ

ಆಧಾರಸ್ತಂಭವಾಗಿದ್ದನು. ಜೀವನದ ಭೀಕರ ಸಮಸ್ಯೆ ಸಂಕ್ಲೇಶಗಳ ಧಾಳಿಗೆ ಸಿಕ್ಕಿ ಬಳಲಿ ಬೇಗುದಿಗೊಂಡಾಗ ಆತನ ಮೇಲೆ ಒರಗುವು ದೊಂದೇ ನಮಗೆ ತಿಳಿದಿರುವ ಹೆದ್ದಾರಿ. ಅವನೆಂದೂ ತಿಳಿವಳಿಕೆ ಹೇಳಲು ಮುಂದೆ ಬರುವುದಿಲ್ಲ, ಆದರೆ ಆತನ ಸಹಾಯ ಮಾರ್ಗದರ್ಶಿ ತ್ವಗಳನ್ನು ನಾವು ಕೋರಿದಾಗ ಸಂತೋಷದಿಂದ ನೆರವಾಗುತ್ತಾನೆ. ತನ್ನ ಬಳಿಗೆ ಬಂದವರನ್ನು ಎಂದೂ ಅಣಕಿಸಿದವನಲ್ಲ ಇಲ್ಲವೇ ಬಯ್ದವ ನಲ್ಲ. ಅವನು ಎಲ್ಲರ ಆಪ್ತಸ್ನೇಹಿತ. ತಾನೇ ಸ್ವಭಾವತಃ ಮಾನವನಾ ದುದರಿಂದ ಪರರ ದೌರ್ಬಲ್ಯಗಳನ್ನು ಅರಿತುಕೊಳ್ಳಬಲ್ಲವನಾಗಿದ್ದಾನೆ.

ತಂದೆಯ ಮರಣಾನಂತರ ಜವಹರನು ನನ್ನ ಮತ್ತು ತಾಯಿ ಯವರ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಿದನು. ಸ್ವರೂಪಳಿಗೆ ಮದುವೆಯಾಗಿ ಸ್ವಂತ ಮನೆಯಲ್ಲಿದ್ದಳು. ಆಗ ಜವಹರನೇ ನಮ್ಮ ಸಣ್ಣ ಕುಟುಂಬದ ಯಜಮಾನನಾದನು. ಆದರೆ ಅವನು ಹಿಂದೂ ಕುಟುಂಬದ ಪುರಾತನ ಸಂಪ್ರದಾಯವನ್ನನುಸರಿಸಿ ನಮ್ಮ ಮನೆಯ ಒಡೆತನವನ್ನು ವಹಿಸಲಿಲ್ಲ. ನಾವು ಆತನನ್ನೇ ನೆಮ್ಮಿದ ಬಳ್ಳಿಗಳೆಂದು ತಾಯಿಯವರಾಗಲೀ, ನಾನಾಗಲೀ ತಿಳಿಯಕೂಡದೆಂಬುದೇ ಅವನ ಅಪೇಕ್ಷೆಯಾಗಿತ್ತು. ನಾವು ಪರಾವಲಂಬಿಗಳೆಂಬ ಭಾವನೆಯೇ ನಮಗೆ ಹೊಳೆಯಲಿಲ್ಲ. ತಂದೆಯವರು ಮರಣಶಾಸನವನ್ನು ಬರೆದಿಟ್ಟಿರಲಿಲ್ಲ. ನಾವದನ್ನು ನಿರೀಕ್ಷಿಸಲು ಇಲ್ಲ. ಅದು ಅವರ ಯೋಗ್ಯತೆಗೆ ತಡೆಯು ವಂತೆಯೂ ಇರಲಿಲ್ಲ. ಆದರೂ ಕೆಲವು ವಿಷಯಗಳು ಜವಹರನನ್ನು ಕಾಡಿದುವು. ತಂದೆಯವರು ಬದುಕಿದ್ದಾಗ ನಾನು ಸಲುಗೆಯಿಂದ ವರ್ತಿ ಸುತ್ತಿದ್ದಂತೆ ಈಗ ವರ್ತಿಸದಿರಬಹುದೇನೋ, ನಾನು ಆತನನ್ನು ಹಣ ಕೇಳಲು ಇಷ್ಟಪಡದಿರಬಹುದೇನೋ ಎಂಬ ಯೋಚನೆಗಳು ಅವನನ್ನು ಕಾಡುತ್ತಿದ್ದುವು. ತಾಯಿಯವರು ಮತ್ತು ನಾನು ಆನಂದಭವನದ ನಿಜವಾದ ಯಜಮಾನರೆಂದೂ, ತಂದೆಯವರ ಆಸ್ತಿಪಾಸ್ತಿಗಳಿಗೆ ವಾರ ಸುದಾರರೆಂದೂ ನಾವು ಭಾವಿಸಿಕೊಳ್ಳಬೇಕೆಂದು ಅವನು ನನಗೆ ಕಾಗದ ಬರೆದನು. ನಮ್ಮ ಸ್ಥಿತಿಗತಿಗಳನ್ನು ನೋಡಿಕೊಳ್ಳುವ ಕೇವಲ ವ್ಯವ ಸ್ಥಾಪಕನಾಗಿರಲು ಆತನು ಬಯಸಿದನು. ಅವನಿಗೂ, ಆತನ ಸಂಸಾ

ರಕ್ಕೂ ಅಲ್ಪಸ್ವಲ್ಪವೇ ಸಾಕಾಗಿತ್ತು. ಹಿಂದಿನಂತೆ ಶ್ರೀಮಂತ ಜೀವನ ವನ್ನು ನಡೆಯಿಸಲು ನಾವು ಹಿಂಜರಿಯಬೇಕಾಗಿರಲಿಲ್ಲ. ಆವಶ್ಯಕತೆ ತಲೆದೋರಿದಾಗ ತನ್ನ ನೆರವು ಬೆಂಬಲಗಳನ್ನೀಯಲು ಸಿದ್ಧನಾಗಿರುವು ದಾಗಿ ತಿಳಿಸಿದನು. ಪ್ರಪಂಚದಲ್ಲಿ ಅಂತಹ ಅಣ್ಣಂದಿರು ಹಲವರಿರ ಲಾರರು. ನುಡಿದಂತೆ ನಡೆಯುವುದೇ ಜವಹರನ ವೈಶಿಷ್ಟ್ಯ. ಆತನ ನುಡಿ ಎಂದೂ ಸುಳ್ಳಾಗುವಂತಿಲ್ಲ.

ತಂದೆಯವರಂತೆ ಜವಹರನೂ ಕೋಪಿಷ್ಠ. ನಾನು ಹದಿನಾಲ್ಕು ವರ್ಷ ವಯಸ್ಸಿನವಳಾಗಿದ್ದಾಗ ಜವಹರನು ನನಗೆ ಗಣಿತವನ್ನು ಕಲಿ ಸಲು ಒಪ್ಪಿಕೊಂಡನು. ಗಣಿತವೆಂದರೆ ನನಗೆ ತಲೆನೋವು. ನನಗೆ ಇಷ್ಟವಿಲ್ಲದಿದ್ದರೂ ಒಪ್ಪಿಕೊಳ್ಳದೆ ಬೇರೆ ದಾರಿಯೇ ಇರಲಿಲ್ಲ. ನನ ಗಿನ್ನೂ ಜವಹರನನ್ನು ಕಂಡರೆ ಹೆದರಿಕೆಯಿತ್ತು. ಆತನ ಕೋಪದ ವಿಷಯವನ್ನು ಮನಸ್ಸಿಗೆ ಹೆಚ್ಚಾಗಿ ಅಂಟಿಸಿಕೊಳ್ಳಲಿಲ್ಲ. ಅಂತು ಮೊದ ಮೊದಲ ಪಾಠಗಳು ಸಲೀಸಾಗಿ ಸಾಗಿದುವು. ಜವಹರನ ಪಾಠಕ್ರಮ ಮನೋರಂಜಕವಾಗಿತ್ತು. ನಾನು ಸಂಪೂರ್ಣವಾಗಿ ದ್ವೇಷಿಸುತ್ತಿದ್ದ ಪಾಠದಲ್ಲಿ ತೀವ್ರಾಸಕ್ತಿ ಮೂಡಿತು. ಪ್ರತಿದಿನವೂ ಗಣಿತ ಪಾಠದ ಗಂಟೆ ಯನ್ನೇ ಕುತೂಹಲದಿಂದ ಎದುರು ನೋಡುತ್ತಿದ್ದೆನು. ನನ್ನಲ್ಲಿ ನೆಚ್ಚು ಮೂಡಿ ಅಂಜಿಕೆ ಹಿಂಜರಿಯಲಾರಂಭಿಸಿತು. ಹಾಗಾದುದರಿಂದ ಕೆಲವು ಪ್ರತಿಕೂಲ ಪರಿಣಾಮಗಳು ಸಂಭವಿಸಿದುವು. ಒಂದು ದಿನ ನಾನು ಪೆದ್ದ ಳಂತೆ ವರ್ತಿಸಿದೆನು. ನನ್ನಲ್ಲಿ ಚಿತ್ತೈಕಾಗ್ರತೆ ಜ್ಞಾಪಕ ಶಕ್ತಿಗಳೆರಡೂ ಲಯವಾಗಿದ್ದುವು. ಇದರಿಂದ ಜವಹರನು ಕೆರಳಿ(ನಾನಾತನನ್ನು ದ್ವೇಷಿ ಸುವುದಿಲ್ಲ.) ಉದ್ರೇಕಗೊಳ್ಳಲಾರಂಭಿಸಿದನು. ನನ್ನ ತಲೆಯಲ್ಲಿದ್ದ ಅಲ್ಪಸ್ವಲ್ಪ ಬುದ್ಧಿಯೂ ಸಂಪೂರ್ಣವಾಗಿ ನಾಶಹೊಂದಿ, ನಾನು ಮೂಕ ಳಾದೆನು. ಅವನು ನನ್ನ ಕಡೆ ತಿರುಗಿ ಅರ್ಭಟಿಸಿದನು. ನನ್ನ ಮೈ ನಡುಗಿತು, ಅರಿವು ತಲೆಗೆಳಗಾಯಿತು. ಮರವಟ್ಟವಳಂತೆ, ಸೊಕ್ಕು ಮುರಿದವಳಂತೆ, ನಾನು ದೈನ್ಯದಿಂದ ಮೇಲೆದ್ದೆನು. ಪಾಠವನ್ನು ಮರೆತುದು ದೊಡ್ಡ ತಪ್ಪಲ್ಲವೆಂದು ನಾನು ಭಾವಿಸಿ ಕೊಂಡೆನು. ನನ್ನ ಮನಸ್ಸು ಬಹಳವಾಗಿ ನೊಂದಿತು. ಉಕ್ಕಿಬರುತ್ತಿದ್ದ ಕಣ್ಣೀರನ್ನು

ಒತ್ತಿಹಿಡಿಯಲು ಯತ್ನಿಸಿದೆನು. ಆದರೆ ಅದು ಸಾಧ್ಯವಾಗಲಿಲ್ಲ. ನನ್ನ ಪುಸ್ತಕಗಳನ್ನು ಒಂದುಗೂಡಿಸಿಕೊಂಡೆನು. ಅಣ್ಣ ಕಣ್ಣೀರಕೋಡಿಯನ್ನು ಕಂಡನು. ಒಂದು ಕ್ಷಣದಲ್ಲಿಯೇ ಆತನ ಕೋಪ ಮಾಯವಾಯಿತು. ಅವನು ಬಹಳ ಪಶ್ಚಾತ್ತಾಪಪಟ್ಟನು. ತನ್ನ ತೋಳ್ತೆಕ್ಕೆಯಲ್ಲಿ ನನ್ನನ್ನು ಸಿಕ್ಕಿಸಿಕೊಂಡು ಕ್ಷಮೆಬೇಡಿದನು. ಈ ಘಟನೆಯಾದನಂತರ ಅವನು ಏನು ಹೇಳಿದರೂ, ನನ್ನನ್ನು ಪ್ರೇರೇಪಿಸಲು ಎಷ್ಟು ಪ್ರಯತ್ನಪಟ್ಟರೂ, ನಾನು ಪಾಠಗಳನ್ನು ಮುಂದುವರಿಸಲು ಇಷ್ಟಪಡಲಿಲ್ಲ.

ರಾಜಕೀಯ ವಿಷಯ ಪಾಠಪ್ರವಚನಲೇಖನಗಳನ್ನುಳಿದು ಜವಹರನ ಬಾಳಿನಲ್ಲಿ ಬೇರಾವ ಹವ್ಯಾಸವೂ ಇಲ್ಲವೆಂದು ಆತನನ್ನು ಚೆನ್ನಾಗಿ ಅರಿಯದವರು ಊಹಿಸಿಕೊಳ್ಳುವುದುಂಟು. ಆತನು ಇವುಗಳಲ್ಲಿಯೇ ಬಹುಕಾಲವನ್ನು ಕಳೆಯುವುದು ನಿಜ. ಜತೆಗೆ ಇನ್ನೂ ಅನೇಕ ಆಟಪಾಟಗಳನ್ನು ಮತ್ತು ಗೊಡವೆಗಳನ್ನು ಅಂಟಿಸಿಕೊಂಡಿರುವುದುಂಟು. ಆದರೆ ಅವುಗಳಿಗೋಸ್ಕರ ಹೆಚ್ಚು ಕಾಲವನ್ನು ಮೀಸಲಿಡಲಾರನು. ರಾಜಕೀಯ ಕ್ಷೇತ್ರದಲ್ಲಿ ಅಲ್ಪಸ್ವಲ್ಪ ಬಿಡುವು ದೊರೆತಾಗ ಓದು ಬರಹಗಳಲ್ಲಿ ತೊಡುಗುತ್ತಾನೆ. ಸಾಮಾನ್ಯವಾಗಿ ಆತನ ಬರೆವಣಿಗೆಯೆಲ್ಲ ಸೆರೆಮನೆಯಲ್ಲಿ ಸಾಗುತ್ತದೆ. ಕುದುರೆ ಸವಾರಿಯೆಂದರೆ ಅವನಿಗೆ ತುಂಬಾ ಇಷ್ಟ. ಅವನು ಒಳ್ಳೆಯ ಸವಾರ. ಈಜಾಟದಲ್ಲಿ ಹೆಚ್ಚು ಆಸಕ್ತಿಯುಂಟು. ಆದರೆ ಇವುಗಳಿಗೆ ಸಾಕಾದಷ್ಟು ಅವಕಾಶಗಳು ದೊರೆಯುವಂತಿಲ್ಲ. ನಾವು ಒತ್ತಾಯಮಾಡಿದಲ್ಲದೆ ನಾಟಕ ಸಿನಿಮಾಗಳಿಗೆ ಹೋಗುವುದಿಲ್ಲ. ಅವು ಚೆನ್ನಾಗಿದ್ದರೆ ಸಂತೋಷದಿಂದ ಸವಿಯುತ್ತಾನೆ. ಭಿನ್ನ ಭಿನ್ನ ದರ್ಜೆಯ ವಯಸ್ಸಿನ ಮಕ್ಕಳೊಡನಿದ್ದಾಗ ಆತನ ನಿಜಸ್ವರೂಪವನ್ನು ಕಾಣಬೇಕು. ಅವರಲ್ಲಿ ಇವನಿಗೆ ತುಂಬಾ ವಾತ್ಸಲ್ಯ; ಅವರಿಗೆ ಆತನಲ್ಲಿ ವಿಶೇಷ ಪೂಜ್ಯತೆ. ಅವನು ಎಷ್ಟೇ ಗುರುತರವಾದ ಕಾರ್ಯದಲ್ಲಿ ನಿರತನಾಗಿರಲಿ, ಎಷ್ಟೇ ಬಳಲಿಕೆಯಿಂದ ಕೂಡಿರಲಿ, ಯಾವುದಾದರೂ ಮಗು ಆತನ ಹತ್ತಿರ ಹೋಗಿ ಆ ವಿಷಯ ಈ ವಿಷಯ ಏನೆಂದು ತಿಳಿದುಕೊಳ್ಳಲು ಒತ್ತಾಯಪಡಿಸಿದರೆ, ಆ

ಮಗುವನ್ನು ದೂರ ಅಟ್ಟುವುದಿಲ್ಲ. ತನ್ನ ಕೆಲಸವನ್ನು ನಿಲ್ಲಿಸಿ ಮಗುವಿನ ಕುತೂಹಲವನ್ನು ನಿವಾರಿಸುತ್ತಾನೆ.

ಹಗಲೆಲ್ಲ ದುಡಿದು ಬಳಲಿದಾಗ ಮಕ್ಕಳೊಡನೆ ಕಲೆತು ಕುಣಿದು ನಲಿಯುವುದೆಂದರೆ ಜವಹರನಿಗೆ ಹಿಗ್ಗು. ಆಗ ಚಿಂತೆ ವ್ಯಾಕುಲತೆಗಳು ಆತನಿಂದ ದೂರ ಸರಿಯುತ್ತವೆ. ಕುಣಿಯುತ್ತಾ ನೆಗೆಯುತ್ತಾ ಕೇಕೆ ಹಾಕುತ್ತಾ ಮಕ್ಕಳಲ್ಲಿ ತಾನೂ ಒಬ್ಬನಾಗುತ್ತಾನೆ. ನಮ್ಮಲ್ಲಿ ಹಲವರಿಗೆ ಹೀಗಿರುವುದು ಅಸಾಧ್ಯ. ನಾವು ಆತ್ಮಾಭಿಮಾನದ ಶಿಖರದಿಂದಿಳಿಯ ಲಾರೆವು; ದೊಡ್ಡವರೆಂಬ ಭಾವನೆಯನ್ನು ಮರೆಯಲಾರೆವು. ಮೃದು ಮಧುರ ಸ್ವಭಾವದ ಸರಳ ಪ್ರಕೃತಿಯ ಜವಹರನಿಗೆ ಮಾತ್ರ ಅವೆಲ್ಲ ಸಾಧ್ಯ. ಆದುದರಿಂದಲೇ ಮಕ್ಕಳು ಆತನನ್ನು ತಮ್ಮ ಒಡನಾಡಿ ಯೆಂದು ಆತನ ಬೆನ್ನು ಹತ್ತುತ್ತಾರೆ.

ಜವಹರನಲ್ಲಿ ಮತ್ತೊಂದು ಅಮೂಲ್ಯವಾದ ಗುಣವಿದೆ. ಅವನು ಎಲ್ಲಿರಲಿ, ಸೆರೆಮನೆಯಲ್ಲಿರಲಿ, ಹೊರಗಡೆಯಿರಲಿ ಮಹತ್ಕಾರ್ಯದಲ್ಲಿ ತೊಡಗಿರಲಿ, ಕಡುಬಳಲಿಕೆಯಿಂದ ಕೂಡಿರಲಿ, ಎಂತಹ ಅವಸ್ಥೆಯಲ್ಲಿ ದ್ದರು ಜನ್ಮದಿನವನ್ನಾಗಲೀ, ವಾರ್ಷಿಕೋತ್ಸವವನ್ನಾಗಲೀ ಅಥವಾ ಇತರ ಮುಖ್ಯವಾದ ಮಹತ್ಸಂದರ್ಭಗಳನ್ನಾಗಲೀ ಎಂದೂ ಮರೆತವ ನಲ್ಲ. ಇಂತಹ ಅಲ್ಪವಿಷಯಗಳಲ್ಲಿಯೂ ಎಚ್ಚರಿಕೆಯಿಂದಿರುವುದರಿಂದಲೇ ಅವನು ಬಹು ಜನರ ಪ್ರೀತಿ ಗೌರವಗಳಿಗೆ ಪಾತ್ರನಾಗಿರುವುದು. ಒಮ್ಮೆ ನನ್ನ ಜನ್ಮೋತ್ಸವ ಭಾರತೀಯ ಪಂಚಾಂಗದ ಪ್ರಕಾರ ೧೯೩೦ ನೆಯ ಇಸವಿ ಅಕ್ಟೋಬರ್ ತಿಂಗಳು ಹತ್ತೊಂಬತ್ತನೆಯ ತಾರೀಖು ನಡೆಯ ಬೇಕಾಗಿತ್ತು. ಅದೇ ದಿನವೇ ಜವಹರನು ಬಂಧಿತನಾದನು. ಕೂಡಲೇ ನನ್ನ ಜನ್ಮೋತ್ಸವದ ನೆನಪೂ ಆತನಿಗೆ ಹೊಳೆಯಿತು. ಕೆಲವು ದಿನ ಗಳನಂತರ ಅವನು ಈ ರೀತಿ ಕಾಗದ ಬರೆದನು: "ಬ್ರಿಟೀಷ್ ಸರ್ಕಾರ ೧೮೧೮ ನೆಯ ನಿಯಮದ ಪ್ರಕಾರ ನನ್ನ ಮೇಲೊಂದು ಆಜ್ಞೆ ಯನ್ನು ಜಾರಿಮಾಡಿ ಅಕ್ಟೋಬರ್ ಹತ್ತೊಂಬತ್ತನೆಯ ತಾರೀಖು ನನ್ನನ್ನು ಬಂಧಿಸಿತು. ಆ ದಿನದ ಪ್ರಾಮುಖ್ಯವಾದ ಘಟನೆಯೇ ಮರೆತು ಹೋಯಿತು. ನನ್ನ ಪ್ರೀತಿಯ ತಂಗಿಗೆ ಅಂದು ಮನೋಹ

ರವೂ ಕಲಾಪೂರ್ಣವೂ ಆದ ಬಹುಮಾನವನ್ನೀಯುವ ಹೆಬ್ಬಯಕೆ ಕೈಗೂಡಲಿಲ್ಲವೆಂದು ನನಗೆ ವ್ಯಸನವಾಗುತ್ತಿದೆ. ನನ್ನ ತಪ್ಪನ್ನು ಕೂಡಲೇ ತಿದ್ದಿಕೊಳ್ಳುತ್ತೇನೆ. ಆದುದರಿಂದ ಕೂಡಲೇ ನೀನು ಪುಸ್ತಕದ ಅಂಗಡಿಗೆ ಹೋಗು. ಅಲ್ಲಿ, ಪುರಾತನರ ಸುಭಾಷಿತಾವಲಿಗಳೂ, ಮಧ್ಯಮ ಯುಗದ ಮೂಢನಂಬಿಕೆಗಳೂ, ಆಧುನಿಕ ಯುಗದ ಸಂಶಯುಗಳೂ ಮತ್ತು ಭವಿಷ್ಯತ್ಕಾಲದ ಘನತೆ ಮಹಿಮೆಗಳೂ ಚಿತ್ರಿತವಾಗಿರುವ ಹೊತ್ತಗೆಗಳನ್ನು ಆರಿಸಿಕೋ. ತನ್ನ ಮುದ್ದು ತಂಗಿಯನ್ನು ಸದಾ ನೆನಸಿಕೊಳ್ಳುವ, ಆದರೆ ತುಸು ಪ್ರಜ್ಞಾಶೂನ್ಯನಾದ ಅಣ್ಣನ ಒಲುಮೆಯುಡುಗೊರೆ ಅವು ಎಂದು ತಿಳಿ. ಆರಿಸಿ ತಂದ ಆ ಪುಸ್ತಕಗಳನ್ನು ಓದು. ಅವುಗಳಿಂದ, ಸ್ವರ್ಣಸ್ವಪ್ನಮಯವೂ, ಹೇಮಖಚಿತ ರಾಜಗೃಹರಂಜಿತವೂ, ವಿವಿಧವರ್ಣ ಕುಸುಮರಚಿತ ವನೋಪವನಮಯವೂ, ಬೆಳ್ನೊರೆಯನ್ನು ಸೂಸಿ ಕಲಕಲರವವನ್ನುಂಟುಮಾಡುವ ತುಂಬುಹೊಳೆಗಳಿಂದ ಕೂಡಿದುದೂ ಆದ ಮಾಯಾ ನಗರವನ್ನು ಸೃಜಿಸು. ಅಲ್ಲಿ ಸರ್ವದಾ ಆನಂದ ಸೌಂದರ್ಯಗಳು ನೆಲಸಿರಲಿ; ಈ ನಿಷ್ಠುರ ವಾಸ್ತವಿಕ ಜಗತ್ತಿನ ಅರಕೆಕೊರತೆಗಳು, ದುಃಖದಾರಿದ್ರ್ಯಗಳು ಅಲ್ಲಿ ಸುಳಿಯದಿರಲಿ. ಈ ಮಾಯಾ ನಗರ ನಿರ್ಮಾಣ ಕಾರ್ಯದಲ್ಲಿ ಜೀವನವೇ ದೀರ್ಘವೂ ನಿರಾಯಾಸಮಯವೂ ಆದ ಪ್ರಯತ್ನವಾಗುತ್ತದೆ, ಅವಿಚ್ಛಿನ್ನವಾದ ಸಾಹಸವಾಗುತ್ತದೆ; ಮತ್ತು ನಮ್ಮ ಸುತ್ತಲೂ ಆವರಿಸಿರುವ ದುಃಖದಾರಿದ್ರ್ಯ ವೈರೂಪಗಳ ಪಾಚಿಯನ್ನು ಅದು ತೆಗೆದೊಗೆಯುತ್ತದೆ.

ಜವಹರನು ಇಂಗ್ಲೆಂಡಿನಿಂದ ಹಿಂದಿರುಗಿದಾಗ ಸಭ್ಯನೂ ಮನೋಹರನೂ ಆದ ಯುವಕನಾಗಿದ್ದನು; ಆದರೆ ಶ್ರೀಮಂತ ಪುತ್ರರಂತೆ ಕೃತಕನಾಗರಿಕನೂ ದರ್ಪಿಷ್ಠನೂ ಆಗಿದ್ದನು. ಆಮೇಲೆ ಹಿಂಬಾಲಿಸಿದ ಸಂವತ್ಸರಗಳು ವಿವಿಧಾನುಭವಗಳಿಂದಲೂ, ದುಃಖ ನಿರಾಶೆಗಳಿಂದಲೂ ಕೂಡಿದ್ದುವು. ಇವೆಲ್ಲ ಆತನನ್ನು ಪರಿಪಕ್ವಗೊಳಿಸಿದವು. ಹಿಂದೆ ಇದ್ದುದಕ್ಕಿಂತ ಈಗ ಆತನು ಹೆಚ್ಚು ಆದರಣೀಯನಾಗಿದ್ದಾನೆ. ಪಾಶ್ಚಾತ್ಯ ವಿದ್ಯೆ ಆತನ ಮೇಲೆ ವಿಶೇಷ ಪ್ರಭಾವವನ್ನುಂಟುಮಾಡಿದೆ. ಆತನ

ದೃಷ್ಟಿಧ್ಯೇಯಗಳನ್ನು ನೋಡಿದರೆ ಆತನನ್ನು ಭಾರತೀಯನೆನ್ನುವುದಕ್ಕಿಂತ ಪಾಶ್ಚಾತ್ಯನೆನ್ನಬಹುದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ರಣಮಾರಿಯ ಮತ್ತು ಕ್ಷುಧಾರಾಕ್ಷಸಿಯ ವಿಕಟನರ್ತನದ ಪರಿಣಾಮವಾಗಿ ಪ್ರಪಂಚದಲ್ಲೆಲ್ಲ ನೈತಿಕ ಮತ್ತು ರಾಜಕೀಯ ಕ್ಷೋಭೆಯೆದ್ದಿದೆ. ಇಂಡಿಯಾ ಮತ್ತು ಚೀಣಾದೇಶಗಳ ಜನತೆಯ ಮನೋಧರ್ಮವನ್ನು ನಿರಂತರ ತಿದ್ದುತ್ತಿರುವ ಸ್ಫೂರ್ತಿಯ ಗಭೀರತೆ ವಿಶಾಲತೆಗಳ ಕಡೆಗೆ ನಾವಾಗಲೀ, ನಮಗಿಂತ ಹೆಚ್ಚಾಗಿ ಜವಹರನಾಗಲೀ, ಆಕರ್ಷಿತರಾಗಲು ಈ ಕ್ಷೋಭೆಯೇ ಕಾರಣ. ಇಂದು ಆತನ ಮಹತ್ವಪೂರ್ಣವಾದ ವ್ಯಕ್ತಿತ್ವ ಪುರಾತನತೆಯ ನಿಗೂಢಗರ್ಭದಲ್ಲಿ ಬೇರುಬಿಟ್ಟು ನೂತನ ಚೈತನ್ಯವನ್ನು ಪಡೆಯುತ್ತಿದೆ. ನಿರಾಶೆಯ ಕಗ್ಗತ್ತಲು ಸುತ್ತಮುತ್ತ ಕವಿದಿದ್ದರೂ ಆದರ್ಶಭಾರತೀಯನ ಸಮಾಧಾನಚಿತ್ತತೆಯೂ, ಶಮೆದಮೆಗಳೂ ಆತನನ್ನು ಕೈಹಿಡಿದು ನಡೆಯಿಸುತ್ತಿವೆ. ಆತನಲ್ಲಿ ಪೌರ್ವಾತ್ಯ ಪಾಶ್ಚಾತ್ಯಾಸಂಸ್ಕೃತಿಗಳೆರಡೂ ಸಂಮಿಲನವಾಗಿವೆ. ಒಂದು ಬಾಳಿನ ಗುರಿಯನ್ನು ತೋರಿಸಿಕೊಟ್ಟರೆ, ಮತ್ತೊಂದು ಮಾನವನ ಅದೃಷ್ಟವನ್ನು ತಿದ್ದಲು ಸಹಕಾರಿಯಾದ ದೃಷ್ಟಿ ವೈಶಾಲ್ಯ ಪೂರ್ಣವಾದ ಪ್ರಚೋದಕಶಕ್ತಿಯನ್ನು ನೀಡುತ್ತದೆ. ಭರತಖಂಡದ ನಿಜವಾದ ಸ್ವಾತಂತ್ರ್ಯವು ಪರರಾಷ್ಟ್ರಗಳ ಪ್ರಜಾಕಂಟಕತ್ವ ಕ್ರೌರ್ಯದೌರ್ಜನ್ಯಗಳನ್ನು ಸಹಿಸಲಾರದೆಂಬುದೇ ಆತನ ದೃಢಪ್ರತ್ಯಯ. ಆತನ ಉಜ್ವಲ ರಾಷ್ಟ್ರೀಯ ಭಾವನೆಯೇ ಆ ನಂಬಿಕೆಯಾಗಿ ಪರಿಣಮಿಸಿದೆ. ಭರತಖಂಡದ ವಿಷಮಪರಿಸ್ಥಿತಿ ಹೇಗೆಯೋ ಏಷಿಯಾ ಮತ್ತು ಯೂರೋಪು ಖಂಡಗಳ ದುರ್ಘಟನೆಗಳು ಹಾಗೆಯೇ ಆತನ ಚಿತ್ತಸ್ವಾಸ್ಥ್ಯವನ್ನು ಕಲಕಿವೆ. ಅವನು ನಿಜವಾದ ಸ್ವಾತಂತ್ರ್ಯವೀರ. ಎಂದು ಎಲ್ಲಿ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲುತ್ತದೆಯೋ ಅಂದು ಅಲ್ಲಿ ತನ್ನ ಶಕ್ತಿ ಸಾಮರ್ಥ್ಯಗಳನ್ನೆಲ್ಲ ವಿನಿಯೋಗಿಸಿ ಅದನ್ನು ಸಂರಕ್ಷಿಸಲು ಮುಂದೆ ನುಗ್ಗುತ್ತಾನೆ.

ಜವಹರನು ಗರ್ವಿಷ್ಠ ಮತ್ತು ಸ್ವಾಭಿಮಾನಿ ಎಂದು ಕೆಲವರು ತಿಳಿದುಕೊಂಡಿರುವುದುಂಟು. ಆದುದರಿಂದ ಆತನ ಮೇಲೆ ಅವರಿಗೆ

ಕೋಪ. ಒಂದೊಂದು ಸಾರಿ ಅವನು ಹಾಗಿರಬಹುದು; ಆದರೆ ಸ್ವಾಭಾವಿಕವಾಗಿ ಗರ್ವಿಷ್ಟನಲ್ಲ, ಅಥವಾ ಉದ್ದಂಡತನದವನಲ್ಲ. ಎಲೆಯಮರೆಯ ಕುಸುಮದಂತಿರಬೇಕೆಂಬುದೇ ಆತನ ಬಯಕೆ. ಹಾಗಿರಲುಲೂ ಸಾಧ್ಯವಾಗಿದ್ದಲ್ಲಿ, ಇನ್ನೂ ಸಮಾಧಾನಚಿತ್ತತೆಯಿಂದಿರುತ್ತಿದ್ದನು; ಆದರೆ ಅದು ಸಾಧ್ಯವಿಲ್ಲ. ಆತನು ಸ್ವಪ್ನಜೀವಿ. ದುಡಿಮೆಯಿಂದ ಬಳಲಿ ದಣಿವಾರಿಸಿಕೊಳ್ಳುವಾಗ ಆತನ ದೃಷ್ಟಿ ದಿಗಂತಗಾಮಿಯಾಗುತ್ತದೆ; ಆತನ ಕಣ್ಣುಗಳು ಅಂತರ್ಮುಖಿಯಾಗಿ ಕನಸುಣಿಯಾಗುತ್ತವೆ. ಆಗ ಆತನು ಬೇರೊಂದು ಪ್ರಪಂಚಕ್ಕೆ ಸೇರಿದ ವ್ಯಕ್ತಿಯಂತೆ ಕಾಣುತ್ತಾನೆ. ಒಮ್ಮೊಮ್ಮೆ ಆತನ ಕಣ್ಣುಗಳು ದಾರುಣವೇದನೆಯನ್ನು ಸೂಚಿಸುತ್ತವೆ. ಐವತ್ತುಮೂರು ವರ್ಷವಯಸ್ಸಿನಲ್ಲಿಯೂ ಯೌವನವನ್ನು ಸೂಚಿಸುತ್ತಿದ್ದ ಮುಖ ತತ್‌ಕ್ಷಣವೇ ಸುಕ್ಕು ಹಿಡಿದು ಮುಪ್ಪಾಗುತ್ತದೆ. ಜವಹರನ ಬಾಳು ಸುಖಸೌಲಭ್ಯಗಳ ಬೀಡಲ್ಲ. ಆತನು ಆರಿಸಿಕೊಂಡಿರುವ ದಾರಿ ಇರುಕುಮುರುಕು ಕೊರಕಲು ಮುಳ್ಳು ಕಲ್ಲುಗಳಿಂದ ತುಂಬಿದೆ. ಆ ದಾರಿಯನ್ನು ಹಿಡಿದವರಿಗೆ ಸುಖವಿಲ್ಲ. ನಿರಂತರ ದುಃಖ ಬಲಿದಾನಗಳು ಆತನ ಮುಖದ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತಿವೆ.

ಜವಹರನ ಮೇಲೆ ಅನೇಕ ತಪ್ಪುಗಳನ್ನು ಆರೋಪಿಸಿ, ಅವನನ್ನು ನಿಂದಿಸುವವರೂ ಇದ್ದಾರೆ. ಆದರೆ ಅವರು ಆತನನ್ನು ಅರ್ಥಮಾಡಿಕೊಂಡಿಲ್ಲ, ಇಲ್ಲವೇ ಆತನ ಚಲನವಲನಗಳನ್ನು ಅಳೆಯುವಷ್ಟು ಶಕ್ತರಲ್ಲ. ಇತರರಂತೆ ಆತನೂ ಮಾನವ ಸ್ವಭಾವದವನು. ಅನೇಕ ಮನುಷ್ಯರಂತೆ ಆತನಲ್ಲಿಯೂ ಹಲವಾರು ದೌರ್ಬಲ್ಯಗಳಿವೆ. ಆದರೆ ಅನೇಕರು ಮುಗ್ಗರಿಸುವೆಡೆ ಅವನು ಮುಗ್ಗರಿಸುವುದಿಲ್ಲ. ಈದೇ ಆತನ ಹಿರಿಮೆ. ಇಂದುಭರತಖಂಡವು ಆತನನ್ನು ಆರಾಧಿಸುತ್ತಿರುವುದು ಆತನ ಸಚ್ಛೀಲಕ್ಕಾಗಿ ಮಾತ್ರವಲ್ಲ, ಆತನ ಶಕ್ತಿಸಾಮರ್ಥ್ಯ ಸಾಹಸಗಳಿಗೆ ಮಾತ್ರವಲ್ಲ, ಆತನ ಮಾನವೀಯತೆಗಾಗಿ, ತಾನು ನಾಯಕನೆಂದಾಗಲೀ ದೇಶೋದ್ಧಾರಕನೆಂದಾಗಲೀ ಅವನು ಅಂದುಕೊಂಡಿಲ್ಲ. ಭಾರತಮಾತೆಯಿಂದ ಕರೆಬಂದಾಗ ಆಕೆಯನ್ನು ಸೇವಿಸುವ ಸುಯೋಗ ಲಭಿಸಿದರೆ ಸಾಕು, ಅದೇ ಆತನಿಗೆ ಹೆಮ್ಮೆ. ಗುರಿ ತಲುಪುವವರೆಗೂ

ಆತನು ಹಿಮ್ಮೆಟ್ಟುವಂತಿಲ್ಲ. ಆತನ ಅರ್ಧ ಜೀವಮಾನ ಸೆರೆಮನೆಯಲ್ಲಿ ಸವೆದಿದ್ದರೂ, ಸೆರೆಮನೆಗೆ ಹೋಗುವುದೇ ಮಹತ್ತಾದ ತ್ಯಾಗವೆಂದುಕೊಂಡಿಲ್ಲ. ಪರಕೀಯರ ದಬ್ಬಾಳಿಕೆಗೆ ವಿರುದ್ಧವಾಗಿ ಸ್ವಾತಂತ್ರ್ಯ ಸಂಪಾದನೆಗೋಸ್ಕರ ಹೋರಾಟ ನಡೆಯಿಸುವಾಗ ಕಾರಾಗೃಹವಾಸ ಅನಿವಾರ್ಯ ತಳಪಾಯವೇ ಜರ್ಝರಿತವಾಗಿರುವ ಪ್ರಪಂಚದಲ್ಲಿಂದು ಸೆರೆಮನೆಗೆ ಹೋಗುವುದು ಯಃಕಶ್ಚಿತ್ ವಿಷಯ. ನಿತ್ಯ ವ್ಯವಹಾರದಲ್ಲಿ ಅದಕ್ಕೆ ಅಲ್ಪಸ್ವಲ್ಪ ಬೆಲೆ ಸಿಗಬಹುದು ; ಆದರೆ ಅಂತರಿಕ ಪ್ರೇರಣೆಯಿಲ್ಲದಿದ್ದರೆ ಆ ಬೆಲೆಗೆ ಮಹತ್ವವಿರುವುದಿಲ್ಲ. ಆಂತರಿಕ ಪ್ರೇರಣೆ ಚೇತನತ್ವದ ಪ್ರತಿನಿಧಿಯಾದುದರಿಂದ, ಅದೇ ಪ್ರಾಮುಖ್ಯವಾದುದು ; ಉಳಿದುದೆಲ್ಲ ಗೌಣ.

ಮತ್ತೆ ಮತ್ತೆ ಸೆರೆಮನೆಗೆ ಹೋಗಿಬರುವುದೇನೂ ಸುಲಭದ ಕೆಲಸವಲ್ಲ. ಅಲ್ಲದೆ, ಸೆರೆಮನೆ ಗುಲಾಬಿ ಹೂಗಳ ಮೆತ್ತನೆಯ ಹಾಸಿಗೆಯಿಂದ ಕೂಡಿರುವ ವಿಹಾರ ಕ್ಷೇಂದ್ರವಲ್ಲ. ಪದೇ ಪದೇ ಸೆರೆಮನೆಗೆ ಹೋಗಿರುವವರಿಗೆ ಆ ವಾತಾವರಣ ಒಗ್ಗಿ ಹೋಗಿ ನೀರು ಕುಡಿದಂತಿರುತ್ತದೆಂದು ಕೆಲವರ ಅಭಿಪ್ರಾಯ. ಸೆರೆಮನೆಯಲ್ಲಿ ಕೇವಲ ಕೆಲವು ತಿಂಗಳುಗಳಿದ್ದರೆ ಸಾಕು, ಈ ತಪ್ಪುತಿಳಿವಳಿಕೆ ಮಾಯವಾಗುತ್ತದೆ. ರೋಗರುಜಿನಗಳ ನಿರೀಕ್ಷೆಯಿಂದಲೇ ಸೆರೆಮನೆಯನ್ನು ಪ್ರವೇಶಿಸಬೇಕು. ಶಾರೀರಿಕ ಅನಾನುಕೂಲಗಳಂತು ಸದಾ ಇದ್ದೇ ಇರುತ್ತವೆ. ಕಾರಾಗೃಹದ ದೈನಂದಿನ ನಿರಂಕುಶಾಡಳಿತದೊಡನೆ ಹೆಣಗಬೇಕಾದಾಗ ಮಾನಸಿಕ ಸಮಾಧಾನ ತಲ್ಲಣಗೊಳ್ಳುತ್ತದೆ.

ಪ್ರೀತಿಪಾತ್ರರಾದ ನೆಂಟರಿಷ್ಟರಿಂದ ಬೇರ್ಪಡುವುದೂ, ಅಧಿಕಾರಿಗಳಿಗೆ ‘ ಖುಷಿ ’ ಬಂದಾಗ ಮಾತ್ರ ಅವರನ್ನು ಸಂಧಿಸುವುದೂ ಇವು ಯಾರಿಗಾದರೂ ಕೋಪೋದ್ರೇಕವನ್ನುಂಟುಮಾಡದೆ ಇರವು; ಬಾಳನ್ನು ಕಹಿಗೊಳಿಸದಿರವು. ಸುದೀರ್ಘಾವಧಿಯ ಕಾರಾಗೃಹವಾಸದಿಂದ ಜೀವನದಲ್ಲಿ ಜಿಗುಪ್ಸೆಗೊಳ್ಳದಿರುವುದೇ ಮಹತ್ ಸಿದ್ಧಿ. ಜವಹರನು ಈ ಪರೀಕ್ಷೆಯಲ್ಲಿ ಸಂಪೂರ್ಣವಾಗಿ ತೇರ್ಗಡೆಹೊಂದಿದ್ದಾನೆ.

ಜವಹರನು ಹಿಂದೆ ಬರೆದಿದ್ದಂತೆ, ಆಂತರಿಕಪ್ರೇರಣೆಯೊಂದಿದ್ದರೆ ಎಷ್ಟೇ ಕಷ್ಟಬರಲಿ, ಎಂತಹ ಅಡಚಣೆಗಳು ಅಡ್ಡಬರಲಿ, ಹಿಡಿದ ಗುರಿಯನ್ನು ಸಾಧಿಸಬಹುದು. ಜವಹರನು ಮತ್ತೆ ಮತ್ತೆ ಬಂಧಿತನಾಗುತ್ತಿದ್ದಾಗ ನಾವು ಚಿಂತೆಗೊಳಗಾಗುತ್ತಿದ್ದೆವು. ಆದರೆ ತನಗೆ ಸಂಭವಿಸಿದ ಕಷ್ಟನಿಷ್ಠುರಗಳು ಅತ್ಯಲ್ಪವೆಂದು ಪರಿಗಣಿಸಿ, ಅವು ತೃಣಸಮಾನವೆಂಬ ಭಾವನೆಯನ್ನು ನಮ್ಮಲ್ಲಿಯೂ ಪ್ರಚೋದಿಸಿ, ನಮಗೆ ಶಕ್ತಿ ಸಾಮರ್ಥ್ಯಗಳನ್ನಿತ್ತಿದ್ದಾನೆ.

೧೯೪೦ ನೆಯ ಇಸವಿಯಲ್ಲಿ ಜವಹರನು ನಾಲ್ಕು ವರ್ಷಗಳ ಅವಧಿಯ ಕಠಿಣ ಶಿಕ್ಷೆಗೊಳಗಾದನು. ಆ ಆಜ್ಞೆಯ ಹಿಂದೆ ಹುದುಗಿದ್ದ ಪ್ರತೀಕಾರ ಮನೋಭಾವ ಪ್ರತಿಯೊಬ್ಬ ಮಾನವನಿಗೂ ವಿಸ್ಮಯವನ್ನುಂಟುಮಾಡಿತು. ಆ ಸುದ್ದಿ ನಮಗೂ ಬರಸಿಡಿಲಂತೆ ಬಂತು. ವಿಲಕ್ಷಣವೂ ಅನಿರೀಕ್ಷಿತವೂ ಆದ ಅನೇಕ ರಾಜಶಾಸನಗಳನ್ನು ನಾವು ಹಿಂದೆ ಕಂಡಿದ್ದರೂ, ಈಸಲದ ಆಜ್ಞೆ ನಮಗೆ ದಾರುಣವೇದನೆಯನ್ನುಂಟುಮಾಡಿತು. ನಾನಂತು ದಿಜ್ಮೂಢಳಾಗಿ, ಜವಹರನಿಗೊಂದು ಕಾಗದವನ್ನು ಬರೆದು ನನ್ನ ಕಳವಳವನ್ನು ವ್ಯಕ್ತಪಡಿಸಿದೆನು. ರಾಜಾರವರೂ ನಾನೂ ಡೆಹ್ರಾಡೂನಿಗೆ ಬಂದು ನೋಡಬಹುದೇ ಎಂದು ಅಣ್ಣನನ್ನು ಕೇಳಿದೆನು. ಪ್ರತ್ಯುತ್ತರವಾಗಿ ಜವಹರನು ಈರೀತಿ ಬರೆದನು : "ರಾಜಾರವರಿಗೂ ನಿನಗೂ ಸದಾ ಸುಸ್ವಾಗತ. ಮುಂದೆ ಕೆಲವು ದಿನಗಳ ತನಕ ರಾಜಾರವರನ್ನು ನೋಡಲು ಅವಕಾಶವಿಲ್ಲದಿರುವುದರಿಂದ, ಈಗಲೇ ಅವರನ್ನು ನೋಡಬೇಕೆಂದು ಬಯಸುತ್ತೇನೆ. [ಕೆಲವು ದಿನಗಳಲ್ಲಿಯೇ ರಾಜಾರವರು ವೈಯಕ್ತಿಕ ಸತ್ಯಾಗ್ರಹವನ್ನು ಹೂಡುವವರಾಗಿದ್ದರು] ಬ್ರಿಟಿಷ್ ಸರ್ಕಾರವು ನನ್ನನ್ನು ಶಿಕ್ಷೆಗೆ ಗುರಿಪಡಿಸಿರುವುದೇ ಕಾರಣವಾಗಿ ನೀವಿಬ್ಬರೂ ಉದ್ರೇಕಗೊಂಡಿರುವುದನ್ನು ತಿಳಿದು ವ್ಯಥೆಯಾಗುತ್ತಿದೆ. ಇತ್ತೀಚೆಗೆ ನನ್ನ ಮನಸ್ಸು ಸಮಾಧಾನಸ್ಥಿತಿಯಲ್ಲಿರುವಂತೆ ಹಿಂದೆಂದೂ ಇರಲಿಲ್ಲ. ಉನ್ಮತ್ತತಾಪಂಕದಲ್ಲಿ ಬಿದ್ದು ಒದ್ದಾಡುತ್ತಿರುವ ಈ ಪ್ರಪಂಚದಲ್ಲಿ ಅದೂ ಒಂದು ಸಾಹಸಕಾರ್ಯವೇ ಸರಿ. ಬಾಹ್ಯಪ್ರಪಂಚದ ವಿವಿಧ ಕಾರ್ಯೋದ್ಯಮಗಳಿಗೆ ಸಂಬಂಧಪಟ್ಟ ಚಿತ್ತದ ಗವಾಕ್ಷಿಗಳನ್ನು ತಾತ್ಕಾ

ಲಿಕವಾಗಿ ಮುಚ್ಚಿ, ಅಭ್ಯಾಸಬಲದಿಂದ ಅಂತರ್ಮುಖಿಯಾಗಲು ಕಲಿತಿದ್ದೇನೆ. ನನ್ನ ವಿಷಯದಲ್ಲಿ ನೀವಾರೂ ಅನಾವಶ್ಯಕವಾಗಿ ತವಕಪಡಬೇಕಾಗಿಲ್ಲ. ನಮಗೆಲ್ಲರಿಗೂ ಬಾಳು ದಿನೇದಿನೇ ಕಠಿಣವಾಗುತ್ತಿದೆ. ಸುಖಶಾಂತಿಗಳು ಹಳೆಯದಿನಗಳ ನೆನಪಾಗಿವೆ. ಅವು ಹಿಂದಿರುಗುತ್ತವೆಯೋ ಅಥವಾ ಎಂದೆಂದಿಗೂ ಹಿಂದಿರುಗುವುದಿಲ್ಲವೊ ಯಾರಿಗೂ ಗೊತ್ತಿಲ್ಲ. ಕೈಗೆ ನಿಲುಕದ ವಸ್ತುವಿಗೆ ಬಾಯಾರಿಸಿಕೊಳ್ಳದೆ, ಇಂದಿನ ಬಾಳಿಗೆ ನಾವು ಹೊಂದಿಕೊಳ್ಳಬೇಕಾಗಿದೆ. ಮಾನಸಿಕ ಸಂಕ್ಲೇಶ ಸಂಕ್ಷೋಭೆಗಳ ಮುಂದೆ ದೈಹಿಕ ಬಾಧೆಹಾನಿಗಳು ಅತ್ಯಲ್ಪ. ಬಾಳು ಸುಲಭವೊ ಕಠಿಣವೋ, ಅಂತ್ಯದಲ್ಲಿ ಏನಾದರೂ ಲಭಿಸಲೇಬೇಕು. ಬಾಳನ್ನು ಸಂಪೂರ್ಣವಾಗಿ ಸವಿಯಬೇಕಾಗಿದ್ದಲ್ಲಿ ಕಳೆದ ದಿನಗಳ ಕಷ್ಟನಷ್ಟಗಳನ್ನು ಎಣಿಸಬಾರದು.

ಗಂಡಾಂತರಗಳಿಗೆ ತಲೆಗೊಡಲು, ಅಪಾಯಗಳನ್ನು ಎದುರಿಸಲು ಹಿಂಜರಿಯಬಾರದೆಂದು ತಂದೆಯವರು ಚಿಕ್ಕಂದಿನಿಂದ ನಮಗೆ ಕಲಿಸಿದ್ದರು. "ಮೊದಲು ಭದ್ರತೆ" ಎಂಬುದು ನಮ್ಮ ಉದ್ದೇಶವಲ್ಲ. ಈ ಸೂತ್ರವೇ ನಮ್ಮ ಮಕ್ಕಳಿಗೂ ಮಾರ್ಗದರ್ಶಕವಾಗಿರಲೆಂಬುದೇ ನನ್ನ ಆಶಯ. ನಮ್ಮಲ್ಲಿ ಪ್ರತಿಯೊಬ್ಬರೂ ಅನೇಕವೇಳೆ ಅಪಾಯ ಬಾಧೆಗಳಿಂದ ಕೂಡಿದ ಪ್ರಯಾಣವನ್ನಾಗಲೀ, ಕಾರ್ಯವನ್ನಾಗಲೀ ಕೈಗೊಳ್ಳಬೇಕಾಗಿತ್ತು. ಆದರೆ ಅಡ್ಡಿ ಅಡಚಣೆಗಳ ಮುನ್ನೆಚ್ಚರಿಕೆ ನಮ್ಮ ಕಾರ್ಯಕ್ರಮಕ್ಕೆ ಭಂಗತರುವಂತಿರಲಿಲ್ಲ. ಜವಹರನಿಗಾದರೋ ಅಪಾಯಸೂಚನೆಯೇ ಕಾರ್ಯ ಪ್ರಚೋದಕಶಕ್ತಿಯಾಗುತ್ತಿತ್ತು. ಪ್ರಾಯಶಃ ಅದು ಹುಡುಗತನವಾಗಿ ಕಾಣಬಹುದು ; ಆದರೆ ಭೀತಿಯಲ್ಲಿಯೇ ಬಾಳು ಸಮಾಧಿಯಾಗುವುದಕ್ಕಿಂತ ಈ ಭಾವನೆ ಮೇಲು ; ಏಕೆಂದರೆ ಹೆಜ್ಜೆ ಹೆಜ್ಜೆಗೂ ಅಪಾಯಕಾದಿರಬಹುದು.

ಒಮ್ಮೆ ಜವಹರನು ಕಲ್ಕತ್ತೆಯ ಆಲಿಪುರ ಸೆರೆಮನೆಯಲ್ಲಿದ್ದನು. ಅವನು ಸೆರೆಮನೆಗೆ ಹೋದಾಗಿನಿಂದ ಯಾವ ಸುದ್ದಿಯೂ ಗೊತ್ತಾಗಿರುಲಿಲ್ಲ. ನಮಗೆ ಕುತೂಹಲ ಸಹಜವಾಗಿಯೇ ಮೂಡಿತು. ಅದೇ ಸಮಯದಲ್ಲಿ ಆತನಿಂದ ವೈಶಿಷ್ಟ್ಯಪೂರ್ಣವಾದೊಂದು ಪತ್ರಬಂದಿತು. "ಮುದ್ದುತಂಗಿ, ನೀನಾಗಲೀ, ಉಳಿದವರಾಗಲೀ ನನಗಾಗಿ ಕೊರಗುವುದಿಲ್ಲವೆಂದು

ನಂಬಿದ್ದೇನೆ. ನಾನು ಚೆನ್ನಾಗಿದ್ದೇನೆ. ತುಂಬಾ ಓದುತ್ತಿರುತ್ತೇನೆ. ಬೇರಾವ ಕೆಲಸವಿದೆ? ಪಠಣ, ಧ್ಯಾನ, ನಿತ್ಯಕರ್ಮಾಚರಣ—ಇವೇ ನನ್ನ ದಿನಚರಿ. ನಾನು ಹೊರಗಡೆಬಂದಾಗ—ಅದಿನ್ನೂ ಬಹಳ ದಿನಗಳಮಾತು—ನಾನುಇಂದಿಗಿಂತ ಸ್ವಲ್ಪ ಹೆಚ್ಚು ಬುದ್ಧಿವಂತನಾಗಿರುತ್ತೇನೆ; ಹಾಗಿಲ್ಲ ದಿದ್ದರೂ ಇರಬಹುದು. ಜ್ಞಾನದೇವತೆ ದೃಷ್ಟಿಗಗೋಚರೆ; ಸುಲಭವಾಗಿ ಕೈಗೆ ಎಟಕುವವಳಲ್ಲ. ಒಂದೊಂದುಸಾರಿ ಹಠಾತ್ತನೆ ಕಾಣಿಸಿಕೊಳ್ಳು ತ್ತಾಳೆ. ಈ ಮಧ್ಯೆ ಅವಳನ್ನು ಅನನ್ಯ ಭಕ್ತಿಯಿಂದ ಪೂಜಿಸಿ ಆಕೆಯ ಕೃಪಾದೃಷ್ಟಿಗೆ ಪಾತ್ರನಾಗಲು ಯತ್ನಿಸುತ್ತೇನೆ. ಎಂದಾದರೊಂದು ದಿನ ಆಕೆ ತನ್ನ ಮಹಿಮಾ ದೃಷ್ಟಿಯನ್ನು ಬೀರಬಹುದು. ಅಂತು ಸೆರೆಮನೆ ಆಕೆಯ ಆರಾಧನೆಗೆ ಅಯೋಗ್ಯ ಸ್ಥಳವಲ್ಲ. ಜಗತ್ತಿನ ಗಲಿಬಿಲಿ ದೂರ ದಲ್ಲಿದ್ದು ನಮ್ಮನ್ನು ಸೋಕುವಂತಿಲ್ಲ, ಕುಪಥಕ್ಕೊಯ್ಯುವಂತಿಲ್ಲ. ದೂರ ದಿಂದಲೇ, ನಿರ್ಲಿಪ್ತನಾಗಿ ಜನತೆಯ ಬಾಳನ್ನು ನೋಡುತ್ತಿರುವುದೇ ಮೇಲು."

ಬಾಹ್ಯಜೀವನದಲ್ಲಿ ಜವಹರನಿಗೆ ವಿಶೇಷವಾದಮಮತೆ. ಮಾಗಿಯ ಕಾಲದ ಆಟಪಾಟಗಳಲ್ಲಿ ಆತನಿಗೆ ಕೊನೆಮೊದಲಿಲ್ಲದ ವ್ಯಾಮೋಹ. ನಾವೆಲ್ಲರೂ ಸ್ವಿಟ್ಜರ್ಲೆಂಡಿನಲ್ಲಿದ್ದಾಗ, ನೀರ್ಗಲ್ಲ ಜಾರಾಟದಲ್ಲಿ ಅನೇಕ ಗಂಟೆಗಳನ್ನು ಕಳೆಯುತ್ತಿದ್ದನು. ನಿತ್ಯನೂತನ ನಿಷ್ಕಳಂಕ ಸೌಂದರ್ಯ ಮಯಾ ಪ್ರಕೃತಿಮಾತೆಯ ಪ್ರೇಮೋಪಾಸಕನವನು, ಪ್ರಕೃತಿಮಾತೆಯ ತೊಡೆತೊಟ್ಟಿಲ ಹಸುಗೂಸವನು.

ಆಟಪಾಟಗಳಾಗಲೀ ಅಲ್ಪಕಾರ್ಯಮಹತ್ಕಾರ್ಯಗಳಾಗಲೀ, ಯಾರು ಯಾವ ಕೆಲಸವನ್ನೇ ಮಾಡಲೀ, ದಕ್ಷತೆಯಿಂದ ಅಚ್ಚುಕಟ್ಟಾಗಿ ಮಾಡ ಬೇಕೆಂಬುದೇ ಜವಹರನ ಅಪೇಕ್ಷೆ. ಅವನೊಬ್ಬ ಕಠಿಣ ಶಿಕ್ಷಕ. ೧೯೩೧ ನೆಯ ಇಸವಿಯಲ್ಲಿ ಸುಮಾರು ಆರು ತಿಂಗಳಕಾಲ ಆತನ ಕಾರ್ಯದರ್ಶಿ ಯಾಗಿದ್ದೆನು. ಆ ಕೆಲಸವೇನೋ ಹಿತವಾಗಿತ್ತು. ಆದರೆ ಎಲ್ಲಿ ತಪ್ಪು ತಲೆಹಾಕಿ ಅವನ ಕೋಪಕ್ಕೆ ತುತ್ತಾಗುತ್ತೇನೆಯೋ ಎಂಬ ನಿರಂತರ ಭೀಕರತೆಯ ಪೆಡಂಭೂತ ನನ್ನ ಬೆನ್ನುಹತ್ತಿ ಬರುತ್ತಿತ್ತು. ಅದೃಷ್ಟವ ಶಾತ್ ಆ ಪರೀಕ್ಷೆಯಲ್ಲಿ ಪಾರಾದೆನು. ಈ ತೇರ್ಗಡೆಗೆ ನನ್ನ ದಕ್ಷತೆ

ಕಾರಣವೋ ಅಥವಾ ವಿಧಿಯ ಮಾಟಕಾರಣವೋ ನಾನು ಹೇಳಲಾರೆನು. ಜವಹರನ ದೃಷ್ಟಿಯಲ್ಲಿ ಔದಾಸೀನ್ಯ ಆಲಸ್ಯ ಅಸಮರ್ಥತೆಗಳು ಅಕ್ಷಮ್ಯ ಅಪರಾಧಗಳು. ಒಮ್ಮೆ ಸ್ವಿಟ್ಜರ್ಲೆಂಡಿನಲ್ಲಿದ್ದಾಗ ನನಗೆ ಹಿಮ ಕ್ರೀಡೆಯನ್ನು ಕಲಿಸಲೊಪ್ಪಿಕೊಂಡನು. ಪ್ರಥಮ ಪಾಠವನ್ನಾರಂಭಿಸಲು ಆರಿಸಿಕೊಂಡದಿನ ಅನುಕೂಲವಾಗಿರಲಿಲ್ಲ. ಒಂದೆರಡು ದಿನಗಳಿಂದ ಮಂಜು ಬಿದ್ದಿರಲಿಲ್ಲ. ಹಿಂದೆ ಬಿದ್ದಿದ್ದ ಮಂಜು ಗಟ್ಟಿಯಾಗಿ ಜಾರುವ ಮಂಜುಗಡ್ಡೆಯಾಗಿತ್ತು. ನಾನು ನಿಂತುಕೊಂಡಾಗಲೆಲ್ಲಾ ಹಿಂದಿನಿಂದ ನೂಕಿದಂತೆ ಮುಗ್ಗರಿಸುತ್ತಿದ್ದೆನು. ಸಮತೂಕವನ್ನು ನೆಲೆಗೊಳಿಸಲು ಕಷ್ಟವಾಗುತ್ತಿತ್ತು. ಜವಹರನಂತು ಕಳವಳಗೊಳ್ಳುತ್ತಿದ್ದನು. ನಾನು ಅಂಜಿಕೆಯಿಂದ ಕಳವಳಕ್ಕೀಡಾದೆನೆಂದು ಅವನು ಭಾವಿಸಿದನು. ಪ್ರಾಣದ ಮೇಲಣ ಆಸೆಯನ್ನು ಬಿಟ್ಟು ನಾನು ಒಂದೆರಡಡಿ ಮುಂದಿಡಲು ಪ್ರಯತ್ನಿಸಿದೆನು. ಪ್ರತಿಸಾರಿಯೂ ನಾನು ಕೆಳಗೆ ಬೀಳುತ್ತಿದ್ದೆನು. ನನ್ನ ಕಡೆ ನೋಡುತ್ತಿದ್ದ ಜವಹರನು, ಕೋಟಿವರ್ಷಗಳಾದರೂ ಅದನ್ನು ನಾನು ಕಲಿಯಲಾರೆನೆಂದು ಭವಿಷ್ಯನುಡಿದನು. ತುಂಬಾ ನೊಂದವಳಾಗಿ, ದೈನ್ಯದಿಂದ ಕುಗ್ಗಿದವಳಾಗಿ, ಅದನ್ನು ಕಲಿಸಿಕೊಡುವಂತೆ ಸ್ವಿಸ್ ಗೆಳೆಯನೊಬ್ಬನನ್ನು ಬೇಡಿಕೊಂಡೆನು. ಮೂರು ದಿನಗಳೊಳಗಾಗಿ ನಾನು ಹಿಮಕ್ರೀಡೆಯನ್ನು ಕಲಿತುಕೊಂಡೆನು. ಅಣ್ಣನ ಭವಿಷ್ಯವಾಣಿ ನಿಜವಾಗಲಿಲ್ಲ.

ಖಾಯಿಲೆಯ ಕೋಣೆಯಲ್ಲಿ ಜವಹರನು ಆದರ್ಶವಾದಿ. ವಿಷಮ ಸನ್ನಿವೇಶಗಳು ಪ್ರಾಪ್ತವಾದಾಗ ಆತನ ತಾಳ್ಮೆ ಗ್ರಹಣಶಕ್ತಿಗಳು ಅಪರಿಮಿತವಾಗಿರುತ್ತವೆ. ಸಮಯ ಸಂದರ್ಭಗಳಿಗೆ ತಕ್ಕಂತೆ ಹೊಂದಿಕೊಳ್ಳುವುದು, ತನ್ನ ಸುತ್ತಮುತ್ತಣ ಸಣ್ಣ ಪುಟ್ಟ ವಸ್ತುಗಳಲ್ಲಿಯೂ ಸುಖ ಸೌಂದರ್ಯಗಳನ್ನು ಕಾಣುವುದೇ ಆತನ ಹಿರಿಮೆ, ಅದೇ ಆತನ ಮಹಿಮೆ. ಒಂದು ಸಾರಿ ಡೆಹ್ರಾಡೂನ್ ಸೆರೆಮನೆಯಿಂದ ಈರೀತಿ ಕಾಗದ ಬರೆದನು : "ಬೇಸಗೆಯ ಬಿರುಬಿಸಿಲಿಗೆ ಮಂಜು ಕರಗಿ ನೀರಾಗುತ್ತಿದೆ. ಪರ್ವತಶಿಖಾಗ್ರದ ಹಿರಿಮಂಜು ಮಾತ್ರ ಹೆಪ್ಪುಗಟ್ಟಿದೆ. ಮಳೆಸುರಿಸಿದ ಮೋಡಗಳು ಒಂದರಮೇಲೊಂದುರುಳಿ ಸಾಗುತ್ತಿವೆ.

ಉತ್ತರ ಭರತಖಂಡದಲ್ಲಿ ಆಗತಾನೇ ಮಳೆನಿಂತು ಗಂಭೀರ ನೀಲಾಕಾಶದ ಸೊಬಗು ಸೌಂದರ್ಯಗಳು ಚಿತ್ತಾಕರ್ಷವಾಗಿರುತ್ತವೆ; ಮುಗ್ಧಮೋಹಕವಾಗಿರುತ್ತವೆ. ಬೊಂಬಾಯಿಯಲ್ಲಿ ಇಂತಹ ದೃಶ್ಯಗಳನ್ನು ನೋಡಿದ್ದೀಯ? ಪ್ರಾಯಶಃ ನೀನು ನೋಡಿದ್ದರೂ ಉಳಿದವರು ನೋಡಿರಲಾರರು. ಇಂದಿನ ಸಂಜೆಯಂತು ಅಸಾಧಾರಣ ಸೌಂದರ್ಯದಿಂದ ಮೆರೆಯುತ್ತಿತ್ತು. ಮೋಡಗಳು ಕ್ರಿಡಾಸಕ್ತವಾಗಿದ್ದುವು. ಅವು ಸಂಜೆ ನೇಸರಿನ ಮೃದುಕಿರಣಗಳನ್ನು ಸೆರೆಹಿಡಿದು ನಿರ್ದಯ ನಿರ್ದಾಕ್ಷಿಣ್ಯ ಮನೋಭಾವದಿಂದ ಅವುಗಳನ್ನು ತೂದೆಸೆಯುವಂತೆ ಕಂಡುಬಂದವು. ಅಸಾಧಾರಣ ವೈವಿಧ್ಯಮಯವರ್ಣಗಳ ಮೆರವಣಿಗೆಯೇ ಹೊರಟಿತ್ತು. ವರ್ಣಖಚಿತ ಚಿತ್ರರಂಜಕ ಚಿತ್ರಗಳು ಇಣಿಕಿ ಮರೆಯಾದುವು. ಅದು ಒಂದು ವರ್ಣಗಳ ವಿಕ್ಷೋಭೆಯೇ ಆಗಿತ್ತು. ನಗ್ನ ಗಿರಿಶಿಖರಗಳು ಕಾದ ಕಬ್ಬಿಣದಂತೆ ಪ್ರಜ್ವಲಿಸಿದುವು. ಅವು ಖೈಬರ್ ಕಣಿವೆಯ ಪರ್ವತಗಳ ನೆನಪನ್ನು ತರುತ್ತಿದ್ದವು. ಆಗಾಗ್ಗೆ ಮಂಜು ಸುರಿದು ತೇಪೆ ತೇಪೆಗಳಾಗಿ ಪರಿಣಮಿಸಿ, ಬೆಂಗದಿರನನ್ನು ಮಾರ್ಪೊಳಿದು ಮಾಯವಾಗುತ್ತಿತ್ತು. ತುಸ ಹೊತ್ತಿನಲ್ಲಿಯೇ ತುಂಬುದಿಂಗಳು ಮೂಡಿ ಸೌಂದರ್ಯ ಪ್ರದರ್ಶನದ ವೈವಿಧ್ಯತೆಯನ್ನು ವೃದ್ಧಿಗೊಳಿಸಿತು."

ಜವಹರನ ಮುಖ ಯಾವಾಗಲೂ ಮುಗುಳುನಗೆಯನ್ನು ಚೆಲ್ಲುತ್ತಿದ್ದರೂ, ಆತನ ಹೃದಯದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವ ವ್ಯಾಕುಲತೆ ಮೂಕಸಂಕಟಗಳು ಅವರ್ಣನೀಯವಾದುವು. ಪ್ರೇಯಸಿಯ ಪ್ರೇಮಸೌರಭದ ಸೌಭಾಗ್ಯಕ್ಕಾಗಿ, ಆಕೆಯ ಸಹವಾಸ ಸಾನ್ನಿಧ್ಯಗಳ ಮಾಧುರ್ಯಕ್ಕಾಗಿ ಆತನ ಮನಸ್ಸು ಹಾತೊರೆಯುತ್ತಿದ್ದಾಗ ಆಕೆಯ ದುರಂತಮರಣ ಸಂಭವಿಸಿ ದಾರುಣವಾದ ದುಃಖಕ್ಕೊಳಗಾದನು. ಮಿತಿ ಮೀರಿದ ಅಳಲನ್ನು ಒಳಗೊಳಗೆ ನುಂಗಿದನು. ಕೇವಲ ಕೆಲವು ಕ್ಷಣಗಳು ಮಾತ್ರ ಜವಹರನು ಶೋಕಸಾಗರದಲ್ಲಿ ಮುಳುಗಿ ತನ್ನನ್ನು ತಾನೇ ಮರೆತನು. ಆದರೆ ಪ್ರಜ್ಞೆ ಮರಳಿ ಶಾಂತಿ ಸಮಾಧಾನಗಳು ಪುನಃ ನೆಲೆಗೊಳ್ಳಲು ಬಹಳ ಹೊತ್ತು ಹಿಡಿಯಲಿಲ್ಲ.

ಚಿಕ್ಕಂದಿನಲ್ಲಿಯೇ ಜವಹರನು ರಾಜಕೀಯ ಕ್ಷೇತ್ರವನ್ನು ಪ್ರವೇ

ಶಿಸಲು ಪ್ರಾರಂಭಿಸಿದನು. ಅದು ತನ್ನ ಬಾಳಿನ ಗುರಿಯಾಗುತ್ತದೆ, ತನ್ನ ಜೀವಮಾನವನ್ನೆಲ್ಲ ಆಕ್ರಮಿಸುತ್ತದೆ, ಎಂದು ಆಗ ಆತನಿಗೆ ವೇದ್ಯವಾಗಿರಲಿಲ್ಲ. ಕೊನೆಕೊನೆಗೆ ರಾಜಕೀಯ ಘಟನಾವಳಿಗಳ ಹುಚ್ಚು ಹೊನಲಿನಲ್ಲಿ ಕೊಚ್ಚಿಹೋದನು. ಜವಹರನು ಮತ್ತೊಮ್ಮೆ ತನ್ನ ಇಡೀ ಬದುಕನ್ನು ಬಾಳುವಂತಾದರೆ, ಹಳೆಯ ಜಾಡನ್ನು ಬಿಟ್ಟು ಅಲುಗಲಾರನು. ಆತನ ಉದ್ದೇಶ ಸಾಧನರೀತಿಯಲ್ಲಿ ಅಲ್ಪಸ್ವಲ್ಪ ಮಾರ್ಪಾಡುಗಳು ಗೋಚರಿಸಬಹುದು, ಅಷ್ಟೇ. ಆತನು ಸ್ವಪ್ನ ಪ್ರಪಂಚದಲ್ಲಿ ತೇಲಾಡುವ ಭಾವಜೀವಿಯೆಂದೂ, ತನ್ನ ಸುತ್ತಮುತ್ತಣ ಸಮಸ್ಯೆಗಳನ್ನು ಪರಿಹರಿಸದೆ ಬೃಹದ್ವಿಷಯಗಳ ಮಹದಾಲೋಚನೆಯ ಕಲ್ಪನಾಪ್ರಪಂಚದಲ್ಲಿ ವಿಹರಿಸುತ್ತಿರುವ ಸ್ವಪ್ನಾದರ್ಶವ್ಯಕ್ತಿಯೆಂದೂ ಹಲವರು ಆತನನ್ನು ದೂರುವುದುಂಟು. ಈ ದೂರುಗಳು ಸಾಧಾರಣವಾಗಿರಬಹುದು ಇಲ್ಲವೇ ನಿರಾಧಾರವಾಗಿರಬಹುದು ; ಆದರೆ ಒಂದು ವಿಷಯ ಮಾತ್ರ ನಿಸ್ಸಂದಿಗ್ಧವಾದುದು ; ಜವಹರನು ಮಹಿಮಾವಂತನಾದ ಸ್ವಪ್ನಜೀವಿ. ಭವಿಷ್ಯತ್ ಪ್ರಪಂಚದ ನವ್ಯಭವ್ಯ ಸ್ವರ್ಗೋಪಮದೃಶ್ಯಗಳ ಸುವರ್ಣ ಸ್ವಪ್ನವೇದಿಕೆಯ ಮೇಲೆ ವಿಹರಿಸುತ್ತಿರುತ್ತಾನೆ. ಆತನಿಗೆ ಕೈಗೂಡದಿರುವ ಕನಸುಗಳು ಇತರರಿಗೆ ನನಸಾಗಬಹುದು. ಆದರೆ ಆತನ ಸ್ವಪ್ನಗಳು ಸಂಕುಚಿತ ಮನೋಭಾವದ ವೈಯಕ್ತಿಕ ದೃಷ್ಟಿಯಿಂದ ಪ್ರೇರಿತವಾದುವಲ್ಲ. ಭರತಮಾತೆಯ ಭವ್ಯಭವಿಷ್ಯತ್ತನ್ನು ಸುತ್ತುವರಿದು ಹೆಣೆದ ಸ್ವಪ್ನ ಜಾಲವದು. ಭಾವೀಭರತಮಾತೆಯ ಪ್ರೋಜ್ಜ್ವಲಯಶೋಮಹಿಮೆಗಳ ವಿಷಯದಲ್ಲಿ ಅವನಿಗೆ ಲವಲೇಶವೂ ಸಂದೇಹವಿಲ್ಲ. ಆಕೆಯ ಪದತಲದಲ್ಲಿ ತನ್ನ ಸರ್ವಸ್ವವನ್ನು ಸಂತೋಷದಿಂದ ಧಾರೆಯೆರೆಯಲು ಸದಾ ಸಿದ್ಧನಾಗಿದ್ದಾನೆ.

ಬಾಲ್ಯದಿನಗಳಲಲೆದ ತಾಣದಿ ಗಾಳಿಯಂದದಿ ಸುತ್ತಿದೆ ;
ಹಳೆಯ ಸಲುಗೆಯ ನೆಂಟರಿಷ್ಟರನೆಲ್ಲ ಹುಡುಕಿದೆನೆಲ್ಲಿಯು;
ಕಾಡಮೇಡನು ಸುತ್ತಿ ಸೊರಹಿದೆ ತಿರೆಯು ಮರುಳಿನ
ಕಾಡಲ.

ಸಾವನಪ್ಪಿದರೆಂತೊ ಕೆಲವರು ತೊರೆದರೆನ್ನನು ಕೆಲವರು ;
ಮನೆಯನುಳಿದರು ನಾಡತೊರೆದರು ಎಲ್ಲ ಸಾಗಿದರೆಲ್ಲಿಗೊ;
ಎಲ್ಲ ಎಲ್ಲಾ ಹಳೆಯ ಸಲುಗೆಯ ಗೆಳೆಯರೆಲ್ಲಾ ಸರಿದರು.

—ಚಾರ್ಲ್ಸ್ ಲ್ಯಾಂಬ್.

ಇಲ್ಲಿಗೆ ಒಂದು ವರ್ಷಕ್ಕೆ ಹಿಂದೆ ನನ್ನ ಚಿಕ್ಕಮಕ್ಕಳು ಹರ್ಷ ಮತ್ತು ಅಜಿತರೊಡಗೂಡಿ ನಾನು ಅಲಹಾಬಾದಿಗೆ ಹೊರಟಿದ್ದೆನು. ರಾಜಾರವರು ನನ್ನೊಡನೆ ಬರಲು ಆಗಲಿಲ್ಲವಾಗಿ, ಸ್ವಲ್ಪಹಿಂದಾಗಿಬರುವವರಾಗಿದ್ದರು. ಇಂದಿರೆಯ ಮದುವೆಗಾಗಿ ನಾವು ಹೊರಟಿದ್ದೆವು. ಆ ದಾರಿ ನನಗೆ ಹೊಸದಾಗಿರಲಿಲ್ಲ. ದಾರಿಯುದ್ದಕ್ಕೂ ಸಿಕ್ಕುವ ದೃಶ್ಯಗಳೆಲ್ಲ ನನ್ನ ನೆನಪಿನಲ್ಲಿ ಅಚ್ಚಳಿಯದೆ ಇದ್ದುವು. ಕಳೆದ ಒಂಭತ್ತು, ಒಂಭತ್ತು ವರೆ ವರ್ಷಗಳಲ್ಲಿ ಅದೇ ಮಾರ್ಗದಲ್ಲಿ ಹಲವು ಸಾರಿ ಪ್ರಯಾಣಮಾಡಿದ್ದೆನು. ಊರು ತಲಪಿದಕೂಡಲೇ ಎಂತಹ ಸುದ್ದಿ ನನಗೋಸ್ಕರ ಕಾದಿರುತ್ತದೆಯೋ ಎಂಬ ಚಿತ್ತಚಾಂಚಲ್ಯ ಪ್ರತಿಸಾರಿಯೂ ನನ್ನನ್ನು ಮುಸುರುತ್ತಿತ್ತು. ಯಾವಾಗಲೂ ಅನಿರೀಕ್ಷಿತವೂ ಅಹಿತವೂ ಆದ ಘಟನಾವಳಿಗಳೇ ನನಗಾಗಿ ಕಾದಿರುತ್ತಿದ್ದುವು. ತಾಯಿಯರು ರೋಗ ರುಜಿನೆಗಳಿಗೆ ಪಕ್ಕಾಗಿ ಹಾಸಿಗೆ ಹಿಡಿದಿರುತ್ತಿದ್ದರು, ಇಲ್ಲವೆ ಜವಹರನು ಬಂಧಿತನಾಗಿ ಸೆರೆಮನೆಯಲ್ಲಿರುತ್ತಿದ್ದನು. ಆದರೆ ಈ ಸಾರಿಯಾದರೋ ನನ್ನ ಪ್ರಯಾಣ ಸಂಭ್ರಮಸಂತೋಷಗಳಿಂದ ಕೂಡಿತ್ತು. ನನ್ನೊಲುಮೆಯ ಸೋದರ ಸೊಸೆಯ ವಿವಾಹ ಮಹೋತ್ಸವದಲ್ಲಿ ಅಲೆದಾಡಲು ಹೋಗುತ್ತಿದ್ದೆನು.

ರಾತ್ರಿಯ ಅಪರವೇಳೆಯಲ್ಲಿ ನಾವು ಅಲಹಾಬಾದ್ ನಿಲ್ದಾಣವನ್ನು ತಲುಪಿದೆವು. ನಮಗಾಗಿ ಕಾದಿದ್ದ ಕಾರಿನಲ್ಲಿ ಕುಳಿತು ಹೊರಟೆವು.

ಹದಿನೈದು ನಿಮಿಷಗಳ ನಿಟ್ಟೋಟದನಂತರ ದೂರದಲ್ಲಿ ಆನಂದಭವನ ಕಾಣಿಸಿತು. ಎಂದಿನಂತೆ ತವರ್ಮನೆಯ ಮೇಲಣ ಮಮತೆಯಿಂದ ಪುಳಕಿತಳಾದೆನು. ನಟ್ಟಿರುಳು ಮೀರಿತ್ತು. ರಂಗುರಂಗಿನ ಸೊಡರ್ಮಾಲೆಗಳಿಂದ ಆನಂದಭವನ ಅಲಂಕೃತವಾಗಿತ್ತು. ಎಲ್ಲಿ ನೋಡಿದರೂ ಕಾರ್ಯೋತ್ಸಾಹದ ಗೊಂದಲವೇ. ಜನರ ಓಡಾಟ, ಸೇವಕರ ನೂಕನುಗ್ಗಾಟ ಮಿತಿಮೀರಿತ್ತು. ಪ್ರತಿಯೊಂದು ಕೋಣೆಯಿಂದಲೂ ಮಾತುಕತೆಗಳ ನಲಿವು ನಗುವಿನ ಧ್ವನಿ ಕೇಳಬರುತ್ತಿತ್ತು. ಬಹುಕಾಲದನಂತರ ಮತ್ತೊಮ್ಮೆ ಆನಂದ ಭವನ ಉತ್ಸವದ ಸಂಭ್ರಮದಲ್ಲಿ ಮಗ್ನವಾಗಿತ್ತು.

ಕಾರು ಮೆಲ್ಲಮೆಲ್ಲನೆ ಗಂಭೀರವಾದ ಹೆಬ್ಬಾಗಿಲ ಕಡೆಗೆ ತಿರುಗಿ ಕೈಸಾಲೆಯನ್ನೂ ತಲುಪಿತು. ಅದು ನಿಂತ ಕೂಡಲೇ ನನ್ನ ಮಕ್ಕಳನ್ನು ಮರೆತು ಅಣ್ಣನನ್ನು ಹುಡುಕಲು ಓಡಿದೆನು. ಒಂದೆರಡು ಹೆಜ್ಜೆಗಳು ಮುಂದುವರಿದಿದ್ದೆನೋ ಇಲ್ಲವೋ ಅವನು ಕೋಣೆಯಿಂದ ಓಡಿ ಬಂದು ನನ್ನನ್ನೂ ಮಕ್ಕಳನ್ನೂ ಸೆಳೆದಪ್ಪಿಕೊಂಡನು. ಪೂರ್ವ ಸುಪರಿಚಿತ ವಾತಾವರಣದಲ್ಲಿ ಜವಹರ, ಅಕ್ಕ ಮತ್ತು ಇತರರನ್ನು ಮತ್ತೊಮ್ಮೆ ನೋಡಿ ರೋಮಾಂಚನಗೊಂಡೆನು. ಆನಂದಭವನಕ್ಕೆ ಬಂದಾಗಲೆಲ್ಲ ನಾನು ಅನುಭವಿಸುತ್ತಿದ್ದ ಸುಖ ಕೇವಲ ಕ್ಷಣಿಕವಾದುದಾಗಿತ್ತು. ಹಿಂದಿನ ಅಕ್ಕರೆಯ ಮನೆ ಮತ್ತೆಲ್ಲಿ, ಪ್ರೀತಿಯ ನೆಂಟರಿಷ್ಟರೆಷ್ಟು ಮಂದಿ ಅಳಿದು ಹೋದರು, ಎಂತೆಂತಹ ಕ್ರಾಂತಿಕಾರಕವಾದ ಬದಲಾವಣೆಗಳು ಸಂಭವಿಸಿದುವು,—ಈ ನೆನಪುಗಳೆಲ್ಲ ಮುಡುಗಟ್ಟಿ ವ್ಯಾಕುಲತೆಯನ್ನುಂಟುಮಾಡುತ್ತಿದ್ದುವು. ಕಣ್ಣೀರು ಕರೆಗಟ್ಟಿ ನಿಂತಿದ್ದರೂ ಹೊರಚೆಲ್ಲುತ್ತಿರಲಿಲ್ಲ. ಆದರೆ ಇಂತಹ ಸುಸಂಭ್ರಮದ ಸಾನಂದ ಸಮಯದಲ್ಲಿ ದುಃಖದ ಚಿಹ್ನೆಯನ್ನೇ ಹೊರಪಡಿಸುವಂತಿರಲಿಲ್ಲ.

ಕಾಲಪುರುಷನ ಭೈರವನೃತ್ಯದಿಂದ ನಮ್ಮ ಮನೆಯಲ್ಲಿ ಅನೇಕ ಹಾನಿಗಳು ಸಂಭವಿಸಿದ್ದರೂ, ಆ ಒಂದು ದಿನ ಸುಖಶಾಂತಿಗಳಿಂದ ಕೂಡಿತ್ತು. ಮತ್ತೊಮ್ಮೆ ಭೂತಕಾಲದ ಗರ್ಭವನ್ನು ಹೊಕ್ಕು ಹಳೆಯ ಸವಿನೆನಪುಗಳನ್ನು ಮೆಲುಕು ಹಾಕುವುದೇ ಅತ್ಯಾನಂದ. ಅಣ್ಣನ ಬೆಚ್ಚ

ಯೊಲವನ್ನೂ, ಅಕ್ಕನ ಅಕ್ಕರೆಯನ್ನೂ ಮತ್ತೆ ಮತ್ತೆ ಸವಿಸವಿದು ಪುನಃ ಹದಿನೆಂಟು ವರ್ಷದ ಸ್ವೇಚ್ಛಾವಿಹಾರಿಣಿಯಾದ ಯುವತಿಯಾಗುವುದೆಂದರೆ ಪರಮಾನಂದ.

ಮದುವೆಯ ದಿನವೂ ಸಾರಿ ಬಂತು. ಜಗತ್ತಿಗೆ ಶಾಂತಿ ಚೈತನ್ಯ ಸೌಂದರ್ಯಗಳನ್ನೀಯುತ್ತ ಅರುಣರವಿ ಮೂಡಿದನು. ಮುಂಜಾನೆಯಿಂದಲೂ ಜನರು ವಿವಾಹ ಮಹೋತ್ಸವದ ಸಿದ್ಧತೆಗಳನ್ನು ಅಣಿಗೊಳಿಸುತ್ತಿದ್ದರು. ಅನೇಕ ದಾಯಾದಿಗಳೂ ಗೆಳತಿಯರೂ ವಧುವಿನ ಕೋಣೆಯಲ್ಲಿ ಗುಂಪುಕೂಡಿ, ಚಿಕ್ಕ ಹುಡುಗಿಯರಂತೆ ಆಕೆಯನ್ನು ಕೆಣಕಿ, ರೇಗಿಸಿ, ಕಾಡುತ್ತಿದ್ದರು. ಕೈಯ್ಯಿಂದಲೇ ನೂತು, ಕೈಮಗ್ಗದಲ್ಲಿಯೇ ನೇಯ್ದಿದ್ದ ಖಾದಿಯುಡುಪನ್ನು ಆಕೆಗೆ ತೊಡಿಸಿದರು. ಆಕೆಯ ತಂದೆಯೇ ಸೆರೆಮನೆಯಲ್ಲಿದ್ದಾಗ ತೆಗೆದ ನೂಲಿನಿಂದ ತಯಾರಿಸಿದ ಬಟ್ಟೆಗಳವು. ಸಂಪೂರ್ಣಶಾಂತಿಯನ್ನು ತಳೆದಿದ್ದಂತೆ ನಟಿಸುತ್ತಿದ್ದರೂ, ತುಸುನಾಚಿ, ತುಸು ಕಳವಳಗೊಂಡು, ಜನಸಂದಣಿಯ ನಡುವೆ ವಧು ಕುಳಿತಿದ್ದಳು. ಆ ಕೋಣೆಗೆ ಪ್ರವಹಿಸುತ್ತಿದ್ದ ಉಡುಗೊರೆಯ ವಾಹಿನಿ ಆಕೆಯನ್ನು ಸುತ್ತುಗಟ್ಟಿತ್ತು. ಮೊದಲೇ ಆಕೆ ನೋಡಲು ಚೆನ್ನು; ಆ ವಿಶೇಷಸಂದರ್ಭದಲ್ಲಿ ಆಕೆ ಮತ್ತೂ ಚೆನ್ನಾಗಿ ಕಂಡಳು. ಸೂಕ್ಷ್ಮಗಾತ್ರೆಯೂ, ಸ್ವರ್ಗೀಯ ಮಂದಸ್ಮಿತವದನೆಯೂ ಆದ ಇಂದಿರೆ ತನ್ನ ಅಕ್ಕಪಕ್ಕದವರೊಡನೆ ಪಿಸುಗುಟ್ಟುತ್ತಿದ್ದಳು. ಒಂದೊಂದು ಸಾರಿ ಆಕೆಯ ವಿಶಾಲ ನೀಲಾಕ್ಷಿಗಳು ಕೆಂಗೆಟ್ಟು ದೂರದ ದುಃಖವನ್ನು ಸೂಚಿಸುತ್ತಿದ್ದುವು. ಅಂತಹ ಸುಮಹೋತ್ಸವಸುದಿನದ ಸಂತೋಷ ಸೂರ್ಯನನ್ನು ಎಂತಹ ಕಾರ್ಮೋಡ ಮುಸುಕಿರಬಹುದು? ಎಂದೆಂದಿಗೂ ಪರಿಪೂರ್ಣಗೊಳ್ಳದ ಶೂನ್ಯತೆಯನ್ನು ಕಲ್ಪಿಸಿ ಬಯಲಾದ ಮಾತೃವಿಯೋಗಶೋಕವೋ? ಯಾವ ತಂದೆಯ ಬಾಳಿಗೆ ಚೈತನ್ಯಸ್ವರೂಪಳಾಗಿದ್ದಳೋ ಅಂತಹ ತಂದೆಯಿಂದ ಬೇರಾಗುವ ದುಃಖತಾಪವೋ? ತಾಯಿಯಳಿದ ಮೇಲೆ ಅವಳು ತಂದೆಯ ಬಾಳಿನ ಸಂಗಾತಿಯಾಗಿದ್ದಳು. ಈಗ ತಾನೂ ಅವನನ್ನು ಒಂಟಿತನಕ್ಕೆ ನೂಕಿ ದೂರ ಸರಿಯಬೇಕಾದ ಸಂದರ್ಭವೊದಗಿತ್ತು. ಪೂರ್ವಪರಿಚಿತಸಂಬಂಧವಿಚ್ಛೇದನವೂ, ನವೀನ

ಜೀವನಾರಂಭವೂ ನವವಧುವಿನ ಮುಗ್ಧನೇತ್ರಗಳಲ್ಲಿ ನಶ್ವರದುಃಖ ವನ್ನು ಉಕ್ಕಿಸಿರಬಹುದು. ಭವಿಷ್ಯತ್ತಿನ ಗರ್ಭಾಂತರಾಳದಲ್ಲಿ ಅವಳಿ ಗಾಗಿ ಏನು ಹುದುಗಿದೆಯೋ ಯಾರು ಮುಂಗಾಣಬಲ್ಲರು?— ಸುಖವೋ, ದುಃಖವೋ ಸಂತೃಪ್ತಿಯೋ, ನಿರಾಶೆಯೋ? ನೀಲಾಕ್ಷಿಗಳು ನೀಲತಮವಾದುವು. ಅದೂ ಕ್ಷಣಿಕ ಪರಿವರ್ತನೆ. ಮತ್ತೊಮ್ಮೆ ಆಕೆಯ ಕಣ್ಣುಗಳು ಸ್ವಾಭಾವಿಕತೆಯನ್ನು ತಾಳಿ, ಅಳತೆಗೆ ನಿಲುಕ ದಂತಾದುವು.

ಆ ಶುಭ ಘಳಿಗೆಯೂ ಕೂಡಿಬಂತು. ತಂದೆಯ ವೈಗಾವಲಿನಲ್ಲಿ ಇಂದಿರೆ ವಿವಾಹಮಂಟಪವನ್ನು ಪ್ರವೇಶಿಸಿದಳು. ಅಲ್ಲಿ ಅವಳಿ ಗಾಗಿ ವರ ಕಾದಿದ್ದನು. ಆಚಾರ ನಿಯಮಗಳು ಅನವಶ್ಯಕವಾದ ಆಡಂಬರಗಳಿಲ್ಲದೆ ಸರಳವಾಗಿಯೂ ಮೋಟಕಾಗಿಯೂ ಇದ್ದುವು. ವಧೂವರರು ಒಬ್ಬರ ಮಗ್ಗುಲಲ್ಲೊಬ್ಬರು ಕುಳಿತಿದ್ದರು. ಎದುರಿಗೆ ಹೆಣ್ಣಿನ ತಂದೆ ಕುಳಿತನು. ಅವನ ಅರುಗಿನಲ್ಲಿಯೇ ತನ್ನ ಹೆಂಡತಿ ಗೋಸ್ಕರ ಪೀಠವೊಂದು ಅಣಿಯಾಗಿತ್ತು. ಅಂದು ಆತನ ಮನಸ್ಸಿನಲ್ಲೆ ತನ್ನ ಹೆಂಡತಿಯೇ! ವಾಸ್ತವಿಕವಾಗಿ ಆಕೆ ಆತನ ಅರ್ಧಾಂಗಿನಿಯಾಗಿ ದ್ದಳು. ದುರಂತ ಸೂಚಕ ಶೂನ್ಯಾಸನವನ್ನು ನೋಡಿದಾಗ ಆಕೆಯ ನೆನಪು ಕೆರಳಿ, ನನಗೆ ಉಸಿರು ಕಟ್ಟಿದಂತಾಗುತ್ತಿತ್ತು. ಆಕೆ ಬದುಕಿ ದ್ದರೆ ಎಷ್ಟು ಆನಂದ ಪಡುತ್ತಿದ್ದಳು! ಯೌವನವತಿಯೂ, ಮಂದಸ್ಮಿ ತವದನೆಯೂ ಮತ್ತು ಆನಂದ ಸಂತೋಷಗಳಿಂದ ಪ್ರಜ್ಜ್ವಲಿಸುತ್ತಿದ್ದ ನೇತ್ರಗಳುಳ್ಳವಳೂ ಆದ ಕಮಲಳ ಚಿತ್ರ ನನ್ನ ಮುಂದೆ ನಿಂತಿತು. ಆಕೆ ವಧುವಿಗಿಂತ ಸ್ವಲ್ಪ ಹೆಚ್ಚು ವಯಸ್ಸಾದವಳಂತೆ ಕಾಣುತ್ತಿದ್ದಳು. ಆದರೆ ಆ "ಬಹುದು" ಪ್ರಪಂಚದ ದುಃಖಮಿಶ್ರವಾದ ಯೋಚನೆ ಗಳನ್ನು ಬದಿಗಿರಿಸಲು ಯತ್ನಿಸಿದೆನು. ಅವುಗಳನ್ನು ತಡೆಯದಿದ್ದಲ್ಲಿ ಅವು ಒಂದರ ಮೇಲೊಂದು ನುಗ್ಗಿ ಗುಂಪುಕೂಡಿ, ಸಂಚು ಹೂಡಿ ಅಂದಿನ ಆನಂದಕ್ಕೆ ಸಗಣಿ ಎರಚುತ್ತಿದ್ದುವು.

ಕೆಲವು ದಿನಗಳ ತನಕ ವಿವಾಹ ಸಂಬಂಧವಾದ ಔತಣಕೂಟ ಗಳು ನಡೆಯುತ್ತಲೇ ಇದ್ದುವು. ಹಳೆಯ ಮನೆ ದೇದೀಪಮಾನ್ಯ

ವಾಗಿತ್ತು. ಅನಂತರ ಅತಿಥಿಗಳು ಒಬ್ಬೊಬ್ಬರಾಗಿ ಅಗಲಿದರು. ಕೆಲವು ವಾರಗಳನಂತರ ನಾನೂ ಬೊಂಬಾಯಿಗೆ ಹಿಂದಿರುಗಿದೆನು.

ಒಂದು ಸಂವತ್ಸರ ಉರುಳಿತು. ಮತ್ತೊಮ್ಮೆ ಅಲಹಾಬಾದಿನ ದಾರಿ ಹಿಡಿದೆನು. ಈ ಸಾರಿ ಅಕ್ಕ ಸ್ವರೂಪಳೊಡನೆ ಒಂದು ವಾರ ಕಾಲ ಕಳೆಯಬೇಕೆಂದು ಯೋಚಿಸಿಕೊಂಡಿದ್ದೆನು. ಒಂಭತ್ತು ತಿಂಗಳ ಕಾರಾಗೃಹವಾಸವನ್ನು ಅನುಭವಿಸಿ ಹದಿನೈದು ದಿನಗಳು ಮಾತ್ರ ಜಾಮೀನಿನ ಮೇಲೆ ಬಿಡುಗಡೆ ಹೊಂದಿ ಬಂದಿದ್ದಳು. ಮಧ್ಯ ರಾತ್ರಿಯ ಸಮಯದಲ್ಲಿ ಹಳೆಯ ಪರಿಚಯದ ನಿಲ್ದಾಣವನ್ನೂ ತಲುಪಿ ದೆನು. ಆ ನಿಲ್ದಾಣ ಹಿಂದಿನ ವರ್ಷಕ್ಕಿಂತ ಹೆಚ್ಚು ಜೀರ್ಣವಾಗಿತ್ತು. ಓರ್ವಗೆಳತಿಯೂ, ಸ್ವರೂಪಳ ಕಿರಿಯ ಮಗಳೂ ನನ್ನನ್ನು ಸ್ವಾಗತಿ ಸಲು ಬಂದಿದ್ದರು. ಅನಂತರ ಮೂವರೂ ಮನೆಯ ಕಡೆ ಹೊರೆಟೆವು; ಆದರೆ ಕಾರಿನಲ್ಲಲ್ಲ—ಕಾರುಗಳು ಗತವೈಭವದ ಮಾತಾಗಿತ್ತು—ಹಳ್ಳ ಕೊಳ್ಳಗಳ ದಾರಿಯಲ್ಲಿಯೂ ತೆವಳುತ್ತಿದ್ದ ಹಿಂದಿನ ಕಾಲದ ಗಾಡಿಯಲ್ಲಿ.

ಕಟ್ಟಕಡೆಗೆ ಆನಂದ ಭವನದ ಹೆಬ್ಬಾಗಿಲಿನ ಬಳಿ ತಿರುಗಿದೆವು. ಅಂದು ನನ್ನನ್ನು ಸ್ವಾಗತಿಸಿದ ದೃಶ್ಯ ಹಿಂದಿನ ವರ್ಷದ ದೃಶ್ಯಕ್ಕಿಂತ ತೀರ ಭಿನ್ನವಾಗಿತ್ತು. ತೇಜಃಪುಂಜವಾದ ಜ್ಯೋತಿರ್ಮಾಲೆಗಳಿಲ್ಲ; ಅಲ್ಲಿ ಇಲ್ಲಿ ಎಲ್ಲೆಲ್ಲಿಯೂ ಓಡಾಡುತ್ತಿದ್ದ ಸೇವಕ ವೃಂದವಿಲ್ಲ. ಮನೆ ಯಲ್ಲಿ ಕತ್ತಲು ತುಂಬಿತ್ತು. ಕೈಸಾಲೆಯಲ್ಲೊಂದು ಹಣತೆ ಮಸುಕು ಮಸಕಾಗಿ ಮಿನುಗುತ್ತಿದ್ದುವು. ನಮ್ಮ ಮನೆಯಲ್ಲಿ ಭೀಕರ ನಿರ್ಜ ನತೆಯೂ ಸ್ಮಶಾನನೀರವತೆಯೂ ತಾಂಡವವಾಡುತ್ತಿದ್ದುವು. ಗೊತ್ತು ಗುರಿಯಿಲ್ಲದ ಕಡೆ ಹೋಗುತ್ತಿದ್ದೆನೆಂಬ ವಿಲಕ್ಷಣವಾದ ಭಯ ತಲೆ ದೋರಿತು. ಅಲ್ಲಿಯ ಮೂಲೆ ಮೊಡಕುಗಳಲ್ಲಿ ಏನೇನು ಅಡಗಿದೆಯೋ ಎಂಬ ಅಂಜಿಕೆ ಬೇರೆ. ಕುಗ್ಗಿದ ಎದೆಯುಳ್ಳವಳಾಗಿ, ಗಾಡಿಯಿಂದಿ ಳಿದು ಸ್ವರೂಪಳನ್ನು ಹುಡುಕಲು ಹೋದೆನು. ನಾನು ಕೋಣೆಯನ್ನು ಪ್ರವೇಶಿಸುತ್ತಿರುವಾಗಲೇ ನನ್ನನ್ನು ಅಪ್ಪಿಕೊಳ್ಳಲು ಅವಳು ಎದ್ದು ಬಂದಳು. ಆಕೆಯ ಶಾರೀರಕ ಬದಲಾವಣೆಗಳನ್ನು ನೋಡಿ ನಾನು ಗಾಬರಿಗೊಂಡೆನು. ನನ್ನ ವ್ಯಥೆ ಅವಳಿಗೆ ಗೋಚರಿಸಬಾರದೆಂದು

ಅವಳನ್ನು ನಾನು ಅಪ್ಪಿಕೊಂಡೆನು. ಒಂದು ವರ್ಷದ ಹಿಂದೆ ಆಕೆ ಇಂದಿಗಿಂತ ಹತ್ತು ವರ್ಷ ಚಿಕ್ಕವಳಾಗಿ ಕಾಣುತ್ತಿದ್ದಳು. ಮತ್ತೊಮ್ಮೆ ಕಾರಾಗೃಹವಾಸ ನನ್ನ ಪ್ರಾಣಾಧಿಕೆಯೊಬ್ಬಳನ್ನು ದೊಡ್ಡ ಹಾವಳಿಗೆ ಗುರಿಮಾಡಿ, ಕೇವಲ ಕೆಲವು ತಿಂಗಳುಗಳಲ್ಲಿಯೇ ಆಕೆಯ ಮುಖದ ಮೇಲೆ ತನ್ನ ಪ್ರಭಾವದ ಮುದ್ರೆಯನ್ನು ಸ್ಪಷ್ಟವಾಗಿ ಒತ್ತಿತ್ತು.

ವಾರಾಂತ್ಯದಲ್ಲಿ ನಾನು ನನ್ನ ಮನೆಗೆ, ನನ್ನ ಮಕ್ಕಳ ಸನ್ನಿಧಿಗೆ ಹಿಂದಿರುಗಿದೆನು. ಪ್ರೇಮವಸ್ತುವಿಲ್ಲದ ಮನೆ ಸ್ಮಶಾನ ಸದೃಶವಾದುದು. ಸ್ವರೂಪಳು ಅನಿರ್ದಿಷ್ಟಾವಧಿಯ ತನಕ ಸೆರೆಮನೆಯಲ್ಲಿಯೇ ಇರಬೇಕಾಗಿತ್ತು. ಆಶೆ ಸಂತೋಷಗಳು ಕಣ್ಮರೆಯಾಗಿ ಕಾಠಿಣ್ಯನಿರಾಶೆಗಳ ನೆಲೆವೀಡಾಗಿದ್ದ ಪ್ರಪಂಚದಲ್ಲಿ ಆಕೆಯ ಮೂವರು ಹೆಣ್ಣು ಮಕ್ಕಳು ತಮ್ಮ ಬಾಳ ಹೆದ್ದಾರಿಯನ್ನು ರೂಪಿಸಿಕೊಳ್ಳಬೇಕಾಗಿತ್ತು.

ಬೊಂಬಾಯಿಗೆ ಹೋಗುತ್ತಿದ್ದ ರೈಲಿನಲ್ಲಿ ಕುಳಿತು, ನಾನು ಮುಂದೆಂದು ಆನಂದಭವನವನ್ನು ನೋಡುವೆನು, ಅಲ್ಲಿ ಏನೇನು ಮಾರ್ಪಾಟುಗಳನ್ನು ಕಾಣುವೆನು, ಎಂದು ವಿಸ್ಮಯಗೊಂಡೆನು. ಅದು ಹಿಂದಿನಂತೆ ಮುಂದೆಯೂ ಸುಖಸಂತೋಷಗಳ ನೆಲೆವೀಡಾಗುವುದೇ? ಅಥವಾ ಆನಂದ ಸಂತೋಷರಹಿತವೂ ನಿರ್ಜನವೂ ಆದ ಘೋರರುದ್ರ ಭೂಮಿಯಾಗುವುದೇ? ಅಶುಭಸೂಚಕವಾದ ಕೇಡು ಸಂಭವಿಸುವುದಿಲ್ಲವೆಂಬುದೇ ನನ್ನ ನಂಬಿಕೆ. ಆನಂದ ಭವನ ಮತ್ತೊಮ್ಮೆ ನಲ್ಮೆಯ ನೆಲೆವೀಡಾಗಲಿ, ತಂದೆಯವರ ನಾಮಕರಣೋದ್ದೇಶ ಸಾರ್ಥಕಗೊಳ್ಳಲಿ ಎಂಬುದೇ ನನ್ನ ನೀರವ ಪ್ರಾರ್ಥನೆಯಾಗಿತ್ತು.

ನಾನು ವ್ಯಾಕುಲಚಿತ್ತಳಾಗಿ ನನ್ನ ಸಣ್ಣ ಮನೆಗೆ ಹಿಂದಿರುಗಿದೆನು. ರಾಜಾ ಇಲ್ಲದ ಮನೆ ಮನೆಯಲ್ಲ. ಜೀವನ ಎಂದಿನಂತೆ ಸಾಗುತ್ತಿರಬಹುದು; ಆದರೆ ಜವಹರನೇ ಮೊದಲಾದ ನೂರಾರು ಸಾವಿರಾರು ಜನರು ಸೆರೆಮನೆಯಲ್ಲಿ ನರಳುತ್ತಿರುವಾಗ ಸುಖವೆಲ್ಲಿಯದು, ತೃಪ್ತಿಯೆಲ್ಲಿಯದು? ನಾಲ್ಕು ವರ್ಷಗಳ ಹಿಂದೆ ಪ್ರಾರಂಭವಾದ ಘೋರ ಸಂಗ್ರಾಮ ರಾಕ್ಷಸೀ ರೂಪವನ್ನು ತಾಳಿ ಇಡೀ ಮಾನವ ಜನಾಂಗವನ್ನೇ ನುಂಗಿ ನೊಣೆಯುತ್ತಿದೆ. ನಮ್ಮನ್ನು ದಾಸ್ಯದಿಂದ ಬಿಡುಗಡೆ ಮಾಡುವ

ಔದಾರ್ಯವಿಲ್ಲದೆ, ಯುದ್ಧದ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಪಡೆಯುವ ಸೌಜನ್ಯವಿಲ್ಲದೆ, ಆಂಗ್ಲೇಯರು ನಮ್ಮನ್ನು ಕಾಳ್ಕಿಚ್ಚಿನ ಕೊಂಡಕ್ಕೆ ನೂಕಿದ್ದಾರೆ. ಮಾನವಕೋಟಿಗೆ ಶಾಂತಿಸ್ವಾತಂತ್ರ್ಯಗಳು ತರುವ ಯುದ್ಧವೆಂದು ನಮ್ಮನ್ನು ಪುಸಲಾಯಿಸುತ್ತಿದ್ದಾರೆ. ಆದರೆ ಈ ನಾಲ್ಕು ವರ್ಷಗಳಲ್ಲಿ ಪ್ರತಿಯೊಂದು ಹಂತದಲ್ಲಿಯೂ ನಮಗೆ ಸ್ವಾತಂತ್ರ್ಯದ ಹಕ್ಕನ್ನು ನಿಷೇಧಿಸಿದ್ದಾರೆ. ನಮ್ಮ ನಾಯಕರ ನೇತೃತ್ವದಲ್ಲಿ ನಮ್ಮಲ್ಲಿರುವ ಅಪಾರ ಧನ ಜನ ಸಂಪತ್ತನ್ನು ಒಂದುಗೂಡಿಸಿ ಅವುಗಳನ್ನು ಮಹತ್ಕಾರ್ಯಸಾಧನೆಗಾಗಿ ನಿಯೋಜಿಸುವ ಸ್ವಾತಂತ್ರ್ಯವಿಲ್ಲ. ಮಿತ್ರಪಕ್ಷ ಸಹಾನುಭೂತಿ ಮತ್ತು ಸಾರ್ವಭೌಮತ್ವ ದ್ವೇಷಗಳ ಇಕ್ಕುಳದಲ್ಲಿ ಸಿಕ್ಕಿಕೊಂಡು ನಮ್ಮ ಜನ ಬಾಯ್‌ಬಾಯ್ ಬಿಡುತ್ತಿತ್ತು. ಯುದ್ಧದ ಗತಿ ಗಮನದ ಗುರಿಗಳನ್ನು ಸ್ಪಷ್ಟವಾಗಿ ಘೋಷಿಸಬೇಕೆಂದೂ, ಆ ಘೋಷಣೆಯಲ್ಲಿ ಇಡೀ ಮಾನವಕೋಟಿಗೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಡುವ ಭರವಸೆ ಅಡಕವಾಗಿರಬೇಕೆಂದೂ ನಾವು ಒತ್ತಾಯಪಡಿಸಿದೆವು. ಆದರೆ ಪ್ರತ್ಯುತ್ತರವೇ ಬರಲಿಲ್ಲ. ೧೯೪೨ ನೆಯ ಇಸವಿಯಲ್ಲಿ ಸಂಕಲನ ವ್ಯವಕಲನ ಗುಣಾಕಾರ ಭಾಗಾಹಾರಗಳಾದ ಮೇಲೆ, ಯುದ್ಧಾನಂತರದ ಸ್ವಾತಂತ್ರ್ಯವಾಗ್ದಾನ ಲಭಿಸಿತು. ವಿಧಿ ನಿಯಮ ಷರತ್ತುಗಳಿಂದ ಮೂಲೆ ಮೊಟಕು ಮಾಡಿ ಅಂಚು ಕತ್ತರಿಸಿ ವಿರೂಪಗೊಳಿಸಿದ ಸ್ವಾತಂತ್ರ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಹಿಂದೆಯೇ ಲೆಕ್ಕವಿಲ್ಲದಷ್ಟು ವಾಗ್ದಾನಗಳಾಗಿದ್ದುವು. ಕೊಟ್ಟ ಭಾಷೆಗೆ ತಪ್ಪುವವರಲ್ಲಿ ಅಗ್ರಗಣ್ಯರವರು. ನಮಗಿಲ್ಲದ, ನಮಗೆ ಸಲ್ಲದ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಹೆಸರಿನಲ್ಲಿ ನಮ್ಮ ನೆತ್ತರನ್ನು ಚೆಲ್ಲುವಂತೆ, ನಮ್ಮ ಜನರು ಸಕಲ ಕಷ್ಟನಿಷ್ಠುರಗಳನ್ನು ಸಹಿಸಿಕೊಂಡು ಹಸಿವಿನಿಂದ ನರಳುವಂತೆ ಉದ್ಘೋಷಿಸುವುದೆಂತಹ ಪರಿಹಾಸ್ಯ!

ನಾವಿಂದು ಸ್ವಾತಂತ್ರ್ಯ ಸಂಗ್ರಾಮದ ಅಗ್ನಿಕುಂಡಕ್ಕೆ ಧುಮುಕಿದ್ದೇವೆ. ನಮ್ಮ ಭವಿಷ್ಯತ್ತನ್ನು ನಾವು ರೂಪಿಸಿಕೊಳ್ಳುವ ಹಕ್ಕನ್ನು ಗಳಿಸಲು ಹೋರಾಡುತ್ತಿದ್ದೇವೆ. ನಮ್ಮನ್ನು ದಾಸ್ಯದಲ್ಲಿಟ್ಟಿರುವ ಸಾಮ್ರಾಜ್ಯಷಾಹಿಯನ್ನು ಮಾತ್ರವೇ ಅಲ್ಲ. ಅದು ಪ್ರಪಂಚದಲ್ಲಿ

ಎಲ್ಲಿಯೇ ಇರಲಿ, ಯಾವ ರೂಪವನ್ನೇ ತಾಳಿರಲಿ, ಅದನ್ನು ನಿರ್ಮೂಲ ಮಾಡುವುದೇ ನಮ್ಮ ಉದ್ದೇಶ. ನಮ್ಮ ಸ್ವಾತಂತ್ರ್ಯ ಆ ಮಹಚ್ಛಕ್ತಿಯ ಚಿಹ್ನೆ. ಪರರಾಜರ ದಬ್ಬಾಳಿಕೆ ಸುಲಿಗೆಗಳ ಮೂಲೋತ್ಪಾಟನೇಚ್ಛೆಯ ಹೆಗ್ಗುರುತು. ಬ್ರಿಟಿಷರ ಯುದ್ಧೋದ್ಯಮೋದ್ದೇಶವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದೇ ೧೯೪೧ ನೆಯ ಇಸವಿಯ ವೈಯಕ್ತಿಕ ಸತ್ಯಾಗ್ರಹ ಚಳುವಳಿಯ ಉದ್ದೇಶವಾಗಿತ್ತು. ಜಗತ್ತಿನ ನೈತಿಕಶಕ್ತಿಯ ಮುಂದೆ ನಾವಿಟ್ಟ ಮೊರೆಯದು. ಆ ಮೊರೆಗೆ ಯಾರೂ ಕಿವಿಗೊಡಲಿಲ್ಲ. ನಮ್ಮ ಹಠ ಮತ್ತಷ್ಟು ದೃಢವಾಯಿತು. ನಮ್ಮ ಕಷ್ಟನಿಷ್ಠುರಗಳು ಅಧಿಕ ವಾದುವು. ಗಡಿ ಪ್ರದೇಶದಲ್ಲಿ ಶತ್ರುಗಳ ರಣಕಹಳೆ ಮೊಳುಗುತ್ತಿದ್ದರೂ, ಕಾಂಗ್ರೆಸ್ಸು ಸತ್ಯಾಗ್ರಹ ಸಮರವನ್ನು ಹೂಡಲು ನಿಶ್ಚಯಿಸಿ ಸರ್ವರೂ ಸಿದ್ಧರಾಗುವಂತೆ ಜನರನ್ನು ಕೈಬೀಸಿ ಕರೆಯಿತು. ಇಡೀ ಮಾನವ ಕೋಟಿಗೆ ಶಾಂತಿ ಸ್ವಾತಂತ್ರ್ಯಗಳನ್ನು ದೊರಕಿಸಿಕೊಡುವುದೇ ಅಲ್ಲದೆ, ಫ್ಯಾಸಿಜಂನ ಆಕ್ರಮಣದಿಂದ ನಮ್ಮ ದೇಶವನ್ನು ಸಂರಕ್ಷಿಸುವುದೂ ಕಾಂಗ್ರೆಸ್ಸಿನ ಧ್ಯೇಯವಾಗಿತ್ತು. ಸರ್ಕಾರದೊಡನೆ ಇನ್ನೂ ಮಾತುಕತೆ ನಡೆಯುತ್ತಿದ್ದಾಗಲೇ, ಚಳುವಳಿ ಆರಂಭವಾಗುವುದಕ್ಕೆ ಮುಂಚೆಯೇ ನಾಯಕರೆಲ್ಲ ಕೈಸೆರೆಯಾದರು. ಸಂಕುಚಿತರಾಷ್ಟ್ರೀಯ ಮನೋಭಾವನೆ ಮಾತ್ರವೇ ಭರತರಖಂಡದ ಸ್ವಾತಂತ್ರ್ಯ ಸಂಗ್ರಾಮದ ಉದ್ದೇಶವಲ್ಲ; ಮಾನವ ಜನಾಂಗದ ಸ್ವಾತಂತ್ರ್ಯದ ರೂಪುರೇಖೆಗಳನ್ನು ನಿಷ್ಕರ್ಷಿಸುವುದೇ ಅದರ ಮುಖ್ಯೋದ್ದೇಶ. ಭಾರತೀಯರು ಯಾವಾಗಲು ಪರ ರಾಷ್ಟ್ರಕಂಟಕವೂ, ಸಕಲ ಜನದೂಷ್ಯವೂ ಆದ ಸರ್ವಾಧಿಕಾರಿ ಪ್ರಭುತ್ವವನ್ನೂ ಸಾಮ್ರಾಜ್ಯಷಾಹಿಯನ್ನೂ ತಿರಸ್ಕರಿಸುತ್ತಿದ್ದಾರೆ; ಅಲ್ಲದೆ, ಚೀಣಾ, ಸ್ಪೈಯಿನ್ ಮೊದಲಾದ ರಾಷ್ಟ್ರಗಳಿಗೆ ತಮ್ಮ ಕೈಯಲ್ಲಾದಷ್ಟು ಸಹಾಯವನ್ನು ನೀಡಿದ್ದಾರೆ. ತಮ್ಮ ಕೊಡುಗೈ ಬಲಗೈ ಆದಾಗ, ದಲಿತ ಜನಾಂಗಗಳ ಹೋರಾಟದಲ್ಲಿ ತಮ್ಮ ಸಂಪೂರ್ಣ ಭರವಸೆಯನ್ನೂ ಸಹಾನುಭೂತಿಯನ್ನೂ ವ್ಯಕ್ತಪಡಿಸಿದ್ದಾರೆ.

ಯುದ್ಧ ಕಾಲದಲ್ಲಿ ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರಾಮುಖ್ಯವಾದ ಬದಲಾವಣೆಗಳಾಗಬೇಕೆಂಬುದೇ

ಇಂದು ನಮ್ಮ, ಮತ್ತು ಇಡೀ ಪ್ರಪಂಚದ ಮುಂದಿರುವ ಧ್ಯೇಯ. ಹೀಗಾಗುವುದಾದರೆ ಜಪಾನೀಯರ ಅಕ್ರಮ ಅತಿಕ್ರಮಗಳನ್ನು ಪ್ರತಿಭಟಿಸಲು ನಮ್ಮ ಜನತೆಯನ್ನು ಒಟ್ಟುಗೂಡಿಸಿ ಹುರಿದುಂಬಿಸಬಹುದು. ಭರತಖಂಡವನ್ನು ಪ್ರಗತಿಪಥದಲ್ಲಿ ದೇಶದ ಹಿನ್ನಡೆಯನ್ನು ತಡೆಯಬಹುದು. ಇಡೀ ಪ್ರಪಂಚವೇ ತುಮುಲಗಲಿಬಿಲಿಗಳ ಮಡಿಲಿನಲ್ಲಿ ಸಿಕ್ಕಿ ತತ್ತರಿಸುತ್ತಿದೆ. ಶಾಂತಿಶಿಸ್ತುಗಳನ್ನು ನೆಲೆಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಆ ಆದರ್ಶಸಾಧನೆ ಭಾರತೀಯರಾದ ನಮಗೆ ಅಸಾಧ್ಯವಾಗಿ ಕಾಣಬಹುದು. ಆದರೆ ನಾವು ಈ ದರ್ಶನವನ್ನು ದೃಷ್ಟಿಯಲ್ಲಿಟ್ಟುಕೊಂಡು ಬೆಳಕು ಬೀರುವುದಾದರೆ, ನಮ್ಮ ಅಳವಿಗೆ ಮೀರಿದುದನ್ನು ಇತರರು ಸಾಧಿಸಬಹುದು. ನಮ್ಮ ಘನೋದ್ದೇಶ ಸಾಧನೆಯ ಮಾರ್ಗದಲ್ಲಿ ಹಲವು ಕಳ್ಳಗುಣಿಗಳೂ, ನಾನಾ ವಿಧವಾದ ಎಡರುಗಲ್ಲುಗಳೂ ಇರಬಹುದು. ಆದರೆ ನಮ್ಮ ಗತಿಗಮನ ಗುರಿಗಳು ನೇರವಾಗಿರುವ ತನಕ, ನಮ್ಮ ದೃಷ್ಟಿ ನಿಶ್ಚಲವಾಗಿರುವ ತನಕ ನಾವು ಹೆದರಬೇಕಾಗಿಲ್ಲ.

ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಷ್ಟೇ ಕಷ್ಟನಷ್ಟಗಳು ಸಂಭವಿಸಲಿ, ವಿಜಯಲಕ್ಷ್ಮಿ ಜಯಮಾಲೆಯನ್ನು ಹಿಡಿದು ಬರುವತನಕ, ಪ್ರಪಂಚದ ನಾನಾ ಭಾಗಗಳಲ್ಲಿರುವ ನಮ್ಮವರಿಗೆ, ಅದರಲ್ಲಿಯೂ ಭರತಖಂಡದಲ್ಲಿರುವ ನಮಗೆ ಶಾಂತಿ ವಿಶ್ರಾಂತಿಗಳು ದೊರೆಯಲಾರವು. ಕಷ್ಟಸಂಕಷ್ಟಗಳು ನಮ್ಮ ಇಡೀ ಬಾಳಿನ ಕೂಳಾಗಲೆಂಬುದು ದೇವೇಚ್ಛೆಯಾಗಿದ್ದರೆ, ಅವುಗಳನ್ನು ತಾಳ್ಮೆಯಿಂದ ಸಹಿಸೋಣ; ನಮಗೆ ಸುಖಸಂತೃಪ್ತಿಗಳು ಲಭಿಸದಿದ್ದರೂ ಸರಿಯೆ, ನಮ್ಮ ಸಂತತಿಗಾದರೂ ಸೊಗದ ಸುಗ್ಗಿ ಸಾರಿಬರಲೆಂದು ನಮ್ಮ ಕಾರ್ಯವನ್ನು ಮುಂದುವರಿಸೋಣ. ಪ್ರಿಯರಿ ವಾರ್ ಪಾಸನ್ನು "ಆ ದಿನವೇ" ಎಂಬ ತನ್ನ ಪುಸ್ತಕದಲ್ಲಿ ಈ ರೀತಿ ಬರೆದಿದ್ದಾನೆ: "ಮಾನವನಿಗೆ ಒಂಟಿತನದ ಪಯಣ ಬೇಸರವಾಗಿ ತನ್ನ ಸಹೋದರನ ಜತೆಯನ್ನು ಅಪೇಕ್ಷಿಸುವ ದಿನ ಖಂಡಿತ ಬಂದೇ ಬರುತ್ತದೆ. ಪರರ ಅಳಲು ನಲಿವುಗಳಿಗೆ, ಆಶೆ ನಿರಾಶೆಗಳಿಗೆ ನಮ್ಮ ಹೃದಯ ಮಿಡಿದು ಮರುದನಿಗೊಟ್ಟಂದು ವಿಶ್ವಪ್ರೇಮ ವಿಶ್ವರೀತಿ

ವಿಶ್ವಧರ್ಮಗಳು ದೂರದ ಕನಸಾಗದೆ ಬಾಳ್ವೆಯ ನನಸಾಗುತ್ತವೆ. ಅದೇ ಸೃಷ್ಟಿನಿಯಮದಧ್ಯೇಯ. ರಾತ್ರಿಯ ಸ್ಮಶಾನ ನೀರವತೆಯಲ್ಲಿ ಪ್ರಜ್ಜ್ವಲಿಸುತ್ತಿರುವ ಕೋಟ್ಯನುಕೋಟಿ ತಾರಾವೃಂದವೂ ಆ ವಿಶ್ವ ಪ್ರೇಮದ ಅಸಂಪೂರ್ಣ ಚಿಹ್ನೆ."

ನಾನು ಹುಟ್ಟಿದಾಗಿನಿಂದ ೧೯೧೯ ನೆಯ ಇಸವಿಯ ತನಕ ಜೀವನ ಸುಲಲಿತವಾಗಿ, ಶಾಂತಿಯುತವಾಗಿ, ಸುಖಮಯವಾಗಿ ಸಾಗುತ್ತಿತ್ತು. ಜಲಿಯನ್‌ವಾಲಾಬಾಗಿನ ನರಮೇಧ ಮೊಟ್ಟಮೊದಲು ನನ್ನ ಬಾಳ್ಗಡಲ ಶಾಂತತೆಯನ್ನು ಕದಡಿತು. ಹಿಂದೆಂದೂ ಅಂಟಿಸಿಕೊಳ್ಳದಿದ್ದ ನಾನಾ ವಿಷಯಗಳು ಈಗ ನನ್ನ ತಲೆಯಲ್ಲಿ ಕಿಕ್ಕಿರಿದುವು. ಅದೇ ನಾನು ಮೊದಲು ಕಂಡ ಕ್ರಾಂತಿ; ಅನಂತರ ಒಂದರ ಮೇಲೊಂದು, ಒಂದಕ್ಕಿಂತ ಮತ್ತೊಂದು ಅತಿಶಯವಾಗಿ, ತಂಡೋಪತಂಡವಾಗಿ ನುಗ್ಗಿದುವು. ೧೯೨೦ ನೆಯ ಇಸವಿಯಿಂದೀಚೆಗೆ ನಮ್ಮಲ್ಲಿ ಯಾರ ಜೀವನವೂ ಏಕಪ್ರಕಾರವಾಗಿರಲಿಲ್ಲ. ಆದರೆ ನಮ್ಮ ಕುಟುಂಬಕ್ಕೆ ಯಾವ ಪೆಟ್ಟು ತಾಕಿರಲಿಲ್ಲ. ಅದು ಒಂದು ವಿಸ್ಮಯವೇ. ೧೯೩೧ ನೆಯ ಇಸವಿಯಲ್ಲಿ ತಂದೆಯ ಸಾವು ನಮ್ಮ ಬಾಳಿನಲ್ಲಿ ದೊಡ್ಡದೊಂದು ಕಂದಕವನ್ನುಂಟು ಮಾಡಿದುದಲ್ಲದೆ, ಭವಿಷ್ಯತ್ ಜೀವನದ ಕ್ರೂರ ದೌರ್ಭಾಗ್ಯನಾಟಕದ ನಾಂದಿಯನ್ನು ಸಹ ಹಾಡಿತು. ೧೯೩೬ ರಲ್ಲಿ ಕಮಲ ಅಕಾಲಮರಣಕ್ಕೆ ತುತ್ತಾದಳು; ಎರಡು ವರ್ಷಗಳ ನಂತರ ತಾಯಿಯವರು ದೈವಾಧೀನರಾದರು. ನಮ್ಮ ಆರ್ಥಿಕ ಪರಿಸ್ಥಿತಿಯೂ ಕೆಟ್ಟಿತು. ನಮ್ಮಲ್ಲಿ ಯಾರ ಜೀವನವೂ ಸುಖಮಯವಾಗಿರಲಿಲ್ಲ, ಸುಲಲಿತವಾಗಿರಲಿಲ್ಲ. ನಮಗಿಂತ ನಮ್ಮ ಕಿರಿಯವರು ಆರ್ಥಿಕ ಮುಗ್ಗಟ್ಟಿನ ಕಷ್ಟನಷ್ಟಗಳಿಗೆ ಗುರಿಯಾದರೆಂಬುದು ನಿಜ. ನಿರಂತರ ವಿಯೋಗ ಮತ್ತು ಅಲ್ಪಾನಲ್ಪ ದೌರ್ಭಾಗ್ಯ ಸಂತತಿಗಳು ನನ್ನನ್ನು ಕಠಿಣ ಪರೀಕ್ಷೆಗೀಡುಮಾಡಿ ನಿರಾಶಳನ್ನಾಗಿ ಮಾಡಿವೆ. ನನ್ನ ಕೆಚ್ಚು ಕುಸಿಯದೆ ನೆಚ್ಚು ನುಸಿಯದೆ ಇರಲು ನಮ್ಮ ಗುರಿಯ ಹಿಂಮೆಯಲ್ಲಿರುವ ದೃಢ ವಿಶ್ವಾಸವೇ ಕಾರಣ. ಇಡೀ ಪ್ರಪಂಚದ ಸಾಮಾನ್ಯ ಜನತೆಯ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಯುತ್ತಿದೆ. ಇಂತಹ ಭಾವನಾತರಂಗಗಳು ನನಗೆ

ಮತ್ತು ನನ್ನಂತಹ ಹಲವರಿಗೆ ನೂತನ ಸ್ಫೂರ್ತಿ ಚೈತನ್ಯಗಳನ್ನೊದಗಿಸಿ ಸಮಸ್ತ ದುಃಖಗಳನ್ನು ಗೊಣಗುಟ್ಟದೆ ಬೇಸರಪಡದೆ ನುಂಗುವಂತೆ ಮಾಡಿವೆ.

ಹಲವಾರು ವರ್ಷಗಳಿಂದ ನನ್ನ, ನನ್ನ ಕುಟುಂಬದ ಮತ್ತು ಹಲವು ಭಾರತೀಯ ಸಹೋದರರ ಅನುಭವಕ್ಕೆ ವೇದ್ಯವಾಗಿರುವ ಜೀವನಚಾಂಚಲ್ಯವು ಪ್ರತಿಯೊಬ್ಬನ ನರಗಳನ್ನು ದುರ್ಬಲಗೊಳಿಸಿದೆ. ನಮ್ಮ ದೇಶದಲ್ಲಿ ಶಾಂತಿಸೌಭಾಗ್ಯಗಳು ನೆಲಸಿ, ಒಲಿದೆದೆಗಳ ಪುನರ್ಮಿಲನವಾಗಿ, ಎಲ್ಲೆಲ್ಲಿಯೂ ಆನಂದಲಹರಿ ಪ್ರವಹಿಸುವ ಪರಿಸ್ಥಿತಿಯೊದಗಲೆಂದು ಅನುದಿನವೂ ಹಾರೈಸುತ್ತಿದ್ದೇನೆ. ಆದರೆ ಭವಿಷ್ಯತ್ತು ಆಶಾದಾಯಕವಾಗಿ ಕಾಣುವುದಿಲ್ಲ, ನನ್ನ ದಾರಿಯಲ್ಲಿ ಎಷ್ಟೇ ಕೇಡುಗಳು ಅಡ್ಡಬಂದಿರಲಿ, ನ್ಯಾಯಬದ್ಧವಾದ ಹೋರಾಟದ ಪರಿಣಾಮವಾಗಿ ಅನುಭವಿಸಿದ ಕೇಡುಗಳವು—ಎಷ್ಟೇ ಕಷ್ಟನಿಷ್ಠುರಗಳು ಪಟ್ಟಾಳಿಕೆ ನಡೆಯಿಸಿರಲಿ, ವಿಧಿ ನನ್ನನ್ನು ಕಠಿಣಪರೀಕ್ಷೆಗಳಿಗೆ ಗುರಿಪಡಿಸಿರಲಿ, ನನ್ನ ಜೀವಮಾನದಲ್ಲೆಲ್ಲ ಕಳವಳ ಎಡೆಬಿಡದ ಸಂಗಾತಿಯಾಗಿರಲಿ, ಹಿಂದೆ ಆಗಿ ಹೋದುದೆಲ್ಲವನ್ನು ಇಂದಿಗೂ ಪಶ್ಚಾತ್ತಾಪವಿಲ್ಲದೆ ನೆನಸಿಕೊಳ್ಳಬಲ್ಲೆನು.

ದರ್ಪಾಧಿಕಾರದಿಂ ಕೊಬ್ಬಿ ಮೆರೆವರ ಮುಂದೆ
ಸರಳತೆಯ ಸಿತವಲ್ಕಲವನಳ್ಕರಿರಿಂದುಟ್ಟು
ತಲೆಯೆತ್ತಿ ಸೋದರರೆ ನೆರೆನಿಲ್ಲೆ ನಾಚದಿರಿ.
ನಮ್ರತೆಯೆ ಸತತ ಮಣಿಮುಕುಟವಕ್ಕೆಮ ನಿಮಗೆ;
ಆತ್ಮಮುಕ್ತಿಶ್ರೀಯೆ ಮುಕ್ತಿಯೈಸಲೆ ನಿಮಗೆ;
ದಿನದಿನವು ಬಡತನದ ಕಡುನಗ್ನತೆಯ ಮೇಲೆ
ದಿವ್ಯಪೀಠವ ರಚಿಸಿ ಲೋಕನಾಥನಿಗಾಗಿ.
ಹಮ್ಮುಬಿಮ್ಮುಗಳೆಲ್ಲ ಸತ್ಯಶಾಶ್ವತವೆಂದು
ದೊಡ್ಡಿತಾಗಿಹುದೆಲ್ಲ ಹಿರಿದೆಂದು ತಿಳಿಯದಿರಿ.

—ರವೀಂದ್ರನಾಥಠಾಕೂರ್

# ಅಕ್ಕ ತಂಗಿಯರು

ಸೂಕ್ಷ್ಮಗಾತ್ರದ, ಪರಿಪೂರ್ಣಸೌಂದರ್ಯದ, ಮುದ್ದು ತಂಗಿಯ ಜನನವನ್ನೂ ಕುತೂಹಲದಿಂದ ನೋಡುತ್ತಾ ಹತ್ತು ವರ್ಷದ ಹುಡುಗಿ ತನ್ನ ತಾಯಿಯ ಹಾಸಿಗೆಯ ಬಳಿ ನಿಂತಿದ್ದಳು. ವಯಸ್ಸಿಗೆ ಮೀರಿದ ವಿವೇಕಶಾಲಿನಿಯಾಕೆ. ಆ ಹಸುಗೂಸು ಹೇಗೆ, ಎಲ್ಲಿಂದ ಬಂತೆಂದು ಹುಚ್ಚು ಹುಚ್ಚಾಗಿ ಪ್ರಶ್ನಿಸಲಿಲ್ಲ. ಅಂತಹ ವಿಚಾರಗಳಲ್ಲಿ ಅವಳಿಗೆ ಮಸಕು ಮಸಕಾದ ತಿಳಿವಳಿಕೆಯಿತ್ತು. ಅಲ್ಲಿ ಆಕೆ ಪ್ರಕೃತಿವೈಚಿತ್ರ್ಯವನ್ನೂ ನೋಡಿ ವಿಸ್ಮಿತಳಾಗಿ ನಿಂತಿದ್ದಳು. ಆಟವಾಡಲು ಅಷ್ಟೇ ಮುದ್ದಾದ ಹಸುಗೂಸೊಂದನ್ನು ಎಂದಾದರೊಂದು ದಿನ ತಾನೂ ಪಡೆಯುವನೆಂಬ ಆಶೆ ಅವಳಲ್ಲಿಯೂ ಮೂಡಿತು. ಆ ಸೂಕ್ಷ್ಮಗಾತ್ರದ ಮಗುವಿನಲ್ಲಿ ತಂಗಿಯ ಪ್ರೇಮಕ್ಕಿಂತ ಮಿಗಿಲಾಗಿ ಮಾತೃವಾತ್ಸಲ್ಯ ಮೂಡಿತು.

ಸಂವತ್ಸರಗಳುರುಳಿದುವು. ಆ ಕುಲೀನ ಕುಟುಂಬದಲ್ಲಿ ಹಬ್ಬದೊಸಗೆ. ಎಲ್ಲಿ ನೋಡಿದರೂ ಸಂತೋಷ ಸಂಭ್ರಮಗಳೇ. ಆ ಪುರಾತನ ಗೃಹ ವೈಭವದಿಂದ ಅಲಂಕೃತವಾಗಿತ್ತು. ಸಂಗೀತ ಹಾಸಗಳ ಸಂಮಿಶ್ರ ಮಧುರಗಾನ ಒಳಗಡೆಯಿಂದ ಕೇಳಿಬರುತ್ತಿತ್ತು. ಅಂದು ಆ ಮನೆಯ ಕನಿಷ್ಠ ಪುತ್ರಿಯ ವಿವಾಹ. ಆಕೆ ಯಾವುದೋ ಒಂದು ಕೊಟಡಿಯಲ್ಲಿ ಕುಳಿತಿದ್ದಳು. ಯೌವನದಲ್ಲಿ ಆಗತಾನೇ ಕಾಲಿಟ್ಟಿದ್ದ ಆಕೆ ನಸು ಗುಲಾಬಿರಂಗಿನ ಸೀರೆಯುನ್ನುಟ್ಟು ಉಷಾರಮಣಿಯ ಚೆಲುವನ್ನು ಧಿಕ್ಕರಿಸುತ್ತಿದ್ದಳು. ಆ ದಿನದ ಮಹತ್ವ ಆಕೆಗೆ ಹೆಚ್ಚು ತಿಳಿದಿರಲಿಲ್ಲ. ಮಗ್ಗುಲಲ್ಲಿ, ತನ್ನ ಅಕ್ಕ ಕುಳಿತಿದ್ದಳು. ಆಕೆಯು ಯುವತಿ, ಅಪೂರ್ವ ಸುಂದರಿ; ನಿರ್ಮಲವಾದ ಧವಳ ಸೀರೆಯನ್ನು ಉಟ್ಟಿದ್ದಳು. ಆಕೆ ಬಾಲವಿಧವೆಯಾಗಿದ್ದುದರಿಂದ ಒಡವೆಗಳನ್ನು ತೊಟ್ಟಿರಲಿಲ್ಲ. ಆಕೆಗೆ ಮದುವೆಯಾದಾಗ ಹದಿಮೂರು ಹದಿನಾಲ್ಕು ವರ್ಷಗಳಿರಬಹುದು. ಒಂದು ವರ್ಷದೊಳಗಾಗಿಯೇ ಗಂಡನನ್ನು ಕಳೆದುಕೊಂಡಳು. ಆಕೆ ಗಂಡನನ್ನೇ ಇನ್ನೂ ಸರಿಯಾಗಿ ನೋಡಿರಲಿಲ್ಲ. ಇಂದು ಆಕೆಯ

ಹೃದಯದಲ್ಲಿ ಶೋಕಸಂತಾಪಗಳಿಗೆ ಎಡೆಯಿರಲಿಲ್ಲ; ತಾನೇ ಸಾಕಿದ್ದ ಮುದ್ದು ತಂಗಿಯ ಮದುವೆ. ಅಂದು ಆಕೆಗೆ ಪರಮಾನಂದದ ಸುದಿನ. ತನ್ನ ತಂಗಿಗೋಸ್ಕರ ಆಕೆಯ ಒಲವೆಲ್ಲ ಮೀಸಲಾಗಿತ್ತು. ತನಗಾಗಿ ನಾಜೋಕಾದ ಉಡುಪನ್ನಾಗಲೀ, ಸುಂದರವಾದ ಆಭರಣಗಳನ್ನಾಗಲೀ, ಯಾವುದನ್ನೂ ಆಕೆ ಬಯಸಿದವಳಲ್ಲ. ದುಃಖವಾಗಲೀ, ವೇದನೆಯಾಗಲೀ ತನ್ನ ತಂಗಿಗೆ ಎಂದೆಂದೂ ಸಂಭವಿಸಬಾರದೆಂಬುದೇ ಆಕೆಯ ಅನುದಿನದ, ಆದರಲ್ಲಿಯೂ ಅಂದಿನ, ಪ್ರಾರ್ಥನೆಯಾಗಿತ್ತು. ಬಾಲವಧುವಿನ ಪಕ್ಕದಲ್ಲಿ ಆಕೆಯು ಕುಳಿತಾಗ, ಆಕೆಯ ದುಃಖಪೂರಿತವಾದ ಕಂದುಬಣ್ಣದ ಕಣ್ಣುಗಳು ತನ್ನ ತಂಗಿಯ ಚೆಲುವನ್ನು ಮೊಗೆ ಮೊಗೆದು ಈಂಟುತ್ತಿದ್ದುವು; ಆಕೆಯ ಹೃದಯ ಹಿಡಿಸಲಾರದ ಹೆಮ್ಮೆಯಿಂದ ಉಬ್ಬಿ ಹೋಗಿತ್ತು.

ಮತ್ತೆ ಸಂವತ್ಸರಗಳುರುಳಿದುವು. ಚಿಕ್ಕ ತಂಗಿ ಲಾವಣ್ಯವತಿಯಾದ ಸ್ತ್ರೀರತ್ನವಾಗಿ, ಅನೇಕ ಮಕ್ಕಳ ತಾಯಿಯಾಗಿ, ವೈಭವಪೂರ್ಣ ಶ್ರೀಮಂತ ಗೃಹದ ಗೃಹಿಣಿಯಾಗಿ, ಮೆರೆದಳು. ಅನೇಕ ವರ್ಷಗಳ ತನಕ ಆಕೆಯ ಬಾಳಿನಲ್ಲಿ ಶಾಂತಿಸಂತೃಪ್ತಿಗಳು ನಲಿದಾಡಿದುವು.

ವಿಖ್ಯಾತವಾದ ಆ ಕುಟುಂಬದಲ್ಲಿ ಅನೇಕ ಬದಲಾವಣೆಗಳಾದುವು. ಒಡೆಯನಿಲ್ಲದ ಮನೆ ತಿಂಗಳಿಲ್ಲದ ಇರುಳಿನಂತಾಯಿತು; ಮನೆಯೊಡತಿ ದುಃಖಿತೆಯಾಗಿ ಒಬ್ಬಂಟಿಗಳಾದಳು. ಒಂದಾನೊಂದು ಕಾಲದಲ್ಲಿ ನಲ್ಮೆನಗೆಗಳಿಂದ ಕೂಡಿದ ಮನೆ ದುಃಖನೀರವತೆಗಳ ನೆಲೆವೀಡಾಯಿತು. ಅವನು ಮನೆಯ ಚೈತನ್ಯ ಸ್ವರೂಪವಾಗಿದ್ದನು. ಆತನ ಜತೆಯಲ್ಲಿಯೇ ಮನೆಯ ಕಾಂತಿ ನಂದಿದಂತೆ, ಸೌಖ್ಯ ಬತ್ತಿದಂತೆ ಗೋಚರವಾಯಿತು.

ಕೈ ತೋಟದ ಒಂದು ಮೂಲೆಯಲ್ಲಿ ಇಬ್ಬರು ಮುದುಕಿಯರು ಕುಳಿತಿದ್ದರು. ವೃದ್ಧಾಪ್ಯ ಯೌವನದ ಚೆಲುವನ್ನು ಮತ್ತಷ್ಟು ಹೆಚ್ಚಿಸಿತ್ತು. ಹಿರಿಯವಳು ಇನ್ನೂ ಗಟ್ಟಿಮುಟ್ಟಾಗಿದ್ದಂತೆ ಕಂಡಳು. ಆಕೆಯ ತಲೆಯಲ್ಲಿ ಬೂದಿಗೂದಲೇ ಇರಲಿಲ್ಲ. ಬೇರೊಂದು ಪ್ರಪಂಚಕ್ಕೆ ಸಂಬಂಧಿಸಿದಂತಿದ್ದ ಅವರ್ಣನೀಯ ಸೌಂದರ್ಯ ದುಃಖಪೂರಿತವಾದ

ಮುಖದ ಮೇಲೆ ತಾಂಡವವಾಡುತ್ತಿತ್ತು. ಕಿರಿಯವಳು ಸೂಕ್ಷ್ಮ ವಾಗಿಯೂ, ಕೋಮಲವಾಗಿಯೂ ಇದ್ದುದಲ್ಲದೆ ದುರ್ಬಲಳೂ ಆಗಿದ್ದಳು. ಆಕೆಯ ದುಃಖಮುದ್ರಿತವಾದ ಮುಖದ ಸುತ್ತಲೂ ಮಂಜುಬೆಳ್ಗೊದಲು ತೇಜೋಮಂಡಲವನ್ನು ರಚಿಸಿತ್ತು. ದೂರದಿಂದ ಮಂದಮಾರುತ ಚಿಕ್ಕ ಮೊಮ್ಮಕ್ಕಳ ನಲ್ಲುಲಿಯನ್ನು ಹೊತ್ತು ತರುತ್ತಿತ್ತು. ಆಗಾಗ್ಗೆ ಮಕ್ಕಳ ಕಿರುದನಿ ಕಿವಿದೆರೆಯನ್ನು ತಾಕಿದಾಗ, ಎರಡು ಮುಖಗಳ ಮೇಲೆಯೂ ಮುಗುಳ್ನಗೆ ನರ್ತಿಸುತ್ತಿತ್ತು.

ಶಾಂತಿ ಸೌಂದರ್ಯಗಳಿಂದ ಕೂಡಿದ್ದ ತಂಗಿಯ ಮುಖವನ್ನು ನೋಡುತ್ತಾ ಅವಳು ಕಲ್ಗೊಂಬೆಯಂತೆ ಹಾಸಿಗೆಯ ಹತ್ತಿರ ನಿಂತಿದ್ದಳು. ಬದುಕಿದ್ದಾಗ ಇದ್ದಂತೆಯೇ ಸತ್ತ ಮೇಲೆಯೂ ಅವಳು ಅಪೂರ್ವ ಲಾವಣ್ಯದಿಂದ ಸುಶೋಭಿಸುತ್ತಿದ್ದಳು. ಆದರೆ ಬಾಳ ಗುರಿಯನ್ನು ಈಡೇರಿಸಿಕೊಂಡಿದ್ದ ಅಕ್ಕನನ್ನು ಬಿಟ್ಟು ಅವಳು ಹೇಗೆ ಹೋಗಿದ್ದಾಳು? ಅದು ಸಾಧ್ಯವಿಲ್ಲ. ಸದಾ ಅಂಜುಪುರುಕಿಯಾಗಿದ್ದ ಆಕೆ ಬಹುದೂರದ ಕಾಲದ ಲೋಕಕ್ಕೆ ಒಬ್ಬಂಟಿಗಳಾಗಿ ಹೇಗೆ ಹೊರಟಾಳು? ಅಕ್ಕನಾದರೋ ತಂಗಿಯೊಬ್ಬಳನ್ನೇ ಕಳುಹಿಸಲಾರಳು–ಅವಳೂ ತಂಗಿಯನ್ನು ಹಿಂಬಾಲಿಸಿ, ಅವಳ ಜತೆಯಲ್ಲಿದ್ದು, ಅವಳ ಕೈ ಹಿಡಿದುಕೊಂಡು, ಅವಳಿಗೆ ಧೈರ್ಯವನ್ನು ಬಿತ್ತಬೇಕು.

ತಂಗಿ ಹೋದ ಮೇಲೆ ಅಕ್ಕ ಯಾರಿಗಾಗಿ, ಯಾವ ಸುಖಕ್ಕೋಸ್ಕರ ಮತ್ತೆ ಬದುಕಿರಬೇಕು? ಆಕೆಯ ಪಾಲಿಗೆ ಉಳಿದಿದ್ದುದೊಂದೇ, ಜರ್ಝರಿತವಾದ ರಕ್ತ ಸಿಕ್ತ ಹೃದಯ ಕಳವಳದಿಂದ ಕುಗ್ಗಿ ಬಳಲಿಕೆಯಿಂದ ಬಾಗಿ ಸದ್ದಿಲ್ಲದೆ ಮೂಲೆಯೊಂದರಲ್ಲಿ ಅವಳು ಬಿದ್ದಿದ್ದಳು. ಆಕೆಯ ಕಣ್ಣುಗಳು ಅಂತರ್ಮುಖಿಯಾಗಿದ್ದುವು. ಆಕೆಯ ಮನೋನೇತ್ರದ ಮುಂದೆ ನಾನಾ ವಿಧವಾದ ಚಿತ್ರಗಳು ಸುಳಿದಾಡಿದುವು–ತಾಯಿಯ ಮಗ್ಗುಲಲ್ಲಿ ಮಲಗಿದ್ದ ಬಡಕಲಾದ ಹಸುಳೆ ತನ್ನ ತಂಗಿ–ಹಸುಗೂಸಿನಂತಹ ಸುಂದರಳಾದ ನವವಧು. ತನ್ನ ಮಕ್ಕಳ ನಡುವೆ ನಿಂತ ತೇಜೋವತಿಯಾದ ತಾಯಿ—ಸೂಕ್ಷ್ಮದೇಹಿಯೂ ನಿಶ್ಶಕ್ತಳೂ ಆದ ಮುಪ್ಪಿನ ತಂಗಿ–ಒಮ್ಮೆ ತನ್ನ ತಂಗಿಯಂತೆ, ಮತ್ತೊಮ್ಮೆ ತನ್ನ

ತಂಗಿಯಲ್ಲದವಳಂತೆ ತೋರುತ್ತಾ, ಕಳೆಗುಂದಿದವಳಾಗಿ, ಚೈತನ್ಯ ಶೂನ್ಯಳಾಗಿ ಮಲಗಿದ್ದಳು–ಆದರೆ ಅವಳು ಸತ್ತಿರಲಿಲ್ಲ–ಸತ್ತಳೆಂಬುದು ಬರಿಯ ತಪ್ಪುಭಾವನೆ. ಹೊಳೆಯನ್ನು ದಾಟಿಸಲೋಸುಗ ತನ್ನ ಅಕ್ಕನನ್ನು ಕೈಬೀಸಿ ಕರೆಯುತ್ತಿದ್ದಳು. ಬೇರೊಂದು ಪ್ರಪಂಚಕ್ಕೆ ಕರೆದೊಯ್ಯುವ ಸಲುವಾಗಿ, ತನ್ನ ತಂಗಿಯ ಕೈಗಳನ್ನು ಹಿಡಿದುಕೊಳ್ಳಲು ಕೈ ಚಾಚಿದಾಗ, ಅಕ್ಕನ ಮುಖದ ಮೇಲೆ ಮೃದುಮಧುರ ಮಂದಹಾಸ ತಾಂಡವವಾಡುತ್ತಿತ್ತು.

ಆಕೆಯ ಕಣ್ಣುಗಳಲ್ಲಿ ಅನಂತಾನಂತ ಶಾಂತಿ ಹೊರಹೊಮ್ಮುತ್ತಿತ್ತು. ಕೇವಲ ಕೆಲವು ಗಂಟೆಗಳ ವಿಯೋಗದನಂತರ, ಭೂಲೋಕದ ಕೊನೆಯ ಅಂಚಿನತನಕವೂ ಮತ್ತು ಆಚೆಗೂ ತನ್ನ ತಂಗಿಯನ್ನು ಹಿಂಬಾಲಿಸಿ ಆಕೆಯನ್ನು ಸೇರದಿದ್ದಲ್ಲಿ ಆಕೆಗೆ ಶಾಂತಿಸುಖಗಳೆಲ್ಲಿ? ಆ ತಂಗಿಗಾಗೆಯೇ ಆಕೆಯ ಜೀವಮಾನವೆಲ್ಲ ಸ್ವಾರ್ಥತ್ಯಾಗಪೂರ್ಣವಾದ ಮೀಸಲುಗಾಣಿಕೆಯಾಗಿತ್ತು. ಮೃತ್ಯುದೇವತೆ ಅವರನ್ನು ಬೇರ್ಪಡಿಸುವಷ್ಟು ಶಕ್ತಳಲ್ಲ!

## ನೆನಪುಗಳು

" ನೆನಪುಗಳು ಮಾಗಿಯ ಗುಲಾಬಿ ಹೂಗಳಂತೆ " ಎಂದು ಒಬ್ಬಾನೊಬ್ಬ ಕವಿ ಹೇಳಿದನು. ಒಂಟಿತನದಿಂದ ನೊಂದೆದೆಗೆ ಸುಂದರ ಸುಮಗಳ ಸುವಿಪುಲ ಸೌರಭವನ್ನು ಸೂಸಿ ಆನಂದವನ್ನುಕ್ಕಿಸುವ ನೆನಪುಗಳು ನಿಜವಾಗಿಯೂ ಸೌಂದರ್ಯದ ನಿಧಿಗಳು. ಆದರೆ ನೆನಪುಗಳೆಲ್ಲ ಚೆಲುವಾಗಿರುವುದಿಲ್ಲ. ದುಃಖದಿಂದ ಒದ್ದೆಯಾದ ನೆನಪುಗಳು ಕೆಲವು; ನಿರಾಶಾಪೂರ್ಣವಾದ ನೆನಪುಗಳು ಕೆಲವು; ಕಾಲದೇಶಗಳು ಮಾರ್ಪಡಿಸದ ಅಥವಾ ಕುಗ್ಗಿಸದ ವೇದನೆಗಳಿಂದ ಕೂಡಿದ ನೆನಪುಗಳು ಕೆಲವು. ಪ್ರತಿಯೊಬ್ಬನ ಜೀವಮಾನದಲ್ಲಿಯೂ ಸುಖಸಂತೋಷ ಆನಂದಗಳಿಂದ ಕೂಡಿದ ಮನೋಹರವಾದ ಸ್ಮೃತಿಗಳೂ, ದುಃಖನಿರಾಶೆ ಸಂಕಟಗಳಿಂದ ಕೂಡಿದ ಕರ್ಕಶ ಸ್ಮೃತಿಗಳೂ ದ್ವಂದ್ವವಾಗಿರುತ್ತವೆ. ಬಾಳ ಹೆದ್ದಾರಿಯಲ್ಲಿ ಈ ಎಲ್ಲ ಅನುಭವಗಳೂ ಬಂದು ಹೋಗಲೇ ಬೇಕು. ಕೆಲವು ಅಲ್ಲಿ ಇಲ್ಲಿ ಒಂದೆರಡು ಗುರುತುಗಳನ್ನು ಬಿಟ್ಟು ಹೋಗಿರುತ್ತವೆ; ಇನ್ನು ಕೆಲವು ಅನುಭವಗಳ ಹೆಜ್ಜೆಗಳು ಅಚ್ಚಳಿಯದೆ, ಮಾಸದೆ, ಉಳಿದಿರುತ್ತವೆ.

ನನ್ನ ಬಾಲ್ಯದ ಮನೆಗೆ ಹಿಂದಿರುಗಿದಾಗಲೆಲ್ಲ ನೆನಪುಗಳ ತಂಡ ನನ್ನ ಮೇಲೆ ದಾಳಿಯಿಡುತ್ತವೆ. ಎಂತಹ ಅದ್ಭುತವಾದ ಬಾಲ್ಯಜೀವನ! ಆ ಸವಿ ನೆನಪುಗಳನ್ನು ಸವಿಯಲು ಎನಿತಾನಂದ–ಅಂತ್ಯಕಾಲದ ದುಃಖಮಯವಾದ ಸ್ಮೃತಿಗಳು ಎನಿತು ಕರ್ಕಶ!–ಆ ಹಳೆಯ ಪಳೆಯ ಬಾಳನ್ನು ಮತ್ತೆ ಬಾಳಲಾದೀತೆ ? ಆ ಹೃದಯವಿದ್ರಾವಕವಾದ ನೆನಪುಗಳ ಸ್ಮರಣೆಯೇ ಮರಣ, ಮರವೆಯೇ ಹರಣ; ಆನಂದಭವನದ ಗತ ವೈಭವ ಇನ್ನೆಂದಿಗೂ ಹಿಂದಿರುಗುವಂತಿಲ್ಲ. ನಾವು ಅಲ್ಲಿಗೆ ಹಿಂದಿರುಗಿದಾಗಲೆಲ್ಲ ಬದಲಾವಣೆಗಳು ಆಗಿರುತ್ತವೆ.

ನಾನು ಹಳೆಯ ಪರಿಚಯದ ತೋಟದಲ್ಲಿ ಕುಳಿತೆನು. ನಿತ್ಯ ಪರಿವರ್ತನೆಗಳು ಸಂಭವಿಸುತ್ತಿರುವ ಪ್ರಪಂಚದಲ್ಲಿ ಪರಿವರ್ತನೆಯನ್ನೇ ಹೊಂದದ ಸ್ಥಳ ಅದೊಂದೇ. ನನ್ನೆದುರಿಗೆ ಭವ್ಯಭವನ ನಿಂತಿತ್ತು ನನ್ನ

ಕಣ್ಣುಗಳು ಆ ಭವನವನ್ನು ನೋಡಲಾರದೆಯೆ ನೋಡುತ್ತಿದ್ದುವು. ನನ್ನ ಆಲೋಚನೆಗಳು ಭೂತಕಾಲದ ಗರ್ಭವನ್ನು ಹೊಕ್ಕು ವಿಹರಿಸುತ್ತಿದ್ದುವು. ನಾನು ಓದಲೆಂದು ತಂದಿದ್ದ ಪುಸ್ತಕ ನನ್ನ ತೊಡೆಯ ಮೇಲೆ ತಿರಸ್ಕೃತವಾಗಿ ಬಿದ್ದಿತ್ತು. ನನ್ನ ಪಾದಗಳ ಸುತ್ತಲೂ ಬಣ್ಣ ಬಣ್ಣದ ಚಿಟ್ಟೆಗಳು ಹಾರಾಡುತ್ತಿದ್ದುವು. ಹೊಸ ಹಸರುಹುಲ್ಲಿನ ವಾಸನೆ ಇಂಪಾಗಿತ್ತು. ಗುಲಾಬಿ ಹೂಗಳ ಸೌರಭ ತಂಗಾಳಿಯಲ್ಲಿ ತೇಲಾಡಿ ನನ್ನೆಡೆಗೆ ಬರುತ್ತಿತ್ತು. ನಿಟ್ಟುಸಿರೆಳೆಯುತ್ತಾ ಅಲ್ಲಿಯೆ ಕೆಳಗುರುಳಿದೆನು. ನನ್ನ ಸುತ್ತಲೂ ಚೆಲುವು ಹರಡಿದ್ದರೂ, ಶಾಂತಿ ನೆಲಸಿದ್ದರೂ, ನನ್ನ ಹಿಡಿತಕ್ಕೆ ಸಿಗದ, ನಾನು ಕಳೆದುಕೊಂಡಿದ್ದ, ಮರಳಿ ಪಡೆಯಲಾರದ ಯಾವುದೋ ವಸ್ತುವಿಗೋಸ್ಕರ ಮೂಕಸಂಕಟ ನನ್ನೆದೆಯನ್ನು ಕೊರೆಯುತ್ತಿತ್ತು. ಗೊತ್ತುಗುರಿಯಿಲ್ಲದೆ ಆಲೋಚನೆಗಳು ಅಲೆದಾಡುತ್ತಿರಲು, ಈಗ ಬರಿಯ ನೆನಪಾಗುಳಿದಿರುವ ಹಿಂದಿನ ದಿನಗಳ ಕನಸುಗಳನ್ನು ಕಾಣುತ್ತ ಮಲಗಿದೆನು.

ಅಭಿರುಚಿ ಬಯಸಿದಂತೆಲ್ಲ, ಹಣ ಸುರಿದಂತೆಲ್ಲ ಸಮೃದ್ಧವಾಗಿ ಶೇಖರವಾಗಿದ್ದ ಸಕಲ ಭೋಗೋಪಭೋಗ ವಸ್ತುಗಳಿಂದ ತುಂಬಿದ್ದ, ಜನಭರಿತವಾಗಿದ್ದ ಭವ್ಯಭವನ ನನ್ನ ಮುಂದೆ ಕಂಗೊಳಿಸಿತ್ತು ಮನೋಹರದೃಷ್ಟಿಯ, ಪ್ರಚಂಡಪ್ರಭಾವ ಪೂರ್ಣವ್ಯಕ್ತಿತ್ವದ ಮನೆಯೊಡೆಯನೇ ಮನೆಯನ್ನೆಲ್ಲ ಆವರಿಸಿದ್ದಂತೆ ಭಾಸವಾಗುತ್ತಿತ್ತು; ಆತನ ನಗೆಯೊಲುಮೆಗಳ ಕಡಲಿನಲ್ಲಿ ಇಡೀ ಕುಟುಂಬವೇ ತಲ್ಲೀನವಾದಂತೆ ಕಾಣುತ್ತಿತ್ತು. ತನ್ನ ಪ್ರೀತಿಯ ಬಂಧುಮಿತ್ರರಿಗೆ ಆತನು ರಕ್ಷಾಯಂತ್ರವಾಗಿದ್ದನು. ಅಪ್ರತಿಮ ಸುಂದರಿಯೂ, ಸೂಕ್ಷ್ಮಗಾತ್ರೆಯೂ, ಸರ್ವಜನಪ್ರಿಯೆಯೂ ಆದ ಮನೆಯೊಡತಿ ಮನೆಯನ್ನೆಲ್ಲ ಬಳಸಿ ಕುಟುಂಬದ ಹಿತಾಹಿತಗಳನ್ನು ನೋಡಿಕೊಳ್ಳುತ್ತಿದ್ದಳು. ಆ ಸೂಕ್ಷ್ಮ ಶರೀರದಲ್ಲಿದ್ದ ಲವಲವಿಕೆಯನ್ನಾಗಲಿ, ಶಕ್ತಿಯನ್ನಾಗಲೀ ನೋಡಿದವರು ವಿಸ್ಮಯಗೊಳ್ಳದಿರಲಾರರು. ಎಲ್ಲೆಲ್ಲೂ ಚೈತನ್ಯದ ಚಿಲುಮೆಯೇ, ಉತ್ಸಾಹದ ಬುಗ್ಗೆಯೇ, ಸಂತೋಷ ಸಂತೃಪ್ತಿಗಳ ಹಿರಿಯೊಸಗೆಯೇ–ಅಂತಹ ವಾತಾವರಣದಲ್ಲಿ ಮೂವರು ಮಕ್ಕಳು ಬೆಳೆದರು.

ಕೆಲವು ಸಂವತ್ಸರಗಳುರುಳಿದುವು. ಅದೇ ಮನೆ. ಆದರೆ ಹಿಂದಿನ ವೈಭವಾಡಂಬರಗಳ ಗುರುತುಗಳೆಲ್ಲ ಸಂಪೂರ್ಣವಾಗಿ ಅಳಿಸಿಹೋಗಿದ್ದುವು. ಕೆಲವು ದಿನಗಳ ಹಿಂದಿನ ದುಂದುಗಾರಿಕೆಯ ಸ್ಥಾನವನ್ನು ಸರಳತೆ ಆಕ್ರಮಿಸಿಕೊಂಡಿತ್ತು. ಆದರೆ ಮನೆಯಲ್ಲಿದ್ದವರೆಲ್ಲ ಹಿಂದೆ ಇದ್ದವರೇ. ಮನೆಯೊಡೆಯನ ಕರುಳುಕುಲುಕುವ ಬೊಚ್ಚುನಗು ಮನೆಯ ಸಂದಿಗೊಂದಿಗಳಲ್ಲೆಲ್ಲ ಮಾರ್ದನಿಗೊಂಡು ಧೈರ್ಯಗೆಟ್ಟವರನ್ನು ಉಲ್ಲಾಸಗೊಳಿಸುತ್ತಿತ್ತು. ಈ ಬದಲಾವಣೆಗಳಿಗೆ ಜೀವನಾದರ್ಶ ಧ್ಯೇಯಗಳ ಬದಲಾವಣೆ ಮತ್ತು ನೂತನ ರಾಜಕೀಯ ತತ್ತ್ವಾನುಸಂಧಾನಗಳು ಹೊಣೆಯೇ ಹೊರತು ಯಾವ ದುರ್ವಿಪಾಕವೂ ಅಲ್ಲ.

ಮತ್ತೆ ಕೆಲವು ವರ್ಷಗಳು ಕಳೆದುವು. ಹಳೆಯ ಮನೆಯ ಪಕ್ಕದಲ್ಲಿಯೇ ಬೇರೊಂದು ಮನೆಯ ನಿರ್ಮಾಣವಾಯಿತು. ಪ್ರೀತಿಯ ತಂದೆ ಪ್ರೀತಿಯ ಮಗನಿಗೋಸ್ಕರ ಕಟ್ಟಿಸಿದ್ದ ಸ್ವಪ್ನಸುಂದರ ಗೃಹ–ತನ್ನ ನಿವಾಸಿಗಳಿಗೆ ದುಃಖನಿರಾಶೆಗಳನ್ನು ತಂದ ಅಶುಭಗೃಹ.

ವಿಶಾಲವಾದ ಕೋಣೆಯೊಂದರಲ್ಲಿ ಮಂಜುಗುರುಳ ಮುದುಕನು ಆಲೋಚನಾ ಮಗ್ನನಾಗಿ ವಿನಮಿತೋತ್ತಮಾಂಗನಾಗಿ ಕುಳಿತಿದ್ದನು. ದಾರುಣವಾದ ರೋಗ ಆತನನ್ನು ಪೀಡಿಸುತ್ತಿತ್ತು. ಕೆಲವು ರಾಜಕೀಯ ಕಾರಣಗಳಿಗಾಗಿ ತನ್ನ ಮಗನನ್ನು ಸೆರೆಮನೆಗೆ ಕೊಂಡೊಯ್ಯುವ ಮುನ್ನ ಮನೆಯನ್ನು ತಲುಪಲು ನೂರಾರು ಮೈಲಿಗಳಿಂದ ಬಂದಿದ್ದನು. ಅದೇ ಕಾರಣದಿಂದ ಆ ಮುದುಕನೂ ಹಲವು ತಿಂಗಳುಗಳು ಸೆರೆಮನೆಯಲ್ಲಿರಬೇಕಾಗಿತ್ತು. ಪುನಃ ಸೆರೆಮನೆಗೆ ಹೋಗಲು ಸಿದ್ಧನಾಗಿದ್ದನು. ಮಗ ಮನೆಬಿಡುವ ಮುನ್ನ ಆತನನ್ನಪ್ಪಿಕೊಳ್ಳಲು ಆತುರನಾಗಿ ಬಂದಿದ್ದನು. ಆತನ ಸುಖದುಃಖಗಳಲ್ಲಿ ಸಮಭಾಗಿನಿಯಾಗಿದ್ದ ತೆಳುಮೆಯ್ಯ ಹೆಂಗಸು ಹತ್ತಿರದಲ್ಲಿಯೇ ಕುಳಿತ್ತಿದ್ದಳು. ಆಕೆ ಎಂದೆಂದಿಗಿಂತಲು ದುರ್ಬಲಳಾಗಿ ಕಾಣುತ್ತಿದ್ದಳು. ಆದರೂ ಮೇಲೆ ಮೇಲೆ ಒತ್ತಿ ಬರುತ್ತಿದ್ದ ವಿಪತ್ತುಗಳನ್ನು ಸಹಿಸಿಕೊಳ್ಳುವಂತೆ ಆತನಿಗೆ ಧೈರ್ಯೋಪದೇಶಮಾಡುತ್ತಿದ್ದಳು. ಹುಟ್ಟಿದಾಗಿನಿಂದ ಅಂಜುಪುರುಕಿಯಾಗಿದ್ದಾಕೆ ಸಹಜ ಧೈರ್ಯಶಾಲಿಯೂ, ಭೀಮ ಪರಾಕ್ರಮಿಯೂ ಆದ

ತನ್ನ ಗಂಡನಿಗೆ ಧೈರ್ಯೋಪದೇಶಮಾಡುತ್ತಿದ್ದುದು ವಿಸ್ಮಯಕಾರಿಯಾಗಿತ್ತು.

ಕೋಣೆಯ ಮೂಲೆಯೊಂದರಲ್ಲಿ ಮನೆಯ ಹಿರಿಯ ಮಗಳು ಕುಳಿತಿದ್ದಳು. ಅವಳಿಗೆ ಮದುವೆಯಾಗಿ ಮಕ್ಕಳಿದ್ದರು. ತನ್ನ ತಂದೆ ತಾಯಿಯರ ವೇದನೆಯ ನಿರ್ಭರತೆ ಆಕೆಗೆ ಚೆನ್ನಾಗಿ ಅರಿವಾಗಿತ್ತು. ಆಕೆಯ ಕುತೂಹಲ ಪೂರ್ಣವಾದ ನೇತ್ರಗಳು ಅವರ ಮುಖಗಳಲ್ಲಿಯೇ ನಾಟಹೋಗಿದ್ದುವು. ಅವರ ಮೂಕಸಂಕಟವನ್ನು ನೋಡಿಯೂ ತಾನ ವರಿಗೆ ಸಹಾಯಮಾಡಲಾರೆನೆಂಬ ನೋವು ಆಕೆಯ ಎದೆಯನ್ನು ಸೀಳುತ್ತಿತ್ತು. ಕೋಣೆಯ ಇನ್ನೊಂದಂಚಿನಲ್ಲಿ ಗೋಡೆಯನ್ನು ಒರಗಿಕೊಂಡು ಇತರರ ಕಡೆಗೆ ಬೆನ್ನು ತಿರುಗಿಸಿ ಕಿರಿಯಮಗಳು ನಿಂತಿದ್ದಳು. ಬೇನೆ ಆಕೆಯ ಎದೆಯನ್ನು ಕೊರೆಯುತ್ತಿತ್ತು; ಕಣ್ಣುಗಳಲ್ಲಿ ನೀರು ಮಡುಗಟ್ಟಿ ನಿಂತಿತ್ತು; ಆಲೋಚನೆಗಳು ದಂಗೆಯೆದ್ದು ಅವಳ ಚಿತ್ತವನ್ನು ಒಳಗೊಳಗೆ ಬೇಯಿಸುತ್ತಿದ್ದವು. ಉಳಿದವರು ವಿಧಿಯ ಹಣೆ ಬರಹವನ್ನು ನೆಮ್ಮಿ ನಿಶ್ಚಿಂತರಾಗಿದ್ದಂತೆ ಕಂಡುಬಂದರೂ, ಆಕೆಗೆ ಅದು ಒಗ್ಗಲಿಲ್ಲ. ಅವರು ಕೈಗೊಂಡಿದ್ದಂತಹ ಉನ್ನತಾದರ್ಶಸಾಧನೆಗೆ ಅಷ್ಟು ಸಂಕಟ ಅತ್ಯಗತ್ಯವೆಂದು ಆಕೆ ಒಂದೊಂದು ಸಾರಿ ಅಂದುಕೊಂಡಿದ್ದಳು. ಅನೇಕ ವೇಳೆ ತನ್ನ ತಂದೆತಾಯಿಯರ ನಿಸ್ಸಹಾಯತೆ ದುಃಖೌತ್ಸುಕ್ಯಗಳನ್ನು ನೋಡಿದಾಗ ಆಕೆ ಭಯಸಂದೇಹಗಳ ಹೊನಲಿನಲ್ಲಿ ಕೊಚ್ಚಿಹೋಗುತ್ತಿದ್ದಳು. ಅವರು ಜಗತ್ತನ್ನೇ ತಮ್ಮ ಅಧೀನದಲ್ಲಿಟ್ಟುಕೊಂಡು ಬೇನೆಯಳಲುಗಳನ್ನೇ ಅರಿಯದೆ, ಅಮರೇಂದ್ರನ ಭೋಗವನ್ನನುಭವಿಸಬಹುದಾಗಿತ್ತು. ಆದರೂ ಅವರು ಧರ್ಮದ ಕಠಿಣ ಮಾರ್ಗವನ್ನಾರಿಸಿಕೊಂಡು ಸ್ವದೇಶದ ಮತ್ತು ಮಾನವಕೋಟಿಯ ಕಲ್ಯಾಣಕ್ಕಾಗಿ ತಮ್ಮ ಪ್ರಾಣಗಳನ್ನೇ ಆಹುತಿಗೆಯ್ದರು. ಆಲೋಚನೆಗಳ ಪರಸ್ಪರ ತಿಕ್ಕಾಟದಿಂದ ಯಾತನೆಗೊಂಡು, ದುಃಖಪೀಡಿತರಾಗಿದ್ದ ತಂದೆತಾಯಿಯರ ಮುಖಗಳನ್ನು ನೋಡಲು ಧೈರ್ಯವಿಲ್ಲದೆ, ಅವರ ದುಃಖವನ್ನು ಹಿಂಗಿಸಲು ಶಕ್ತಿಯಿಲ್ಲದೆ, ಆಕೆ ನಿಂತಿದ್ದಳು. ಪ್ರೀತಿಯ ಮಗನಿಲ್ಲದ ಮನೆಯಲ್ಲಿ ರುದ್ರಮೌನ ಹರಡಿತ್ತು. ಆದರೂ ತನ್ನ ಗೋಡೆಗಳ ನಡುವಣ ಮಡ

ಲಿನಲ್ಲಿ ಬೆಳೆದ ಮಗನ ಯಶಶ್ಚಂದ್ರಿಕೆಯನ್ನು ನೋಡಿ ಹೆಮ್ಮೆಯಿಂದ ಹಿಗ್ಗಿ ಆ ಹಳೆಯ ಮನೆ ನೆಟ್ಟಗೆ ತಲೆಯೆತ್ತಿ ನಿಂತಂತೆ ಕಾಣುತ್ತಿತ್ತು. ಕೇವಲ ಕೆಲವು ಮೈಲಿಗಳ ದೂರದಲ್ಲಿ ಸೆರೆಮನೆಯ ಕತ್ತಲೆ ಕೋಣೆ ಯಲ್ಲಿದ್ದ ತಮ್ಮ ಮಗನನ್ನು ನೆನೆದು ಹಂಬಲಿಸುತ್ತಾ ಹೊತ್ತು ಜಾರು ತ್ತಿದ್ದರೂ ಲಕ್ಷಿಸದೆ ಕುಳಿತಿದ್ದರು. ಅರಮನೆಯಂತಹ ದಿವ್ಯಭವನದ ಭೋಗಸಾಧನಗಳು ಅವರಿಗೆ ಅಸಹ್ಯವಾಗಿದ್ದುವು.

ಸ್ವಲ್ಪ ಹೊತ್ತು ಇಬ್ಬರೂ ಕುಳಿತಿದ್ದರು. ಪ್ರತಿಯೊಬ್ಬರೂ ಚಿಂತಾ ಮಗ್ನರಾಗಿದ್ದರು. ಅವರಿಬ್ಬರ ಆಲೋಚನೆಗಳು ಒಬ್ಬ ವ್ಯಕ್ತಿಯನ್ನೇ ಬಳಸಿದ್ದುವು. ಕ್ಷಣಕಾಲ ಮಾತ್ರ—ಅನಂತರ ನಿಟ್ಟುಸಿರನ್ನು ಅದು ಮುತ್ತಾ ತಂದೆ ಮೇಲೆದ್ದರು; ಅವರ ಸುಸ್ಥಿರವಾದ ಗಲ್ಲ ಘೋರ ಸ್ಥೈರ್ಯ ವನ್ನು ತಾಳಿತ್ತು. ಆದುದರಿಂದ ತಮ್ಮ ಭುಜಗಳನ್ನು ಸರಿಪಡಿಸಿ ಕೊಂಡು ಕೋಣೆಯಿಂದ ಹೊರಗೆ ಹೊರಟರು. ಆ ಸಣ್ಣ ಹೆಂಗಸು, ಜಗದ್ವಿಖ್ಯಾತ ಪುರುಷನ ತಾಯಿ, ಆಕೆಯೂ ಸಹ ಎದೆಯಿರಿಯುತ್ತಿದ್ದ ನೋವನ್ನು ಧೀರಮಂದಹಾಸದ ಮರೆಯಲ್ಲಿ ಹುದುಗಿಸಿ ಹಿಂದಿನಂತೆ ನಿತ್ಯಕರ್ಮದಲ್ಲಿ ತೊಡಗಿದಳು.

ಮತ್ತೆ ಸಂವತ್ಸರಗಳುರುಳಿದುವು. ಸಾವಿರಾರು ಜನರ ದೊಡ್ಡ ತಂಡ ಮೈಲಿಗಳ ತನಕ ದಾರಿಯುದ್ದಕ್ಕೂ ನೆರೆದಿತ್ತು. ಸುಡುನೀರ್ ಕರೆಯದ ಕಣ್ಣಿರಲಿಲ್ಲ, ಕಡುನೋಯದ ಎದೆಯಿರಲಿಲ್ಲ. ಪ್ರತಿಯೊ ಬ್ಬರೂ ತಮ್ಮ ತಮ್ಮ ಆತ್ಮೀಯ ವಸ್ತುವನ್ನು ಕಳೆದುಕೊಂಡಂತೆ ಪರಿತ ಪಿಸುತ್ತಿದ್ದರು. ಸ್ವರ್ಗಸ್ಥನಾದ ಮಹಾಪುರುಷನಿಗೆ ಚರಮಗೌರವವನ್ನು ಸಲ್ಲಿಸಲು ಅವರು ಅಲ್ಲಿ ನೆರೆದಿದ್ದರು. ಅವರ ನಾಯಕ ಇನ್ನು ಮುಂದೆ ಅವರ ನಡುವೆ ಇರುವಂತಿಲ್ಲ. ಸ್ವಯಂಸುಯೋಧನನಾದ ಅವನು ಅನೇಕ ಹಗಲಿರುಳುಗಳು ಸಾವಿನೊಡನೆ ಹೋರಾಡಿದನು. ತಾನು ಕೈಗೊಂಡಿದ್ದ ಕಾರ್ಯದ ಸಿದ್ಧಿಯನ್ನು ನೋಡುವುದಕ್ಕಾದರೂ ಬದುಕ ಬೇಕೆಂದು ಅವನು ಆಶಿಸಿದ್ದನು. ಕೊನೆಗೆ ಮೃತ್ಯುವಿಗೇ ವಿಜಯ ಲಭಿಸಿತು. ಪತಿದೇವನ ಅಂತಿಮ ಪ್ರಯಾಣವನ್ನು ನೋಡಿಬಂದ ವಿಧವೆ ಪೂರ್ವದ ಆನಂದಭವನದ ಕೋಣೆಯೊಂದರಲ್ಲಿ ಕುಳಿತಳು.

ವಿಯೋಗದ ಬಡಬಾಗ್ನಿಯ ಬೇಗೆಯಲ್ಲಿ ಆಕೆಯ ಕಣ್ಣೀರು ಬತ್ತಿ ಹೋಗಿದ್ದುವು. ಆಕೆಯನ್ನಪ್ಪಿಕೊಂಡ ಮಗ ಪಕ್ಕದಲ್ಲಿಯೇ ಕುಳಿತಿದ್ದನು. ಆತನ ಕಣ್ಣುಗಳಲ್ಲಿ ನೀರು ಮುಕ್ಕುಳಿಸುತ್ತಿತ್ತು. ಅವನ್ನು ತಂದೆಯ ಮೇಲೆ ಅಗಾಧವಾದ ಪ್ರೀತಿಯಿಟ್ಟಿದ್ದನು. ತನ್ನ ತಾಯಿಯನ್ನು ಸಂತೈಸುವ ರೀತಿಯೇ ಆತನಿಗೆ ಗೊತ್ತಿರಲಿಲ್ಲ. ಆದರೆ ಶಕ್ತಿಶಾಲಿಯಾದ ತನ್ನ ಮಗನ ಕೈಗಳನ್ನು ತನ್ನೆದೆಗೆ ಅಪ್ಪಿಕೊಂಡು, ಆಕೆ ಆತನನ್ನು ಸಮಾಧಾನಪಡಿಸಬೇಕಾಯಿತು.

ಕಾಲನದಿ ಮುಂದೆ ಸಾಗಿತು. ಹಳೆಯ ಮನೆ ಅನೇಕ ಬದಲಾವಣೆಗಳನ್ನು ಕಂಡಿತ್ತು; ಇನ್ನೂ ಹಲವಾರು ಬದಲಾವಣೆಗಳನ್ನು ನೋಡಬೇಕಾಗಿತ್ತು. ದಾರಿಯುದ್ದಕ್ಕೂ ಕಾರುಗಳು ನಿಂತಿದ್ದುವು. ಹೊರ ಅಂಗಳದಲ್ಲಿ ಪೋಲೀಸಿನವರ ಗುಂಪು ಕೂಡಿತ್ತು. ಇಬ್ಬರು ಹೆಣ್ಣು ಮಕ್ಕಳ ಬಂಧನಕ್ಕಾಗಿ ಇಷ್ಟೆಲ್ಲಾ ಸಿದ್ಧತೆಗಳು. ಅವರು ಇಷ್ಟು ದಿನಗಳು ಸೋಮಾರಿತನದಿಂದ ಕಾಲಕಳೆದಿರಲಿಲ್ಲ. ತಂದೆಯ ಹೆಜ್ಜೆಯ ಜಾಡನ್ನೇ ಅನುಸರಿಸಿ ಕೆಲಸಮಾಡಿ ಅವರು ತಮ್ಮ ವಂಶದ ಖ್ಯಾತಿಯನ್ನು ಮೆರೆದಿದ್ದರು. ಅದುದರಿಂದಲೇ ತಮ್ಮ ಅಣ್ಣ ತಂದೆಯರಂತೆ ಅವರು ಸೆರೆಮನೆಗೆ ಹೊರಡಲು ಸಿದ್ಧರಾಗಿದ್ದರು. ಅಧಿಕಾರಿಗಳು ಸಭ್ಯರೀತಿಯಿಂದಲೇ ಆಜ್ಞಾಪತ್ರವನ್ನು ಜಾರಿಮಾಡಿದರು; ಹುಡುಗಿಯರು ಮುಗುಳ್ನಗೆ ನಗುತ್ತ ಅದನ್ನು ಸ್ವೀಕರಿಸಿದರು. ಕೆಲವು ಪದಾರ್ಥಗಳನ್ನು ಗಂಟು ಕಟ್ಟಿಕೊಳ್ಳಲು ಒಳಗೆ ಹೋದರು. ತನ್ನ ದುರ್ಬಲವಾದ ಕಾಲುಗಳಲ್ಲಿ ಎಷ್ಟು ಶಕ್ತಿಯಿತ್ತೋ ಅಷ್ಟು ಜಾಗ್ರತೆ ತಾಯಿ ಬಂದರು. "ಇದೆಲ್ಲಾ ಏನು, ಇಷ್ಟು ಕಾರುಗಳೂ, ಇಷ್ಟು ಜನರೂ ಏತಕ್ಕಾಗಿ ಬಂದಿದ್ದಾರೆ" ಎಂದು ಕೇಳಿದಳು. ಹಿರಿಯಮಗಳು ತಾಯಿಯನ್ನಪ್ಪಿಕೊಂಡು ಸಾವಧಾನವಾಗಿ ಉತ್ತರವಿತ್ತಾಗ ಕ್ಷಣಕಾಲ ಆಕೆ ನಿಶ್ಶಕ್ತಳಾದಳು; ತನ್ನ ಮಕ್ಕಳನ್ನು ಅಪ್ಪಿಕೊಳ್ಳುತ್ತಿರಲು ಆಕೆಯ ಕಣ್ಣುಗಳು ಬಿಸುನೀರ ತುಂಬುಗೊಡಗಳಾದುವು. "ನೀವು ಹೊರಟು ಹೋದಮೇಲೆ ನಾನು ಒಬ್ಬಂಟಿಗಳಾಗುತ್ತೇನೆ" ಎಂದು ಪಿಸುಗುಟ್ಟಿದಳು. ಆ ವ್ಯಾಕುಲತೆಯೂ ಕ್ಷಣಕಾಲ ಮಾತ್ರವಿತ್ತು. ತನ್ನ ತೆಳುಮೈಯ್ಯನ್ನವಳು ನೆಟ್ಟಗೆ

ಮಾಡಿಕೊಂಡು, ಮೋಸದ ಬಲೆಯಲ್ಲಿ ಸಿಕ್ಕಿಬಿದ್ದ ಸಿಂಹಿಣಿಯಂತೆ ಅಪೂರ್ವ ಧೈರ್ಯದಿಂದ ನೂತನ ಅಗ್ನಿಪರೀಕ್ಷೆಯನ್ನೆದುರಿಸಲು ಸಿದ್ಧಳಾದಳು. "ನಿಮ್ಮನ್ನು ಪಡೆದ ನಾನೇ ಧನ್ಯಳು; ನಿಮ್ಮನ್ನು ಹಿಂಬಾಲಿಸಲಾರದಷ್ಟು ಅಶಕ್ತಳಾಗಿಲ್ಲ ನಾನು" ಎಂದು ಹೇಳುವಾಗ ಅವಳ ಕಣ್ಣುಗಳಲ್ಲಿ ಮಿಂಚು ಮಿನುಗಿತು. ಅವಳು ಮತ್ತೊಮ್ಮೆ ತನ್ನ ಮಕ್ಕಳನ್ನಪ್ಪಿಕೊಂಡಳು. ನಮ್ಮನ್ನು ಆಶೀರ್ವದಿಸಲು ತನ್ನ ಕೈಗಳನ್ನು ಹಿಂದಕ್ಕೆಳೆದಳು. ಆಕೆಯು ನವಿರಾದ ಹಿಡಿಮುಯ್ ಅನೇಕ ಕಷ್ಟವೇದನೆಗಳನ್ನು ಅನುಭವಿಸಿ ನಿತ್ರಾಣವಾಗಿತ್ತು. ತನ್ನ ಕೈಗಳನ್ನು ಮೇಲೆತ್ತುತ್ತಿದ್ದಾಗಲೇ ಅವಳು ಮೂರ್ಛೆಗೊಂಡಳು. ಹುಡುಗಿಯರು ಕಾರಿನಲ್ಲಿ ಸೆರೆಮನೆಯ ಕಡೆ ತೆರಳಿದರು...... ಮತ್ತೆ ಜೀವನ ಪ್ರವಾಹ ಎಂದಿನಂತೆ ಹರಿಯತೊಡಗಿತು.

ಕರಾಳಸ್ವರೂಪದ ಕರಿಯ ಗೋಡೆಗಳ ಕತ್ತಲೆಯ ಕೋಣೆ. ಅಕ್ಕ ತಂಗಿಯರು ಎದುರುಬದುರಾಗಿ ಕುಳಿತಿದ್ದರು. ಅವರ ಹೃದಯ ಗಳು ಹಿಂದೆಂದೂ ಅಷ್ಟು ಒಂದಾಗಿರಲಿಲ್ಲ. ಅವರು ಕಬ್ಬಿಣದ ಸರಳು ಗಳ ಮೂಲಕ ರಕ್ತವರ್ಣ ಸುಶೋಭಿತವಾದ ಸುಂದರಾಕಾಶದ ಕಡೆಗೆ ನೋಡುತ್ತಿದ್ದರು. ಸೆರೆಮನೆಯ ಗೋಡೆಗಳ ಆಚೆ ಬಹುದೂರದಲ್ಲಿ ಎಲ್ಲಿಯೋ ಸಂಧ್ಯಾಸೂರ್ಯನು ಆಕಾಶದಲ್ಲಿ ಸ್ವರ್ಗೀಯ ಸೌಂದರ್ಯ ವನ್ನು ಹರಡಿದ್ದನು. ಇಬ್ಬರು ಅವಿಚ್ಛಿನ್ನವಾದ ಅನಂತಾನಂತ ಆಲೋಚನೆಗಳಲ್ಲಿ ಮಗ್ನರಾಗಿದ್ದರು. ಒಬ್ಬಳಿಗೆ ತನ್ನ ಮನೆ, ತನ್ನ ಪತಿ ಮತ್ತು ಚಿಕ್ಕ ಮಕ್ಕಳ ಮೇಲಣ ಕುತೂಹಲ, ಮತ್ತೊಬ್ಬಳಿಗೆ ಧೈರ್ಯಭರವಸೆಗಳನ್ನು ನೀಡುತ್ತಿದ್ದ ತಂದೆಯ ಸಾಂಕ್ರಾಂಮಿಕ ಮಂದ ಹಾಸವನ್ನು ಆಲಿಸುವ, ಮತ್ತು ನಿರ್ಜನಬೃಹದ್ಭವನದಲ್ಲಿ ಒಬ್ಬಂಟಿ ಗಳಾಗಿದ್ದ ತಾಯಿಯ ಆಲಿಂಗನಸುಖವನ್ನು ಅನುಭವಿಸುವ ಹಂಬಲ.

ಸರಪಳಿಗಳ ಝಣ ಝಣತ್ಕಾರವೂ ಬಾಗಿಲುಗಳ ಕಿರಿಕಿರಿ ಸದ್ದೂ ಕೇಳಬಂದುವು. ಅದೇನೆಂದು ಖೈದಿಗಳೆಲ್ಲ ವಿಸ್ಮಿತರಾದರು. ಸೆರೆಮನೆಯ ಕಾವಲುಗಾತಿ ಅಕ್ಕ ತಂಗಿಯರ ಹತ್ತಿರ ಹೋಗಿ ತಂತಿ ಯೋಲೆಯನ್ನು ಕೊಟ್ಟಳು. ಹೆದರಿಕೆಯಿಂದಲೇ ಅದನ್ನು ಕೈಗೆ ತೆಗೆದುಕೊಂಡರು.

ಕ್ಷಣಕಾಲಾನಂತರ ಅವರು ಮುಗುಳು ನಗೆಯನ್ನು ಸೂಸಿದರು. ಧೈರ್ಯ ಸಂಪನ್ನೆಯಾದ ತಮ್ಮ ತಾಯಿ ವಾಗ್ದಾನದಂತೆ ನಡೆದುಕೊಂಡಿದ್ದಳು. ದೂರದ ಸೆರೆಮನೆಯೊಂದರಲ್ಲಿ ಕಬ್ಬಿಣದ ಸರಳುಗಳ ಬೇಲಿಯ ಹಿಂದೆ ವಾಸಿಸುವ ಸುಯೋಗ ಅವಳಿಗೂ ಲಭಿಸಿತ್ತು. ಅವಳೆಂತಹ ಸಾಹಸಿ; ಅರುವತ್ತೈದು ವರ್ಷದ ಮುದುಕಿಯನ್ನು ಎಳೆದೊಯ್ದವರೆಂತಹ ರಾಕ್ಷಸರು!

ಮತ್ತೆ ಕೆಲವು ಸಂವತ್ಸರಗಳುರುಳಿದುವು. ಅನಂತವಾದ ಸುಖ ದುಃಖಗಳನ್ನು ಕಂಡಿದ್ದ ಮನೆಯಲ್ಲಿ ಮತ್ತೊಮ್ಮೆ ಜನರು ಕಿಕ್ಕಿರಿದರು. ಒಂದು ದಿನ ಸಂಜೆ ತಾಯಿ ನಿಟ್ಟುಸಿರು ಬಿಟ್ಟು ಸದ್ದಿಲ್ಲದೆ ದೇಹವನ್ನು ತ್ಯಜಿಸಿದ್ದರು. ಇತರರಿಗೋಸ್ಕರ ಅವರು ಬದುಕಿದ್ದರು - ಯಾರಿಗೂ ತೊಂದರೆ ಕೊಡದೆ ತೀರಿಕೊಂಡರು. ಚೈತನ್ಯಮಯಿಯಾಗಿದ್ದಂತೆ, ಅನುಪಮ ಸುಂದರಿಯಾಗಿ, ರಾಣಿಯಂತೆ ವಿವಿಧ ಕುಸುಮಗಳಿಂದ ಅಲಂಕೃತೆಯಾಗಿ ಹಾಸಿಗೆಯ ಮೇಲೆ ಅವರು ಮಲಗಿದ್ದರು. ಅವರು ಕೊನೆಯತನಕ ರಾಣಿಯಂತೆಯೇ ಬದುಕಿದ್ದರು.

ಯಾರೂ ನೋಡಿಕೊಳ್ಳುವವರಿಲ್ಲದ, ತೋಟದ ನಡುವೆ ನಿಂತಿದ್ದ ಸಂತೋಷಹಾಸಶೂನ್ಯವಾಗಿದ್ದ ಒಂಟಿ ಮನೆಯನ್ನು ನಾನು ನೋಡಿದೆನು. ಒಳಗಡೆ ಕೋಣೆಯೊಂದರಲ್ಲಿ ಏಕಮಾತ್ರ ಪುತ್ರನು ಮೇಜಿಗೆ ಎದುರಾಗಿ ಕುಳಿತುಕೊಂಡು ಸದಾ ಕೆಲಸ ಮಾಡುತ್ತಿದ್ದನು. ಅವನ ಬದುಕು ಸರಾಗವಾಗಿರಲಿಲ್ಲ; ಮುಂದಾದರೂ ಸುಖಶಾಂತಿಗಳು ದೊರೆಯುವಂತಿರಲಿಲ್ಲ. ಅವನು ಅವಿಸ್ತೀರ್ಣವೂ ಅಕುಟಿಲವೂ ಅದ ಮಾರ್ಗವನ್ನಾರಿಸಿಕೊಂಡಿದ್ದನು. ಅಲ್ಲಿಂದ ಹಿಂದಿರುಗುವಂತಿರಲಿಲ್ಲ. ಆಗಾಗ್ಗೆ ತನ್ನ ಬಳಲ್ಗಣ್ಣುಗಳನ್ನು ಮೇಲೆತ್ತಿದಾಗ ವರ್ಣನಾತೀತವಾದ ದುಃಖ ಅವುಗಳಿಂದ ಹೊರಹೊಮ್ಮುತ್ತಿತ್ತು. ಒಂಟಿತನದ ಬಾಳು ಬೇಸರವಾಗಿತ್ತು. ಯಾರಾದರೂ ಹತ್ತಿರ ಇದ್ದಾಗ ಆ ಬೇಸರವನ್ನು ಮರೆತು ಸರಸವಾಗಿರುತ್ತಿದ್ದನು. ನಿತ್ಯನೂತನವೂ ಮನೋಹರವೂ ಆದ ತನ್ನ ನಡೆನುಡಿಗಳಿಂದ, ತನ್ನ ಮಂದಹಾಸದಿಂದ ಅವನು ಬಹುಮಂದಿಯ ಹೃದಯಪದ್ಮಪೀಠದಲ್ಲಿ ಮಂಡಿಸಿದ್ದನು.

ನಿದ್ರಾಪ್ರಪಂಚದ ನಾನಾ ಕ್ಷೇತ್ರಗಳಲ್ಲಿ ನಾನು ತೊಳಲಿದೆನು. ನನ್ನ ಹೃದಯ ಸೀಸದ ಗುಂಡಿನಷ್ಟು ಭಾರವಾಗಿತ್ತು. ನನ್ನೊಲುಮೆಯ ಮನೆಯಲ್ಲಿ ಕಾಲಪುರುಷ ಅನೇಕ ಮಾರ್ಪಾಡುಗಳನ್ನುಂಟುಮಾಡಿದ್ದನು. ನಾನು ನೋಡಲು ಬಂದಿದ್ದ ಅಣ್ಣ ಇನ್ನೂ ಸೆರೆಮನೆಯ ಹೊರಗಿದ್ದನೆಂಬುದೇ ಸಂತೋಷದ ಸಂಗತಿಯಾಗಿತ್ತು. ಅವನಿದ್ದ ಬೀಡು ನಲ್ಮೆಯ ಗೂಡಾಗಿರುತ್ತಿತ್ತು. ಮಹಡಿಯ ಮೇಲಣ ಆತನ ಕೋಣೆಗೆ ಹೋಗಿ ಆತನೊಡನೆ ಮಾತಾಡಬೇಕೆಂಬ ಹಂಬಲದಿಂದ ಕಣ್ಣು ತೆರೆದೆನು. ಪುಸ್ತಕವನ್ನೆತ್ತಿಕೊಂಡು ಮನೆಯನ್ನು ಪ್ರವೇಶಿಸುತ್ತಿರುವಷ್ಟರಲ್ಲಿಯೇ ಶಬ್ದವಾಹಕಯಂತ್ರ (Telephone) ದ ಶಬ್ದ ಕೇಳಿಸಿತು. ಯಂತ್ರಕ್ಕೆ ಕಿವಿಗೊಟ್ಟೆನು. ಅಪರಿಚಿತ ಧ್ವನಿಯೊಂದು ಈ ರೀತಿ ಹೇಳಿತು: "ನಿಮ್ಮ ಅಣ್ಣನ ವಿಚಾರಣೆ ನಾಳೆ ನಡೆಯುತ್ತೆ ಎಂಬ ಸಮಾಚಾರವನ್ನು ತಿಳಿಸುವುದಕ್ಕಾಗಿ ಮಾತಾಡುತ್ತಿದ್ದೇನೆ." 'ವಿಚಾರಣೆ ನಾಳೆಯೇ? ಅದೆಂತಹ ವಿಚಾರಣೆ?' ಎಂದು ನಾನು ಬೆಕ್ಕಸಗೊಂಡೆನು. ನಿದ್ದೆಯ ಜೊಮ್ಮು ಹಿಡಿದಿದ್ದ ಮನಸ್ಸಿಗೆ ಆ ಸುದ್ದಿ ಒಗ್ಗಲಿಲ್ಲ. ಅಷ್ಟರಲ್ಲಿಯೇ ಮಿಂಚಿನಂತೆ ಅರಿವು ಮರಳಿತು. ನನಗಾಗಿ ಕಾದಿದ್ದ ಅಣ್ಣ ಮಹಡಿಯ ಮೇಲಿರಲಿಲ್ಲ—ಅತನು ಎರಡು ದಿನಗಳ ಹಿಂದೆಯೇ ಬಂಧಿತನಾಗಿದ್ದನು; ನಾನು ಕನಸು ಕಾಣುತ್ತಿದ್ದೆನು . . .

ನಾನು ಬಳಲಿದವಳಾಗಿ ನನ್ನ ಕೋಣೆಗೆ ಹೋದೆನು. ಅಣ್ಣನಿಗೆ ಬದಲಾಗಿ ಹಳೆಯಪಳೆಯ ಸಿಹಿ ಕಹಿ ನೆನಪುಗಳೇ ನನ್ನ ಸಹವಾಸಿಗಳಾದುವು.

---



ಸ್ವರೂಪ್ ರಾಣಿ ನೆಹರು





ಜವಹರ್‌ಲಾಲ್ ನೆಹರು







